# ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು

(ಸುಬೋಧಸಾರ)

ಸಂಪಾದಕರು :
**ಜಗದ್ಗುರು**
**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**MUPPINA SHADAKSHARIGALA KAIVALYA PADAGALU** : Edited by his **Holiness Jagadguru Sri Shivarathri Deshikendra Mahaswamigalu,** Published by **Manu Baligar,** Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xliii + ೨೨೧
ಬೆಲೆ : ರೂ. ...

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

## ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ



ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



## ಅರ್ಪಣೆ

ಕಾಯಕವೇ ಕೈಲಾಸ
ಎಂಬ ಬಸವಾದಿ ಪ್ರಮಥರ ಮಹಾತತ್ತ್ವವನ್ನು ಆಚರಿಸಿ ತೋರಿದ
ತ್ರಿವಿಧದಾಸೋಹಮೂರ್ತಿಗಳೂ ಮಹಾಶಿವಯೋಗಿಗಳೂ ನಮ್ಮ ಪರಮಪೂಜ್ಯ
ಗುರುವರ್ಯರೂ ಆದ ಲಿಂಗೈಕ್ಯ ಜಗದ್ಗುರು

**ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**

ದಿವ್ಯ ಪಾದಾರವಿಂದಗಳಿಗೆ
ಪೂಜ್ಯರ ಪ್ರಥಮ ವಾರ್ಷಿಕ ಪುಣ್ಯಾರಾಧನೆಯ
ಸಂದರ್ಭದಲ್ಲಿ
ಈ ಕೃತಿಕುಸುಮವನ್ನು ಭಕ್ತಿಪುರಸ್ಸರವಾಗಿ
ಸಮರ್ಪಿಸಿದೆ

## ಪ್ರಕಾಶಕರ ನುಡಿ
### (ಪ್ರಥಮ ಆವೃತ್ತಿ)

ನಾಡಿನ ಪೂರ್ವಪುಣ್ಯದಿಂದ ಮಹಾನುಭಾವರು ಮೇಲಿಂದ ಮೇಲೆ ಮರ್ತ್ಯಲೋಕದಲ್ಲಿ ಅವತರಿಸಿ ಬಂದು ಮನುಕುಲದ ಕಲ್ಯಾಣವನ್ನೆಸಗಿದ ಮಹತ್ವದ ಪ್ರಸಂಗಗಳು ಚಿರಸ್ಮರಣೀಯವಾಗಿವೆ. ಅಂತಹ ಲೋಕಕಲ್ಯಾಣಕಾರ್ಯಗಳಲ್ಲಿ ಸದಾ ನಿರತವಾಗಿರುವ ಸುಪ್ರಸಿದ್ಧವಾದ ಶ್ರೀಸುತ್ತೂರು ವೀರಸಿಂಹಾಸನ ಜಗದ್ಗುರುಪೀಠದ ಇಪ್ಪತ್ತಮೂರನೆಯ ಅಧಿಪತಿಗಳಾದ ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಜನತೆಯ ಕಲ್ಯಾಣಕ್ಕಾಗಿ ಅನೇಕ ಪ್ರಸಾದ ನಿಲಯಗಳನ್ನು, ವಿದ್ಯಾಸಂಸ್ಥೆಗಳನ್ನು ಸಂಸ್ಥಾಪಿಸಿ ಪೋಷಿಸಿದರು. ಅಂತೆಯೇ ಶರಣರ ಅನುಭಾವ ಸಾಹಿತ್ಯವು ಎಲ್ಲ ಜನರಿಗೂ ತಲುಪಿ, ಅವರ ನಿಜವಾದ ಸಾಧನೆ–ಬೋಧನೆಗಳ ಪರಿಚಯದಿಂದ ಜನರ ಬದುಕು ಉತ್ತಮವಾಗಬೇಕೆಂಬ ಅಭೀಪ್ಸೆಯಿಂದ 'ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ'ಯನ್ನು ಸ್ಥಾಪಿಸಿದರು.

ದತ್ತಿಯ ಮುಖ್ಯ ಉದ್ದೇಶಗಳೆಂದರೆ:

೧. ವೀರಶೈವಸಿದ್ಧಾಂತದ ಆಚಾರ–ವಿಚಾರಗಳನ್ನು ಅರ್ಥಪೂರ್ಣವಾಗಿ ನಿರೂಪಿಸುವ ಗ್ರಂಥಗಳ ಪ್ರಕಟಣೆ.

೨. ಸಂಗೀತ, ಸಾಹಿತ್ಯ, ಕೀರ್ತನೆ ಮತ್ತು ದೃಶ್ಯಾವಳಿಗಳ ಮೂಲಕ ಸಂತರ ಮತ್ತು ಶಿವಶರಣರ ಜೀವನದ ಘಟನೆಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವುದು.

೩. ಶಿವಾನುಭವಗೋಷ್ಠಿಗಳನ್ನು ನಗರ ಮತ್ತು ಹಳ್ಳಿಗಳಲ್ಲಿ ನಡೆಸುವುದು.

೪. ವೀರಶೈವಧರ್ಮ ಮತ್ತು ಸಾಹಿತ್ಯವನ್ನು ಕುರಿತ ಶ್ರೇಷ್ಠ ಪ್ರಕಟಿತ ಗ್ರಂಥಕ್ಕೆ ಪ್ರಶಸ್ತಿ ಮತ್ತು ಬಹುಮಾನ ನೀಡುವುದು – ಈ ಮೊದಲಾದ ಉದ್ದೇಶಗಳನ್ನು ಇಟ್ಟುಕೊಂಡು ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಜಗದ್ಗುರುಗಳವರ ಆಶಯದಂತೆ ಈ ದತ್ತಿಯ ವತಿಯಿಂದ ಪ್ರಥಮ ಕುಸುಮವಾಗಿ "ಅಲ್ಲಮಪ್ರಭುವಿನ ಟೀಕಿನ ವಚನಗಳು" ಪ್ರಕಟವಾಗಿದೆ.

ಲಿಂಗೈಕ್ಯ ಪರಮಪೂಜ್ಯರ ಸಂಕಲ್ಪದಂತೆ ದ್ವಿತೀಯ ಕುಸುಮವಾಗಿ "ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು" ಅರಳುತ್ತಿದೆ. ಈ ಕೃತಿಯನ್ನು ಪರಮಪೂಜ್ಯರಾದ



ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಅನೇಕ ಪ್ರತಿಗಳ ಸಹಾಯದಿಂದ ಸಂಸ್ಕರಿಸಿ, ಪರಿಷ್ಕರಿಸಿ ಕೊಟ್ಟಿದ್ದಾರೆ. ಅವರಿಗೆ ಭಕ್ತಿಪೂರ್ವಕ ನಮನಗಳು. ಲಿಂಗೈಕ್ಯ ಜಗದ್ಗುರುಗಳವರ ಪ್ರಥಮವಾರ್ಷಿಕ ಪುಣ್ಯಸ್ಮರಣೆಯ ದಿವಸ (೬–೧೨–೧೯೮೭) ಈ ಕೃತಿಯು ಬಿಡುಗಡೆಯಾಗುತ್ತಿರುವುದು.

ಈ ಕೃತಿಯನ್ನು ಸಹೃದಯರಾದ ಭಕ್ತಬಾಂಧವರು ಸ್ವಾಗತಿಸುವರೆಂದು ನಂಬಿದ್ದೇವೆ.

**ಪ್ರಕಾಶಕರು**

# ಪರಿಷ್ಕೃತ ದ್ವಿತೀಯಾವೃತ್ತಿ

ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು – ಪರಿಷ್ಕೃತಗೊಂಡು ದ್ವಿತೀಯಾವೃತ್ತಿಯಾಗಿ ಪ್ರಕಟವಾಗಿ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ೮೩ನೆಯ ಜಯಂತಿ ಮಹೋತ್ಸವ (೨೯–೮–೧೯೯೮)ದ ಶುಭಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವುದು ಸಂತಸದ ಸಂಗತಿ.

ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಜೆ.ಎಸ್.ಎಸ್. ಪ್ರಿಂಟಿಂಗ್ ಪ್ರೆಸ್ ಅವರಿಗೆ ನಮ್ಮ ಕೃತಜ್ಞತೆಗಳು.

ಸಹೃದಯರು ತುಂಬುಹೃದಯದಿಂದ ಸ್ವಾಗತಿಸುವರೆಂಬ ಭರವಸೆ ನಮ್ಮದು.

**ಪ್ರಕಾಶಕರು**



# ಪ್ರಸ್ತಾವನೆ

*ಸದ್ಭಕ್ತಜನಸಂದೋಹ ಕಷ್ಟಸಂಚಯನಾಶಕಂ*
*ಕಾಮಕಾಲಭಯಾತೀತಂ ಶಿವರಾತ್ರೀಶ್ವರಂ ಭಜೇ*

## ಪೀಠಿಕೆ

ಕನ್ನಡ ಸಾಹಿತ್ಯವು ಬಹುಪ್ರಾಚೀನವಾದುದು ಮತ್ತು ಸತ್ವಪೂರ್ಣವಾದುದು. ಕಾಲಕಾಲಕ್ಕೆ ತುಷ್ಟಿ–ಪುಷ್ಟಿಗಳನ್ನೆರೆದು ಅದನ್ನು ಉನ್ನತೋನ್ನತವಾಗಿ ಬೆಳೆಸುವಲ್ಲಿ ನಾಡಿನ ಅಸಂಖ್ಯಾತ ಕವಿಗಳಷ್ಟೆ ಅಲ್ಲ, ಅನುಭಾವಿಗಳಾದ ವಚನಕಾರರು, ಹರಿದಾಸರು, ಅಧ್ಯಾತ್ಮಜೀವಿಗಳು ಸಹ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಇವರೆಲ್ಲರ ವಿಶೇಷಪೋಷಣೆಯಿಂದ ಕನ್ನಡ ಸಾಹಿತ್ಯವು ದಷ್ಟಪುಷ್ಟವಾಗಿ ಬೆಳೆದು ಬಂದಿರುವುದು ಅದರ ಸುದೀರ್ಘ ಇತಿಹಾಸದಿಂದ ಸುಸ್ಪಷ್ಟ.

ಪ್ರಾರಂಭದಲ್ಲಿ ಪಂಡಿತರಿಗಷ್ಟೇ ಸೀಮಿತವಾಗಿದ್ದ ಕಾವ್ಯಕೃತಿಗಳು ಕಾಲಕ್ರಮೇಣ ಜನಸಾಮಾನ್ಯರಿಗೂ ತಲುಪುವಂತಹ ಸನ್ನಿವೇಶಗಳು ಸೃಷ್ಟಿಯಾದವು. ಅಂತಹ ಸನ್ನಿವೇಶಗಳಲ್ಲಿ ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅನೇಕ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಈ ಶತಮಾನದಲ್ಲಿ ರಾಜಕೀಯ ಸಾಮಾಜಿಕ ಹಾಗೂ ಧಾರ್ಮಿಕವಾಗಿ ವಿಷಮ ಪರಿಸ್ಥಿತಿಯು ತಲೆದೋರಿತ್ತು. ಇಂತಹ ಸಂದರ್ಭದಲ್ಲಿ ಉದಯವಾದ ಶರಣಸಾಹಿತ್ಯವು ಸಮಾನತೆಯ ಹೊಸ ಹಾಡನ್ನು ಹಾಡಿತು, ಜನತೆಯಲ್ಲಿ ನೂತನ ದೃಷ್ಟಿಯನ್ನು ಮೂಡಿಸಿತು. ನವ ಸಮಾಜದ ರಚನೆಗೆ ಸ್ಫೂರ್ತಿಯನ್ನು ತುಂಬಿತು. ಅಂತೆಯೇ ಸರ್ವಸಮಾನತೆಯ ತಳಹದಿಯ ಮೇಲೆ ನೂತನಸಮಾಜಸೌಧವನ್ನು ನಿರ್ಮಿಸಿದ ಶಿವಶರಣರ ಹೃದಯ ಮಾನಸದಿಂದ ಮೂಡಿ ಬಂದ ಸಾಹಿತ್ಯವನ್ನೆ "ವಚನಸಾಹಿತ್ಯ" ಎಂದು ಕರೆದರು. ಶರಣರ ಈ ವಚನಗಳು ಕನ್ನಡಸಾಹಿತ್ಯದಲ್ಲಿಯೇ ವಿನೂತನವಾಗಿದ್ದು ಹೊಸದೊಂದು ಯುಗವನ್ನೆ ಸೃಷ್ಟಿಸಿದುವು.

ಈ ವಚನಗಳು ಗದ್ಯವೂ ಹೌದು, ಪದ್ಯವೂ ಹೌದು. ಅವು ಒಂದು ದೃಷ್ಟಿಯಲ್ಲಿ ಪದ್ಯಗಂಧಿಯಾದ ಗದ್ಯಗಳು. ಅನೇಕ ವಚನಗಳನ್ನು ತಾಳಬದ್ಧವಾಗಿ ಹಾಡಲೂಬಹುದು. ಅವುಗಳನ್ನು ಆ ಕಾಲದಲ್ಲೇ ಹಾಡುತ್ತಿದ್ದರೆಂಬುದಕ್ಕೆ ಶರಣರ

ನುಡಿಗಳು, ಹರಿಹರಾದಿ ಕವಿಗಳ ಹೇಳಿಕೆಗಳು ಸಾಕ್ಷಿಗಳಾಗಿವೆ. ಬಸವಣ್ಣನವರು ಹೇಳಿರುವ ಈ ವಿಚಾರಗಳು ಮನನೀಯವಾಗಿದೆ.

"ತಾಳ ಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವಾ
ನಿನಗೆ ಕೇಡಿಲ್ಲವಾಗಿ ಅನು ಒಲಿದಂತೆ ಹಾಡುವೆ."

"ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸ ರಾಗವ ಹಾಡಯ್ಯ
ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ"

ಅಣ್ಣನವರು ಹೇಳುವ "ಅನು ಒಲಿದಂತೆ ಹಾಡುವೆ" ಎಂಬ ಮಾತು ಇಲ್ಲಿ ಬಹು ಮುಖ್ಯವಾದುದು. ಇದು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನೂ ಧ್ವನಿಸುತ್ತದೆ. ಒಲಿದಂತೆ ಪೂಜಿಸುವ, ಒಲಿದಂತೆ ಹಾಡಿ ಹಿಗ್ಗುವ ಸ್ವಾತಂತ್ರ್ಯವಿದ್ದುದರಿಂದಲೇ ಅಂದು ಅಪಾರವಾದ ವಚನಸಾಹಿತ್ಯ ಹೊರಹೊಮ್ಮಲು ಸುಲಭಸಾಧ್ಯವಾಯಿತು.

ಹಾಗೆಯೇ,

"ದೇಶಾಕ್ಷಿಯಲ್ಲದ ರಾಗ, ಉಪ್ಪಿಲ್ಲದೂಟ ಸಪ್ಪೆ ಕಾಣಿರಣ್ಣ
ಅಯ್ಯಾ ಮಿಕ್ಕಿನ ರಾಗ, ಶಿವನಲ್ಲದ ದೈವಫಲವಿಲ್ಲ ಕಾಣಿರಣ್ಣ
ಅಯ್ಯಾ ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ
ಮಹಾಲಿಂಗ ಗಜೇಶ್ವರನ ನೆಚ್ಚಿನ ರಾಗ ಕಾಣಿರಣ್ಣ"

ಎಂದು ಗಜೇಶ ಮಸಣಯ್ಯಗಳವರು ದೇಶಾಕ್ಷಿರಾಗದ ಹಿರಿಮೆಯನ್ನು ಹೊಗಳುತ್ತ ಶಿವನನ್ನು ಕೇಳಿಸುವ, ತಲೆದೂಗಿಸುವ ರಾಗರಚನೆಗಳು ಬಹುಮುಖ್ಯವೆಂದಿರುವುದು ಗಮನಾರ್ಹವಾಗಿದೆ.

ಅಂತೆಯೇ, ವಚನಗಳನ್ನು ಸರಾಗವಾಗಿ ಹಾಡುತ್ತಿದ್ದಂತೆ ಅಂದಿನವರು ವಿಶಿಷ್ಟ ರಾಗ–ತಾಳಬದ್ಧವಾದ ಮತ್ತು ಅನುಭಾವ ಪೂರ್ಣವಾದ ಹಾಡುಗಳನ್ನು ರಚಿಸಿ ಹೊಸದಾಗಿ ಕನ್ನಡ ಅನುಭಾವ ಸಾಹಿತ್ಯದಲ್ಲಿ ಹೊಸಜಾಡನ್ನು ನಿರ್ಮಿಸಿದುದು



ಅತ್ಯಪೂರ್ವವಾಗಿದೆ. "ಕೂಡಲಸಂಗಾ ನಿನಗೆ ಕೇಡಿಲ್ಲವಾಗಿ ಅನು ಒಲಿದಂತೆ ಹಾಡುವೆ" ಎಂದಿರುವಂತೆ ಅವರು ಹಾಡಿರುವ ಆ ಹಾಡುಗಳಿಗೆ ಎಂದೆಂದಿಗೂ ಅಳಿವಿಲ್ಲ.

ಹೀಗೆ ಕನ್ನಡಸಾಹಿತ್ಯದ ವಿವಿಧಪ್ರಕಾರಗಳಲ್ಲಿ ವಿಶಿಷ್ಟವಾದ ಅನುಭಾವಿಗಳ ದಿವ್ಯಾನುಭಾವದ ಅಮೃತಬಿಂದುಗಳಾದ, ಅಂತರಂಗದ ಅರಿವಿನ ಪರಮ ಪರಂಜ್ಯೋತಿಯ ಕಿರಣಗಳಾದ ಈ ಹಾಡುಗಳು ಅಥವಾ ತತ್ತ್ವಪದಗಳು ಒಂದು ವಿಶಿಷ್ಟಪ್ರಕಾರವಾಗಿ ಸಾಹಿತ್ಯಚರಿತ್ರೆಯಲ್ಲಿ ವಿಶೇಷಸ್ಥಾನವನ್ನು ಪಡೆದಿವೆ. ಅನುಭಾವಿಗಳ ಈ ಪದಗಳು ತಮ್ಮ ಗೇಯತೆ, ನಾದಮಾಧುರ್ಯ, ಸಂಕ್ಷಿಪ್ತತೆ, ಸರಳತೆ, ತತ್ತ್ವಬೋಧೆ, ದರ್ಶನದೀಪ್ತಿಗಳಿಂದ ಜನತೆಯ ಹೃದಯವನ್ನು ನೇರವಾಗಿ ಮುಟ್ಟುತ್ತವೆ. ಮನವನ್ನು ಮಹದ ಕಡೆಗೆ ತಿರುಗಿಸುತ್ತವೆ. ಜನತೆಯ ಇಹದ ಬದುಕನ್ನು ಹಸನುಗೊಳಿಸಿ ಪರಮಾರ್ಥ ಪಥದಲ್ಲಿ ಮುನ್ನಡೆಸಿ ಉದ್ಧರಿಸುತ್ತವೆ. ಕತ್ತಲೆಗೊಂದು ಬೆಳಕಾಗಿ, ನಿರಾಶೆಗೊಂದು ಆಶಾಕಿರಣವಾಗಿ, ಬಾಳಿಗೊಂದು ಊರೆಗೋಲಾಗಿ, ನೊಂದಜೀವಕ್ಕೊಂದು ಭರವಸೆಯಾಗಿ ನಿನದಿಸುತ್ತಿರುವ ಈ ಹಾಡುಗಳು ಮರ್ತ್ಯಜೀವಿಗೆ ಅಮೃತಸಂಜೀವಿನಿಗಳಾಗಿ ತುಷ್ಟಿಪುಷ್ಟಿಗಳನ್ನೆರೆಯುತ್ತ ಬಂದಿವೆ. ಇಂತಹ ತತ್ತ್ವಪದಗಳು ಹನ್ನೆರಡನೆಯ ಶತಮಾನದ ಶಿವಶರಣರಿಂದಲೇ ಪ್ರಾರಂಭಗೊಂಡು ಪ್ರಸಿದ್ಧಿಯಾಗಿವೆ. ಕನ್ನಡಕ್ಕೆ ವಿಶಿಷ್ಟವಾದ ಹಾಗೂ ಜಾಗತಿಕ ಸಾಹಿತ್ಯದಲ್ಲಿ ಕನ್ನಡಕ್ಕೆ ಹಿರಿಮೆಯನ್ನು ತಂದಿತ್ತಿರುವ ವಚನಸಾಹಿತ್ಯವನ್ನು ನೀಡಿದ ಶಿವಶರಣರು ಗೇಯಕೃತಿಗಳನ್ನು ಸಹ ರಚಿಸಿ ಪ್ರಥಮ ವಾಗ್ಗೇಯಕಾರರೂ ಆಗಿದ್ದಾರೆ. "ಇಡೀ ಭಾರತೀಯ ಸಾಹಿತ್ಯಕ್ಕೆ ವಚನವೆಂಬ ಅಭೂತ ಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು ತಮ್ಮ ಕಾಲಕ್ಕೆ ಅಥವಾ ತತ್ಪೂರ್ವಕ್ಕೆ ಕನ್ನಡದಲ್ಲಿಲ್ಲದಿದ್ದ ಹಾಡುಗಳನ್ನು ಬರೆಯಲೂ ಮೊದಲಿಗರಾದರು. ಶಿವಶರಣರು ಬರೆದ ಈ ಹಾಡುಗಳು ಪಲ್ಲವ (=ಪಲ್ಲವಿ)ದಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯಕೃತಿಗಳು"[೧] ಎಂಬ ಹೇಳಿಕೆ ಈ ತತ್ತ್ವಪದಗಳ ಉಗಮದ ಮೇಲೆ ಹೊಸಬೆಳಕನ್ನು ಚೆಲ್ಲುತ್ತದೆ. ಈ ಪರಂಪರೆಯಲ್ಲಿ ಬಂದ ನಾಡಿನ ಸುಪ್ರಸಿದ್ಧ ಅನುಭಾವಿಗಳು ಸಾಹಿತ್ಯದ ಈ ವಿಶಿಷ್ಟಪ್ರಕಾರವನ್ನು ಬೆಳೆಸಿ ತಮ್ಮದೆ ಆದ ಕೊಡುಗೆಯನ್ನಿತ್ತಿದ್ದಾರೆ. ಇಂತಹ ಶರಣಶ್ರೇಷ್ಠರ ತತ್ತ್ವಪದಗಳು ಅಂದಿನಿಂದ ಇಂದಿನವರೆಗೂ ಅವ್ಯಾಹತವಾಗಿ ಬೆಳೆದುಬಂದು ಕನ್ನಡದ ಕಣಜದಲ್ಲಿ ಕನಕದ ರಾಶಿಯಾಗಿ ತುಂಬಿವೆ. ಮರ್ತ್ಯದ ಬದುಕಿನಲ್ಲಿ ಸಿಲುಕಿ ಮಾಯಾಮೋಹದಲ್ಲಿ

---

೧. ಡಾ. ಎಲ್. ಬಸವರಾಜು: ಶಿವದಾಸ ಗೀತಾಂಜಲಿ, ಜ.ಶ್ರೀ.ಶಿ. ಗ್ರಂಥಮಾಲಾ, ಮೈಸೂರು, ೧೯೬೩; ಪೀಠಿಕೆ, ಪುಟ ೭೭,

ಮುಳುಗಿರುವ ಮರವೆಯ ಮಾನವನನ್ನು ಎಚ್ಚರಿಸಿ ಅವನಲ್ಲಿ ಅರಿವನ್ನು ತುಂಬಿ ಗುರಿಯ ಕಡೆಗೆ ನಡೆಸಿ ಕೈವಲ್ಯ ಸಂಪಾದನೆಗೆ ಕಾರಣವಾಗಿರುವುದರಿಂದ ಈ ತತ್ತ್ವಪದಗಳನ್ನು **"ಕೈವಲ್ಯ ಪದಗಳು"** ಎಂದು ಕರೆದಿದೆ.

ಹನ್ನೆರಡನೆಯ ಶತಮಾನದಲ್ಲಿ ಈ ಹಾಡುಗಳನ್ನು ಬರೆದ ಶಿವ ಶರಣರಲ್ಲಿ ಸಕಲೇಶಮಾದರಸರು, ಬಸವೇಶ್ವರರು, ಅಲ್ಲಮಪ್ರಭುಗಳು, ಚೆನ್ನಬಸವೇಶ್ವರರು, ಸಿದ್ಧರಾಮೇಶ್ವರರು, ಅಕ್ಕಮಹಾದೇವಿಯವರು, ನೀಲಾಂಬಿಕೆಯವರು ಮೊದಲಾದವರು ಮುಖ್ಯರು. ಹದಿಮೂರನೆಯ ಶತಮಾನದಲ್ಲಿ ತನ್ನ ಗುರು ಹರಿಹರನನ್ನು ಸ್ತುತಿಸಿ ರಾಘವಾಂಕನು ಬರೆದಿರುವ ಒಂದು ಹಾಡನ್ನು ಶಿವದಾಸ ಗೀತಾಂಜಲಿಯಲ್ಲಿ ಪ್ರಕಟಿಸಿದ್ದಾರೆ.[೧]

ಮುಂದಿನ ಶತಮಾನಗಳಲ್ಲಿ ಶಿವಶರಣರ ಹಾಡಿನ ಪರಂಪರೆಯನ್ನು ಮುಂದುವರಿಸಿದ ಮುಖ್ಯರೆಂದರೆ ಗುರುಪುರದ ಮಲ್ಲ, ಗುರುಬಸವ, ಕರಸ್ಥಲದ ನಾಗಿದೇವ, ನಿರ್ವಾಣಿ ಬೋಳೇಶ, ಶಂಕರದೇವ, ನಿಜಗುಣಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು ಮೊದಲಾದ ಶಿವಶರಣರು.

ಶಿವಶರಣರ ಈ ಹಾಡಿನ ಪರಂಪರೆಗೆ ಒಂದು ನಿರ್ದಿಷ್ಟರೂಪವನ್ನು ಕೊಟ್ಟು ಸುವ್ಯವಸ್ಥೆಗೊಳಿಸಿ ಉಜ್ವಲವಾಗಿ ಮುಂದುವರಿಸಿದವರು ನಿಜಗುಣಶಿವಯೋಗಿಗಳು. ಅವರು ತಮ್ಮ ಹಿರಿಯ ವ್ಯಕ್ತಿತ್ವ ಹಾಗೂ ಸಮರ್ಥವಾದ ತಮ್ಮ ಮೇರುಕೃತಿಗಳ ಪ್ರಭಾವದಿಂದ ವೀರಶೈವ ಅನುಭಾವಸಾಹಿತ್ಯದಲ್ಲಿ ವಿಶಿಷ್ಟ ಕೀರ್ತಿಯನ್ನು ಪಡೆದರು. ಭಾವಗೀತೆಗಳಂತೆ ಹೃದ್ಯವಾಗಿದ್ದು, ಪಂಡಿತಪಾಮರರಿಗೆ ಅರ್ಥವಾಗುವ ಸಾಹಿತ್ಯ ಸೌಂದರ್ಯದಿಂದ ತುಂಬಿ ಸೌರಭವನ್ನು ಸೂಸುತ್ತ ಕನ್ನಡದ ತತ್ತ್ವಭಂಡಾರಕ್ಕೆ ಅಮೂಲ್ಯ ನಿಧಿಯಾಗಿರುವ ಅವರ 'ಕೈವಲ್ಯಪದ್ಧತಿ'ಯು ಉಜ್ವಲ ಕೈದೀವಿಗೆಯಾಗಿ ಬೆಳಗುತ್ತಿದೆ. ಅವರು ಕನ್ನಡದಲ್ಲಿ ಕೈವಲ್ಯ ಸಾಹಿತ್ಯಕ್ಕೆ ವಿಶೇಷ ಚಾಲನೆಯನ್ನಿತ್ತು ಅದನ್ನು ಸಂಪತ್ಸಮೃದ್ಧವಾಗಿ ಬೆಳೆಸಿದರು. "ನಿಜಗುಣಶಿವಯೋಗಿಗಳು ನಿಜಾನಂದದಲ್ಲಿ ನುಡಿಸಿದ ಈ ರಾಗರಸದ ತರಂಗಿಣಿ ಅನೇಕ ಶಾಖೋಪಶಾಖೆಗಳಿಂದ ತುಂಬು ಹೊನಲಾಗಿ ಹರಿದುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹವಾದ ಸಂಗತಿಯಾಗಿದೆ. ಪ್ರಾರಂಭದಲ್ಲಿಯೆ ಅಪೂರ್ವ ಪ್ರತಿಭೆಯ ಅಸಾಧಾರಣ ವ್ಯಕ್ತಿತ್ವದ ನಿಜಗುಣರಿಂದ ದೀಕ್ಷೆ ದೊರೆತುದು ಅದರ ಸೌಭಾಗ್ಯವೆಂದೇ ಹೇಳಬಹುದು"[೨] ಎಂಬುದಾಗಿ ಚೆನ್ನವೀರಕಣವಿಯವರು ಹೇಳಿರುವ ಮಾತು ಸಮರ್ಥನೀಯವಾಗಿದೆ.

---

೧. ಅದೇ; ಪೀಠಿಕೆ, ಪುಟ ೧೧೧,

೨. ವೈರಾಗ್ಯದಲರು–ಮುರುಘಾಮಠ, ಧಾರವಾಡ ೧೯೫೫, ಪುಟ ೨೦೩



ಇಂತಹ ಅತ್ಯಪೂರ್ವವಾದ ಕನ್ನಡ ಕೈವಲ್ಯ ಸಾಹಿತ್ಯಾಕಾಶದಲ್ಲಿ ಬೆಳಗುತ್ತಿರುವ ನಕ್ಷತ್ರಮಾಲಿಕೆಯಲ್ಲಿ ನಿಜಗುಣರ ಸಮಕಾಲೀನರಾಗಿರಬಹುದಾದ ಮುಪ್ಪಿನ ಷಡಕ್ಷರಿಗಳೂ ಸಹ ಒಂದು ಪ್ರಜ್ವಲಿಸುವ ನಕ್ಷತ್ರ!

**ಕಾಲ–ದೇಶ–ಕೃತಿ**

ಮುಪ್ಪಿನ ಷಡಕ್ಷರಿಗಳ ಜೀವನ ಚರಿತ್ರೆಯನ್ನು ಕುರಿತ ಖಚಿತವಾದ ವಿವರಗಳು ಇನ್ನೂ ದೊರೆತಿಲ್ಲ. ಇವರು ಒಂದು ರೀತಿಯಲ್ಲಿ ಅಜ್ಞಾತಕವಿಗಳಾಗಿ ಕಂಡುಬರುತ್ತಾರೆ. ಇವರನ್ನು ಪೂರ್ವಕವಿಗಳು ಯಾರು ಸಹ ನೆನೆದಂತೆ ಕಂಡುಬರುವುದಿಲ್ಲ. ತಮ್ಮ ಪದಗಳಲ್ಲಿ ಎಲ್ಲಿಯೂ ಸ್ವಂತ ವಿಚಾರಗಳನ್ನು ಹೇಳಿಕೊಂಡಿಲ್ಲ. ತಮ್ಮ ಗುರುಗಳನ್ನು ಒಂದು ಪದದಲ್ಲಿ, ಅದೂ ಮೊದಲ ಪದದಲ್ಲಿ

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ ! ನೀನೆನಗೆ ದೀಕ್ಷೆಯ ಮಾಡಿದೆ
ವರಷಡಕ್ಷರಿಯ ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು

–ಎಂದು ಸ್ಮರಿಸಿರುವುದನ್ನು ಬಿಟ್ಟರೆ ವೈಯಕ್ತಿಕ ವಿಚಾರವಾಗಿ ಮತ್ತೇನನ್ನೂ ಹೇಳಿರುವುದಿಲ್ಲ. ಅವರ ಜೀವನವನ್ನು ಬೆಳಗುವ ಒಂದು ಬೆಳಕು ಈ ಹೇಳಿಕೆ ಅಷ್ಟೆ. ತಮ್ಮ ಪೂರ್ವಾಶ್ರಮದ ವಿವರ ವೃತ್ತಾಂತಗಳಿಗೆ ಹೋಗದೆ ತಮ್ಮ ಗುರುಗಳನ್ನು ಹೆಸರಿಸುವುದು, ಸ್ಮರಿಸುವುದು ಶಿವಯೋಗಿಗಳ ಸಂಪ್ರದಾಯವಿರುವುದರಿಂದ ಮುಪ್ಪಿನ ಷಡಕ್ಷರಿಗಳು ಸಹ ಅದಕ್ಕೆ ಹೊರತಾಗಿಲ್ಲ. ಆದುದರಿಂದ ಅವರ ಸಾಧಕಜೀವನ ಚಿತ್ರಣವನ್ನು ಮಾತ್ರ ಅವರ ಈ ಮೇಲಿನ ಹೇಳಿಕೆಯಿಂದ ಹೀಗೆ ರೂಪಿಸಬಹುದು.

ಅವರ ಜನ್ಮ ಸ್ಥಳ, ತಂದೆ ತಾಯಿಗಳು, ಪೂರ್ವಾಶ್ರಮದ ಹೆಸರು ಇವು ಗೊತ್ತಿಲ್ಲ. ಅವರು ಎರಗಂಬಳ್ಳಿಯ ಸಿದ್ಧಲಿಂಗರ ಶಿಷ್ಯರು. ಅವರಿಂದ ದೀಕ್ಷೆಯನ್ನು ಹೊಂದಿ ನೂತನ ನಾಮಾಂಕಿತವನ್ನು ಪಡೆದುದರಿಂದ ಅವರು ಆ ಮಠಕ್ಕೆ ಅಧಿಪತಿಗಳಾಗಿದ್ದಿರಬಹುದು ಎಂದು ಊಹಿಸಬಹುದು. ಎರಗಂಬಳ್ಳಿ ಗ್ರಾಮವು ಮೈಸೂರಿನ ದಕ್ಷಿಣಕ್ಕೆ ಯಳಂದೂರು ತಾಲ್ಲೂಕಿನಲ್ಲಿದೆ. ಅಲ್ಲಿ ಷಡಕ್ಷರಿಗಳ ಗದ್ದುಗೆಯಿದ್ದು ಅದು ಜಾಗ್ರತಸ್ಥಾನವೆನಿಸಿದೆ. ಅದರ ಹತ್ತಿರದ ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿ ಗ್ರಾಮದ ಸನಿಹದಲ್ಲಿರುವ ಶಂಭುಲಿಂಗನ ಬೆಟ್ಟ (ನಿಜಗುಣರ ಬೆಟ್ಟ) ನಿಜಗುಣಶಿವಯೋಗಿಗಳು ಶಿವಯೋಗಾನುಷ್ಠಾನ ಮಾಡಿದ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ಹಾಗೆಯೇ ಅಲ್ಲಿ ಮುಪ್ಪಿನ ಷಡಕ್ಷರಿಗಳವರು

ತಪೋನುಷ್ಠಾನಗೈದರೆಂದು ಹೇಳುವ 'ಮುಪ್ಪಿನ ಷಡಕ್ಷರಿಗಳ ಗವಿ' ಎಂಬ ಜನಜನಿತವಾದ ಗವಿಯೂ ಇದೆ. ಇದರಿಂದಾಗಿ ನಿಜಗುಣರು ಮತ್ತು ಮುಪ್ಪಿನ ಷಡಕ್ಷರಿಗಳು ಸಮಕಾಲೀನರೆಂದು ಪ್ರತೀತಿ.

ಮುಪ್ಪಿನ ಷಡಕ್ಷರಿಗಳ ಕಾಲನಿರ್ಣಯ ತುಂಬ ತೊಡಕಿನದಾಗಿದೆ. ಅವರ ಕೃತಿಗಳಲ್ಲಿ ಎಲ್ಲಿಯೂ ಆ ಬಗೆಗೆ ಸುಳಿವು ಸಿಕ್ಕುವುದಿಲ್ಲ. ಮುಂದಿನವರು ಅವರನ್ನು ಸ್ಮರಿಸುವುದು ಗೋಚರಿಸುತ್ತಿಲ್ಲ. ನಿಜಗುಣರ ಸಮಕಾಲೀನರೆಂದು ಹೇಳುವುದಕ್ಕೆ ಸರಿಯಾದ ಆಧಾರಗಳಿಲ್ಲ. ಅವರು ಪರಸ್ಪರ ಒಬ್ಬರನ್ನೊಬ್ಬರು ತಮ್ಮ ಕೃತಿಗಳಲ್ಲಿ ಸ್ಮರಿಸಿರುವುದಿಲ್ಲ. ಕವಿಚರಿತೆಕಾರರು ಇವರ ಕಾಲವನ್ನು ಕ್ರಿ.ಶ. ಸು. ೧೭೫೦ ಎಂದು ಊಹಿಸಿದ್ದಾರೆ.[೧] ಆದರೆ ನಿಜಗುಣರ ಜೊತೆಯಲ್ಲಿದ್ದವರಲ್ಲಿ ಮುಪ್ಪಿನ ಷಡಕ್ಷರಿಗಳೂ ಒಬ್ಬರು ಎಂಬ ಪ್ರತೀತಿ ಇರುವುದರಿಂದ ಇವರ ಕಾಲವನ್ನು ಕ್ರಿ.ಶ. ಸು. ೧೫೦೦ ಎಂದಿಟ್ಟುಕೊಳ್ಳಬಹುದಾಗಿದೆ. ಮುಪ್ಪಿನ ಷಡಕ್ಷರಿಗಳ ಕೃತಿಯ ಬಗೆಗೆ ಕವಿಚರಿತೆಕಾರರು "ಈತನು ವಚನಗಳು, ಶಿವಾಷ್ಟಕ, ಶಿವಯೋಗಾಷ್ಟಕ ಇವುಗಳನ್ನು ಬರೆದಿರುವವನು"[೨] ಎಂದು ಹೇಳಿದ್ದಾರೆ. ಇಲ್ಲಿ 'ವಚನಗಳು' ಎಂದು ಹೇಳಿರುವುವು- 'ಷಡಕ್ಷರಿ ಲಿಂಗ' ಅಂಕಿತದಲ್ಲಿ ಹಾಡಿರುವ ಸ್ವರವಚನಗಳೇ ಆಗಿವೆ. ಶಿವಾಷ್ಟಕ ಮತ್ತು ಶಿವಯೋಗಾಷ್ಟಕಗಳು ಕ್ರಮವಾಗಿ ಶಿವಪೂಜಾವೈಭವ, ಶಿವಯೋಗದ ಐಸಿರಿಗಳನ್ನು ಅಸದೃಶವಾಗಿ ವರ್ಣಿಸುವ ಅಷ್ಟಕಗಳಾಗಿವೆ. ಅವೆಲ್ಲವೂ ತತ್ತ್ವಪದಗಳೇ ಆಗಿದ್ದು ಒಟ್ಟಿಗೆ ಸೇರಿ ಒಂದು ಗೊಂಚಲಾಗಿ 'ಸುಬೋಧಸಾರ' ಎಂದು ಪ್ರಸಿದ್ಧಿಪಡೆದಿವೆ.

'ಸುಬೋಧಸಾರ' – ಈ ಹೆಸರು ಮುಪ್ಪಿನ ಷಡಕ್ಷರಿಗಳವರ ಹಾಡುಗಳನ್ನು ಸಂಗ್ರಹಿಸಿದವರು ಇಟ್ಟ ಹೆಸರು. ಆದರೆ ಷಡಕ್ಷರಿಗಳೇನೂ ತಮ್ಮ ಹಾಡುಗಳ ಸಮೂಹಕ್ಕೆ ಒಂದು ನಿರ್ದಿಷ್ಟ ಹೆಸರನ್ನು ಕೊಟ್ಟವರಲ್ಲ. ಈ ತತ್ತ್ವಪದಗಳು ತಾಳೆಯೋಲೆಯ ಪ್ರತಿಗಳಲ್ಲಿ "ಮುಪ್ಪಿನ ಷಡಕ್ಷರಿ ಸ್ವಾಮಿಗಳವರ ಸ್ವರ ವಚನಗಳು" "ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು" ಎಂದಿರುವುದರಿಂದ ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು ಎಂಬುದು ತುಂಬ ಸೂಕ್ತವಾಗಿದ್ದು ಈ ಕೃತಿಗೆ ಆ ಹೆಸರನ್ನೇ ಸ್ವೀಕರಿಸಲಾಗಿದೆ. ಆದರೂ 'ಸುಬೋಧಸಾರ' ಎಂದು ಸುಪರಿಚಿತವಾಗಿರುವುದರಿಂದ ಅದನ್ನು ಕೈಬಿಡದೆ ಆವರಣ ಚಿಹ್ನೆಯಲ್ಲಿ ಕೊಡಲಾಗಿದೆ.

೧೯೪೦ರಲ್ಲಿ 'ಶ್ರೀ ಮುಪ್ಪಿನ ಷಡಕ್ಷರಿದೇವಕೃತ ಸುಬೋಧಸಾರ' ಎಂಬ ಹೆಸರಿನಿಂದ ಶ್ರೀ ಹರ್ಡೇಕರ ಮಂಜಪ್ಪನವರಿಂದ ಸಂಗ್ರಹಿತವಾಗಿ ಪ್ರಕಟವಾದ ಕೃತಿಯಲ್ಲಿ ಒಟ್ಟು ೭೬ ಪದಗಳು ಇವೆ. ಪರಿಷ್ಕರಣಗೊಂಡ ಮುಂದಿನ ಎರಡು,

---

೧. ರಾ. ನರಸಿಂಹಾಚಾರ್ಯ : ಕ.ಕ.ಚ. ತೃತೀಯ ಸಂಪುಟ ೧೯೭೪. ಪುಟ ೮೧.
೨. ಅದೇ; ಪುಟ ೮೧.



ಮೂರು, ನಾಲ್ಕನೆಯ ಮುದ್ರಣಗಳು ಧಾರವಾಡದ ಶ್ರೀ ಮುರುಘಾಮಠದಿಂದ ಹೊರಬಂದಿವೆ. ಅವುಗಳಲ್ಲಿ ಹೆಚ್ಚಿನ ಪದಗಳೇನೂ ಸೇರ್ಪಡೆಯಾಗಿಲ್ಲ. ಈಗ ಲಭ್ಯವಿರುವ ಬೇರೆಬೇರೆ ಹಸ್ತಪ್ರತಿಗಳಲ್ಲಿ ದೊರೆತ ಹೆಚ್ಚಿನ ಪದಗಳನ್ನು ಇದರಲ್ಲಿ ಸೇರಿಸಿದೆ. ಒಟ್ಟು ೮೭ ಪದಗಳು ಈ ಕೃತಿಯಲ್ಲಿ ಬಂದಿವೆ.

**ವಚನಗಳ ಪ್ರಭಾವ**

ಮುಪ್ಪಿನ ಷಡಕ್ಷರಿಗಳು ರಚಿಸಿದ ಕೃತಿ ಒಂದೇ ಆದರೂ ಅದು ಸತ್ವಪೂರ್ಣವಾಗಿದೆ. ಅವರ ದಿವ್ಯಾನುಭವದ ಅಮರಗೀತೆಗಳು ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳಸುಂದರವಾಗಿವೆ. ಕಲ್ಯಾಣದ ಶಿವಶರಣರ ಅನುಭಾವದ ಮಾರ್ಗವನ್ನೆ ಹಿಡಿದು ಮುನ್ನಡೆದ ಮುಪ್ಪಿನಾರ್ಯರ ಮೇಲೆ ಶರಣರ ವಚನಗಳ ಪ್ರಭಾವ ಅಧಿಕವಾಗಿ ಬಿದ್ದಿದೆ. "ಹಿಂದಣ ವಾಸನೆಯನ್ನು ಪರಿಹರಿಸುವ, ಮುಂದಣ ಸದ್ಗತಿಯನ್ನು ತೋರುವ ಜನ, ಸಂದ ಪುರಾತರ ವಚನಗಳಿರುತಿರೆ ಏತರ ಭಯವೆಮಗೆ" ಎಂದು ಅವರೇ ಭರವಸೆ ಇತ್ತಿದ್ದಾರೆ. ಇವರ ಪ್ರತಿಯೊಂದು ಪದಗಳಿಗೂ ಸಂವಾದಿಯಾದ ಶರಣರ ವಚನಗಳನ್ನು ಸುಲಭವಾಗಿ ನಾವು ಗುರುತಿಸಬಹುದು. ಅವುಗಳಲ್ಲಿ ಕಾಣುವ ಭಕ್ತಿ-ಜ್ಞಾನ-ವೈರಾಗ್ಯ, ಸಮತೆ-ಸೈರಣೆ, ಸತಿ-ಪತಿಭಾವ ಮುಂತಾದ ತತ್ತ್ವಗಳನ್ನು ಸರಳವಾಗಿ ಇವರು ನಿರೂಪಿಸಿದ್ದಾರೆ.

**ಅಂಬಿಗರ ಚೌಡಯ್ಯಗಳ ವಚನ:**

ಬಡತನಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ
ಇಂತೀ ಹಲವು ಚಿಂತೆಗಳಲ್ಲಿಪ್ಪರ ಕಾಂಬೆನು, ಶಿವಚಿಂತೆಯಲ್ಲಿರ್ಪವರ
ಒಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

ಇದರ ಭಾವವೆ ಪ್ರತಿಬಿಂಬಿಸುವಂತೆ, ಷಡಕ್ಷರಿಗಳು ತಮ್ಮದೇ ಪ್ರಾಸಾದಿಕ ವಾಣಿಯಲ್ಲಿ ಹೀಗೆ ಹೇಳಿದ್ದಾರೆ:

ಅನ್ನ ಉದಕದ ಚಿಂತೆ
ಎಣ್ಣೆ ನೀರಿನ ಚಿಂತೆ
ಬಣ್ಣ ಬಳಿದಾಭರಣ ತೊಡುವ ಚಿಂತೆ
ಮಣ್ಣುಮನೆಗಳ ಚಿಂತೆ
ಹೊನ್ನುಹೆಣ್ಣಿನ ಚಿಂತೆ
ಇನ್ನು ಪುತ್ರರ ಬೇಡಿ ಬಳಲ್ವ ಚಿಂತೆ

–ಎಂಬುದಾಗಿ ಈ ಚಿಂತೆಗಳ ಪಟ್ಟಿ ಅಂತ್ಯವಿಲ್ಲದೆ ಅನಂತವಾಗಿ ಬೆಳೆಯುವುದನ್ನು ಬಗೆದುಂಬಿ ಬಣ್ಣಿಸಿದ್ದಾರೆ.

**ಬಸವಣ್ಣನವರ ವಚನ:**

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರವೇ ಹೊನ್ನ ಕಳಶವಯ್ಯ
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ದೇಹದೇಗುಲದ ಈ ನಿರೂಪಣೆ ಷಡಕ್ಷರಿಗಳ ಕೈವಲ್ಯಪದದಲ್ಲಿ ಪ್ರತಿಧ್ವನಿಸುವ ಬಗೆ ಹೀಗಿದೆ:

ಎನ್ನ ಕಾಯವು ನಿನಗೆ
ಉನ್ನತಾಲಯವಾಯಿ
ತಿನ್ನೆನಗೆ ಭಯವುಂಟೆ ಎಲೆ ಲಿಂಗವೇ।
ಎನ್ನ ಕಾಲುಗಳೆರಡು
ಉನ್ನತದ ಕಂಭವೈ
ಎನ್ನ ಒಡಲೇ ನಿಮಗೆ ದೇವಾಲಯ
ಎನ್ನ ತೋಳುಗಳೆರಡು
ಉನ್ನತದ ಮದನಕ್ಕೆ
ಎನ್ನ ಶಿರ ಸೌವರ್ಣಕಲಶವಯ್ಯ

ಎಂಬುದಾಗಿ ಮುಂದುವರಿದಿರುವುದು ಮನೋಹರವಾಗಿದೆ.

'ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ'–ಎಂಬ ವಚನದ ವಿಸ್ತೃತರೂಪವೋ ಎಂಬಂತಿದೆ ಷಡಕ್ಷರಿಗಳವರ 'ಕರವನಜ'ದಲ್ಲಿ ಕಂಗೊಳಿಸುವ 'ಘನಮಹಿಮ ಲಿಂಗ'ದ ವರ್ಣನೆ–

ಘನಮಹಿಮಲಿಂಗವೇ
ಅನುಪ್ರಾಣಿ ಎನ್ನ ಕರ
ವನಜಕ್ಕೆ ಬಂದು ಚುಳುಕಾದಿರಲ್ಲ
ತರಣಿಕೋಟಿ ಪ್ರಭೆಯ
ಕಿರಿದೆನಿಪ ಬೆಳಗಿನಾ
ವರಹೇಮಶೈಲಾಗ್ರದೊಳಗೊಪ್ಪುವ
ಹರಗಣಂಗಳ ಸುಖವ



ನೆರೆಯುಳಿದು ಎನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ

ಹೀಗೆ ಶರಣರ, ಅದರಲ್ಲೂ ಮುಖ್ಯವಾಗಿ ಬಸವಣ್ಣನವರ ಜೀವನಾದರ್ಶ, ಮನೋಧರ್ಮ, ರೀತಿ–ನೀತಿಗಳು ಇವರ ಮೇಲೆ ಪ್ರಗಾಢವಾದ ಪ್ರಭಾವ ಬೀರಿರುವುದನ್ನು ಇವರ ಹಾಡುಗಳಲ್ಲಿ ಹೆಜ್ಜೆಹೆಜ್ಜೆಗೂ ಕಾಣಬಹುದು.

ಅಲ್ಲದೆ ಮುಪ್ಪಿನಾರ್ಯರಿಗೆ ಅಂದಿನ ಶರಣರ ನಡೆ–ನುಡಿಗಳು ಆದರ್ಶನೀಯ–ಆದರಣೀಯ–ಅನುಸರಣೀಯವಾಗಿದ್ದು ಅವರನ್ನು ಅನನ್ಯಭಾವದಿಂದ, ಅತ್ಯಂತ ಅಭಿಮಾನದಿಂದ ಸ್ಮರಿಸಿದ್ದಾರೆ. ಶರಣರ ನೆನಹು ಅವರಿಗೆ ಎಲ್ಲಿಲ್ಲದ ಸಂತೋಷ, ಸ್ಫೂರ್ತಿಗಳನ್ನು ನೀಡಿದೆ. ಅದರಿಂದಾಗಿ ಅವರು ಲೋಹದ ಹಂಗಿಗೆ, ಸಂಸಾರದ ಸಂಗ–ಸಂಕೋಲೆಗಳಿಗೆ ಒಳಗಾಗದ ನಿಸ್ಸಂಗ–ನಿರ್ಲೇಪರಾಗಿದ್ದು ಭವವ ಗೆದ್ದು, ನಿರ್ಭಯದಿಂದ ಭವಹರನನ್ನು ಕಂಡದ್ದು ನಿಚ್ಚಳವಾಗಿದೆ.

'ಎಲ್ಲ ಶರಣರ ನೆನೆದು
ಇಲ್ಲಿ ನಾ ನತನಾಗಿ
ಎಲ್ಲರನು ಒಂದೊಂದು ಬೇಡಿಕೊಂಬೆ'
'ಶಿವಶರಣರಾ ಮನೆಯ
ತವೆಸೇವೆಯನು ಮಾಡಿ
ಭವವ ಗೆದ್ದೆನು ಎನಗೆ ಸರಿಯದಾರು'

ಇವೇ ಮೊದಲಾದ ಪದಗಳಲ್ಲಿ ಅಂದಿನ ಸುಮಾರು ಎಪ್ಪತ್ತಕ್ಕೂ ಹೆಚ್ಚು ಮಂದಿ ಶಿವಶರಣರನ್ನು ನೆನೆಸಿಕೊಂಡಿದ್ದಾರೆ. ಅದರಿಂದ 'ಘನಮುಕ್ತಿಪದ'ವನ್ನು ಪಡೆದಿದ್ದಾರೆ.

**ಮುಪ್ಪಿನಾರ್ಯರ ಮಧುರಭಕ್ತಿ**

ಜೀವನು ದೇವನಲ್ಲಿ ಇಡುವ ನಿರ್ಮಲವಾದ ಪ್ರೇಮಭಾವವೆ ಭಕ್ತಿ. ಅದು ಹೃದಯದ ನಿಕ್ಷೇಪ. ಅದು ಅಮೂಲ್ಯನಿಧಿ–ನಿಧಾನ. ಹೃದಯದ ಈ ಮಹದೈಶ್ವರ್ಯವನ್ನು, ಈ ಪರಮಪ್ರೀತಿಯನ್ನು ಸೂರೆಗೊಟ್ಟಲ್ಲದೆ ಆ ಪರಮೇಶ್ವರನು ಒಲಿಯಲಾರನು. ಈ ಜಗತ್ತಿನ ದೈನಂದಿನ ದಂದುಗಗಳಲ್ಲಿ ಸಿಲುಕಿ ಕೋಟಲೆಗೊಳ್ಳುತ್ತಿರುವ ಜೀವಾತ್ಮವನ್ನು ಕಷ್ಟ–ಸಂಕಟಗಳಿಂದ ಪಾರುಗಾಣಿಸುವವನು ಪ್ರೇಮಮಯಿಯಾದ ಪರಮಾತ್ಮ. ಆತನನ್ನು ಒಲಿಸಿಕೊಳ್ಳುವ ಮಾರ್ಗಗಳಲ್ಲಿ ಭಕ್ತಿಯು ಅತ್ಯುತ್ತಮವಾದುದು ಮತ್ತು ಅತ್ಯಂತ ಸುಲಭವಾದುದು.

ಲೋಕದ ವಸ್ತು–ವಿಷಯಗಳನ್ನು ಅಪೇಕ್ಷಿಸಿ, ಮೋಹಿಸಿ, ಪ್ರೀತಿಸಿದರೆ ಅದರಿಂದ ಸುಖವಿಲ್ಲ, ಆನಂದವಿಲ್ಲ. ಕಾರಣ ಅವುಗಳಿಂದ ಬರುವ ಸುಖ–ಆನಂದಗಳು ತಾತ್ಕಾಲಿಕ ಹಾಗೂ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ. ಇದನ್ನರಿತ ಭಕ್ತನು ಭೂಮವಾದ ಭಗವಂತನನ್ನು ಪ್ರೀತಿಸಿ ಶಾಶ್ವತಾನಂದವನ್ನು ಪಡೆಯಲಿಚ್ಛಿಸುತ್ತಾನೆ. ನಿಜವಾದ ಭಕ್ತನು ಪರಮಾತ್ಮನನ್ನು ಪ್ರೀತಿಗಾಗಿ ಪ್ರೀತಿಸುತ್ತಾನೆ. ದೇವರಿಂದ ಏನನ್ನೂ ಪಡೆಯಬೇಕೆಂಬ ಆಸೆ ಅವನಿಗಿರುವುದಿಲ್ಲ. ಅವನಿಗೆ ದೇವನೊಬ್ಬನೇ ಬೇಕು. ಆ ಭಗವಂತನನ್ನು ತನು–ಮನಗಳು ಕರಗುವಂತೆ ಅರ್ಚಿಸಿ ಅವನೊಡನೆ ಒಂದಾಗಿ ಸಮರಸಗೊಳ್ಳುವುದೆ ಉತ್ಕಟಭಕ್ತಿಯ ಲಕ್ಷಣ. 'ಸಾ ತ್ವಸ್ಮಿನ್ ಪರಮಪ್ರೇಮರೂಪಾ'–ಎಂಬ ನಾರದರ ಭಕ್ತಿಸೂತ್ರ–ಅಮೃತಸ್ವರೂಪನಾದ ಭಗವಂತನಲ್ಲಿ–ಉತ್ಕಟವಾದ ಪ್ರೇಮವೆ ಭಕ್ತಿಯೆಂದು ಹೇಳುತ್ತದೆ. "ಭಕ್ತಿ ಶಿವಪ್ರಸಾದ ಜನನೀಭವನಂ, ಶಿವನ ಪ್ರಸಾದವಾ ಭಕ್ತಿಗೆ ಜನ್ಮಭೂಮಿ"–ಶಿವಭಕ್ತಿಯಿಂದ ಶಿವಾನುಗ್ರಹವುಂಟಾಗುವುದು, ಆ ಶಿವಾನುಗ್ರಹದಿಂದ ಶಿವಭಕ್ತಿಯು ದೊರೆಕೊಳ್ಳುವುದು–ಎಂಬುದು ಮಗ್ಗೆಯ ಮಾಯಿದೇವರ ಮಂತ್ರವಾಣಿ. ಹೀಗೆ ಭಕ್ತಿಯು ಆತ್ಮ–ಪರಮಾತ್ಮರನ್ನು ಒಂದುಗೂಡಿಸುವ ಅಂತರಂಗದ ಅನುಪಮ ಅನುರಕ್ತಿ !

ಪರಮಾತ್ಮನು ನಾದಪ್ರಿಯನಲ್ಲ, ವೇದಪ್ರಿಯನಲ್ಲ, ಭಕ್ತಿಪ್ರಿಯ–ಭಕ್ತಿಕಂಪಿತ. ಆದರೆ ಭಕ್ತಿಮಾಡುವುದು, ಭಗವಂತನನ್ನು ಒಲಿಸುವುದು ಸುಲಭವಲ್ಲ ಎಂದು ಶರಣರು ಎಚ್ಚರಿಸಿದ್ದಾರೆ. ಏಕೆಂದರೆ, ಅದು ಗರಗಸದಂತೆ ಹೋಗುತ್ತ ಕೊಯ್ಯುತ್ತದೆ, ಬರುತ್ತ ಕೊಯ್ಯುತ್ತದೆ. ಅಂದರೆ ಭಗವಂತನು ಭಕ್ತರನ್ನು ಬಗೆಬಗೆಯಾಗಿ ಪರೀಕ್ಷಿಸುತ್ತಾನೆ. ಅದಕ್ಕೆ ಅಂಜದೆ ಅಳುಕದೆ, ಬೆಚ್ಚದೆ–ಬೆದರದೆ ಇದ್ದರೆ ಅನುಗ್ರಹಿಸುತ್ತಾನೆ, ಕೊನೆಗೆ ತನ್ನಂತೆ ಮಾಡುತ್ತಾನೆ.

ವೀರಶೈವ ಷಟ್‌ಸ್ಥಲಸಿದ್ಧಾಂತದಲ್ಲಿ ಅಂಗನು ಲಿಂಗದಲ್ಲಿ ಒಡಬೆರೆಯಲು ಅಂಗನಲ್ಲಿ ನೆಲಸಿದ ಭಕ್ತಿಯು ಆರು ವಿಧವಾಗಿ ಆರು ನೆಲೆಗಳಲ್ಲಿ ವಿಕಾಸಗೊಂಡು ಸಹಚರಿಯಾಗಿರುವುದನ್ನು ಕಾಣಬಹುದು. ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ, ಸಮರಸಭಕ್ತಿ ಎಂಬುದಾಗಿ ಈ ಭಕ್ತಿಯು ಷಟ್ಸ್ಥಲಗಳಲ್ಲಿ ವಿಕಾಸಹೊಂದುತ್ತ ಲಿಂಗಾಂಗಸಂಯೋಗವನ್ನು ದೊರಕಿಸಿಕೊಡುತ್ತದೆ. ಶರಣಧರ್ಮದ ಸಾಧನಾಮಾರ್ಗದಲ್ಲಿ ಬೇರೆ ಎಲ್ಲವುಗಳಿಗಿಂತ ಶರಣಸತಿ–ಲಿಂಗಪತಿ ಎಂಬ 'ಸತಿ–ಪತಿ ಭಾವ'ದ ಮಧುರಭಕ್ತಿಗೆ ಶರಣರು ಪ್ರಾಧಾನ್ಯವಿತ್ತಿದ್ದಾರೆ, ಜೀವನೆ ಸತಿಯಾಗಿ ಶಿವನೆ ಪತಿಯಾಗಿ ಸತಿಪತಿಗಳ ಸಾಮರಸ್ಯದಂತೆ ಲಿಂಗಾಂಗಸಾಮರಸ್ಯವನ್ನು ಸಾಧಿಸಿದ್ದಾರೆ. ಶಿವಶರಣರ ಮಾರ್ಗದಲ್ಲಿ ನಡೆದ ಮುಪ್ಪಿನಾರ್ಯರು 'ಎಲ್ಲ ಶರಣರ ನೆನೆದು' ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಭಿಕ್ಷೆ ಬೇಡಿ ತಮ್ಮ ಭಕ್ತಿಯ ಜೋಳಿಗೆಯನ್ನು



ತುಂಬಿಕೊಂಡಿದ್ದಾರೆ. ತಮ್ಮನ್ನು ಹೆಣ್ಣು ಮಗಳಿಗೆ ಹೋಲಿಸಿಕೊಂಡು ಶರಣರನ್ನು ತವರುಮನೆಯವರಂತೆ ಭಾವಿಸಿ ತಮ್ಮನ್ನು ಯಾವಾಗ ತವರಿಗೆ ಕರೆಯಲು ಬರುತ್ತಾರೋ ಕಾಣೆ–ಎಂದು ಕಾತರದಿಂದ ಹಂಬಲಿಸಿ ಹಾರೈಸುವ ಚಿತ್ರ ಹೃದಯಂಗಮವಾಗಿದೆ !

ಹೆಮ್ಮಗಳು ನಾ ನಿಮ್ಮ
ನೆಮ್ಮಿಕೊಂಡಿರುವೆನೈ
ಗಮ್ಮನೇ ಎನ್ನುವನು ಕರೆಯ ಬನ್ನಿ !

ಎಂಬ ಈ ಹಾಡು ಭಾವಪೂರ್ಣವಾಗಿ ಹೃದಯ ಮಿಡಿಯುವಂತಿದೆ. ಜನಪದಸಾಹಿತ್ಯದಲ್ಲಿ ವ್ಯಕ್ತವಾಗಿರುವ ತೌರಿನ ಹಂಬಲದಂತೆ ತೀವ್ರ ತುಡಿತದಿಂದ ಮೈದಾಳಿರುವ ಈ ಗೀತೆಯು ಅಧ್ಯಾತ್ಮಿಕ ಪಥಿಕರಾದ ಷಡಕ್ಷರಿಗಳ ಭಕ್ತಿಯ ಉತ್ಕಟತೆಯನ್ನು, ಭಾವದ ತೀವ್ರತೆಯನ್ನು, ಆತ್ಮದ ಅನನ್ಯಮೊರೆಯನ್ನು ಉಜ್ವಲಗೊಳಿಸುವ ಪ್ರಸಿದ್ಧಗೀತೆಯಾಗಿದೆ. ಅವರ ಇನ್ನುಳಿದ ಸ್ವರವಚನಗಳಲ್ಲಿಯೂ ಈ ಭಕ್ತಿರಸವು ಬುಗ್ಗೆಬುಗ್ಗೆಯಾಗಿ ಪುಟಿಯುವುದನ್ನು ಕಾಣಬಹುದಾಗಿದೆ.

ಎನ್ನ ಸಮತೆಯೆ ಜಲವು
ಎನ್ನ ಸದ್ಗುಣ ಗಂಧ
ಎನ್ನ ನಿತ್ಯವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ
ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು

ಹೀಗೆ ಅಂತರಂಗದ ಗುಣಗಳನ್ನು ಭಕ್ತಿಯ ಸಾಧನವನ್ನಾಗಿ ಪರಿವರ್ತಿಸಿ ಪರಮಾತ್ಮನಿಗೆ ಸಮರ್ಪಿಸಿದ್ದಾರೆ.

**ಮುಪ್ಪಿನಾರ್ಯರ ಸದುವಿನಯ**

ವಿನಯ–ಮಾನವನಿಗಿರಬೇಕಾದ ಒಂದು ಮುಖ್ಯ ಗುಣ. ತನ್ನಲ್ಲಿ ತಲೆಯೆತ್ತಿ ನಿಲ್ಲುವ ಅಹಮಹಮಿಕೆಯನ್ನು, ಪ್ರತಿಷ್ಠೆಯನ್ನು ಮೆಟ್ಟಿ ತುಳಿದು ಸಾಧು–ಸತ್ಪುರುಷರೊಡನೆ ಹಾಗೂ ಎಲ್ಲರೊಡನೆ ನಯವಿನಯದಿಂದ ನಡೆದುಕೊಳ್ಳುವ ವ್ಯಕ್ತಿಯು ತನ್ನನ್ನು ತಾನು ಉತ್ತಮಪಡಿಸಿಕೊಳ್ಳುತ್ತ ಮೇಲೇರಲು ಸಾಧ್ಯವಾಗುತ್ತದೆ. ಕೈಲಾಗದ ಹೇಡಿಯು ವಿನಯವಂತನಂತೆ ಕಾಣಬಹುದು. ಆದರೆ ಅದು ವಿನಯವೆನಿಸಿಕೊಳ್ಳದು. ಧೈರ್ಯ–ಶೌರ್ಯಗಳಿದ್ದೂ ತನ್ನ ಅಂತಃಕರಣಗಳ ಮೇಲೆ ಹತೋಟಿಯನ್ನು ತಂದುಕೊಂಡು ಮೃದು–ಮಧುರವಾಗಿ ವ್ಯವಹರಿಸುವುದು, ಅದರಿಂದಾಗಿ ಇತರರ ಅಹಂಕಾರವನ್ನು ಹುಡಿಗೈಯ್ದು ಅಲ್ಲಿ ವಿನಯಶ್ರೀಯನ್ನು

ತುಂಬುವುದು, ಅವರ ಹೃದಯಪರಿವರ್ತನೆ ಮಾಡುವುದು ನಿಜವಾದ ವಿನಯಶಾಲಿಯಿಂದ ಸಾಧ್ಯ. ಮೃದುತನ ಕಾಠಿನ್ಯವನ್ನು ಕರಗಿ ನೀರಾಗಿಸುತ್ತದೆ. ಕಿಂಕರತ್ವದಿಂದ ಶಂಕರತ್ವ ಸುಲಭಸಾಧ್ಯವಾಗುತ್ತದೆ. ಆದ್ದರಿಂದ ಈ ಲೋಕದ ಮಹಾನುಭಾವರೆಲ್ಲರು ಮೊಟ್ಟಮೊದಲನೆಯದಾಗಿ ತಮ್ಮ ಅಹಂಕಾರ ಮಮಕಾರಗಳನ್ನು ಸಂಪೂರ್ಣ ಗೆದ್ದು ಮೇಲೆದ್ದು ಬಂದುದನ್ನು ಕಾಣಬಹುದು.

ನಾನೆಂಬ ಅಹಂಕಾರ ಲವಲೇಶವೂ ಇಲ್ಲದೆ ಹೋದಾಗ ನೀನೆ ನನಗೆ ಗತಿ–ಮತಿ ಎಂಬ ಸಮರ್ಪಣಭಾವ ಬಂದಾಗ ಸದುವಿನಯ ತುಂಬಿದಾಗ ಸದಾಶಿವನ ಒಲುಮೆ ತಾನಾಗಿ ಒದಗಿಬರುತ್ತದೆ. ಅದು ತನ್ನತ್ತ ಎತ್ತಿಕೊಳ್ಳುತ್ತದೆ. "ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ" ಎಂದು ಸಾರಿ ತಮ್ಮನ್ನು ಸಾಧು–ಶರಣರ ಚರಣಸೇವೆಗೆ ಸದಾಕಾಲವೂ ಸಮರ್ಪಿಸಿಕೊಂಡ ಬಸವಣ್ಣನವರು ವಿನಯಭಂಡಾರಿಗಳಾದರು. ಪರಮಸಿದ್ಧಿಯನ್ನು ಪಡೆದು ಪ್ರಸಿದ್ಧರಾದರು. ಕಾಗೆ ಕುಳಿತು ಹೇಸಿಗೆ ಮಾಡುವ ಹೊನ್ನ ಕಳಶವಾಗುವುದಕ್ಕಿಂತ ಶರಣರ ಪಾದಗಳಿಗೆ ಚಮ್ಮಾವುಗೆಯಾಗಿರುವುದು ಲೇಸೆಂದು ಬಯಸಿ ಅದರಂತೆ ತೊತ್ತು ಸೇವೆಗೈದು ಭೃತ್ಯಾಚಾರದಿಂದ ಜಗದ್ಚರಿತನಲ್ಲಿ ಬೆರೆದು ಒಂದಾದರು. ಇದೇ ಆದರ್ಶವನ್ನು ಮೈಗೂಡಿಸಿಕೊಂಡ ಮುಪ್ಪಿನಾರ್ಯರು ವಿನಯದ ಸಾಕಾರಮೂರ್ತಿಗಳಾಗಿದ್ದರು. ಕಿಂಕರಭಾವದಿಂದ ಲೋಕಕಲ್ಯಾಣಕ್ಕೆ ಕಂಕಣಬದ್ಧರಾದರು. ಅವರಲ್ಲಿದ್ದ ವಿನಯಶ್ರೀಯನ್ನು ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲ. ಸದುವಿನಯದ ಮುಪ್ಪಿನ ಷಡಕ್ಷರಿಗಳ ಸ್ವರೂಪದರ್ಶನ ಅವರ ಮೃದುಮಧುರಪದಗಳಿಂದ ನಮಗೆ ಆಗುತ್ತದೆ.

'ಶರಣರಿಗೆ ಭೃತ್ಯನಾಗಿರಿಸೆನ್ನನು' ಎಂದು ಬೇಡುತ್ತಾ ಅವರು ಬೇಡುವ ಪರಿ ಹೀಗಿದೆ:

ಅವರ ಎತ್ತಾಗಿ ನಾ
ನವರ ತೊತ್ತಾಗಿ ನಾ
ನವರ ಪಶುವಾಗಿ ನಾ ಸುಖಮಿಪ್ಪುದ
ಅವರ ಬಾಗಿಲೊಳಿರ್ಪ
ತವೆ ಸೊಣಗ ನಾನಾಗಿ
ಅವರ ಚರಣದ ಧೂಳಿ ತೊಡೆದಿರ್ಪುದ

ಶಿವನಲ್ಲಿ ಮತ್ತಾವ ಪದವಿಯನ್ನೂ ಬೇಡದೆ "ಶರಣರ ಸೇವಕನಾಗಿರಿಸು, ಅದೇ ನಾ ನಿಮ್ಮಲ್ಲಿ ಬೇಡುವ ವರ" ಎಂದು ಪ್ರಾರ್ಥಿಸಿರುವುದು ಅವರ ಕಿಂಕರಭಾವವನ್ನು ಪ್ರತಿಬಿಂಬಿಸುತ್ತದೆ.



ಭವಕಾಟಕಾರದಲೆ
ಶಿವಶರಣರಾ ಮನೆಯ
ತವೆ ದ್ವಾರದೊಳು ಬಿದ್ದೆನುಳುಹಿರಯ್ಯಾ

ಎಂಬುದಾಗಿ ಅವರ ಹೃದಯ ಶರಣರ ಚರಣಸೇವೆಯನ್ನೆಸಗಿ ಭವಕಾಟವನ್ನು ನೀಗಲು ಆಶಿಸುತ್ತದೆ. ಶರಣರ ನುಡಿಗೆ ಪ್ರತಿಹೇಳದೆ ಅವರ ಅಪ್ಪಣೆಯನ್ನು ಅನುಸರಿಸಿ ನಡೆಯಲು ಅವರು ಸಿದ್ಧರಾಗಿದ್ದಾರೆ.

ಮುದದಿ ಶರಣರುಗಳ ನುಡಿಗೆ
ಇದಿರ ನುಡಿಯ ನುಡಿಯದವರು
ಪದುಳದಿಂದ ನುಡಿದ ಮಾಳ್ಕೆಯಿಂದೆ ನುಡಿವೆನು

ಹೀಗೆಂದು ಹಾಡುತ್ತ ಶರಣರ ಸೇವೆ ಮಾಡುವುದೇ ಒಂದು ದೊಡ್ಡ ತಪಸ್ಸು, ಒಂದು ದೊಡ್ಡ ಭಾಗ್ಯ ಎಂದು ಅದನ್ನೇ ಮನಸಾರೆ ಪ್ರಾರ್ಥಿಸಿದ್ದಾರೆ !

ಎನಗೆ ಭೋಗಭಾಗ್ಯ ಬೇಡ
ಎನಗೆ ಜಪವು ತಪವು ಬೇಡ
ಎನಗೆ ನಿಮ್ಮ ತೊತ್ತುಸೇವೆ ನಿತ್ಯವಾಗಲ್ಕೆ

ಹೀಗೆ ಕಿಂಕರಭಾವದಿಂದ ಶಂಕರಭಾವವನ್ನು ಪಡೆಯಬಹುದು ಎಂಬುದು ಅವರ ಹಲವಾರು ಪದಗಳಲ್ಲಿ ಮನಂಬುಗುವಂತೆ ಮೂಡಿಬಂದಿದೆ.

**ಮುಪ್ಪಿನಾರ್ಯರ ವೈರಾಗ್ಯವೈಭವ**

ಆಶೆಯೆ ಸರ್ವದುಃಖಗಳಿಗೂ ಕಾರಣ, ಆಶಾತ್ಯಾಗವೆ ನಿಜಸುಖದ ತಾಣ. ಈ ಲೋಕದ ಬದುಕಿಗಾಗಿ ಪರಮೇಶ್ವರನು ಇಷ್ಟೊಂದು ಪದಾರ್ಥಗಳನ್ನು ಸೃಷ್ಟಿ ಮಾಡಿದ್ದರೂ ಮಾನವನಿಗೆ ಆಶೆ ಪೂರ್ತಿಯಾಗುತ್ತಿಲ್ಲ. ಇರುವ ಸುಖಗಳು ಸಾಲದೆ ನೂತನ ಸೌಕರ್ಯಗಳಿಗೋಸ್ಕರ ಮಾನವನು ತಹತಹಪಡುತ್ತಲೇ ಇದ್ದಾನೆ. ಆಶಾತ್ಯಾಗದಿಂದಲ್ಲದೆ ಈ ತಹತಹ ತಗ್ಗುವುದಿಲ್ಲ, ತೃಪ್ತಿಯುಂಟಾಗುವುದಿಲ್ಲ, ಶಾಂತಿ ಲಭಿಸುವುದಿಲ್ಲ. ಇಹದ ಭೋಗೋಪಭೋಗಗಳಿಂದ ಇಂದ್ರಿಯಗಳನ್ನು ತೃಪ್ತಿಪಡಿಸಿ ತನ್ನೆಲ್ಲ ಬಯಕೆಗಳನ್ನು ಗೆಲ್ಲುತ್ತೇನೆನ್ನುವುದು ತುಪ್ಪವನ್ನು ಸುರಿದು ಅಗ್ನಿಯನ್ನು ನಂದಿಸಲು ಹೋದಂತಾಗುತ್ತದೆ. ಇಂದ್ರಿಯಸುಖಗಳು ಕ್ಷಣಿಕ ಹಾಗೂ ದುಃಖದಾಯಕ. ಇಂದ್ರಿಯಚಾಪಲ್ಯದಿಂದಾಗಿ, ಮನದ ದುರಾಶೆಯಿಂದಾಗಿ ಮಾನವನು ನಾನಾ ಕೋಟಲೆಗಳಿಗೆ ಸಿಕ್ಕಿ ಕುದಿಯುತ್ತಿದ್ದಾನೆ. ಭವಚಕ್ರದಲ್ಲಿ ಸುತ್ತಿ ಸುತ್ತಿ ಬಳಲುತ್ತಿದ್ದಾನೆ ಎಂದು ಜ್ಞಾನಿಗಳು ಎಚ್ಚರಿಸಿದ್ದಾರೆ. ಆದುದರಿಂದ ಲೋಕದ ಭೋಗ–ಭಾಗ್ಯಗಳ ನಿಜಸ್ವರೂಪವನ್ನು ಅರಿತ ಅವಿರಳಜ್ಞಾನಿಗಳು ಅವುಗಳಿಗೆ ಆಶಿಸದೆ ಸಚ್ಚಿದಾನಂದನಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬೇಡಿಕೊಂಡಿದ್ದಾರೆ. ಲೌಕಿಕ ಸುಖ–ಸಾಮಗ್ರಿಗಳು

ಅತ್ಯಧಿಕವಾಗಿ ರಾಶಿ ಬಿದ್ದಾಗ ಅವುಗಳಲ್ಲಿ ಮಗ್ನವಾದ ಮನಸ್ಸು ಪರಮಾತ್ಮನನ್ನು ಮರೆಯವುದು ಸಾಧ್ಯ. ಇದನ್ನು ಮನಗಂಡ ಮಹಾತ್ಮರು ಆ ದೇವಾಧಿದೇವನಲ್ಲಿ ಸಂಪತ್ತು ಸೌಭಾಗ್ಯವನ್ನು ಕೇಳದೆ ಸದಾಕಾಲವೂ ವಿಪತ್ಪರಂಪರೆಗಳನ್ನೆ ಪ್ರಾರ್ಥಿಸಿದ್ದಾರೆ. ಹಾಗೆ ಆದಾಗ ಮಾತ್ರ ಮನಸ್ಸು ಮಹಾದೇವನೆಡೆಗೆ ಹರಿಯುವುದು ಸಹಜವೆಂದು ಭಾವಿಸಿ ವೈರಾಗ್ಯಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಇಂತಹ ವೈರಾಗ್ಯದ ವ್ಯೋಮಮಾರ್ಗದಲ್ಲಿ ಮುನ್ನಡೆದಿರುವ ಮುಪ್ಪಿನ ಷಡಕ್ಷರಿಗಳ ಪದಗಳನ್ನು ಪರಿಶೀಲಿಸಿದಾಗ ಅವರ ವೈರಾಗ್ಯ ವೈಭವದ ವಿರಾಡ್ದರ್ಶನ ನಮಗೆ ಆಗುತ್ತದೆ.

ಅಂಗವಿರಲಿ ಇರ್ದೊಡೇನು
ಅಂಗದಿಚ್ಛೆಗಾದರೊಲಿದು
ಮಂಗಳಾತ್ಮ ಷಡಕ್ಷರಿಯ ಲಿಂಗ ನೆನೆವನು
ಹಿಂಗದಂತೆ ಹೃದಯದಲ್ಲಿ
ಸಂಗಿಸುತ್ತಲಿರಲು ಭವದ
ಭಂಗವಳಿದು ನಿತ್ಯಪದಕೆ ಕರ್ತನಪ್ಪನು

ಶರೀರವಿದ್ದರೆ ಇರಲಿ, ಅದರ ಇಚ್ಛೆಯಂತೆ ಹೋಗದೆ ಮಂಗಳಾತ್ಮನಾದ ಷಡಕ್ಷರಿಲಿಂಗವನ್ನು ನೆನೆದು ಭವವನ್ನು ಗೆದ್ದು ನಿತ್ಯಪದಕೆ ಕರ್ತನಪ್ಪೆನೆಂದು ಹೇಳಿರುವ ಅವರು ಕಾಯಮೋಹವನ್ನು ಕಳಚಿಕೊಂಡಿದ್ದಾರೆ.

ಭೌತಿಕಭೋಗದ ಆಶೆ ಅವರಿಗೆ ಇಲ್ಲ. ತಮ್ಮ ಮನಸ್ಸು ಸದಾ ಲಿಂಗದ ನೆನಹಿನಲ್ಲಿ ನೆಲೆ ನಿಲ್ಲಬೇಕು ಎಂಬುದೊಂದೇ ಅವರ ಮಹದಾಶೆ. ಅದಕ್ಕಾಗಿ ಅವರು ಪ್ರಾರ್ಥಿಸುವುದು ಹೀಗೆ:

ಧರೆಯ ಸುಖದ ಭೋಗವೆನಗೆ
ಹರಿದು ಹೋಗಲಯ್ಯ ನಿಮ್ಮ
ಚರಣಕಮಲದಲ್ಲಿ ಮನವು ಮಗ್ನವಾಗಲಿ

ಶರೀರಧರ್ಮವಿಡಿದು ಅನ್ನಕ್ಕಾಗಿ ಅಲೆದಾಗ

ಒಡೆದ ಗಡಿಗೆ ಹರಿದ ಚೋಳಿ
ಗಡದ ಕೈಯ್ಯ ಮುರಿದ ಕೋಲು
ಹಿಡಿದು ಊರನೆಲ್ಲ ತಿರಿದು ತಂದು ನೋಡಲು
ಒಡಲಿಗಾಗದಂತೆ ಮಾಡು
ಪೊಡವಿಯೊಳಗೆ ಸುಖವ ಮೆಚ್ಚಿ
ಒಡೆಯ ನಿಮ್ಮ ಮರೆದು ಭವಕೆ ಬೀಳಲಾರೆನು

ಎಂದು ಬೇಡಿಕೊಂಡಿದ್ದಾರೆ. ಶಿವನಿಗೇನಾದರೂ ಕರುಣೆ ಹುಟ್ಟಿ ಹೆಚ್ಚಾಗಿ ಅನ್ನ ದೊರಕುವಂತೆ ಮಾಡಿದರೆ, ಅದಕ್ಕೆ ಆಶೆಪಟ್ಟು "ಒಡಲ ಪೂರನುಂಬೆನೆನಲು,



ನಡುವೆ ದಾರಿಯಲ್ಲಿ ತಿರಿದುದೆಲ್ಲ ಚೆಲ್ಲಿ ಹೋಗಲಿ" ಎಂದು ಕೇಳುತ್ತಾರೆ. ಹೊಟ್ಟೆಯ ವಿಚಾರ ಹೀಗಾದರೆ, ಇನ್ನು ಬಟ್ಟೆಯ ಬಗೆಗೆ ಅವರ ಬಯಕೆ ಹೀಗೆ:

ಹಳೆಯ ಅರಿವೆ ರಗಟೆಗಳನು
ಬಲಿದು ಗಂಟನಿಕ್ಕಿ ಹೊದೆಯೆ
ಚಳಿಯದಾಗಲೊಂದು ಕಡೆಗೆ ಸಾಲದಂದದಿ
ಕಳೆಯುತಿರಲು ಅದರೊಳರ್ಧ
ಇಲಿಗಳೆಳೆದು ಒಯ್ಯುತಿರಲಿ
ಒಲಿದು ನಿಮ್ಮ ಚರಣ ನೆನೆವುದಿಂತುಟಾಗದು

ಅವರಿಗೆ ಮನೆ–ಮಠಗಳ ಬಯಕೆಯೂ ಇಲ್ಲ. ಒಂದು ಪಕ್ಷ 'ಒಡೆಯರುಗಳ ಮಠಕೆ ಬರಲು ಜಡಿದು ಜರಿದು ನೂಕಲೆನ್ನ.' ಅವು ನೂಕಿದಾಗ ಅಲ್ಲಿಂದ ಬಂದು 'ಒಡನೆಯೋರ್ವರುಗಳ ಕೀಳಿನಲ್ಲಿ ಸೇರಲು ಕಡೆಗೆ ಅಟ್ಟಲವರು.' ಅಲ್ಲಿಂದ 'ಹಾಳುಗುಡಿಗೆ ಬರಲು ಸೋರುತಿರಲಿ.' ಅಲ್ಲಿಂದ ಈಚೆಕಡೆ 'ಅಂಗಳದೊಳು ನಿಲ್ಲಲಿಕ್ಕೆ ಹಿಂಗದಿವನು ಕಳ್ಳನೆಂದು–ಹಿಂಗಿ ಹೋಗಲೆಂದು ಎನ್ನ ಜರಿದು ನುಡಿಯಲಿ'. 'ಹೀಂಗೆಯಾಗದನಕ ಜನರ ಸಂಗ ಬಿಡದು, ಮನದ ಆಶೆ ಹೋಗದು, ಲಿಂಗದಂಘ್ರಿ ನೆನಹು ನೆಲೆ ನಿಲ್ಲದು'–ಎಂದು ಮೊರೆಯಿಡುವ ಮುಪ್ಪಿನಾರ್ಯರ ಭೋಗತ್ಯಾಗದ–ವೈರಾಗ್ಯದ ಭವ್ಯತೆಯನ್ನು ಸಂದರ್ಶಿಸಲು ಈ ನುಡಿಸೊಡರು ಒಂದೇ ಸಾಕು, ಅದನ್ನು ನೆನೆದಷ್ಟೂ ಮೈನವಿರೇಳುತ್ತದೆ.

ಅವರ ಘನವೈರಾಗ್ಯ ಮತ್ತಷ್ಟು ಮೇಲೇರಿ ಮುಗಿಲು ಮುಟ್ಟಿರುವುದನ್ನು ಅವರ ಮತ್ತೊಂದು ಪದದಲ್ಲಿ ನಾವು ದರ್ಶಿಸಬಹುದು. ಮಾನವರ ಹಂಗೇ ಬೇಡ ಎನ್ನುವ ಸದೃಢವಾದ ತೀವ್ರ ವೈರಾಗ್ಯ ಅವರದು. ಸಮಸ್ತಲೋಕಕ್ಕೆ ಮಹಾದಾನಿಯಾದ ಶಿವನು ತನ್ನ ಕರದೊಳಗೆ ಇರುತಿರಲು ನಾಡಾಡಿ ಮಾನವರನ್ನು ಕಾಡಿ ಬಳಲುವುದೇತಕ್ಕೆ? ಅವರು ಏನುತಾನೆ ಕೊಟ್ಟಾರು? ಅಂತಹ ಹಂಗಿನ ಬದುಕು ಬೇಡ ಎನ್ನುವ ಅಚಲ ವಿಶ್ವಾಸ, ಕೆಚ್ಚು ಅವರದು. ಲೋಕದ ಹಂಗಿಗೆ ಕಟ್ಟುಬೀಳದೆ ಮದ್ದಾನೆಯಂತೆ ಗಮಿಸಿದವರು ಅವರು.

ಕಾಡಲೇಕೆ ನರರುಗಳನು
ಬೇಡಿ ಬಳಲಲೇಕೆ ಮನವೆ
ರೂಢಿಗೀಶನೆಮಗೆ ದೈವವಾಗಿ ಇರುತಿರೆ

ಎಂಬುದಾಗಿ ಭಗವಂತನ ಮೇಲಿನ ಉತ್ಕಟವಾದ ಅವ್ಯಾಜಪ್ರೇಮದಿಂದ ಎಲ್ಲ ಭೋಗತ್ಯಾಗಕ್ಕೂ ಸಿದ್ಧರಾಗಿ ಪ್ರಸಿದ್ಧ ವೈರಾಗ್ಯ ಸೀಮಾಪುರುಷರಾಗಿ ಮೆರೆದಿದ್ದಾರೆ. ಅವರ ಅತ್ಯುನ್ನತ ಅನುಪಮ ವೈರಾಗ್ಯ ಊಹೆಗೂ ನಿಲುಕದು, ವರ್ಣನೆಗೂ ಸಿಲುಕದು!

**ಸಾಧನೆ–ಸಿದ್ಧಿ**

ಮುಪ್ಪಿನ ಷಡಕ್ಷರಿಗಳ ಸಾಧಕಜೀವನದ ಸೂಕ್ಷ್ಮ ಚಿತ್ರಣವು ಅವರ ಪದಗಳಲ್ಲಿ ಪಡಿಮೂಡಿ ಸುಂದರವಾಗಿ ಬಂದಿದೆ. ಅವರ ಸಾಧನೆಯ ಹಂತಹಂತಗಳನ್ನು ಅವುಗಳ ಸ್ಥೂಲರೇಖೆಗಳನ್ನು ಅವುಗಳಲ್ಲಿ ಗುರುತಿಸಬಹುದಾಗಿದೆ. 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂದಿರುವಂತೆ ಮನಸ್ಸನ್ನು ಲಯಗೊಳಿಸಿ ಅಂಗನು ಲಿಂಗದೊಡನೆ ಸಮರಸಗೊಳ್ಳುವುದೆ ಶಿವಯೋಗ, ಎಲ್ಲ ಸಾಧನೆಗಳ ಕೊನೆಯ ಗುರಿ. ಸಾಧನೆಯಲ್ಲಿ ತೊಡಗಿದ ಜೀವನಿಗೆ ಇಹದ ಭೋಗೋಪಭೋಗಗಳು ಆಕರ್ಷಣೆಯನ್ನೊಡ್ಡಿ ಸಂಸಾರಬಂಧನಕ್ಕೆ ಸಿಲುಕಿಸುವುದು ಸಹಜವಾಗಿದೆ. ಅವುಗಳಿಗೆ ಬಲಿಬೀಳದೆ ಮೇಲೆದ್ದು ನಿಂತವನೆ ನಿಷ್ಠಾವಂತ ಸಾಧಕನಾಗಿ ನಿಜದ ನೆಲೆಯನ್ನು ಕಾಣುತ್ತಾನೆ.

ಮುಪ್ಪಿನಾರ್ಯರು ತಮ್ಮ ಹಾಡಿನಲ್ಲಿ–ಮನಸ್ಸು ಅಷ್ಟು ಸುಲಭವಾಗಿ ತಮ್ಮ ಹತೋಟಿಗೆ ಬರುವ ವಸ್ತುವಲ್ಲ ಎಂದು ಹೇಳಿರುವುದನ್ನು ನೋಡಿದಾಗ ಅದನ್ನು ಗೆಲ್ಲಲು ಅವರು ನಡೆಸಿರುವ ಹೋರಾಟವೆಷ್ಟು ಎಂಬುದರ ಅರಿವಾಗುತ್ತದೆ.

ಹುಲಿಯ ಕರಡಿ ಕರಿಯ ಫಣಿಯ
ಬಲುಹಿನಿಂದಲಾಳ್ವರುಂಟು
ಚಲಿಸದಂತೆ ಮನವನಾಳ್ವರಾರ ಕಾಣೆನು

ಕಾಡಿನಲ್ಲಿರುವ ಕ್ರೂರಮೃಗಗಳನ್ನು ಪಳಗಿಸಿ ನಡೆಸಬಹುದು. ಆದರೆ ಮನಸ್ಸನ್ನು ಸ್ಥಿರಗೊಳಿಸುವುದು ಬಹುಕಷ್ಟ. ಅದರ ಅಪರಿಮಿತ ಬಯಕೆಗಳನ್ನು ತೃಪ್ತಿಪಡಿಸುವುದು ಅಸಾಧ್ಯ. ಆದ್ದರಿಂದ

ಏನು ಮಾಡಲಯ್ಯ ಎನ್ನ
ಹೀನಮನದ ಬಯಕೆಗಳನು
ಜ್ಞಾನಖಡ್ಗದಿಂದ ಕಡಿವರಾರ ಕಾಣೆನು

ಎಂದು ಮೊರೆಯಿಡುತ್ತ ತಮ್ಮ ಸಾಧನೆಯ ಫಲದಿಂದ ಲಭಿಸಿದ ಸುಜ್ಞಾನದ ಖಡ್ಗದಿಂದ ತಮ್ಮ ಹೀನ ಮನದ ಬಯಕೆಗಳನ್ನೆಲ್ಲ ಕಡಿದುಹಾಕಿದರು. ಅದನ್ನು ಅಂತರ್ಮುಖವಾಗಿಸಿ ಅವಿರಳಜ್ಞಾನಿಗಳಾಗಿ ಬೆಳಗಿದರು.

ದೇವನೊಬ್ಬ, ನಾಮ ಹಲವು–ಎಂಬ ವಿಶ್ವವಿಶಾಲ ಸತ್ಯವನ್ನು ಅತ್ಯಂತ ಸರಳನುಡಿಗಳಲ್ಲಿ ನುಡಿದು ತೋರಿ ವಿಶಾಲ ಸಂಸ್ಕೃತಿಯನ್ನು ಪ್ರತಿಬಿಂಬಿಸಿರುವ ಬಗೆ ನಿತ್ಯನೂತನವಾಗಿದೆ.

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ



ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ

'ಏಕಂ ಸತ್ ವಿಪ್ರಾಃ ಬಹುಧಾ ವದಂತಿ'–ಒಂದೇ ತತ್ತ್ವವನ್ನು ಅನೇಕವಾಗಿ ಹೇಳುತ್ತಾರೆ–ಎಂಬ ಉಪನಿಷತ್ತಿನ ತತ್ತ್ವವೇ ಇಲ್ಲಿ ಒಡಮೂಡಿದೆ. ಹೀಗೆ ಒಂದೇ ತತ್ತ್ವವು ಅವರವರ ಪೂಜೆ, ಭಾವ, ಮಾನಸಿಕ ವೇಷಕ್ಕನುಗುಣವಾಗಿ ಅನೇಕ ವಿಧವಾಗಿ ತೋರುತ್ತದೆ ಎಂಬುದನ್ನು ಪ್ರತಿಯೊಬ್ಬರು ಅರಿತುಕೊಂಡರೆ ಸಮಾಜದಲ್ಲಿನ ಕ್ಷೋಭೆ ಕಡಮೆಯಾಗುತ್ತದೆ.

ಎಂದಿಗೆ ದೊರಕುವದನವರತಭವನ
ನಂದದಿ ಪೂಜಿಪ ಪರಸೌಖ್ಯವು ತಾ
ಸಂದು ಸುಖಾರ್ಣವ ತೆರೆಯೊಳಗಿಪ್ಪುದು ಎಂದಿಗೆ ದೊರಕುವದು

ಎಂದು ಹಾರೈಸಿ ಹಂಬಲಿಸುತ್ತ ಸದಾ ಲಿಂಗಪೂಜೆಯಲ್ಲಿ ತನ್ಮಯರಾದರು. ಲೌಕಿಕದ ಮಾಯೆ–ಮೋಹಗಳಿಗೆ ಒಳಗಾಗದೆ ಷಡಕ್ಷರಿಯ ಲಿಂದಂಘ್ರಿಯನ್ನು ಹಿಡಿದು ನಿರ್ಭಯರಾಗಿ ನಿರಾಳದಲ್ಲಿ ನಿಂತರು.

ಕಂಗೆಡಲೇತಕೆ ಕಳವಳಿಸಿಯೆ ನಾ
ನಂಗಜ ಮಾಯೆಯ ಮನದಬ್ಬರಕಂ
ಲಿಂಗದ ಸೂತ್ರವ ಕರದಲಿ ಪಿಡಿದಿರಲೇತರ ಭಯವೆಮಗೆ

ಎಂದು ಸಾಧನೆಯಲ್ಲಿ ಮುನ್ನಡೆದ ಷಡಕ್ಷರಿಗಳು

ಶಿವಲಿಂಗವ ಹೃತ್ಪಿಂಡದ ಮಧ್ಯದಿ
ತವೆಜಾನಿಸುತ ಪರವಶಾನಂದದಿ
ಭವಗಿರಿ ಪವಿಯೆಂದೆನಿಸುವ ಘನಶಿವಯೋಗದೊಳೆಂದಿಹೆನೋ

ಎಂಬುದಾಗಿ ಹಾಡುತ್ತ ಘನಶಿವಯೋಗದ ತುತ್ತತುದಿಗೇರಿ

ಹಾರು ಕಂಡಾ ಹಂಸ ಹಾರು ಕಂಡ್ಯಾ ನೀನು

ಎಂದು ಬಯಲಿನಲ್ಲಿ ಬಟ್ಟಬಯಲಾದರು.

**ಕೈವಲ್ಯಪದಗಳಲ್ಲಿ ಕಾವ್ಯಕಮನೀಯತೆ**

ಭಕ್ತಿ–ಜ್ಞಾನ–ವೈರಾಗ್ಯಗಳು ಮುಪ್ಪುರಿಗೊಂಡು ಹೊರಹೊಮ್ಮಿರುವ ಅವರ ತತ್ತ್ವಪದಗಳು ಅನುಭಾವದ ಸಂಪತ್ತಿನಿಂದ, ಸುಂದರ ಅಭಿವ್ಯಕ್ತಿಯಿಂದ, ಸಹಜಸ್ಫೂರ್ತಿಯಿಂದ ಹೃದಯಂಗಮವಾಗಿವೆ. ಅವರ ಭಕ್ತಿತನ್ಮಯವಾದ ಕವಿಹೃದಯ ತನ್ನ ಅಭಿವ್ಯಕ್ತಿಯನ್ನು ಹೇಗೆ ಮಾಡಿದೆ, ಅದರ ಸೊಬಗು–ಸೌಂದರ್ಯಗಳು ಎಷ್ಟು ಎಂಬುದನ್ನು ಅವರ ಹಾಡುಗಳಿಂದಲೇ ಅರಿಯಬಹುದು. ತಾವು ಸಾಧಿಸಿ ಸಿದ್ಧಿಸಿಕೊಂಡ ಜ್ಞಾನವನ್ನು, ತಾವು ಪಡೆದ ಪರಮಾನುಭವವನ್ನು ಸಾಮಾನ್ಯ

ಜನರಿಗೆ ಸುಲಭರೀತಿಯಲ್ಲಿ ತಿಳಿಸಿ ಹೇಳುವ ಕುಶಲಕಲೆಗಾರಿಕೆ ಅವರಿಗೆ ಸಿದ್ಧಿಸಿವೆ. ಅವರ ಗೀತಗಳು ಓದುಗರ ಮನಸ್ಸಿಗೆ ಪುಷ್ಟಿಯನ್ನೊದಗಿಸಿ ಹೃದಯವನ್ನು ವಿಕಾಸಗೊಳಿಸುವಲ್ಲಿ ತುಂಬ ಪ್ರಯೋಜನಕಾರಿಯಾಗಿವೆ. ಅಲ್ಲಲ್ಲಿ ಮಿಂಚಿ ಮಿನುಗುವ ಕಾವ್ಯಸೌಂದರ್ಯದಿಂದ ಸಹೃದಯರನ್ನು ಸೆಳೆಯುತ್ತವೆ. "ಮುಪ್ಪಿನಾರ್ಯರ ಹಾಡುಗಳಲ್ಲಿ ಹೃದಯಂಗಮವರ್ಣನೆ, ವಿಶಾಲದರ್ಶನವಿರುವಂತೆಯೇ ನವನವೀನ ಭಾವಗಳ ಆವಿಷ್ಕಾರವಿದೆ. ಅವು ಅತ್ಯಂತ ಮಧುರವಾಗಿ ನಿರಾಯಾಸವಾಗಿ ಗಿಡದಿಂದ ಹೂ-ಚಿಗುರು ಹೊಮ್ಮುವಂತೆ ಸಹಜವಾಗಿ ಹೊರಹೊಮ್ಮುತ್ತದೆ."[೧]

> 'ಶರಣರು ಪಾತಕಾಭ್ರಕೆ ಜಂಝವಾತರು'
> 'ಎನ್ನ ನಯನವು ನಿಮಗೆ ರನ್ನವೆಳಗಿನ ಜ್ಯೋತಿ'
> 'ಅಂಗವನು ವೇಷದಲಿ ಶೃಂಗರಿಸಿ ಫಲವೇನು
> ಲಿಂಗದಲಿ ಪ್ರಾಣ ಬೆರೆಯದನಕ'
> 'ಮೊಟ್ಟೆಯನ್ನು ಹೊತ್ತ ನರನು ತಿಟ್ಟನಿಳಿಯಲಾರದಂತೆ'
> 'ಕೀರ ಪಂಜರದೊಳು ಸಿಲುಕಿ ಹಾರಲಾರದಂತೆ'
> 'ಹಳ್ಳ ಹರಿದ ಮೇಲೆ ನೀರಗುಳ್ಳಿಯುರುಳಿ ಹೋದ ತೆರದಿ'
> 'ಎರಳೆ ಶಿಶುವು ತಾಯ ತಪ್ಪಿ
> ಅರಸಿಯರಸಿ ತೊಳಲಿ ಬಳಲಿ
> ಇರದೆ ತಾಯ ವಿಕಳದಲ್ಲಿ ಸಾಯುವಂದದಿ'
> 'ಶ್ವಾನನಂತೆ ಹಲವು ಕಡೆಗೆ ಹರಿಯುತಿರ್ಪುದು'
> 'ಒಡಲು ಹಿಡಿದಿಹ ಜಡನು ನಾನೈ
> ಒಡಲು ಇಲ್ಲದ ಅಜಡ ನೀನೈ'

-ಇಂತಹ ಅರ್ಥಪೂರ್ಣವಾದ ಮಧುರಶೈಲಿಯಲ್ಲಿ, ತಿಳಿಯಾದ ಭಾಷೆಯಲ್ಲಿ, ಉಚಿತ ಉಪಮೆಗಳನ್ನು ಕೊಟ್ಟು ಗಹನವಾದ ತತ್ತ್ವಗಳನ್ನು ಸುಲಭವಾಗಿ ನಿರೂಪಿಸುವ ಕವಿಹೃದಯ ಅವರದು ಎಂಬುದನ್ನು ಕಾಣಬಹುದು.

ಅವರ ವಿಶೇಷಾನುಭವವು ಕೆಲವೊಮ್ಮೆ ಬೆಡಗಿನ ಪದಗಳಾಗಿ ಹೊರಹೊಮ್ಮಿ ಬಂದಿರುವುದೂ ಉಂಟು:

> ನಮ್ಮ ಮನೆ ಕೇಳಕ್ಕ
> ಬ್ರಹ್ಮ ಬಂದೆಡೆಗೊಂಡು
> ನಮ್ಮ ಮನೆ ಸುತಬಂಧುಗಳ ಕೊಂದಿತು

---

೧. ಚೆನ್ನವೀರ ಕಣವಿ : 'ಮುಪ್ಪಿನ ಷಡಕ್ಷರಿಯ ಮುಪ್ಪರಿಯದ ಹಾಡುಗಳು' ವೈರಾಗ್ಯದಲರು; ಪುಟ ೨೦೮.



ಮುಪ್ಪಿನ ಷಡಕ್ಷರಿಗಳು ಮನಮೋಹಕವಾದ ರೂಪಕಗಳನ್ನಿತ್ತು ಉದಾತ್ತವಿಚಾರಗಳನ್ನು ಮನಂಬುಗುವಂತೆ ವರ್ಣಿಸುವರು. ಉದಾಹರಣೆಗೆ 'ಸಿರಿಯು ಕನಸಿನಂತೆ' ಎಂಬುದನ್ನು 'ತಿರುಕನ ಕನಸು' ಎಂಬ ಪ್ರತಿಮೆಯನ್ನೊಡ್ಡಿ ಹೇಳಿರುವುದು ತುಂಬ ಸೊಗಸಾಗಿದೆ. ಅಧ್ಯಾತ್ಮಿಕಮೌಲ್ಯವುಳ್ಳ ಈ ಗೀತೆ ಎಲ್ಲರಿಗೂ ಪ್ರಿಯವಾದುದೆನ್ನಬಹುದು. ಇಲ್ಲಿಯ ಕಲ್ಪನೆಯು ಕೂಡ ತುಂಬ ಸುಂದರವಾಗಿ ಬಂದಿದೆ:

> ತಿರುಕನೊರ್ವನೂರ ಮುಂದೆ
> ಮುರುಕು ಧರ್ಮಶಾಲೆಯಲ್ಲಿ
> ಯೊರಗಿರುತ್ತಲೊಂದು ಕನಸ ಕಂಡನೆಂತನೆ

ಎಂದು ಮುಂದುವರಿಯುವ ಈ ಪದವನ್ನು ಹಾಡುತ್ತ ಹೋದಂತೆ ಪ್ರಾಪಂಚಿಕ ಸುಖದ ನಶ್ವರತೆಯ ಅರಿವು ಆಗುತ್ತದೆ. ಓದುಗರ ಮನಸ್ಸಿನ ಮೇಲೆ ಇಷ್ಟು ಪರಿಣಾಮವನ್ನುಂಟುಮಾಡುವಂತಹ ಬೇರೆ ರಚನೆಗಳು ಕನ್ನಡದಲ್ಲಿ ವಿರಳ. ಒಟ್ಟಿನಲ್ಲಿ ಪಾಂಡಿತ್ಯದ ಪ್ರದರ್ಶನವಿಲ್ಲದೆ ಸಹಜಸೌಂದರ್ಯದಿಂದ ರಚಿತವಾಗಿರುವ ಮುಪ್ಪಿನವರ ಮೃದುಮಧುರಗೀತೆಗಳು ಕಾವ್ಯದ ಕಂಪಿನಿಂದ ಘಮಘಮಿಸುತ್ತಾ ಅಧ್ಯಾತ್ಮದ ಮಕರಂದವನ್ನು ಹೊರಸೂಸುತ್ತಿವೆ.

**ಮನ್ನಣೆ ಪಡೆದ ಮುಪ್ಪಿನಾರ್ಯರು**

ಜನ ಬದುಕಬೇಕು, ಅವರ ಬದುಕು ಹಸನಾಗಬೇಕು-ಎಂದು ಆಶಿಸಿದ ಈ ನಮ್ಮ ನಾಡಿನ ಅನುಭಾವಿಗಳು ತಮ್ಮ ಉದಾತ್ತವಾದ ತತ್ತ್ವಪದಗಳಲ್ಲಿ ಅತ್ಯಮೂಲ್ಯವಾದ ಜೀವನ ಮೌಲ್ಯಗಳನ್ನು ಸರಳವಾದ ಮತ್ತು ಸುಂದರವಾದ ರೀತಿಯಲ್ಲಿ ಹಾಡಿದರು. ಜನರ ಜೀವನವನ್ನು ತಿದ್ದಿ ಅವರ ಕೈವಲ್ಯಸಾಧನೆಗೆ ಕಾರಣರಾದರು. ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು ಮುಮುಕ್ಷು ಸಾಹಿತ್ಯ ಗಂಗೆಯನ್ನು ನಾಡಿನಲ್ಲೆಲ್ಲ ಹರಿಯಿಸಿದ ಅಧ್ಯಾತ್ಮ ಭಗೀರಥರು ಅವರು ಎಂಬುದನ್ನು ಎಂದಿಗೂ ಮರೆಯುವಂತಿಲ್ಲ.

ಬಹುಹಿಂದಿನಿಂದಲೂ ಅತ್ಯುನ್ನತವಾಗಿ ಬೆಳೆದುಬಂದ ಕನ್ನಡ ನಾಡಿನ ಅಧ್ಯಾತ್ಮಿಕ ಪರಂಪರೆಯಲ್ಲಿ ಮುಪ್ಪಿನ ಷಡಕ್ಷರಿಗಳು ಪ್ರಮುಖರಲ್ಲಿ ಒಬ್ಬರೆನಿಸಿ ಸುಪ್ರಸಿದ್ಧರಾಗಿದ್ದಾರೆ. ಅವರ ಬೋಧಪ್ರದವಾದ ಕೈವಲ್ಯಪದಗಳ ಸುಬೋಧಸಾರವು ಕನ್ನಡದ ಅಧ್ಯಾತ್ಮಿಕ ಸಂಪತ್ತನ್ನು ಸಮೃದ್ಧಗೊಳಿಸುವ ಬೆಲೆಯುಳ್ಳ ಕಾಣಿಕೆಯಾಗಿದೆ. ಅವರ ಪರಿಪೂರ್ಣಸಾಧನೆ, ಆ ಸಾಧನೆಯ ಮಾರ್ಗದಲ್ಲಿ ಕಾಣುವ ಸತಿ-ಪತಿಭಾವದ ಮಧುರಭಕ್ತಿ, ಅವರು ಏರಿನಿಂತ ಅನುಭವದ ತುತ್ತತುದಿ, ಅವರು ಪಡೆದ ಪರಿಪಕ್ವಸಿದ್ಧಿ, ಸಾರಿದ ಸಾರ್ವಕಾಲಿಕ ಸಂದೇಶ-ಇವು ಎಲ್ಲ ಕಾಲಕ್ಕೂ ಮಾರ್ಗದರ್ಶಕಗಳಾಗಿ ನಿಲ್ಲಬಲ್ಲವುಗಳಾಗಿವೆ "ಭಕ್ತಿ-ಜ್ಞಾನ-ವೈರಾಗ್ಯಗಳೇ

ಮುಪ್ಪುರಿಗೊಂಡ ಮುಪ್ಪಿನ ಷಡಕ್ಷರಿಗಳ ಈ ತತ್ತ್ವಸಾಹಿತ್ಯ ಜನರ ಸುಪ್ತವಾಸನೆಗಳನ್ನು ಕೆರಳಿಸಿ, ಆಸುರೀ ಸಂಪತ್ತನ್ನು ಹೆಚ್ಚಿಸಿ, ಮನಃಕ್ಷೋಭೆಯನ್ನುಂಟುಮಾಡುವ ಸಾಹಿತ್ಯವಲ್ಲ. ಇದು ಮಾನವನ ಹೃದಯಾಂತರಾಳದಲ್ಲಿರುವ ದೈವೀಭಾವವನ್ನು ಜಾಗೃತಗೊಳಿಸಿ ಮನಸ್ಸನ್ನು ಅರಳಿಸುವ ಸಾಹಿತ್ಯ."[೧] "ಹೀಗೆ ಮುಪ್ಪಿನ ಷಡಕ್ಷರಿಗಳ ಹಾಡುಗಳಲ್ಲಿ ಕಾಣುವುದು ಶಿವನಿಷ್ಠೆಯಿಂದ ಮುಂದುವರಿಯುವ ಸಾಧಕ ಚೇತನವೊಂದರ ಪರಿಶುದ್ಧ ಜೀವನದ ಪ್ರಾಮಾಣಿಕ ಉದ್ಗಾರ...ಅವರ ಹಾಡುಗಳು ತಿಳಿಯಾದ ಮಾಧುರ್ಯ ಮತ್ತು ಆತ್ಮೀಯತೆಗಳಿಂದ ಆಸ್ವಾದ್ಯವಾಗುತ್ತವೆ; ತಮ್ಮ ಕುಸುಮ ಕೋಮಲದಳಗಳನ್ನು ಅರಳಿಸಿ ನರುಗಂಪನ್ನು ಸೂಸುತ್ತವೆ. ಈ ದೃಷ್ಟಿಯಿಂದ ಕೈವಲ್ಯ ಸಾಹಿತ್ಯದಲ್ಲಿ ಇವುಗಳ ಸ್ಥಾನ ಗಣನೀಯವಾಗಿದೆ"[೨]

## ಗ್ರಂಥ ಸಂಸ್ಕರಣ

ಮುಪ್ಪಿನ ಷಡಕ್ಷರಿಗಳ ಹಾಡುಗಳೆಂದರೆ ನಮ್ಮ ಪರಮಪೂಜ್ಯ ಲಿಂಗೈಕ್ಯ ಜಗದ್ಗುರುಗಳವರಿಗೆ ಅತ್ಯಂತ ಪ್ರಿಯವಾದುವು. ಶಿವಪೂಜಾ ಸಮಯದಲ್ಲಿ ಭಕ್ತಿಯಿಂದ ತಲ್ಲೀನರಾಗಿ ಅವುಗಳನ್ನು ಹಾಡುತ್ತಿದ್ದರು. ಅದರ ಪ್ರತಿಗಳು ಅಲಭ್ಯವೆಂದು ತಿಳಿದಾಗ ಶ್ರೀಗಳು ಅದನ್ನು ಪ್ರಕಟಿಸಲು ಸಂಕಲ್ಪಿಸಿದರು. ಆ ಸತ್ಸಂಕಲ್ಪವೇ ನಮಗೆ ಪ್ರಚೋದನೆ ನೀಡಿತು. ಆ ಗ್ರಂಥವನ್ನು ತೆಗೆದು ನೋಡಿದಾಗ ಹರ್ಡೇಕರ್ ಮಂಜಪ್ಪನವರು ಬಹಳ ಪರಿಶ್ರಮದಿಂದ ಮೊದಲ ಬಾರಿಗೆ ಸಂಗ್ರಹಿಸಿದ್ದರು. ಇದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ಪ್ರಕಟಣೆಯಾಗಿ ಪ್ರಕಟಿಸಿದ್ದರು. ಇದನ್ನೇ ಧಾರವಾಡದ ಮುರುಘಾಮಠದ ಪರಮಪೂಜ್ಯರು ಪುನಃ ಮುದ್ರಣ ಮಾಡಿಸಿ ಮಹದುಪಕಾರ ಮಾಡಿದ್ದಾರೆ. ಇಲ್ಲಿಯ ಹಾಡುಗಳಿಗೆ ಹೊಂದುವಂತಹ ಶರಣರ ವಚನಗಳನ್ನು ಸಹ ಕೊಟ್ಟಿದ್ದಾರೆ. ಆದರೆ ಈ ಗ್ರಂಥಸಂಸ್ಕರಣಕ್ಕೆ ಮೂಲ ಆಕರ ಯಾವುದು ಎಂಬುದರ ಬಗೆಗೆ ಯಾವ ವಿವರಣೆಯನ್ನೂ ನೀಡಿಲ್ಲ ಮತ್ತು ಈಗ ಈ ಪ್ರತಿಗಳೂ ಮುಗಿದಿವೆ. ಇದೆಲ್ಲವನ್ನೂ ಗಮನಿಸಿದ ನಾವು ನಮ್ಮ ಪೂಜ್ಯ ಗುರುಗಳ ಮೆಚ್ಚಿನ ಸ್ತೋತ್ರಗ್ರಂಥವಾದ್ದರಿಂದ ಇದನ್ನು ಸಂಪಾದಿಸಲೇಬೇಕೆಂದು ಮನಸ್ಸು ಮಾಡಿದೆವು. ಈ ಗ್ರಂಥ ಸಂಪಾದನೆಗೆ ಒಟ್ಟು ಎಂಟು ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ.

---

೧. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು: 'ಮುಪ್ಪಿನ ಷಡಕ್ಷರಿಗಳ ಕೈವಲ್ಯ ಸಾಹಿತ್ಯ' ದಾಸೋಹಂ ಸ್ಮರಣ ಸಂಚಿಕೆ, ಪುಟ ೫೮.

೨. ಡಾ. ಎಚ್. ತಿಪ್ಪೇರುದ್ರಸ್ವಾಮಿ: 'ಕನ್ನಡದಲ್ಲಿ ಕೈವಲ್ಯ ಸಾಹಿತ್ಯ' ಪುಟ ೪೪–೪೫.



೧. "ಕ" ಪ್ರತಿ : ಇದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸೇರಿದ್ದು. ಇದರ ನಿಬಂಧಾಂಕ KB-651. ಇದು ಕೋರಿ ಕಾಗದದ ಪ್ರತಿ. ಇದರಲ್ಲಿ ಬರುವ ಎಲ್ಲ ವಿಷಯಗಳು ಸ್ತೋತ್ರಕ್ಕೆ ಸಂಬಂಧಪಟ್ಟವು. ಇದರ ಪ್ರಾರಂಭದ ಮತ್ತು ಕೊನೆಯ ಹಾಳೆಗಳು ಲುಪ್ತವಾಗಿವೆ. ಈ ಪ್ರತಿ ಅಷ್ಟೇನೂ ಶುದ್ಧವಲ್ಲ. ಒಂದು ಹಾಡಿನ ಮೊದಲನೆಯ ಚರಣಕ್ಕೆ ನುಡಿ ಎಂತಲೂ ಪೂರ್ಣ ಹಾಡಿಗೆ ಪದ ಎಂತಲೂ ಕರೆದಿದ್ದಾನೆ. ಕ್ರಮಬದ್ಧವಾಗಿ ಹಾಡಿನ ಸಂಖ್ಯೆಗಳನ್ನು ಹಾಕಿದ್ದಾನೆ. ಇದರಲ್ಲಿಯೆ ಷಡಕ್ಷರಿ ಅಂಕಿತ ಎಂಟು ಹೆಚ್ಚಿನ ಹೊಸ ಪದಗಳು ದೊರಕಿವೆ. ಇಲ್ಲಿನ ಪದಗಳಿಗೆ ಯಾವ ವಿಧವಾದ ಶಿರೋನಾಮೆಗಳನ್ನು ಕೊಟ್ಟಿರುವುದಿಲ್ಲ. ಸ್ಥಲಗಳಾಗಿ ವಿಭಾಗ ಮಾಡಿರುವುದಿಲ್ಲ. ಈ ಪ್ರತಿ ಮಾಡಿದ ಕಾಲ ತಿಳಿದುಬರುವುದಿಲ್ಲ. ಇಲ್ಲಿಯ ಯಾವ ಹಾಡುಗಳಿಗೂ ರಾಗ ನಿರ್ದೇಶನವಿಲ್ಲ. ಷಟ್ಪದಿಗಳ ಹೆಸರನ್ನು ಹೇಳಿದೆ.

೨. "ಗ" ಪ್ರತಿ : ಇದು ತಾಳೆಯೋಲೆಯ ಪ್ರತಿ. ಬರವಣಿಗೆ ಶುದ್ಧವಾಗಿದೆ. ಮಧ್ಯದಲ್ಲಿ ಕೆಲವು ತ್ರುಟಿತವಾಗಿವೆ. ಈ ಪ್ರತಿಯು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರಕ್ಕೆ ಸೇರಿದ್ದು. ಇದರ ನಿಬಂಧಾಂಕ K-210 ಈ ಪ್ರತಿ ಆದಷ್ಟೂ ಶುದ್ಧವಾಗಿದೆ.

೩. "ಚ" ಪ್ರತಿ : ಇದು ತಾಳೆಯೋಲೆಯ ಪ್ರತಿ. ಒಟ್ಟು ೬೫ ತಾಳೆ ಎಲೆಗಳಿವೆ. ಪ್ರತಿಯು ಅಂತ್ಯಭಾಗದಲ್ಲಿ ತ್ರುಟಿತವಾಗಿದೆ. ಇದು ಸಹ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರಕ್ಕೆ ಸೇರಿದ್ದು. ಇದರ ನಿಬಂಧಾಂಕ K-1302. ಪ್ರತಿ ಮಾಡಿಕೊಂಡ ಕಾಲ ತಿಳಿದುಬರುವುದಿಲ್ಲ. ಇದರ ಪ್ರಾರಂಭದಲ್ಲಿ "ಮುಪ್ಪಿನ ಷಡಾಕ್ಷರಸ್ವಾಮಿಗಳೆಸಗಿ ರೂಪಿಸಿದ ಸ್ವರವಚನ ಬರುವುದಕೆ ನಿರ್ವಿಘ್ನಮಸ್ತು" ಎಂದು ಹೇಳಿದೆ.

೪–೫ ಮತ್ತು ೬ : ಇವುಗಳು ಮುದ್ರಿತ ಪ್ರತಿಗಳು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಭಂಡಾರಕ್ಕೆ ಸೇರಿದವು. ಇವುಗಳಿಗೆ ಬಳಸಿದ ಸಂಕೇತ ಅ,ಆ, ಇ. ಇವುಗಳಲ್ಲಿ 'ಅ' ಪ್ರತಿಗೆ "ಸಟೀಕಾ ಷಡಕ್ಷರಯ್ಯ ವಚನಗಳು" ಎಂದು ಹೆಸರಿದೆ. ಇಲ್ಲಿನ ಎಲ್ಲಾ ಹಾಡುಗಳಿಗೆ ಟೀಕೆಯನ್ನು ಬರೆದಿದೆ. ಉಳಿದ ಆ, ಇ ಪ್ರತಿಗಳು ಹಾಡುಗಳಾಗಿವೆ. ಇವುಗಳನ್ನು ಬಳ್ಳಾರಿಯ ಕರ್ನಾಟಕ ಬುಕ್ ಡಿಪೋ ಏಜೆಂಟ್ ಶ್ರೀ ಶಿವಲಿಂಗಶೆಟ್ಟರಿಂದ ಕರ್ನಾಟಕ

ಬುಕ್ ಡಿಪೋ ಮುದ್ರಣಾಲಯದಲ್ಲಿ ೧೯೦೨ನೆಯ ಇಸವಿಯಲ್ಲಿ ಮುದ್ರಿಸಿ ಪ್ರಕಟಿಸಿದೆ. ಇವೆರಡೂ ಪ್ರತಿಗಳು ಒಂದೇ ರೀತಿಯಾಗಿವೆ. ಈ ಪ್ರತಿಗಳಲ್ಲಿ ಕೆಲವೇ ಹಾಡುಗಳಿವೆ.

೭. "ಧಾ" ಪ್ರತಿ : ಇದನ್ನು ಹರ್ಡೇಕರ್ ಮಂಜಪ್ಪನವರು ಸಂಗ್ರಹಿಸಿ, "ಮುಪ್ಪಿನ ಷಡಕ್ಷರಿದೇವರ ಸುಬೋಧಸಾರ" ಎಂಬ ಹೆಸರಿನಿಂದ ಧಾರವಾಡದ ಶ್ರೀ ಮುರುಘಾಮಠದ ವತಿಯಿಂದ ಪ್ರಕಟಿಸಿದ್ದಾರೆ. ಇದು ಇದುವರೆಗೆ ನಾಲ್ಕು ಮುದ್ರಣಗಳನ್ನು ಕಂಡಿದೆ. ಇದರಲ್ಲಿ ಒಟ್ಟು ೭೬ ಹಾಡುಗಳಿವೆ. ಕೆಲವು ಹಾಡುಗಳಿಗೆ ರಾಗ–ತಾಳಗಳನ್ನು ನಿರ್ದೇಶಿಸಿದ್ದಾರೆ. ನಾವು ಈ ಪ್ರತಿಗಳಲ್ಲಿ ಬರುವ ಶರಣರ ವಚನಗಳು ಮತ್ತು ರಾಗ ನಿರ್ದೇಶನಗಳನ್ನು ಕೈಬಿಟ್ಟಿದ್ದೇವೆ.

೮. ಅಲ್ಲದೆ ವಿದ್ವಾನ್ ಶ್ರೀ ಎಂ.ಎಸ್. ಬಸವರಾಜಯ್ಯನವರ ತಾಡೋಲೆಯ ಪ್ರತಿಯಲ್ಲಿ ದೊರೆತ ಮೂರು ಹೊಸ ಹಾಡುಗಳನ್ನು ಸೇರಿಸಿದೆ.

ಮೇಲಿನ ಹಸ್ತಪ್ರತಿಗಳಲ್ಲಿ ಶಕಟರೇಫೆಯು ಬಳಕೆಯಾಗಿಲ್ಲ. ರಾಗನಿರ್ದೇಶನವಿಲ್ಲ. ಸ್ವರವಚನಗಳು ಎಂದು ಕರೆದಿದೆ. ಮೇಲ್ಕಂಡ ಪ್ರತಿಗಳ ನೆರವಿನಿಂದ ಈ ಕೃತಿಯನ್ನು ಸಾಧ್ಯವಾದಷ್ಟೂ ಪರಿಷ್ಕರಿಸಲಾಗಿದೆ. ಮುಪ್ಪಿನವರ ಮುಪ್ಪರಿಯದ ಈ ಹಾಡುಗಳು ನಾಡಿನ ಎಲ್ಲೆಡೆಯೂ ನಿನದಿಸುತ್ತಾ ಎಲ್ಲರ ಹೃನ್ಮಂದಿರಗಳನ್ನು ಬೆಳಗುತ್ತಾ ಭಕ್ತಿಯ ಬುಗ್ಗೆಯನ್ನು ಚಿಮ್ಮಿಸುವಂತಾಗಲೆಂಬ ಸದಾಶಯದಿಂದ ಪ್ರಕಟಿಸಲಾಗಿದೆ. ಈ ಕೃತಿಯ ಸಂಪಾದನೆಗೆ ಬೇಕಾದ ಹಸ್ತಪ್ರತಿಗಳನ್ನು ದೊರಕಿಸಿಕೊಟ್ಟು ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗದ ಅಧಿಕಾರಿಗಳು ಸಹಕರಿಸಿದ್ದಾರೆ, ಇದನ್ನು ಸಿದ್ಧಪಡಿಸುವಲ್ಲಿ ಅನೇಕರು ನೆರವಾಗಿದ್ದಾರೆ. ವಿಶೇಷ ಪ್ರೀತ್ಯಭಿಮಾನಗಳಿಂದ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್‌ನ ಶ್ರೀ ಜಿ.ಹೆಚ್. ಕೃಷ್ಣಮೂರ್ತಿಯವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ನೆನಕೆಗಳು. ಸರ್ವರಿಗೂ ಆದಿಜಗದ್ಗುರು ಶ್ರಿ ಶಿವರಾತ್ರೀಶ್ವರರು ಸಕಲ ಸನ್ಮಂಗಳವನ್ನು ಉಂಟುಮಾಡಲೆಂದು ಹಾರೈಸುತ್ತೇವೆ.

ಮೈಸೂರು
೬–೧೨–೧೯೮೭

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ**
**ಮಹಾಸ್ವಾಮಿಗಳು, ಶ್ರೀ ಸುತ್ತೂರು ಮಠ**



## ಪರಿಷ್ಕೃತ ದ್ವಿತೀಯಾವೃತ್ತಿ

'ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು' – ದ್ವಿತೀಯ ಆವೃತ್ತಿಯಾಗಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಅನುಬಂಧವಾಗಿ ಸೇರಿಸಲು 'ಷಡಾಕ್ಷರ ಲಿಂಗಾಂಕಿತ ಶಿವಗಣಂಗಳ ರಗಳೆ' ಎಂಬ ಸಂಶೋಧನಾತ್ಮಕ ಕಿರುಕೃತಿಯನ್ನು ಕಳುಹಿಸಿಕೊಟ್ಟ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಹಿರಿಯ ಸಂಶೋಧಕ–ವಿದ್ವಾಂಸರಾದ ಶ್ರೀ ಎಸ್. ಶಿವಣ್ಣನವರಿಗೆ ಹಾಗೂ ಈ ಆವೃತ್ತಿ ಹೊರಬರಲು ನೆರವಾದ ಅಭಿಮಾನಿಗಳಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರು ಸಕಲ ಶ್ರೇಯಸ್ಸನ್ನು ಕರುಣಿಸಲೆಂದು ಹಾರೈಸುತ್ತೇವೆ.

ಮೈಸೂರು
೬–೧೨–೧೯೮೭

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ**
**ಮಹಾಸ್ವಾಮಿಗಳು, ಶ್ರೀ ಸುತ್ತೂರು ಮಠ**

## ಪರಿವಿಡಿ


ಶುಭ ಸಂದೇಶ iii
ಚೆನ್ನುಡಿ iv
ಅಧ್ಯಕ್ಷರ ಮಾತು v
ಹೊನ್ನುಡಿ vi
ಎರಡು ನುಡಿ vii
ಪ್ರಕಾಶಕರ ಮಾತು viii
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ x
ಅರ್ಪಣೆ xi
ಪ್ರಕಾಶಕರ ನುಡಿ xii
ಪ್ರಸ್ತಾವನೆ xv

೧. ನೀನೆ ಅಕಳಂಕಗುರು ..... ೧
೨. ಎನ್ನ ಕರೆಯ ಬನ್ನಿ ..... ೩
೩. ನಿಮ್ಮನು ನೆನೆವ ಮನವ ಬಯಸುವೆನು ..... ೭
೪. ಎನ್ನ ಕರದೊಳಗಿರ್ದು ಏಕೆ ನುಡಿಯೆ? ..... ೯
೫. ಎಲೆ ಆತ್ಮನೆ ..... ೧೨
೬. ಎನ್ನ ಬರಿಸದಿರು ..... ೧೪
೭. ಕೇಳಕ್ಕ ..... ೧೬
೮. ಮಾಯೆ ನೀನತಿ ಚೆಲುವೆ ..... ೧೮
೯. ಇನ್ನೆನಗೆ ಭಯವುಂಟೆ ..... ೨೦
೧೦. ಘನಮಹಿಮ ಲಿಂಗವೆ ..... ೨೨
೧೧. ಉಳುಹಿರಯ್ಯ ..... ೨೪
೧೨. ಸರ್ವಾಂಗವನು ಸಲಿಸುವೆನು ..... ೨೬
೧೩. ಶಿವನೊಳಗೆ ಮೋಹವಿರೆ ತಾನೆ ಶಿವನು ..... ೨೭
೧೪. ವರವ ಬೇಡುವೆನೊಂದು ..... ೩೧
೧೫. ಎಲ್ಲರಲಿ ಒಂದೊಂದ ಬೇಡಿಕೊಂಬೆ ..... ೩೩
೧೬. ಮುಂದೆ ಏನಪ್ಪುದೋ ..... ೩೫
೧೭. ಮಗಳೆ ಎನ್ನಯ ಮಾತು ಕೇಳು ..... ೩೮
೧೮. ನಮಗೆ ಸರಿಯದಾರು ..... ೪೧
೧೯. ಹೆದರಿ ನುಡಿಯಲಮ್ಮೆನು ..... ೪೬
೨೦. ವಿಕಸವಾಗಲಿ ..... ೪೮
೨೧. ಭಜತಿಯರರೆ ..... ೫೦
೨೨. ಮನದ ಬಲುಮೆ ಎಂದಿಗಪ್ಪುದೋ ..... ೫೨
೨೩. ಮನವನಿಡಲಿಕಾಗದು ..... ೫೫
೨೪. ಕಿವಿಯನೊಡ್ಡಿ ಕೇಳಲಾಗದು ..... ೫೭
೨೫. ನಿಮ್ಮ ನಿಜಪದ ..... ೫೯
೨೬. ಭೋಗ ಹರಿದು ಹೋಗಲಿ ..... ೬೧
೨೭. ಭಕ್ತ ಹೃದಯವಾಸ ..... ೬೩
೨೮. ಏನನೋದಿ ಏನು ಫಲ ..... ೬೫
೨೯. ಎನಗೆ ದೊಡ್ಡಿತೆ ..... ೬೭
೩೦. ನಿಮ್ಮನರಿಯದೆ ..... ೬೯
೩೧. ಧರೆಯ ಭೋಗಸ್ಥಿರ ..... ೭೧
೩೨. ಎಂದಿಗಪ್ಪುದೋ ..... ೭೪
೩೩. ಸಿರಿಯ ಕನಸಿನಂತೆ ..... ೭೬
೩೪. ಕಾಯಮೋಹವನ್ನು ಮರೆ ..... ೭೯
೩೫. ಕೋಪವೆನಗೆ ಲೋಪವಾಗದು ..... ೮೧
೩೬. ಎನಗೆ ಭೋಗಭಾಗ್ಯ ಬೇಡ ..... ೮೩
೩೭. ಡಿಂಭದೊಳಗೆ ಒಂದು ಪ್ರಾಣ ..... ೮೫
೩೮. ಹಿರಿದು ಕಿರಿದು ಇಲ್ಲ ..... ೮೭
೩೯. ನಾನು ಒಲಿದು ಫಲವದೇನು ..... ೮೯
೪೦. ಪನ್ನಗೇಂದ್ರಭರಣ ..... ೯೧
೪೧. ನಿನ್ನ ನೀನೆ ತಿಳಿದು ನೋಡು ..... ೯೩
೪೨. ನಿಮ್ಮ ಹಾಗೆ ಕಾಂಬೆನಯ್ಯ ..... ೯೫
೪೩. ನನ್ನ ಮೇಲೆ ಹಗೆಯೇಕೆ ..... ೯೭
೪೪. ಮನವನಾಳ್ವರಾರ ಕಾಣೆನು ..... ೯೯
೪೫. ಏನು ಮಾಡಲಯ್ಯ ..... ೧೦೧
೪೬. ಕಾಡಲೇಕೆ ನರರುಗಳನು ..... ೧೦೩
೪೭. ವಿರತಿ ಸುಭವಲ್ಲವಯ್ಯ ..... ೧೦೫
೪೮. ನೀನು ರಕ್ಷಿಸಭವ ..... ೧೦೭

೪೯. ಎಂದಿಗಪ್ಪುದೋ ..... ೧೦೯
೫೦. ನಿತ್ಯಸುಖಿಯಾಗು ..... ೧೧೩
೫೧. ಎಂದಿಗಾದಪುದೋ ..... ೧೧೭
೫೨. ಎಂದಿಗೊಲಿದಪನೋ ..... ೧೨೦
೫೩. ಲಿಂಗವು ಇರಲು ಶಿವ ..... ೧೨೨
೫೪. ಕರುಣಿ ಎಂತಹನು ..... ೧೨೫
೫೫. ನರರಿಗೆಂತಹುದು ..... ೧೨೭
೫೬. ಎಂದಿಗಹುದೋ ..... ೧೨೯
೫೭. ಒಡಲು ಹಿಡಿದ ಜಡನು ನಾನು ..... ೧೩೧
೫೮. ಎಂದಿಗೆ ದೊರಕುವುದೋ ..... ೧೩೩
೫೯. ಏತರ ಭಯವೆಮಗೆ ..... ೧೩೫
೬೦. ಶಿವಯೋಗದೊಳೆಂದಿಹೆ ..... ೧೩೭
೬೧. ಧ್ಯಾನದೊಳೆಂದಿಹೆನೋ ..... ೧೪೦
೬೨. ಎನ್ನಪರಾಧವ ನೋಡದೆ ರಕ್ಷಿಸು ..... ೧೪೩
೬೩. ಯುಗವನಂತವು ಹೋಗುತಿರುತಿಹವು ..... ೧೪೮
೬೪. ದೇವತ್ವವಾವುದು ..... ೧೫೧
೬೫. ತನ್ನ ನಾವು ಏನು ಬೇಡಿದೆವು ..... ೧೫೨
೬೬. ಮೋಹವಿಲ್ಲದ ಪೂಜೆ ..... ೧೫೪
೬೭. ಬಂದನು ಮರ್ತ್ಯಕೆ ..... ೧೫೬
೬೮. ಆರು ಕಾಣರು ಪುಣ್ಯಕ್ಷೇತ್ರವನು ..... ೧೫೭
೬೯. ಕಾಯ್ಯೈ ಕಾಯ್ಯೈ ..... ೧೫೮
೭೦. ನಮ್ಮ ದೇಶಕೆ ಹೋಹ ದಿನ ಬಂತು ..... ೧೫೯
೭೧ ಸೆರಗನೊಡ್ಡಿ ಬೇಡಿಕೊಂಬೆನು ..... ೧೬೦
೭೨. ತಂದು ತೋರೆ ..... ೧೬೨
೭೩. ಹೇವವನಿಕ್ಕಲಾರೆ ..... ೧೬೩
೭೪. ಹಾರು ಕಂಡ್ಯಾ ಹಂಸ ..... ೧೬೫
೭೫. ಶಿವಯೋಗಾಷ್ಟಕ ..... ೧೬೬
೭೬. ಶಿವಪೂಜಾಷ್ಟಕ ..... ೧೬೮
೭೭. ಎನ್ನ ಆಳ್ದ ಇಷ್ಟಲಿಂಗ ..... ೧೭೦
೭೮. ಎನ್ನ ತನುಗುಣಗಳ ಭ್ರಾಂತುಗೆಡಿಸು ..... ೧೭೨
೭೯. ಎನ್ನ ಏಕೆ ಕಾಯಲೊಲ್ಲೆ? ..... ೧೭೪





೮೦. ನಿಮ್ಮ ಮರೆಸಬೇಡ ..... ೧೭೬
೮೧. ಎತ್ತು ತೊತ್ತು ತೊಂಡನಾಗಿ ಇರಿಸು ..... ೧೭೮
೮೨. ಶಿವನ ಪೂಜೆಯನ್ನು ಮಾಡು ..... ೧೮೦
೮೩. ಕೊಟ್ಟು ಹುಟ್ಟಿ ಪಡೆಯಲಿಲ್ಲ ..... ೧೮೩
೮೪. ಇದರ ತೆರನ ಕರುಣಿಸು ..... ೧೮೫
೮೫. ಎಂತ ಕನಸ ಕಂಡೆ! ..... ೧೯೪
೮೬. ಶಿವನ ಪೂಜೆ ಮಾಡು ಮನವೆ ..... ೧೯೬
೮೭. ಎಲ್ಲವು ತಾನು ..... ೧೯೮
ಅನುಬಂಧ ..... ೨೦೦
ಪದಗಳ ಅಕಾರಾದಿ ..... ೨೦೨
ಕಠಿಣ ಶಬ್ದಕೋಶ ..... ೨೧೫

# ಮುಪ್ಪಿನ ಷಡಕ್ಷರಿಗಳ
# ಕೈವಲ್ಯ ಪದಗಳು

॥ಓಂ॥

# ೧. ನೀನೆ ಅಕಳಂಕಗುರು

### ಕುಸುಮಷಟ್ಪದಿ

ಸಕಲಕೆಲ್ಲಕೆ [೧]ನೀನೆ[೧]
ಅಕಳಂಕ ಗುರುವೆಂದು
ನಿಖಿಳಶಾಸ್ತ್ರವು ಪೇಳುತಿರಲರಿದೆನು ॥ಪ॥

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ ! ನೀನೆನಗೆ ದೀಕ್ಷೆಯ ಮಾಡಿದೆ
ವರಷಡಕ್ಷರಿಯ ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರ [೨]ದನುಭವವನು[೨] ॥೧॥

ಅವರವರ ದರುಶನಕೆ
ಅವರವರ ವೇಷದಲಿ
[೩]ಅವರವರಿಗೆಲ್ಲ[೩] ಗುರು ನೀನೊಬ್ಬನೆ
[೪]ಅವರವರ ಭಾವಕ್ಕೆ[೪]
ಅವರವರ ಪೂಜೆಗಂ
[೫]ಅವರವರಿಗೆಲ್ಲ[೫] [೬]ಶಿವ[೬] ನೀನೊಬ್ಬನೆ ॥೨॥

---

೧ ನೀನು (ಆಇ) ನೀವೆ (ಚ) ೨ ಅನುಭಾವವಾ (ಆಇಕಗಚ) ೩ ಅವರಿಗೆಲ್ಲ (ಆಇ) ೪ ಅವರವರ ಬೋಧೆಗಂ (ಚ) ೫ ಅವರಿಗೆಲ್ಲ (ಕಗ) ೬ ದೇವ (ಅಆಇ ಕಗಚ)

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ [೧]ನೀನಲ್ಲದೆ[೧]
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವಷಡಕ್ಷರಿಲಿಂಗವೆ ॥೩॥

---

೧ ಎಲೆ ದೇವನೆ (ಧಾ)



## ೨. ಎನ್ನ ಕರೆಯ ಬನ್ನಿ

**ಕುಸುಮಷಟ್ಪದಿ**

[೧]ಹೆಮ್ಮೆಗಳು[೧] ನಾ ನಿಮ್ಮ
[೨]ನೆಮ್ಮಿ ಕೊಂಡಿರುವೆನ್ನೈ[೨]
ಗಮ್ಮನೇ [೩]ಎನ್ನುವನು[೩] ಕರೆಯ ಬನ್ನಿ ॥ಪ॥

ಸುವ್ವಿ ಚೆನ್ನಣ್ಣನಿಗೆ
ಸುವ್ವಿ ಮಡಿವಾಳನಿಗೆ
ಸುವ್ವಿ ನಮ್ಮಪ್ಪ ಬಸವಯ್ಯನಡಿಗೆ
ಸುವ್ವಿ ಅಜಗಣ್ಣನಿಗೆ
ಸುವ್ವಿ [೪]ಸತ್ಯಣ್ಣನಿಗೆ[೪]
ಸುವ್ವಿ ನಮ್ಮಯ್ಯ ಪ್ರಭುರಾಯನಡಿಗೆ ॥೧॥

ಸುವ್ವಿ [೫]ಹಳ್ಳಯ್ಯ[೫]ನಿಗೆ
ಸುವ್ವಿ [೬]ಧೂಳಯ್ಯನಿಗೆ[೬]
ಸುವ್ವಿ ನಮ್ಮಯ್ಯ ಶ್ವಪಚಯ್ಯನಡಿಗೆ
ಸುವ್ವಿ ಭೀಮಯ್ಯನಿಗೆ
ಸುವ್ವಿ ಕಕ್ಕಯ್ಯನಿಗೆ
ಸುವ್ವಿ ನಮ್ಮಯ್ಯ [೭]ಚೆನ್ನಯ್ಯ[೭]ನಡಿಗೆ ॥೨॥

---

೧ ಹೆಮ್ಮೆಗಳು (ಅ) ೨ ನೆಮ್ಮಿ ನಂಬಿರುವೆನು (ಗಚ) ನಂಬಿ ನಂಬಿರುವೆನು (ಅ) ೩ ಎನ್ನವನು (ಧಾ) ೪ ಜಗದೇವನಿಗೆ (ಚ) ೫ ಹರಳಯ್ಯ (ಧಾ) ೬ ಮಧುವಯ್ಯನಿಗೆ (ಗ) ೭ ಶ್ವಪಚಯ್ಯ (ಗ)

ನಮ್ಮವರ ಪಾಡುವೆನು
ನಮ್ಮವರ ಪೊಗಳುವೆನು
ನಮ್ಮವರನಾವಗಂ ಹರಸುತಿಹೆನು
ನಮ್ಮವರು ಬರುವುದನು
ಉಮ್ಮಳಿಸಿ ನೋಡುವೆನು
[೧]ಹಮ್ಮೈಸುವೆನು ಮನದಿ[೧] ಬಾರದಿರಲು ॥೩॥

ಕುಟ್ಟುತ್ತ ಬೀಸುತ್ತ
ನೆಟ್ಟನೇ ನಮ್ಮ ಒಡ
ಹುಟ್ಟಿದ [೨]ಪುರಾತರನು[೨] [೩]ಹಾಡುತಿಹೆನು[೩]
ಕಷ್ಟಘನ ಮರ್ತ್ಯದಾ
[೪]ಬಟ್ಟೆ ನಾನೊಲ್ಲೆ[೪] ಕೃಪೆ
ಹುಟ್ಟಿದೇ ನಮ್ಮವರು ಕರೆಯಿರಮ್ಮಾ ॥೪॥

ನೀರ ಹೊಳೆಯಲಿ ಬಂದು
ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ
ಆರೈದು ಮತ್ತೊಮ್ಮೆ
ದೂರ ದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ ॥೫॥

ಬಂದವರ ಬರುವವರ
ನಿಂದವರ ನೆರೆದವರ
[೫]ಕುಂದುದಲೆ[೫] ಕೇಳುವೆನು ನಮ್ಮವರನು
ಹಿಂದಾದ ದುಃಖದಲಿ
ನೊಂದೆ[೬]ನ್ನೈ[೬] ನಮ್ಮವರು
ಎಂದಿಗೆ ಎನ್ನುವನು ಕರೆಯಬಹರೋ ॥೬॥

೧ ಹಮ್ಮಿಸುವೆ ಮನದೊಳಗೆ (ಧಾ) ೨ ಪುರಾತನರ (ಧಾ) ೩ ಹರಸುತಿಹೆನು (ಕ) ೪ ಬಟ್ಟೆ ಯನು ಒಲ್ಲೆ (ಧಾ) ೫ ಕುಂದದೆ (ಕಗಚ) ೬ ನು (ಕಗಚ)



[೧]ಪದುಳವೇ[೧] ನಮ್ಮವರ
ಪದಪದ್ಮ ಎನ್ನುವೆನು
ಪದಪಿಂದ ಕರೆದೊಯ್ಯಲೊಲ್ಲರೇಕೆ
ಉದಯಾಸ್ತಮಾನದಲಿ
ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ ॥ ೭ ॥

ಅಳಲುವೆನು ಮನದೊಳಗೆ
[೨]ಬಳಲುವೆನು ಬಾರದಿರೆ[೨]
ಕಳೆಯೇರುವೆನು ಒಮ್ಮೆ ನೆನೆದು ನೆನೆದು
ಮಲಹರನ ಶರಣರಾ
ಬಲವ ನೋಡುವೆನೊಮ್ಮೆ
ಸಲೆಯೆನ್ನ ಕನಸಿಂಗೆ [೩]ಬಾರರೆನುತ[೩] ॥ ೮ ॥

ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನ್ನು ಕರೆಯಬಹರೋ
[೪]ನೊಂದು[೪] ಸುಯ್ಗುರೆಯುವೆನು
[೫]ಬೆಂದು[೫] ಬೆಂಡಾಗುವೆನು
ಚಂದವೇ [೬]ತಮಗೆನ್ನ ನೋಡದಿಹುದು[೬] ॥ ೯ ॥

ತರಗೆಲೆಯು ಗಿರುಕೆನಲು
ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ [೭]ಸುಯ್ಗುರೆವೆನು[೭]
ಪರರ ಶಿಶುವೆಂದೆನುತ

೧ ಹದುಳವೆ (ಕಗಚ ಅಆಇ) ೨ ಬಳಲಿ ನಾ ಬ್ಯಾಸರುವೆ (ಕ) ೩ ಬಾರರಯ್ಯಾ (ಕ) ಬಾರದೆನುತ (ಆಇ) ೪ ನಿಂದು (ಕಗಚ) ೫ ನೊಂದು (ಕಗಚ) ೬ ತಮಗಿನ್ನು ಬಾರದಿಹುದು (ಕ) ೭ ಕರಗಿ ಕೊರಗಿ (ಕ)

ಶರಣರೂ ಎನ್ನುವನು
ಮರೆದರೋ ಎಂದೆನುತ ಹೆದರುತಿಹೆನು ॥ ೧೦ ॥

ಶರಣರೊಳು ಸುಖದುಃಖ
ದಿರವ ಹೇಳುವೆ ನಾನು
ಪರರೆನ್ನ ಚಿಂತೆಯನ್ನರಿಯರಾಗಿ
ಅರಸು ಷಡಕ್ಷರಿಯ
ವರರೆನ್ನ [೧]ಕಾಡಿದರೆ
ಶರಣರಿಗೆ ಹೇಳಿ ನಾ ಕಳೆವೆನಯ್ಯಾ[೧] ॥೧೧॥

೧ ಕಾಡಿದಿರೆ ಶರಣರಿಗೆ ಪೇಳಿ ನಾ ಕೇಳ್ವೆನಯ್ಯಾ (ಧಾ)



## ೩. ನಿಮ್ಮನು ನೆನೆವ ಮನವ ಬಯಸುವೆನು

**ಕುಸುಮಷಟ್ಪದಿ**

ಎನಗೆ ನಿಮ್ಮನೆ ನೆನೆವ
ಮನವನೇ ಬಯಸುವೆನು
[೧]ಘನವ ನಾನಿದರಿಂದ ಮೇಲರಿಯೆನು[೧] ॥ಪ॥

ನಿಮ್ಮ ನೆನೆವುದೆ ಹರುಷ
ನಿಮ್ಮ ನೆನೆವುದೆ ಪರುಷ
ನಿಮ್ಮ ನೆನೆವುದೆ ಕಾಮಧೇನುವೆನಗೆ
ನಿಮ್ಮ ನೆನೆವುದೆ ಗತಿಯು
ನಿಮ್ಮ ನೆನೆವುದೆ ಮತಿಯು
ನಿಮ್ಮ ನೆನೆವುದೆ [೨]ಇಹದ ಪರದ ಸುಖವು[೨] ॥೧॥

ನಿಮ್ಮ ನೆನೆವುದೆ ತಪವು
ನಿಮ್ಮ ನೆನೆವುದೆ ಜಪವು
ನಿಮ್ಮ ನೆನೆವುದೆ ಸಕಲ [೩]ಪರತತ್ತ್ವವು[೩]
ನಿಮ್ಮ ನೆನೆವುದೆ ನಿತ್ಯ
ನಿಮ್ಮ ನೆನೆವುದೆ ಸತ್ಯ
ನಿಮ್ಮ ನೆನೆವುದೆ [೪]ವ್ಯಕ್ತ[೪] ಕೈಲಾಸವು ॥೨॥

೧ ಘನವಾಗಿ ಇದರಿಂದ ಮೇಲರಿಯೆನು (ಧಾ) ೨ ನಿತ್ಯ ಸುಖವದೆನಗೆ (ಚ), ಇಹಪರದ ಸುಖವದೆನಗೆ (ಕಗ) ೩ ಪರಮತತ್ತ್ವ (ಧಾ) ಪರಮತತ್ತ್ವವು (ಗ) ೪ ದಿವ್ಯ (ಆಇ)

ತನು ದಂಡನೆಯ ಮಾಡಿ
[೧]ಜಿನುಗ[೧]ಲೇತಕೆ [೨]ಮರುಳೆ[೨]
ಘನಗಿರಿಯ ಮೇಲೆ ತಪವಿರಲೇತಕೆ
ಮನಸಿಜಾರಿಯೆ ನಿನ್ನ
ನೆನಹು ಮನದೊಳು [೩]ನೆಲಸೆ[೩]
[೪]ಘನವಾದ[೪] ಕೈಲಾಸ ತನ್ನೊಳಿಹುದು ॥೩॥

ಹಲವು ತೀರ್ಥಕ್ಷೇತ್ರ
ಹಲವು ಗಿರಿಗಹ್ವರವು
ತೊಳಲಿ ಬಳಲು[೫]ತ್ತಿರುವು[೫]ದೇಕೆ [೬]ಮನವೆ[೬]
ಮಲಹರನ ನೆನಹು ತಾ
ನೆಲಸಿರಲು ಮನದೊಳಗೆ
ಹಲವನರಸುವದೇನು ತಾನೆ ಶಿವನು ॥೪॥

ಸುರಲೋಕವೇನೆನಗೆ
ನರಲೋಕವೇನೆನಗೆ
ಉರಗಮಯಲೋಕ ತಾನಾದಡೇನು
ಗುರುಷಡಕ್ಷರಿವರನ
ಪರಮಮಂತ್ರದ ನೆನಹು
ದೊರೆಕೊಳಲು [೭]ಶಿವಲೋಕ[೭] ತಾನಿರ್ಪುದು ॥೫॥

---

೧ ಸೊರಗು (ಆಇ) ೨ ನಾನು (ಧಾ) ಮನವೆ (ಕ) ೩ ನೆಲಸಲಾ (ಕ) ನೆಲಸಿರಲು (ಗಚ) ೪ ಘನ ಪರಮ (ಧಾ) ೫ ತಿರಲದೇಕೆ (ಕಗಚ) ೬ ದೇವ (ಧಾ) ೭ ಕೈಲಾಸ (ಕ)



## ೪. ಎನ್ನ ಕರದೊಳಗಿರ್ದು ಏಕೆ ನುಡಿಯೆ?

**ಕುಸುಮಷಟ್ಪದಿ**

ಎನ್ನ ಕರದೊಳಗಿರ್ದು
ಎನ್ನೊಳೇತಕೆ ನುಡಿಯೆ
ಎನ್ನ ಭವಭವದಲ್ಲಿ ಬಿಡದಾಳ್ದನೆ ॥ಪ॥

ಎನ್ನ ಚಿಂತಾಮಣಿಯೆ
ಎನ್ನ ಪರುಷದ [೧]ಕ[೧]ಣಿಯೆ
ಎನ್ನ ಬೇಡಿ[೨]ದುದೀವ[೨]ಸುರಭೂಜವೆ
ಎನ್ನ ಸಂಜೀವನವೆ
ಎನ್ನ ಪರಮಾ[೩]ಯುಷವೆ[೩]
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೧॥

ಎನ್ನ ಗತಿಮತಿ[೪]ಯೆ[೪] ನೀ
ನೆನ್ನ ಚೈತನ್ಯವೇ
ಎನ್ನನಗಲದೆ ಕೂಡಿ ಬಿಡದಾಳ್ದನೆ
ಎನ್ನ ಇಹಪರಸುಖವೆ
ಎನ್ನ [೫]ಮುಕ್ತಿಯ ಸಿರಿಯೆ[೫]
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೨॥

---

೧ ಖ (ಕ) ೨ ದಡೀವ (ಕಚ) ದನೀವ (ಗ) ೩ ಯುವೆ (ಧಾ) ೪ ಯು (ಧಾ) ೫ ಭಕ್ತಿಮುಕ್ತಿಯ (ಕ)

ಎನ್ನ ಭಾಗ್ಯದ [೧]ಸುಧೆಯೆ[೧]
ಎನ್ನ ಭಕ್ತಿಯ ನಿಧಿಯೆ
ಎನ್ನ ಮನವೆಂಬ ವನಿತೆ[೨]ಯ[೨] ತಿಲಕವೆ
ಎನ್ನ ಹೃದಯಾಲಯದ
ಚಿನ್ಮಯದ ಮೂರ್ತಿಯೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೩॥

ಎನ್ನ ಮಾತೆಯು ನೀನೆ
ಎನ್ನ ತಾತನು ನೀನೆ
ಎನ್ನ [೩]ಬಂಧುವು ಬಳಗ[೩] [೪]ಸಖನು[೪] ನೀನೆ
ಎನ್ನ ಪತಿಯೂ ನೀನೆ
ಎನ್ನ [೫]ಹಿತನೂ[೫] ನೀನೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೪॥

ಎನ್ನ ಕುಲಗುರುವೆ ನೀ
ಎನ್ನ ವಿದ್ಯಾಗುರುವೆ
ಎನ್ನ ಭವಭವದಲ್ಲಿ ಬಿಡದ ಗುರುವೆ
ಎನ್ನ ದೀಕ್ಷಾಗುರುವೆ
ಎನ್ನ ಮೋಕ್ಷಾಗುರುವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೫॥

ಎನ್ನ ಮನವನಚೈತ್ರ
ಎನ್ನ ಘನಸುಖಪಾತ್ರ
ಎನ್ನ ಭವವೆಂಬ [೬]ವಾರಿಧಿಭೈತ್ರವೆ[೬]
ಎನ್ನ ಜ್ಞಾನದ ನೇತ್ರ

೧ ನಿಧಿಯೆ (ಕ) ೨ ಗೆ (ಗ) ೩ ಬಂಧುಬಳಗ (ಕಗಚ) ೪ ಸುಖ (ಆಇ) ೫ ಸತಿ (ಅ) ೬ ವಾರಿಧಿಗೆ ಭೈತ್ರ (ಧಾ)



ಎನ್ನ ಪುಣ್ಯದ ಗಾತ್ರ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೬॥

ಎನ್ನನಿಲ್ಲಿಗೆ ತಂದು
[೧]ಭಿನ್ನ[೧]ವನು ಮಾಡಿದ್ಯೆ
ಅನ್ಯವೇ ನಾ ನಿನಗೆ ಹೇಳು ಗುರುವೆ
[೨]ಎನ್ನೊಡನೆ[೨] ನುಡಿಯದಿರೆ
ನಿನ್ನನಾ ಭವಭವದಿ
ಬೆನ್ನ ಬಿಡುವೆನೆ ಷಡಕ್ಷರಿಲಿಂಗವೇ ॥೭॥

೧ ಖಿನ್ನ (ಆಇ) ೨ ಎನ್ನೊಳಗೆ (ಕಗಚ)

## ೫. ಎಲೆ ಆತ್ಮನೆ*

**ಕುಸುಮಷಟ್ಪದಿ**

ತನುವಿಡಿದ ದುಷ್ಕೃತವ
ನೆನಿತೆನಲು ಪೇಳುವೆನು
ಮನವೊಲಿದು ಕೇಳು ನೀನೆಲೆಯಾತ್ಮನೆ ॥ಪ॥

ಅನ್ನ ಉದಕದ ಚಿಂತೆ
ಎಣ್ಣೆ [೧]ನೀರಿನ[೧] ಚಿಂತೆ
ಬಣ್ಣ ಬಳಿದಾಭರಣ ತೊಡುವ ಚಿಂತೆ
ಮಣ್ಣುಮನೆಗಳ ಚಿಂತೆ
ಹೊನ್ನುಹೆಣ್ಣಿನ ಚಿಂತೆ
ಇನ್ನು ಪುತ್ರರ ಬೇಡಿ [೨]ಬಳಲ್ವ[೨] ಚಿಂತೆ ॥೧॥

ಅರಸುಗಳ ಭಯವಿದಕೆ
[೩]ಚರಿಪ[೩] ಚೋರರ ಭಯವು
ಮರಳಿ ಅಗ್ನಿಯ ಭಯವು ನೀರ ಭಯವು
ಉರಗ ವ್ಯಾಘ್ರನ ಭಯವು
ಅರಿ [೪]ರೋಗಗಳ[೪] ಭಯವು
ಕರಕಷ್ಟತನು[೫]ವಿದಕೆ[೫] ಭಯವು ನೋಡಾ ॥೨॥

* ಅ, ಇ–ಪ್ರತಿಗಳಲ್ಲಿ ಈ ಪದ ಇಲ್ಲ.

೧ ಬೆಣ್ಣೆ (ಚ) ಲವಣ (ಕ) ೨ ಬಹಳ (ಚ) ೩ ಇರದೆ (ಅಕಗಚ) ೪ ದೊರೆಗಳ (ಗ) ೫ ವಿಡಿದಿನಿತು (ಕ)



ಶೀತೋಷ್ಣಗಳ ಭೀತಿ
ಭೂತ [೧]ಪ್ರೇತದ[೧] ಭೀತಿ
ಓತು ನಡಿಯಲು ಮುಳ್ಳು [೨]ದಸಿಯ[೨] ಭೀತಿ
ಮಾತು [೩]ಮಥನದ[೩] ಭೀತಿ
ರಾತ್ರಿ [೪]ಹಗಲಿನ[೪] ಭೀತಿ
ಈ ತನುವ ಹಿಡಿದಿನಿತು ಭೀತಿ ನೋಡಾ ॥೩॥

ಆಗಲದಕೇ[೫]ನಿನಿತು[೫]
ಸಾಗಿಸಲು ನಿನಗಿ[೬]ವನು[೬]
[೭]ಆಗುವುದೆ[೭] ಧರೆ ಗಗನವುಳ್ಳತನಕ
ಆಗ ಹುಟ್ಟಿದ ಬಳಿಕ
ಬೇಗ ಸಾವೀ ತನುವ
ಹಾಗೆ [೮]ಮನವೇ ನೀನು[೮] ನಂಬಬಹುದೆ ॥೪॥

ಇಂತಪ್ಪ ತನುವಿನ
[೯]ಭ್ರಾಂತಿಯಳಿದ[೯]ಲಿಂಗ
[೧೦]ಚಿಂತೆ[೧೦]ಯೊಳಗಿರು ನಿನಗೆ ಸುಖ[೧೧]ವಪ್ಪುದು[೧೧]
ಮುಂತೆ [೧೨]ನಿನ್ನು[೧೨]ವನು ತ
ನ್ನಂತೆ ಮಾಡುವನೊಲಿದು
ಕಂತುಹರ ಶಿವಷಡಕ್ಷರಿಲಿಂಗವು ॥೫॥

೧ ಬ್ರಂಹರ (ಅಚ) ಬ್ರಹ್ಮನ (ಕಗ) ೨ ನಡುವ (ಧಾ) ೩ ಮಾರನ (ಧಾ) ೪ ಸುಳಿಯಲು (ಅಕಗಚ) ೫ ನೆನಲು (ಧಾ) ೬ ತನು (ಅಕಗಚ) ೭ ಆಗುಬಹುದೆ (ಅಕಗಚ) ೮ ತನುವೆ ನಿಮ್ಮ (ಕ) ೯ ಚಿಂತೆಯಳಿ (ಧಾ) ೧೦ ಭ್ರಾಂತಿ (ಧಾ) ೧೧ ತಪ್ಪದು (ಧಾ) ೧೨ ಎನ್ನುವನು (ಕ)

## ೬. ಎನ್ನ ಬರಿಸದಿರು*

**ಕುಸುಮಷಟ್ಪದಿ**

ಧರೆಯತ್ತ [೧]ಎನ್ನುವನು[೧]
ಬರಿಸದಿರು ಸದ್ಗುರುವೆ
ಧರೆಯ ಪಾಪದೊಳು ನಾ ಜನಿಸಲಾರೆ ||ಪ||

ಹುಸಿ ಕಳವು ಡಂಭಕವು
ನುಸುಳು [೨]ಆರಡಿ[೨] ತಳ್ಳಿ
ಹಿಸುಣಹೀನ [೩]ಅಪಹಾಸ್ಯ ಶಬ್ದಗಳು[೩]
ಕಿಸುಕುಳವು [೪]ಕೊರಚಾಟ[೪]
ವಿಷಮ ವಿಗಡವು ಕರುಬು
ಹೊಸಹುರುಡು ಜಾರರಾ [೫]ಜನ್ಮಾಲಯ[೫] ||೧||

ನಿರುದಯವು ನಿಷ್ಠುರವು
[೬]ದುರುಳತ್ವ[೬] ಥಾಳಕವು
[೭]ಪರಬಂಧಕವು ಡಂಭವಪವಾದವು[೭]
[೮]ನೆರೆಚೆಂಡಿತನ ಪೊಲಬು
ಪರಧನದ ವಂಚನೆಯು
ಪರರ ಕೆಡಿಸುವ ಸಿದ್ಧಿಗಳು ಮಂತ್ರದಾ[೮] ||೨||

* ಆ, ಇ – ಪ್ರತಿಗಳಲ್ಲಿ ಈ ಪದ ಇಲ್ಲ.

೧ ಲೆನ್ನನ್ನು (ಧಾ) ೨ ಮನಕಾಕುಳಿಯು (ಚ) ಪೂಸುಕ (ಗ) ಮನವು (ಕ) ೩ ದಯದ ಶಬ್ದಗಾರ (ಧಾ) ಅಪಶಬ್ದಾಗರ (ಕಗ) ೪ ಭೀಮರತಿ (ಕಗಚ) ೫ ಜನಿತಾಲಯ (ಅಕಗಚ) ೬ ಲುಬ್ಧತ್ವ (ಕಗಚ) ೭ ಬದ್ಧವು ಭಂಡರವಪಹಾರರು (ಕಗಚ) ೮ ಛಿದ್ರಕರು ಪರರರ್ಥ ವರ್ಧನರು, ವಂಚನೆಯು ಸಿದ್ಧಿಗಳು ಪರರ ಕೆಡಿಸುವ ಮಂತ್ರದಾ (ಕಗಚ)



ಹರನರ್ಚಕರು ಅಲ್ಪ
ಪರನಿಂದಕರು ಬಹಳ
ಗುರುಭಕ್ತರಲ್ಪ ಗರುವಿಗಳು [೧]ಬಹಳ[೧]
ಹರಶ್ರುತಿಯ ಬಿಟ್ಟು ತಾ
ನರ[೨]ಸ್ತುತಿಯ[೨]ಲಾಲಿಪರು
ನಿರಯದಾಲಯವಾಗಿ ತೋರುತಿಹರು ||೩||

ಪತಿವ್ರತೆಯರಿಲ್ಲ ಪರ
[೩]ಪತಿ[೩]ಮುಖಿಯರಿರುತಿಹರು
ಜಿತಕಾಮರಿಲ್ಲ ಅತಿಕಾಮರಿಹರು
ವ್ರತನೇಮಗಳು ಇಲ್ಲ
ಕೃತಕಿಗಳು ಘನವಯ್ಯ
ಕ್ಷಿತಿಯು [೪]ಅವಗುಣಿಗಳಿಗೆ[೪] ತವರುಮನೆಯು ||೪||

ಇಲ್ಲವೆನಬಾರದೆಲೆ
ಇಲ್ಲುಂಟು ಧರ್ಮಿಗಳು
ಕಲ್ಲೊಳಗೆ ಅಡಗಿರ್ಪ ಪರುಷದಂತೆ
ಖುಲ್ಲಮಾನವ ನಿನಗೆ
ಒಳ್ಳಿದರು ಕಾಣಿಸರು
ಒಲ್ಲೆ ಮರ್ತ್ಯ[೫]ವ[೫] ಷಡಕ್ಷರಿಲಿಂಗವೆ ||೫||

೧ ಘನವು (ಕಗಚ) ೨ ಶ್ರುತಿ (ಕಗ) ಸ್ತೃತಿಯ (ಧಾ) ೩ ಸತಿ (ಧಾ) ೪ ಪಾಪಕಾಶ್ರಯದ (ಕಗಚ) ೫ ರ (ಧಾ)

## ೭. ಕೇಳಕ್ಕ*

### ಕುಸುಮಷಟ್ಪದಿ

ನಮ್ಮ ಮನೆ ಕೇಳಕ್ಕ
ಬ್ರಹ್ಮ ಬಂದೆಡೆಗೊಂಡು
ನಮ್ಮ ಮನೆ [೧]ಸುತಬಂಧುಗಳ[೧] ಕೊಂದಿತು ॥ಪ॥

ಏಳು ಮಕ್ಕಳ [೨]ಕೊಂದು[೨]
ಏಳು ತೊತ್ತಿರ [೩]ಕೊಂದು[೩]
ಮೇಲ್ಯೆವರಣ್ಣಗಳ [೪]ಕೊಂದಿತಕ್ಕ[೪]
ಕಾಳಿನೊ[೫]ಳಗಿರುತಿರ್ಪ
ಜಾಳಿಗೆಲ್ಲವ ತಿಂತು[೫]
[೬]ಬಾಳಲೀಸದು ಮನೆಯನೆಲ್ಲರಂತೆ[೬] ॥೧॥

ಮೂರು ಕರುಗಳ [೭]ಕೊಂದು[೭]
ಮೂರು ಪಶುಗಳ [೮]ಕೊಂದು[೮]
ಮೂರ್ಯೆದು ಕೋಣಗಳ [೯]ಕೊಂದಿತಕ್ಕ[೯]
ಮೂರು ಸೊಸೆಯರ [೧೦]ಕೊಂದು[೧೦]
ಮೂರಳಿಯರನು [೧೧]ಕೊಂದು[೧೧]
ಕೇರಿಕೇರಿಗಳಲ್ಲಿ ಹರಿಯುತಿದೆಕೊ ॥೨॥

---

* ಆ, ಇ – ಪ್ರತಿಗಳಲ್ಲಿ ಈ ಪದ ಇಲ್ಲ.

೧ ಬಂಧುಗಳ (ಕಚ) ೨ ಕೊಂತು (ಅಕಗಚ) ೩ ಕೊಂತು (ಅಕಗಚ) ೪ ಕೊಂದಿಕ್ಕಿತೂ (ಅ) ೫ ಳು ತಿರುಗುವರ ಜಾಳಿನೆಲ್ಲರ ಕೊಂತು (ಕಗಚ) ೬ ಮನೆಯೊಳಗೆ ಒಬ್ಬರುಳಿಯದಂತೆ (ಚ) ೭ ಕೊಂತು (ಅಗಚ) ತಿಂತು (ಕ) ೮ ಕೊಂತು (ಅ) ತಿಂತು (ಕ) ೯ ಕೊಂದಿಕ್ಕಿತೂ (ಅ) ೧೦ ಕೊಂತು (ಅಕಗಚ) ೧೧ ಕೊಂತು (ಅಕಗಚ)



ಜಡೆಗಳನು ಕೆದರಿ ತಾ
ಹಿಡಿ[೧]ದು[೧] ಶೂಲ[೨]ದಿ[೨] ಪೆಣ[೩]ನ[೩]
ಬಿಡದೆ ಮೈಯೊಳು ಹಾಳವಳ ತೊಡರಿಸಿಹುದು
ಕಡಿದ ತಲೆ ಕರದೊಳಗೆ
[೫]ಮಡಿದ[೫] ತಲೆ ಕೊರಳೊಳಗೆ
ಬಿಡದೆನ್ನನಂಜಿಸುತ ಬರುತಲಿದೆಕೊ

ಇರುಳು ಸುಳಿಯಲಿಕಂಜಿ
ಪುರಮೂರು ಹಾಳಾಗಿ
ನೆರೆವ ಜನರುಗಳೆಲ್ಲ ಓಡಿತಕ್ಕ
ಪುರಪುರದ ಮಧ್ಯದಲಿ
ಉರಿವುತ್ತ ತಿರುಗುತಿದೆ
ಇರುಳು ನಾ ಕಣ್ಣುಚ್ಚಲಮ್ಮೆನವ್ವ

[೬]ಇನ್ನೇನನೆನ್ನುವೆನು[೬]
ಬೆನ್ನ ಬಿಡದಕ್ಕಯ್ಯ
ತನ್ನ[೭]ನಗಲುವಳೆಂದು[೭] ಹಿಂದುಮುಂದು
ಎನ್ನ ಕಾದಿರುತಿಹುದು
ತನ್ನ ಹೆಸರೇನೆನಲು
[೮]ಚೆನ್ನಿಗ[೮] ಷಡಕ್ಷರಿಯ ಲಿಂಗವಂತೆ ॥೫॥

---

೧ ದ (ಕಗಚ) ೨ ದ (ಕಗಚ) ೩ ನು (ಕಗಚ) ೪ ವು (ಕ) ೫ ಅರಿದ (ಅಗಚ) ೬ ಇನ್ನುವೆಯನ್ನುವನು (ಗಚ) ೭ ಅಗಲಿದಳೆಂದು (ಅ) ೮ ಚಂನ (ಅಕಗಚ)

## ೮. ಮಾಯೆ ನೀನತಿ ಚೆಲುವೆ*

**ಕುಸುಮಷಟ್ಪದಿ**

ಮಾಯೆ ನೀನತಿ ಚೆಲುವೆ
ಕಾಯ ಮುನ್ನವೆ ಚೆಲುವು
ಹೇಯವಾಯಿತು ಒಳಗನರಿತ ಬಳಿಕ ॥ಪ॥

ನಿನ್ನ ಮುಖ ಚಂದ್ರನೊಲು
ನಿನ್ನಕ್ಷಿ ಕಮಲದಳ
ನಿನ್ನ ಕುಚ ಪೊಂಗಳಸದಂತೆ ಮಾಯೆ
ನಿನ್ನಂಗ ಕನಕಲತೆ
ನಿನ್ನಧರ ಬಿಂಬಫಲ
ನಿನ್ನನೀಕ್ಷಿಸಿ ಸೋಲದವರಾರೆಲೆ ॥೧॥

ನಿನ್ನ ಮೃದುವಚನಕಂ
ನಿನ್ನ ದೈನ್ಯೋಕ್ತಿಗಂ
ನಿನ್ನ ಕಡೆ[೧]ಗಣ್ಣೋ[೧]ಟದಾ ಭಾವಕೆ
ನಿನ್ನ ನಸುಮುನಿಸಿಗಂ
ನಿನ್ನ ಚಾತುರ್ಯಕಂ
ನಿನ್ನ [೨]ಬೆಳುನಗೆಗೆ ಸೋಲದವರಾರು[೨] ॥೨॥

* ಆ, ಇ – ಪ್ರತಿಗಳಲ್ಲಿ ಈ ಪದ ಇಲ್ಲ.

೧ ಣ್ಣನೋ (ಕಗಚ) ೨ ಬೇಳುವೆಗೆ ಸಿಲುಕದವರಾರೂ (ಅ) ಬೆಳುನಗೆ ಸಿಲುಕದವರಾರಲೆ (ಕಗಚ)



ಅಣ್ಣ ತಮ್ಮನು ತಂದೆ
[೧]ಚೆನ್ನ[೧]ಪುತ್ರನು ಅಳಿಯ
[೨]ಇನ್ನುಳ್ಳ[೨] ಪುರುಷರಾದವರೆಲ್ಲರ
ನಿನ್ನ ಮೋಹವು ಎಂಬ
ಉನ್ನತದ ಪಾಶದಲಿ
ತಿಣ್ಣನೇ ಬಿಗಿದಿರ್ಪೆ ನುಸುಳ್ವರಾರು ॥೩॥

ನಿನ್ನೊಳಗೆ ಕಾಲನಿಹ
ನಿನ್ನೊಳಗೆ ಕಾಮನಿಹ
ನಿನ್ನೊಳಗೆ [೩]ನೇಣು ಕತ್ತರಿಗಳಿಹವು[೩]
ನಿನ್ನೊಳಗೆ ವಿಷವಿಹುದು
ನಿನ್ನೊಳಗೆ [೪]ನರಕಗಳು[೪]
ಇನ್ನು ನಿನ್ನನು ಗೆಲುವರಾರು ಮಾಯೆ ॥೪॥

[೫]ಕಾಮ ಕಾಲಗಳಿಂ[೫] [೬]ನಿ
ರ್ನಾಮ ಮಾಡುವ[೬] ಮಾಯೆ
ಭೀಮನೆನಿಸುವ ಷಡಕ್ಷರಿಲಿಂಗವ
ನಾ ಮರೆಯಹೊಕ್ಕೆ[೭]ನೆಲೆ[೭]
[೮]ಭೀ ಮಾರಿ ಹೋಗುತ್ತ[೮]
ನೀ [೯]ಮುನ್ನ[೯] [೧೦]ದುಶ್ಚರಿತಳೆಂದರಿದೆನು[೧೦] ॥೫॥

೧ ತನ್ನ (ಅಕಗಚ) ೨ ಇನ್ನುಳಿದ (ಕಗಚ) ೩ ನೆಳಲು ಕತ್ತಲೆಗಳಿಹವೂ (ಅಕಗಚ) ೪ ಸವಿ ಇಹುದು (ಕಗಚ) ೫ ಕಾಮ ಕಮಲಾದಿ (ಅಕಚ) ೬ ಮೋಹದಿ ಕಾಡುತಿಹ (ಚ) ನಿರ್ನಾಮ ಕಾಡುವ (ಕಗ) ೭ ನೆರೆ(ಅ) ೮ ಕಾಮಾರಿ ಹೊಗದಂತೆ (ಅ) ೯ ಮಾಡುವ (ಕ) ೧೦ ದುಶ್ಚರಿತೆಗಳನರಿದೆನು (ಕ) ದುಶ್ಚರಿತೆಯೊಳಗರಿದೆನು (ಧಾ)

## ೯. ಇನ್ನೆನಗೆ ಭಯವುಂಟೆ*

**ಕುಸುಮಷಟ್ಪದಿ**

ಎನ್ನ ಕಾಯವು ನಿನಗೆ
ಉನ್ನತಾಲಯವಾಯಿ
ತಿನ್ನೆನಗೆ ಭಯವುಂಟೆ ಎಲೆ ಲಿಂಗವೇ ॥ಪ॥

ಎನ್ನ ಕಾಲುಗಳೆರಡು
[೧]ಉನ್ನತದ[೧] ಕಂಭವೈ
ಎನ್ನ ಒಡಲೇ ನಿಮಗೆ ದೇವಾಲಯ
ಎನ್ನ ತೋಳುಗಳೆರಡು
ಉನ್ನತದ ಮದನಕ್ಕೆ
ಎನ್ನ ಶಿರ [೨]ಸೌ[೨]ವರ್ಣಕಲಶವಯ್ಯ ॥೧॥

ಎನ್ನ ಕಿವಿ ಕೀರ್ತಿಮುಖ
ಎನ್ನ ನಾಲಿಗೆ ಘಂಟೆ
ಎನ್ನ ನಯನಗಳೆರಡು ಜ್ಯೋತಿ ನಿಮಗೆ
ಎನ್ನ ಮುಖವೇ ದ್ವಾರ
ಎನ್ನ ದಂತವೇ ಅ[೩]ದ[೩]ಕೆ
[೪]ಮಿನ್ನುತಿಹ[೪] [೫]ಮೌಕ್ತಿಕದ[೫] ಸೂಸಕಗಳು ॥೨॥

* ಆ, ಇ, ಕ – ಪ್ರತಿಗಳಲ್ಲಿ ಈ ಪದ ಇಲ್ಲ.

೧ ಉನ್ನತ (ಗ) ೨ ಸೂ (ಗ) ೩ ವ (ಗ) ೪ ಮಿನುಳ್ಳ (ಗ) ಇನ್ನುಳಿದ (ಚ) ೫ ಮೌಕ್ತಿದ (ಗ)



ಎನ್ನಧರ ಜವಳಿಗದ
ಎನ್ನ ನಾಸಾಪುಟವು
[೧]ಸನ್ನಿಧಿಯ[೧] ಸೌರಭ್ಯ [೨]ವೆರಸಿಗಾಳಿ[೨]
ಚೆನ್ನಾಗಿ ಬೀಸು[೩]ತಿಹ[೩]
ಹೊನ್ನ ಜಾ[೪]ಳೇಂ[೪]ದ್ರವೈ
[೫]ಇನ್ನುಳ್ಳ[೫] [೬]ಉಪಕರಣವೆಂತೆಂದೆನೆ[೬] ॥೩॥

ಎನ್ನ ಸಮತೆಯೆ ಜಲವು
ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ
ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು ॥೪॥

ಇಂತಪ್ಪ ಪೂಜೆಯನು
[೭]ಸಂತಸ[೭]ದಿ ಕೈಕೊಳುತ
ಕಂತುಹರ ಶಿವಷಡಕ್ಷರಿಲಿಂಗವು
ಮುಂತೆ ಎನ್ನೊಳಗೆ ನಿ–
ಶ್ಚಿಂತನಾಗಿರುತಿರಲು
ಚಿಂತೆಯುಂಟೇ ಹಲವು ಭವಭೀತಿಯ ॥೫॥

೧ ನನ್ನಿಯಿಂ (ಧಾ) ೨ ರಸಘಟಿತವು (ಧಾ) ೩ ವ (ಧಾ) ೪ ಳ (ಚ) ಳಿ (ಗ) ೫ ಇನ್ನುಳಿದ (ಗಚ) ೬ ಉಪಚಾರವೆಂತೆಂದೊಡೆ (ಚ) ೭ ಸಂತತಂ (ಗ)

# ೧೦. ಘನಮಹಿಮಲಿಂಗವೆ

## ಕುಸುಮಷಟ್ಪದಿ

ಘನಮಹಿಮಲಿಂಗವೇ
ಅ[೧]ನು[೧] ಪ್ರಾಣಿ ಎನ್ನ ಕರ
ವನಜಕ್ಕೆ ಬಂದು ಚುಳುಕಾದಿರಲ್ಲ ||೧||

ತರಣಿಕೋಟಿಪ್ರಭೆಯ
ಕಿರಿದೆನಿಪ ಬೆಳಗಿನಾ
ವರಹೇಮಶೈಲಾಗ್ರದೊಳಗೊಪ್ಪುವ
ಹರಗಣಂಗಳ ಸುಖವ
ನೆರೆಯುಳಿದು ಎನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ ||೧||

ಹರಿಯಜರ ತಿಂಥಿಣಿಯು
ಸುರರುಗಳ ಮೊತ್ತವಾ
ವರಮುನೀಶ್ವರರುಗಳ ಸಂತಾನದ
ಹರುಷದಾನಂದದೊಳು
[೨]ಇರದು[೨]ಳಿದು ಎನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ ||೨||

೧ ಣು (ಕ) ೨ ನೆರೆಯು (ಧಾ)



ಹರಿಗೆ ನಿಲುಕದ ಚರಣ
[೧]ಸರಸಿಜಭವನಿಗೊಮ್ಮೆ[೧]
[೨]ಅರಸಿ ಕಾಣದ[೨] ನಿಮ್ಮ [೩]ಶ್ರೀ[೩] ಮುಕುಟವು
ಪರಮವಾಚಾತೀತ
ಕಿರಿದಾಗಿ ಎನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ ||೩||

ಮಡದಿ ಗಿರಿ[೪]ಜಾತೆಯನು[೪]
ತೊಡೆಯ ಮೇಲಿಂದಿಳುಹಿ
ಒಡನೆ [೫]ಗುಹ[೫]ಗಣ[೬]ಪವೀರೇಶರೆನಿಪ
ಕಡುಮೋಹದತಿ ಸುತರ
[೭]ಬಿಡುತೆನ್ನ[೭] [೮]ಕರದೊಳಗೆ
ಒಡೆಯರೊಡೆಯನೆ ಬಂದು[೮] ಚುಳುಕಾದಿರಲ್ಲ[೫] ||೪||

ಎನ್ನಲ್ಲಿಯುಪಚಾರ
ವಿನ್ನೇನು ನಿಮಗುಂಟು
ಸನ್ನುತದ ಶಿವಷಡಕ್ಷರಿಲಿಂಗವೆ
ಎನ್ನ ಮನ ಪ್ರಾಣಗಳು
ಹೊನ್ನುಹಾವಿಗೆ[೯]ಯಾಗಿ[೯]
ನಿನ್ನ ಚರಣಕೆ ಯೋಗ್ಯ [೧೦]ಮೆಟ್ಟಾಗಲಿ[೧೦] ||೫||

೧ ಸರಸಿಜೋದ್ಭವಗೆ (ಅ) ಸರಸಿಜಭವನೊಮ್ಮೆ (ಧಾ) ಸರಸಿಜೋದ್ಭವಂಗೊಮ್ಮೆ (ಕ) ೨ ಅರಸಿಕೊಳ್ಳದ (ಅ) ಅರಸಿತೋರದ (ಕ) ೩ ನಿಜ (ಕ) ೪ ಜಾತೆಯಳ (ಅ) ಜಾತೆಯಂ (ಕ) ೫ ಪರಿರೆಸರ್ವರೆನಿಪಾ ಕಡುಮೋಹ ರೀತಿ ಸುಖ ಮೃಡನೆನ್ನ ಕರದೊಳಗೆ ಯೆಡೆಗೈದಿ ಬಳಲಿ ಚುಳುಕಾದಿರಲ್ಲಾ (ಅ) ೬ ಗಣರಾಯ (ಧಾ) ೭ ಮಡಗೆನ್ನ (ಗಚ) ಮಡುಗೆನ್ನ (ಕ) ೮ ಕರಪದ್ಮದೆಡೆಗೈದಿ ಬಂದು (ಕ) ಕರದೊಳಗೆ ಎಡಗೈದಿ ಬಳಲಿ (ಗಚ) ೯ ಮಾಡಿ (ಕಗಚ) ೧೦ ಮೆಟ್ಟಿಗಮಿಸಿ (ಕಗಚ)

# ೧೧. ಉಳುಹಿರಯ್ಯ

**ಕುಸುಮಷಟ್ಪದಿ**

ಭವಕಾಟಕಾರದ[೧]ಲೆ[೧]
ಶಿವಶರಣರ ಮನೆಯ
ತವೆ ದ್ವಾರದೊ[೨]ಳು[೨] ಬಿದ್ದೆನುಳುಹಿರಯ್ಯ ॥ಪ॥

[೩]ಹೇಸಿ[೩] ಮಾನವ ನಾನು
ಭಾಷೆವಂತನು ಅಲ್ಲ
ಈಶನೊಳು ಸಲುಗೆ [೪]ಎಂತಪ್ಪುದಯ್ಯಾ[೪]
ಘಾಸಿಯಾದೆನು ಭವದಿ
ಓಸರಿಸದೇ ಎನ್ನ
ಈಶನಂಘ್ರಿಗೆ ಒಲಿದು ಸಲಿಸಿರಯ್ಯಾ ॥೧॥

ಉದ್ಧರಿ[೫]ಸುವರ[೫] ಕಾಣೆ
ಇದ್ದೆಸೆಯ ಕೆಡಿಸಿದೆನು
ಹೊದ್ದು[೬]ವೆನು[೬] ಇನ್ನಾವ ದೆಸೆಯ ನಾನು
ಬಿದ್ದೆ ನಿಮ್ಮಂಗಳದಿ
ಉದ್ಧರಿಸಿಯಲ್ಲದೊಡೆ
ಒದ್ದು [೭]ಕಡೆಗೆ[೭]ನ್ನನ್ನು ನೂಕಿರಯ್ಯಾ ॥೨॥

೧ ದೆ (ಕಗಚ) ೨ ವನು (ಚ) ೩ ದ್ವೇಷಿ (ಕ) ೪ ಯೆನಗೆಂತಪ್ಪುದೋ (ಧಾ) ೫ ಸಿದರ (ಕ) ೬ ವದು (ಕ) ೭ ಕಡೆಯಕೆ (ಕಗಚ)



ನೀತಿಯರಿಯದೆ ನಾನು
ಪಾತಕದ [೧]ನಡೆಯಲ್ಲಿ[೧]
ಭೂತಳ[೨]ದೊಳಂ[೨] ನಡೆದ ಗತಿಯಾವುದು
ಓತು ಕರುಣಿಸಿ ನೀವು
ಪಾತಕಾಭ್ರಕೆ ಜಂಝು
ವಾತ[೩]ರೆಂಬುದ[೩] ಕೇಳಿ ಬಂದೆ[೪]ನಯ್ಯಾ[೪] ॥೩॥

ತಪ್ಪ ನೋಡದೆ ಎನ್ನ
ಒಪ್ಪವಿಟ್ಟು ನಡೆಸಿ
ತಿಪ್ಪೆಯನು ಬಗೆದಲ್ಲಿ ಏನಿಪ್ಪುದು
ಸರ್ಪಧರ ನಿಮಗಂಜಿ
ಇಪ್ಪೆನಾಗಿಯು ನಿಮಗೆ
ಅಪ್ಪದಪ್ಪದದೊಂದು ಉಂಟೆ ಹೇಳಿ ॥೪॥

ಎಲ್ಲಾ ಪುರಾತನರು
ಎಲ್ಲಿ ನೆನೆದಲ್ಲಿ ಎ–
ನ್ನಲ್ಲಿ ಇಪ್ಪುದ ನಾನು ಬಲ್ಲೆನಾಗಿ
ಇಲ್ಲಿ ನತನಾಗಿ ನಾ–
ನಿಲ್ಲಿ ಕೃಪೆಯನು ಪಡೆ[೫]ವೆ[೫]
ಸಲ್ಲಲಿತ ಶಿವಷಡಕ್ಷರಿಲಿಂಗವೆ ॥೫॥

೧ ಕಡೆಯಲ್ಲಿ (ಕ) ೨ ದೊಳು (ಕಗಚ) ೩ ವೆಂಬುದ (ಧಾ) ೪ ನಾನು (ಧಾ) ೫ ದೆ (ಧಾ)

# ೧೨. ಸರ್ವಾಂಗವನು ಸಲಿಸುವೆನು

**ಕುಸುಮಷಟ್ಪದಿ**

ಎನ್ನ ಸರ್ವಾಂಗವನು
[೧]ನಿನ್ನ[೧] ಪರಿಣಾಮಕ್ಕೆ
ಚೆನ್ನಾಗಿ [೨]ಸಲಿಸುವೆನು[೨] ಎಲೆ ಲಿಂಗವೆ ॥ಪ॥

[೩]ಎನ್ನ ಹೃದಯವು ನಿಮಗೆ[೩]
ಉನ್ನತದ ಮನೆಯಯ್ಯ
ಎನ್ನ ಮುಖ [೪]ಮುಖ[೪]ಶಾಲೆ ನಿಮ[೫]ಗಪ್ಪುದು[೫]
ಎನ್ನ ನವಚಕ್ರಗಳು
ಬಿನ್ನಣದ ನವನೆಲೆಯು
ಹೊನ್ನ ಉಪ್ಪರಿಗೆಯಾಗಿಪ್ಪುದಯ್ಯ ॥೧॥

ಎನ್ನ ಹೃತ್ಕಮಲ[೬]ವದು[೬]
ರನ್ನ ಖಚಿತಗಳಪ್ಪ
ನಿನ್ನ ಶಯನಕೆ ಮಂಚವಾಗಿರ್ಪುದು
ಎನ್ನ ಜ್ಞಾನವು [೭]ನಿಮಗೆ[೭]
ಉನ್ನತದ ತಲೆ[೮]ಗಿಂಬು[೮]
ಎನ್ನಯಾಚಾರವೇ [೯]ಚರಣಭಟನು[೯] ॥೨॥

೧ ಎನ್ನ (ಅ) ನಿಮ್ಮ (ಕಚ) ೨ ಅರ್ಪಿಸುವ (ಕ) ೩ ಚರಣಪೂರ್ತಿ ಬಿಟ್ಟಿದೆ (ಆಇ) ೪ ಮುಖ (ಕಚ) ೫ ಗೊಪ್ಪುವಾ (ಕಚ) ೬ ವೆ (ಕ) ೭ ನಿನಗೆ (ಆಇ) ೮ ದಿಂಬು (ಕಗಚ) ೯ ನಿನಗೆ ಚರಣ ಭಟವು (ಆಇ)



ಎನ್ನ [೧]ಶ್ರೋತ್ರವು[೧] ನಿಮ್ಮ
[೨]ಸನ್ನುತದ[೨] ನುಡಿಗಳನು
ಭಿನ್ನವಿಲ್ಲದೆ ಕೇಳ್ವ ದಾಸಿ ನಿಮಗೆ
ಎನ್ನ ತ್ವಕ್ಕದು ಚಲುವ
ನಿನ್ನ ಚರಣವ [೩]ತೊಳೆವ[೩]
ಮನ್ನಣೆಯ ತೊತ್ತಾಗಿ ಇರ್ಪುದಯ್ಯ ॥೩॥

ಎನ್ನ ನಯನವು ನಿಮಗೆ
ರನ್ನವೆಳಗಿನ [೪]ಜ್ಯೋತಿ[೪]
ಎನ್ನ ಪ್ರಾಣವು ನಿಮಗೆ [೫]ಗಂಧಭರಣಿ[೫]
ಎನ್ನ [೬]ಜಿಹ್ವೆಯು ನಿಮಗೆ
ಮನ್ನಣೆಯ ತಾಂಬೂಲ
ಹೊನ್ನಪಡಿಗಮದಾಗಿ ಮೆರೆದಿರ್ಪುದು[೬] ॥೪॥

ಎನ್ನ [೭]ಕರಗಳು[೭]ಯೆರಡು
[೮]ನಿನ್ನ[೮] ಪಾದವನೊಲಿದು
ಚೆನ್ನಾಗಿ [೯]ತೊಳೆವಂಥ[೯] ಹೆಂಗಳಯ್ಯ
ಎನ್ನ ಕಾಲುಗಳೆರಡು
ನಿನ್ನ ಮಜ್ಜನಗಳಿಗೆ
ಪನ್ನೀರುಗಳ ತರುವ ತೊತ್ತಿರಯ್ಯ ॥೫॥

೧ ಸ್ತೋತ್ರ (ಆಇಚ) ೨ ವುನ್ನತದ (ಆಇಕಗಚ) ೩ ತೊಡೆವ (ಗಚ) ೪ ಚಲತಿ (ಆ) ೫ ದೃಢಭರಣಿ (ಅ) ೬ ನಾಸಾಪುಟವು ಹೊನ್ನ ಜಾಳಿಂದ್ರವೈ ನನ್ನಿಯಿಂ ಸೌರಭ್ಯವೆರದ ಗಾಳಿ (ಆಇಕ)
ನಿಮ್ಮ ತಂಬುಲ ಉಗುಳ್ವ ಸಲೆ ಹೊನ್ನ ಪಡಿಗವಾಗಿಪ್ಪುದೈಯಾ (ಚ)
ಶಿವನೆನ್ನ ತಂಬುಲನುಗುಳ್ವ ಹೊನ್ನಪಡುಗಮದಾಗಿ ಮೆರೆದಿರ್ಪುದು (ಗ)
೭ ತೋಳುಗಳು (ಚ) ಕೈಗಳು (ಧಾ) ೮ ನಿಮ್ಮ (ಕ) ೯ ತೊಳೆದಿರ್ಪ (ಧಾ)

ಎನ್ನ ಪ್ರಾಣವು [೧]ಇದುವೆ[೧]
[೨]ನಿನ್ನ[೨] ರತಿಸುಖಗಳಿಗೆ
ಭಿನ್ನವಿಲ್ಲದೆಯಿಪ್ಪ [೩]ಸತಿಯು ಬಳಿಕ[೩]
ಎನ್ನ ಮನವದು ಬಿಡದೆ
ಎನ್ನ ನಿನ್ನನು ತಂದು
ಚೆನ್ನಾಗಿ ಒಂದು[೪]ಗೂಡಿಪ[೪] ಕೆಳದಿಯು ||೬||

ಇಂತು ಸರ್ವಾಂಗವನು
[೫]ಮುಂತೆನ್ನ[೫] ಪ್ರಾಣವನು
ಸಂತತಂ ಲಿಂಗ ತಾ ಕೈಕೊಳುತಿರೆ
[೬]ಭ್ರಾಂತಿ [೭]ಭ್ರಮೆ[೭]ಯಳಿಯಿತ್ತು[೬]
ಚಿಂತೆಯಿನ್ನೇಕಯ್ಯ
ಕಂತುಹರ ಶಿವಷಡಕ್ಷರಿಲಿಂಗವೆ ||೭||

---

೧ ಬಲಿದು (ಕಗಚ) ವಲಿದು (ಆಇ) ೨ ನಿಮ್ಮ (ಕಚ) ೩ ಸಖಿಯೆ ನಾನು (ಆಇ) ೪ ಗೂಡುವ (ಕಗಚ) ೫ ಮುಂದೆ ಮನ (ಗ) ಮುಂದೆ ಪುನ (ಆಇ) ಮುಂತೆ ಮನ (ಕಚ) ೬ ಭ್ರಾಂತು ಭಾವಳಿಯಿತ್ತು (ಚ) ೭ ಭಯ (ಕ)



## ೧೩. ಶಿವನೊಳಗೆ ಮೋಹವಿರೆ ತಾನೆ ಶಿವನು

**ಕುಸುಮಷಟ್ಪದಿ**

ಶಿವನೊಳಗೆ ವಿಶ್ವಾಸ
ಶಿವನೊಳಗೆ ನಂಬಿಗೆಯು
ಶಿವನೊಳಗೆ ಮೋಹವಿರೆ ತಾನೆ ಶಿವನು ||ಪ||

ಕುರಿಯ ಹಿಕ್ಕೆಯ ತಂದು
ಹರನೆಂದು [೧]ಭಾವಿಸುತ[೧]
ಕುರಿಯ ಹಾಲ[೨]ನು[೨] ಕರೆದು ತಂದರೆಯುತ
ಇರುತಿರಲು [೩]ತಂದೆ ತಾ[೩]
ಪರಿತಂದು [೪]ಕೆಡಿಸಲು[೪]
[೫]ಶಿರವರಿದ[೫] ವಿಶ್ವಾಸವನು ನೋಡಿರೆ ||೧||

[೬]ಭೂಮಿಯೊಳಗ[೬]ಭಿಮಾನ
ಕಾಮಿನಿಯ[೭]ರಿಂದೆಂದು[೭]
[೮]ಸೋಮಧರ[೮] ಚರರೂಪಿನಿಂದ ಬಂದು
[೯]ಕಾಮಿನಿಯ[೯] [೧೦]ಬೇಡಿತ್ತ[೧೦]
[೧೧]ಭೂಮೀಶ[೧೧] ಬಲ್ಲಾಳ
[೧೨]ನಾ[೧೨] ಮಹಾ ವಿಶ್ವಾಸವನು ನೋಡಿರೆ ||೨||

---

೧ ಭಜಿಸುತ್ತಾ (ಆಇ) ೨ ನೆ (ಕ) ೩ ತಂದೆ ಶಿವ (ಅ) ತಂದೆ (ಗ) ೪ ಕೇಳಿ ಭಲ (ಅ) ಕೆಡಿಸಲ್ಕೆ (ಕ) ೫ ಶಿರವೊಲಿದ (ಅ) ೬ ಭುವನದೊಳು (ಅಆಇ) ೭ ರಿಂದಿಲ್ಲ (ಅಗಚ) ರಿಂದೆಲ್ಲ (ಕ) ಭುವನೇಶ (ಆಇ) ೯ ಯುವತಿಯನು (ಆಇ) ೧೦ ಬೇಡಿದೊಡೆ ಇತ್ತ (ಚ) ೧೧ ಭುವಿನಾಥ (ಆಇ) ಭೂಮಿಪನು (ಕ) ಯಾಮಿಪನು, ಬಲ್ಲವನು (ಕ) ೧೨ ತವೆ ಮಹಾ (ಆಇ) ಆ ಮಹಾ (ಅಚ)

ಏಣಾಂಕಧರ[೧]ನಿರವು[೧]
[೨]ಊನವಾಗಲು ಕಂಡು[೨]
[೩]ಕ್ಷೋಣೀಶ ತನ್ನ[೩] ಕರಯುಗವ ಕಡಿದು
[೪]ಕ್ಷೋಣಿಯೊಳು ನುತಿವೆತ್ತು[೪]
ಜಾಣ ಕರ[೫]ಗಳ[೫] ಪಡೆದ
ಬಾಣ[೬]ನೆಂಬನ[೬] ನಂಬುಗೆಯ ನೋಡಿರೆ ॥೩॥

[೭]ಹಾಲು[೭] ಪಾಯಸ ತನ್ನ
ನಾಲಿಗೆಗೆ [೮]ಸವಿಯಾಗೆ[೮]
ಬಾಲೆ [೯]ತಾನುಂಬುವದನುಳಿದು[೯] ಬಳಿಕ
ಲೀಲೆಯಿಂದಲಿ [೧೦]ತಾನು[೧೦]
[೧೧]ಶೂಲಿಗುಣಿಸಿದಳೊಮ್ಮೆ[೧೧]
[೧೨]ಚೋಳಿಯಕ್ಕನ[೧೨] ಮೋಹವನು ನೋಡಿರೆ ॥೪॥

ಇಂತಪ್ಪ ವಿಶ್ವಾಸ
ಇಂತಪ್ಪ ನಂಬುಗೆಯ
ಇಂತಪ್ಪ ಮೋಹ ತನಗಿಲ್ಲದನಕ
ಸಂತ[೧೩]ತದಿ[೧೩] ಲಿಂಗವನು
ಮುಂತೆ ಪೂಜಿಸುತಿರಲು
ಎಂತೊಲಿವನಾ [೧೪]ಷಡಕ್ಷರಿ[೧೪]ಲಿಂಗವು ॥೫॥

೧ ಇರಲೂ (ಆಇಕಗಚ) ೨ ವೂನ್ಯವಾಕಲು (ಆಇ) ವೂಣೆಯಾಗದು ಎನುತ (ಅಗಚ) ೩ ಕೇಣಸರಕಾಗಿ (ಆಕಗಚ) ೪ ಕ್ಷೋಣಿಯನು ನಿಲ್ಲಿಸಿಯೆ (ಅ) ಕ್ಷೋಣಿಯರಿಯಲು ನುತಿಸಿ (ಕಗಚ) ೫ ವನು (ಕಗಚ) ೬ ನಂಬಿದ (ಕಚ) ನಂಬಿ (ಗ) ೭ ಹಾಲ (ಗಚ) ೮ ಸವಿಯಲಾ (ಅ) ಸವಿಸವಿದು (ಧಾ) ೯ ತಾನುಂಬುದನೆ ಉಳಿದು (ಗಚ) ೧೦ ಕಳುಹಿ (ಕಗಚ) ೧೧ ಶೂಲಿಗುಣಿಸದಳು ತಾನೊಮ್ಮೆ (ಆಇ) ದನಮ್ಮ (ಕಗಚ) ಕಳುಹಿ ಶೂಲಿಗುಣಿಸಿದನಮ್ಮ (ಅ) ೧೨ ಚೋಳಿಯಕ್ಕನವರು (ಕ) ೧೩ ತಂ (ಕಗಚ) ೧೪ ಷಡಾಕ್ಷರ (ಕಗಚ)



## ೧೪. ವರವ ಬೇಡುವೆನೊಂದು

**ಕುಸುಮಷಟ್ಪದಿ**

ಹರನೆ ನಾ ನಿಮ್ಮಲ್ಲಿ
ವರವ ಬೇಡುವೆ[೧]ನೊಂದು[೧]
ಶರಣರಿಗೆ ಭೃತ್ಯನಾಗಿರಿಸೆನ್ನನು ॥ಪ॥

ಅವರಲ್ಲಿ ಶಿವನಿಹನು
[೨]ಶಿವನಿರ್ದೊಡಲ್ಲಿ ತಾ[೨]
ತವೆ ಸಕಲಶರಣಗಣ ಮೆರೆದಿಪ್ಪುದು
[೩]ಅವರ ಅಂಗಳ[೩] ನಿತ್ಯ
ಶಿವಲೋಕವಾಗಿಹುದು
ಅವರ ಘನಕಿನ್ನೇನ ಸರಿಯ ಕಾಣೆ ॥೧॥

ಅವರ ಕಿಂಕರನಾಗಿ
ಅವರ ಪಾದವ ತೊಳೆದು
ಅವರ [೪]ಪಡಿಗವ[೪] ಬೆಳಗಿ ತೊಳೆದು ತಂದು
ಅವರ ಹಾವುಗೆವಿಡಿದು
ಅವರಡಿ[೫]ಗಳನು[೫] ಒರೆಸಿ
ಅವರಿಚ್ಛೆಯೊಳಗಿರ್ಪ ವರವ [೬]ಶಿವನೆ[೬] ॥೨॥

೧ ನೊಂದ (ಕಚ) ೨ ಶಿವನು ತಾನಿರ್ದಲ್ಲಿ (ಚ) ೩ ಅವರಂಗಳವೆ (ಕ) ಅವರಂಗಣವು (ಗಚ) ೪ ಹಾವಿಗೆ (ಚ) ೫ ಗಳಂ (ಕಗ) ೬ ಎನಗೆ (ಅಆಇ) ನೆನಗೆ (ಕಚ)

ಅವರುಂಡು [೧]ಮಿಕ್ಕುದನು[೧]
ಅವರುಟ್ಟು ಬಿಟ್ಟುದನು
[೨]ಅವರುಗಿದ[೨] ತಾಂಬೂಲವ [೩]ಸವಿದು[೩] ನಾನು
ಅವರಂಗಳವ ಗುಡಿಸಿ
ಅವರ ಬಾಗಿಲ ಕಾಯ್ದು
ಅವರ [೪]ಕೀಳಲಿ[೪] ಸೇರಿಕೊಂಡಿರ್ಪುದ ||೩||

ಅವರ ಎತ್ತಾಗಿ ನಾ
ನವರ ತೊತ್ತಾಗಿ ನಾ
ನವರ ಪಶುವಾಗಿ ನಾ ಸುಖ[೫]ಮಿಪ್ಪುದ[೫]
ಅವರ ಬಾಗಿಲೊಳಿರ್ಪ
ತವೆ[೬]ಸೊಣಗ[೬] ನಾನಾಗಿ
[೭]ಅವರ[೭] ಚರಣದ [೮]ಧೂಳಿ ತೊಡೆದಿ[೮]ರ್ಪುದ ||೪||

ಶಿವ ನಿಮ್ಮ ಘನ[೯]ಕಿಂತ[೯]
ಅವರ ಘನವತ್ಯಧಿಕ
ಅವರಂಗ[೧೦]ಳ[೧೦] ದ್ವಿತಿಯ ಕೈಲಾಸವು
ಅವರ ನಾ ಭವಭವದಿ
ತವೆಬಿಡದೆ ಇರ್ಪುದನು
ಶಿವಷಡಕ್ಷ[೧೧]ರಿವರನೆ[೧೧] ಪಾಲಿಸೆನಗೆ ||೫||

೧ ವಕ್ಕುದನು (ಕ) ೨ ಅವರೊಸಿದ (ಆಇ) ೩ ಸಲಿಸಿ (ಆಇ) ೪ ಕಿರುಳಲಿ (ಚ) ೫ ದಿರ್ಪುದ (ಧಾ) ೬ ಊಳಿಗ (ಆ) ಸುನಕನಾಗಿ (ಕಚ) ೭ ನಾನವರ (ಕಗಚ) ೮ ಧೂಳದೂಳಾಗಿ (ಕಗ) ಧೂಳಿನೊಳಗಿ (ಚ) ೯ ದಿಂದ (ಧಾ) ೧೦ ಳವೆ (ಕಗಚ) ೧೦ ರವರವ (ಕ)



## ೧೫. ಎಲ್ಲರಲಿ ಒಂದೊಂದ ಬೇಡಿಕೊಂಬೆ*

**ಕುಸುಮಷಟ್ಪದಿ**

ಎಲ್ಲ ಶರಣರ ನೆನೆದು
ಇಲ್ಲಿ ನಾ ನತನಾಗಿ
ಎಲ್ಲ[೧]ರನು ಒಂದೊಂದು[೧] ಬೇಡಿಕೊಂಬೆ ||ಪ||

ಭಕ್ತಿಯಿಲ್ಲದ [೨]ಧರ್ಮ[೨]
[೩]ವ್ಯರ್ಥವಾಗುವದೆಂದು[೩]
ಭಕ್ತಿತ್ರಯವ ಕಲಿಸಿ [೪]ಮುಕ್ತನೆನಿಸಿ[೪]
ಮುಕ್ತಿಪದವಿಗೆ [೫]ಸಂದ[೫]
ಕರ್ತೃ [೬]ಬಸವೇಶನತಿ[೬]
ಭಕ್ತ [೭]ಭಿಕ್ಷೆಯ[೭] ನೀಡಿ [೮]ಸಲಹೆನ್ನನು[೮] ||೧||

ಶಿವನೊಳಗೆ [೯]ಪ್ರಾಣವನು[೯]
ತವೆಬೆರಸಿ [೧೦]ಹೊರಗಳಿದು[೧೦]
[೧೧]ಶಿವ[೧೧]ಬೆಳಗಿನೊಳು [೧೨]ಪರಮತಪವನ್ನೈದಿ[೧೨]

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ.

೧ ರಲಿ ಒಂದೊಂದ (ಕ) ರಲ್ಲೊಂದೊಂದ (ಗ) ರನ್ನೊಂದೊಂದ (ಚ) ೨ ಧರೆಯು (ಕಗಅ) ೩ ವ್ಯರ್ಥವಾಗಿರುತಿರಲು (ಕಚ) ವ್ಯಕ್ತವಾಗಿರುತಿರಲು (ಅಗ) ೪ ಮುಕ್ತರೆನಿಸಿರಿ (ಅಕಗಚ) ೫ ತಂದ (ಅಕಗಚ) ೬ ಬಸವನೆ ನಿಮ್ಮ (ಕ) ಬಸವೇಶನಿಂ (ಗಚ) ೭ ಕ್ಷವ (ಕಗಚ) ೮ ಸಲವು ಎನ್ನಾ (ಅಕಗಚ) ೯ ಪ್ರಾಣಮನ (ಅಕಗಚ) ೧೦ ಹೋರಳಿದು (ಅ) ೧೧ ಶಿವನ (ಕಗಚ) ೧೨ ಪರವಶವನ್ನೈದಿ (ಗಚ) ಪರವಶವನ್ನೈದು(ಕ)

ಶಿವ[೧]ನು[೧] ತಾನಾಗಿರ್ದ
ಶಿವಸಿದ್ಧರಾಮಯ್ಯ
[೨]ಶಿವಯೋಗ[೨] ಭಿಕ್ಷೆಯನು ನೀಡು ಎನಗೆ ॥೨॥

ಉರ್ವಿ[೩]ಪತಿಯಂ[೩] ಬಿಟ್ಟು
ನಿರ್ವಾಣಯು[೪]ತೆಯಾಗಿ[೪]
ಸರ್ವಕರಣೇಂ[೫]ದ್ರಿಯದ[೫] ಗುಣ[೬]ಗಳಳಿ[೬]ದು
[೭]ಪರ್ವತೇಶನ[೭] ಬೆರೆ[೮]ದ[೮]
ಸರ್ವಸುಖಿ ಮಹದೇವಿ
ನಿರ್ವಾಣಭಿಕ್ಷವನು ನೀಡು ಎನಗೆ ॥೩॥

ಇಂಬರಿದು ಶಿವನೊಳಗೆ
ಸಂಭ್ರಮದ ನುಡಿಗಲಿತು
ಕುಂಭಿನಿಯ [೯]ಜನರೊಳಗೆ[೯] ನುಡಿಗಳರಿತು
ಗಂಭೀರ[೧೦]ನಾಗಿ[೧೦] ಸ್ವ
ಯಂಭುವಹ ಅಜಗಣ್ಣ
ಗಂಭೀರಭಿಕ್ಷವನು ನೀಡು ಎನಗೆ ॥೪॥

ನಮ್ಮ ಶರಣರು ಬಹಳ
ಧರ್ಮಿಗಳು ನಿರ್ಮಳರು
ಒಮ್ಮೆಯುಂ ಭಿಕ್ಷವನು ಇಲ್ಲೆನ್ನರು
[೧೧]ಸಮ್ಮಾನ ಸರ್ವಗುಣ[೧೧]
ಧರ್ಮಭಿಕ್ಷವನುಂಡು
ನೆಮ್ಮುವೆನು ಶಿವಷ[೧೨]ಡಕ್ಷರಿ[೧೨]ಲಿಂಗವ ॥೫॥

---

೧ ಅಶನವನು (ಕಗ) ೨ ಪುರಹರನೆ (ಚ)

೩ ಒಡೆಯನ (ಕ) ೪ ಯುತಳಾಗಿ (ಕ) ೫ ಗಳಾದಿ (ಕ) ಯದ (ಗಚ) ೬ ವನ (ಕಗಚ) ೭ ಪಾರ್ವತೀಶನ (ಕಗಚ) ೮ ದು (ಧಾ) ೯ ಮನುಜರೊಳು (ಕಗಚ) ೧೦ ವಾಗಿ (ಚ) ೧೧ ನಮ್ಮ ಸಂರಕ್ಷಿಸುವ (ಧಾ) ೧೨ ಡಾಕ್ಷರ (ಕಗಚ)



## ೧೬. ಮುಂದೆ ಏನಪ್ಪುದೋ*

**ಕುಸುಮಷಟ್ಪದಿ**

[೧]ತನುವಿನಾ ಗುಣವು[೧] [೨]ನಿ
ಮ್ಮನು[೨] ನೆನೆಯಲೀಯ[೩]ದಲೆ[೩]
ಘನಮಹಿಮನೇ ಮುಂದೆ ಏನಪ್ಪುದೋ ॥ಪ॥

ಅರಣ್ಯದೊಳಗಿಹನೆ
ಧೀರತನವೆನಗಿಲ್ಲ
ಊರೊಳಗಿಹನೆ ವಾಗ್ವಿಷಯ ಘನವು
[೪]ಮಾರಾರಿ ನಿಮ್ಮುವನು
ಸೇರಲೀಯದು ಮನವು
ಗಾರಾದೆ ನಾಮುಂದೆ ಏನಪ್ಪನೋ[೪] ॥೧॥

ಇರುಳು ನಾ ನೆನೆವೆನೆನೆ
ಇರುಳು ನಿದ್ರೆಯ ಜಡವು
[೫]ಇರದೆ ಹಗಲೆನಗೆ ವ್ಯವಹರದ ಹಸಿವು[೫]
ತೊರೆಯಲಾರೆನು [೬]ಅಶನ[೬]
ತರುಬಲಾರೆನು ನಿದ್ರೆ
[೭]ಮರಳಿ[೭] ನಾಮುಂದೆ ಇನ್ನೇನಪ್ಪೆನೋ ॥೨॥

---

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ.

೧ ತನುಗುಣವು (ಅಕಗಚ) ೨ ನಿಮ್ಮುವನು (ಗಚ) ಎನ್ನನು (ಕ) ೩ ವು ಎನ್ನ (ಗಚ) ದುನಿಮ್ಮ (ಕ) ೪ ಮಾರಾರಿ ನೀ ಬೇರೆ ಸೇರೆ ನಾನೆಂದೊಡಂ ಯಾರು ನಾ ಮುಂದಕ್ಕೆ (ಧಾ) ಬೆರೆ ಬೆರೆಯನೆಂದೊಡಂ ಗಾರಾಗಿ ನಾ ಮುಂದೆ (ಗಚ) ೫ ಇರಲೆನಗೆ ಹಗಲು ವ್ಯಾಪಾರ ಹಸಿವು (ಧಾ) ೬ ಅಶನವನು (ಕಗ) ೭ ಪುರಹರನೆ (ಚ)

[೧]ಘನವ ನಾ ನೆನೆವೆನೆನೆ
ಮನ ಹಲವು ನೆನೆವುತಿದೆ
ಮನವ ಹಿಡಿತರುವನಕ ನಿಮಗೆ ಮುನಿಸು
[೧]ಮನಭೋಗ ಬಯಸುವದು
ತನು ಸೊಬಗಿಗೆಳಸುವದು
ಘನಮಹಿಮ ನಾ ಮುಂದೆ ಏನಪ್ಪನೋ[೧] ॥೩॥

[೨]ಅಂಗವನು[೨] ವೇಷದಲಿ
ಶೃಂಗರಿಸಿ ಫಲವೇನು
[೩]ಲಿಂಗದೊಳು[೩] ಮನ ಪ್ರಾಣ ಬೆರೆಯದನಕ
ಅಂಗಜಾರಿಯೆ ಎನ್ನ
ಸಂಗವನು ನೀನೊಲ್ಲೆ
ಲಿಂಗವೇ ನಾ ಮುಂದೆ ಏನಪ್ಪೆನೋ ॥೪॥

ಮನವು ಬೇರೆನ್ನುವನು
[೪]ಜಿನುಗಿ[೪] ಕಾಡುತ್ತಲಿದೆ
[೫]ನೆನಹಿಂಗೆ[೫] ಬಾರದಿರೆ ನೀನೆನ್ನುವ

೧ ಚ ಪ್ರತಿಯಲ್ಲಿ ಇಲ್ಲ.

ತನುಭುಜಗನಿಂ ಸತ್ತ ಮನವಾಳ್ದ ತರುಣಿಯೊಳು ಯೆನಗಾಯ್ತು ನಾ ಮುಂದೆಯೇನಪ್ಪೆನೊ (ಅ)

ತನುಭುಜಗನ ಸಂತವನು ಮಾಳ್ಪ ತರುಣಿಯೊಲು ಎನಗಾಯ್ತು ನಾ ಮುಂದೆ ಏನಪ್ಪೆನೊ (ಗಕ)

೨ ಅಂಗವಿದ (ಅಕಗ) ೩ ಲಿಂಗದಲಿ (ಧಾ) ಅಂಗದಲಿ (ಅ) ೪ ಜಿನು ಜಿನುಗಿ (ಗಚ) ನೆರೆ ಜಿನುಗಿ (ಕ) ೫ ಅರುಹಿಂಗೆ (ಕ)



ಅನವರತ [೧]ಕಾಡುತಿಹೆ[೧]
[೨]ಅನುಪ್ರಾಣಿ ನೀ ಕರುಣ
ವನು ಮಾಡು ಶಿವ[೨] ಷಡಕ್ಷರಿಲಿಂಗವೆ ॥೫॥

೧ ಕಾಡುವಿಯೊ (ಧಾ) ೨ ಪೊರೆಯಯ್ಯ ಕಾಡುವ ನೆರೆಮಾಯವನು ಬಿಡಿಸಿ ಕರುಣವನು ಮಾಡು (ಕ) ಅಣು ಪ್ರಾಣಿ ಎನ್ನುವನು ಕರುಣದಿಂದಲಿ ಸಲಹು (ಚ) ಅಣುಪ್ರಾಣಿ ನಾ ಕರುಣವನು ಮಾಡು (ಗ)

ಮರೆಬೇಡ ಎನ್ನುವನು ನೆರೆ ಜಿನುಗಿ ಕಾಡುತಿದೆ
ಅರುಹಿಂಗೆ ಬಾರದೆ ನೀನೆನ್ನುವಾ ಪೊರೆಯಯ್ಯ ಕಾಡುವ
ನೆರೆ ಮಾಯವನು ಬಿಡಿಸಿ ಕರುಣವನು ಮಾಡು
ಷಡಾಕ್ಷರ ಲಿಂಗವೆ (ಕ ಪ್ರತಿಯಲ್ಲಿ ಈ ರೀತಿ ಇದೆ)

## ೧೭. ಮಗಳೆ ಎನ್ನಯ ಮಾತು ಕೇಳು

**ಕುಸುಮಷಟ್ಪದಿ**

ಮಗಳೆ ಎನ್ನಯ ಮಾತು
ಮಿಗೆ ಕೇಳು ನಿನ್ನಾಳ್ದ ಪ
ನ್ನಗರಾಜ ವಿಷವ ತಾಳ್ದನು ಕೊರಳೊಳು ॥ಪ॥

[೧]ಎಲ್ಲರಂತವನಲ್ಲ[೧]
ಬಲ್ಲಿದನು ನಿನ್ನ ಮನ
ದೊಲ್ಲಭನು ಅಂಗವಿದ್ಯೆ[೨]ಗಳೆಲ್ಲವ[೨]
ಸಲ್ಲಿಸುತ್ತೊಳಗೊಳಗೆ
ಮೆಲ್ಲಗೆಡೆಯಾಡುತಿರು
ನಿಲ್ಲದಿರು ಹೊರಗೆ ರಚ್ಚೆಯ ಬಳಸದೆ ॥೧॥

ಇನನುದಯ ಕಾಲಕ್ಕೆ
ಮನೆಯ ಕಸವನು ತೆಗೆದು
[೩]ಅಣಿ[೩]ಮಾಡು ಕರಣತಂಡುಲವ ತಳಿಸು
ಮನೆಯೊಳಗೆ ಕತ್ತಲೆಯ
[೪]ಇ[೪]ನಿತನೆಸಗಲು ಬೇಡ
ಮುನಿದಡವ ರಕ್ಕಸನು ನಿನ್ನಾಳ್ದನು ॥೨॥

೧ ಯಾರಂತವನಲ್ಲ (ಆಇ) ೨ ವನೆಲ್ಲವಾ (ಆಇ) ೩ ಅನು (ಆಇ) ೪ ಎ (ಧಾ)



ನೀ ಮುಗ್ಧೆ ನಿನ್ನಾಳ್ದ
ಕಾಮಾರಿ ಆತ್ಮಗಿಳಿ
ರಾಮನನು ಓದಿಸೌ ಹೊರಗಾಡದೆ
ನಾ ಮುನ್ನಲಂಜುವೆನು
[೧]ನೀ ಮಾತುಗಳ ಕೇಳು[೧]
ಸೋಮಧರ ಕೋಪಿಸಿದಡೆಲ್ಲಡಗುವೆ ॥೩॥

ಕಾಲ ಪಿಡಿವೊಡೆ ಅವಗೆ
ಕಾಲಿಲ್ಲ ಮೇಲ್ವಾಯ್ದು
ಬಾಲೆ ನೀ ಹಿಡಿವಡವಗೊಡಲು ಇಲ್ಲ
ಎಳ್ಳನಿತು [೨]ಬೇ[೨]ಸರವ
ತಾಳುವವನಲ್ಲ ಕಟು
ಶೂಲಿ ಮುನಿದಡೆ ತಿಳುಪಲರಿಯೆ ಮಗಳೆ ॥೪॥

ಮತಿ ಮಸುಳದಿರು ಮಗಳೆ
ಪತಿ ಕೋಪಿಸುವನು ಪತಿ
ವ್ರತೆಯರೊಳು ಗೆಳೆತನವ ಮಾಡು ನೀನು
ಪತಿ ಕಾಮಜಿತ [೩]ನೀನು[೩]
ಅತಿಕಾಮಿಯಾತನನು
ಸತಿ ಕೇಳು ನೀನಿಂತು ಅಗಲಬೇಡ ॥೫॥

ಕಡುತವಕಿ ನಿನ್ನ ಪತಿ
ಬಿಡು ಬೇಸರಾಡದಿರು
ಒಡಗೂಡು ದಿವರಾತ್ರಿಗಳು ಎನ್ನದೆ
ತಡಮಾಡದಿರು ಮಗಳೆ
ಒಡನೆ ಮುನಿದರೆ ಬಳಿಕ
ಮಡದಿ ನೀನೆಂತವನ ತಿಳುಪಿ ನೆರೆವೆ ॥೬॥

೧ ನೀ ಮಗಳೆ ನಿಜಹೇಳು (ಧಾ) ೨ ವಾ (ಆಇಕ) ೩ ತಾನು (ಆಕ)

ಮನೆಯೊಳಗೆ ಹಚ್ಚಿಯುರಿ–
ಯನೆ ಪಟುವನೆ ಮಾಡು
ಅನಿತರೊಳಗಾಗಿ ನಿನ್ನಾಳ್ದಗೊಲಿದು
ಮನಶುದ್ಧದಲಿ ಮಾಡು
ಘನಭಕ್ತಿಬೋನವನು
ಇನಿಯನಿಂಗೆಡೆಮಾಡು ಅದಕೊಲಿವನು ॥೭॥

ಮೂರು [1]ಕೋಣೆ[1]ಗಳೊಳಗೆ
ಮೂರು ಜ್ಯೋತಿಯ ಬೆಳಗು
ಆರೈದು ಮಧ್ಯ ಕೋಣೆಯ ಮನೆಯೊಳು
ಮಾರಾರಿಯನು ನೀನ
ಪಾರ ಸುಖದೊಳು ಹೊಂದಿ
ನಾರಿ ನೀನಿರು ಇಹವ ಪರವರಿಯದೆ ॥೮॥

ಇಂತು ಪತಿಯೊಳಗೊಂದಿ
ಸಂತತಂ ಇರುತಿರಲು
ಕಂತುಹರ ಶಿವಷಡಕ್ಷರಿಲಿಂಗವು
ಮುಂತೆ ನಿನ್ನುವನು ತ
ನ್ನಂತೆ ಮಾಡುವನೊಲಿದು
ಕಾಂತೆ ನೀನಂಬಿ ನಚ್ಚಿರು ಬೆದರದೆ ॥೯॥

೧ ಕೋಟೆ (ಆ)



## ೧೮. ನಮಗೆ ಸರಿಯದಾರು

**ಕುಸುಮಷಟ್ಪದಿ**

ಶಿವ ಶರಣರಾ ಮನೆಯ
ತವೆ[1]ಸೇವೆಯನು[1] ಮಾಡಿ
ಭವವ [2]ಗೆದ್ದನು[2] ಎನಗೆ ಸರಿಯದಾರು ॥ಪ॥

ಬಸವೇಶ್ವರನು ಚನ್ನ
ಬಸವೇಶ್ವರನು ಕರುಣಿ
ದಸರಯ್ಯ ಮೋಳಿಗೆಯ ಮಾರಯ್ಯನ
ಮಸಣಯ್ಯಗಳ ಮನೆಯ
ಕಸವ ಗುಡಿಸುವ [3]ಮಹಾ[3]
ಹೊಸಸೇವಕರು ನಮಗೆ ಸರಿಯದಾರು ॥೧॥

ಚೆನ್ನಯ್ಯನಗ್ಗಣಿಯ
ಹೊನ್ನಯ್ಯ ಗಾಣದಾ
ಕನ್ನಯ್ಯ ಧೂಳಿದೇವರು ಬೇಡರ
ಕಣ್ಣಯ್ಯಗಳ ಮನೆ
ಉನ್ನತದ ಸೇವಕರು
ಇನ್ನು [4]ಧರೆಯೊಳು ನಮಗೆ[4] ಸರಿಯದಾರು ॥೨॥

೧ ಸೇವೆಗಳ (ಆಇ) ೨ ಕಳೆದವು (ಕ) ೩ ಂತ (ಕ) ೪ ಧರಣಿಯೊಳೆಮಗೆ (ಕ)

[೧]ಹಳ್ಳಯ್ಯ[೧] ಮಧುವಯ್ಯ
ಬಳ್ಳೇಶಮಲ್ಲಯ್ಯ
ಗೊಲ್ಲಾಳದೇವ ಹಾವಿನಹಾಳಿನ
ಕಲ್ಲಯ್ಯಗಳ ಮನೆಯ
ಹುಲ್ಲುಸೊಪ್ಪನೆ ತರುವ
ಬಲ್ಲಿದರು ನಮಗಿನ್ನು ಸರಿಯದಾರು ॥೩॥

ಬಾವೂರು ಬೊಮ್ಮಯ್ಯ
ದೇವರಾ ದಾಸಯ್ಯ
[೨]ಭಾವಿಗಳು ಜಗದೇವ ಮೊಲ್ಲೆಬೊಮ್ಮ[೨]
ಆವಾವ ಜಗದೊಳಗೆ
ಆ [೩]ವಂದ್ಯರಾ[೩] ಮನೆಯ
ಸೇವಕರು ನಮಗಿನ್ನು ಸರಿಯದಾರು ॥೪॥

ಚಿಕ್ಕಯ್ಯ ಡೋಹರಾ
ಕಕ್ಕಯ್ಯ ಸೊಡ್ಡಳಾ
ಯ್ದಕ್ಕಿಯಾ ಮಾರಯ್ಯ ರಾಮಯ್ಯನು
ಚಕ್ಕುಲಿಗೆ ನಾಗಯ್ಯ
ಅಕ್ಕರಿನ ತೊತ್ತಿನಾ
ಮಕ್ಕಳಪ್ಪೆವು ನಮಗೆ ಸರಿಯದಾರು ॥೫॥

ಹಾದರದ ಬೊಮ್ಮಯ್ಯ
ಮಾದಾರ ಧೂಳಯ್ಯ
ಮೇದಾರ ಕೇತಯ್ಯ ವಹಿಲಯ್ಯನ
ಆದಯ್ಯಗಳ ಮನೆಯ
[೪]ಕಾದು[೪]ಕೊಂಡಿರುವಂಥ
[೫]ಆದಿಕರು[೫] ನಮಗಿನ್ನು ಸರಿಯದಾರು ॥೬॥

೧ ಹರಳಯ್ಯ (ಧಾ) ೨ ಜಗದೇವ ಮಲ್ಲಯ್ಯ ಬೊಮ್ಮಣ್ಣನ (ಧಾ) ೩ ಗಣಂಗಳ (ಆಇಕ) ೪ ಕಾಯ್ದು (ಆಇ) ೫ ಆದಿಗರು (ಆಇ)



ಸಾಮವೇದಿಯ ಸಿದ್ಧ
ರಾಮಯ್ಯ ಮಯದುನಾ
ರಾಮಯ್ಯ ಏಕಾಂತರಾಮಯ್ಯನ
ಭೀಮಯ್ಯಗಳ ಮನೆಯ
ಆ ಮಹಾಸೇವಕರು
ಈ ಮಹಿಯೊಳೆಮ[೧]ಗಿನ್ನು[೧] ಸರಿಯದಾರು ॥೭॥

ಮೊರನದಾ ವೆಮ್ಮಯ್ಯ
ಮೊರಟದಾ [೨]ಬಂಕಯ್ಯ[೨]
ತಿರುನೀಲಕಂಠಯ್ಯನಣುಮೂರ್ತಿಯು
ಗುರುಮಲ್ಲಿಕಾರ್ಜುನರ
ವರಪಂಡಿತರ ಮನೆಯ
[೩]ತುರುಗಾಹಿಗರು[೩] ನಮಗೆ ಸರಿಯದಾರು ॥೮॥

ಬಂಕಯ್ಯ ಶಿವರಾತ್ರಿ
ಸಂಕಯ್ಯ ಹೊಡೆಹುಲ್ಲ
ಬಂಕಯ್ಯ ಮರುಳುವೇಷದೊಳೊಪ್ಪುವ
ಶಂಕರೇಶ್ವರನ ವರ
ಕಿಂಕರರ ಕಿಂಕರರ
ಲೆಂಕರಪ್ಪೆವು ನಮಗೆ ಸರಿಯದಾರು ॥೯॥

ಕುಂಬಾರ ಗುಂಡಯ್ಯ
ಅಂಬಿಗರ ಚೌಡಯ್ಯ
ಕೆಂಭಾವಿ ಭೋಗಯ್ಯ ಶ್ವಪಚಯ್ಯನ
ಮುಂಬಾಗಿಲನು ಕಾಯ್ವ
ನಂಬಿಗೆಯ ಸೇವಕರು
ಕುಂಭಿನಿಯೊಳೆಮಗಿನ್ನು ಸರಿಯದಾರು ॥೧೦॥

೧ ನಮಗೆ (ಆ ಇ) ೨ ಬಂಕಿದೇವಯ್ಯ (ಆಇ) ೩ ಕರುಗಾಯಿಗರು (ಆಇ)

ಮಳೆಯ ರಾಜನು ಚೋಳ
ವಲಘಾಂಡ ನೈನಾರು
[1]ಕಲಿನಾಥನಾ[1] [2]ಚಾರಮಾ[2] ನಂಬಿಯರ
[3]ಕಳೆವೆತ್ತ ಚಂಗಳೆಯ[3]
ಒಳಬಾಗಿಲು ಕಾಯ್ವ
ಸಲುಗೆವಾಳರು ನಮಗೆ ಸರಿಯದಾರು ॥೧೧॥

ಸಿರಿಯಾಳ ಕಲಿಯಾರ
ಗುರುಭಕ್ತ ನವನಂದಿ
ಅರಿಯಮನುವಾಳು ನಮಿತಾಂಡಾರ್ಯರ
ಮೆರೆಮಿಂಡದೇವರಾ
ಚರಣ ರಕ್ಷೆಯ ಪಿಡಿದು
ವರವ ಪಡೆವರು ನಮಗೆ ಸರಿಯದಾರು ॥೧೨॥

ಚೋಳಕ್ಕ ದುಗ್ಗಳೆಯು
ನೀಲಲೋಚನೆ ಚೆಲ್ವ
ಸೂಳೆ ನಂಬಿಯು ಕಮಳೆ ಸೋಮವ್ವೆಯಾ
ಕಾಳು ಜೈನವ ಬಿಟ್ಟ
ಲೋಲ ವೈಜವ್ವೆಯಾ
ಆಳುಗಳು ನಮಗಿನ್ನು ಸರಿಯದಾರು ॥೧೩॥

ಅಕ್ಕನಾಗಮ್ಮನ ಸ
ತ್ಯಕ್ಕ ಚಂಗಳೆ ಚೆಲ್ವೆ
ಅಕ್ಕರೆಯ ಮಹದೇವಿ ಸುಗ್ಗವ್ವೆಯಾ

೧ ಕಲಿಗಣನಾಥ (ಆಇ) ೨ ಬಾರಮ (ಆಇ) ೩ ಕಳೆಚೆಂಗು ಪೆರುಮಳೆಯ (ಆಇ)



ಚಿಕ್ಕಕೊಡಗೂಸಿನವ
ರಕ್ಕರಿನ ತೊತ್ತಿನಾ
ಮಕ್ಕಳಪ್ಪೆವು ನಮಗೆ ಸರಿಯದಾರು ॥೧೪॥

ಇಂತಪ್ಪವರ ಬಂಟ
ನಿಂತು ಭವದಲಿ ಬಂದ
ನಂತೆಯೆಂದರೆ ನಿಮಗೆ ಕೊರತೆಯಯ್ಯ
ಮುಂತೆ ನಮ್ಮವನೆಂದು
ಸಂತೋಷದಿಂದಪ್ಪು
ಕಂತುಹರ ಶಿವಷಡಕ್ಷರಿಲಿಂಗವೆ ॥೧೫॥

## ೧೯. ಹೆದರಿ ನುಡಿಯಲಮ್ಮೆನು

### ಭೋಗಷಟ್ಪದಿ

ಮುದದಿ ಶರಣರುಗಳ ನಡಿಗೆ
ಇದಿರನುಡಿಯ ನುಡಿಯ[೧]ದವರು[೧]
ಪದುಳದಿಂದ ನುಡಿದ ಮಾಳ್ಕೆಯಿಂದ ನುಡಿವೆನು ॥ಪ॥

ಕಡಿದ ಕೊನರು [೨]ಚಿಗುರಿ[೨]ತೆನಲು
ಕಡಿದ ಕೊನರು [೩]ಚಿಗುರಿ[೩]ತೆಂಬೆ
[೪]ಮಡಿದ ಮನುಜ[೪]ನೆದ್ದನೆನಲು ಎದ್ದನೆಂಬೆನು
ಕಡಿದ ಶಿರವು ಹತ್ತಿತೆನಲು
ಕಡಿದ ಶಿರವು ಹತ್ತಿತೆಂಬೆ
ಬಿಡದೆ ಬರಡು ಕರೆಯಿತೆನಲು ಕರೆಯಿತೆಂಬೆನು ॥೧॥

ಉರಗ[೫]ನೇವುಳಾ[೫]ಯಿತೆನಲು
ಉರಗ ನೇವುಳಾಯಿತೆಂಬೆ
ಗರಳ ಮಧುರವಪ್ಪುದೆನಲು ಅಪ್ಪುದೆಂಬೆನು
ಬರೆದ ಚಿತ್ರ [೬]ನುಡಿಯಿ[೬]ತೆನಲು
ಬರೆದ ಚಿತ್ರ [೭]ನುಡಿಯಿ[೭]ತೆಂಬೆ
ಉರಿದ ವೃಕ್ಷ ಚಿಗುರಿತೆನಲು ಚಿಗುರಿತೆಂಬೆನು ॥೨॥

೧ ಲವರು (ಕ) ೨ ಚಿಗಿಯಿ (ಆಇ) ೩ ಚಿಗುತಿ (ಕ) ೪ ಮಡಿದ ಮನುಗೆದ್ದ (ಆಇ) ಮಡಿದ ಮನುಜ ಎದ್ದ (ಅ) ಮಡಿದ ಮನುಜ (ಕಗಚ) ೫ ನೆವಳ (ಕಗಚ) ಲ್ಯಾವಳ (ಆಇ) ೬ ನಡೆಯಿತೆನಲು (ಆಇಕಗ) ೭ ನಡೆ (ಕಗ)



ಇಟ್ಟ[೧]ಹಣ್ಣ[೧] ಮಧುರವೆನಲು
ಇಟ್ಟಹಣ್ಣು ಮಧುರವೆಂಬೆ
ಸುಟ್ಟಬೀಜ ಬೆಳೆಯಿತೆನಲು ಬೆಳೆಯಿತೆಂಬೆನು
ನೆಟ್ಟ ಪ್ರತಿಮೆ ನಡೆಯಿತೆನಲು
ನೆಟ್ಟ ಪ್ರತಿಮೆ ನಡೆಯಿತೆಂಬೆ
ಹೊಟ್ಟೆ ಶಿಶುವು ನುಡಿಯಿತೆನಲು ನುಡಿಯಿತೆಂಬೆನು ॥೩॥

ಜಡಜಸಖನ ತಡೆದರೆನಲು
ಜಡಜಸಖನ ತಡೆದರೆಂಬೆ
ಕಡಿದ ಹಸ್ತ ಚಿಗುರಿತೆನಲು ಚಿಗುರಿತೆಂಬೆನು
ಮಡಿಯದವನು ಮಡಿದನೆನಲು
ಮಡಿಯದವನು ಮಡಿದನೆಂಬೆ
[೨]ಕಡೆದ ಪ್ರತುಮೆ[೨] ನಡೆಯಿತೆನಲು ನಡೆಯಿತೆಂಬೆನು ॥೪॥

ಒಡನೆ ದಿಟವ ನುಡಿಯುತಿರಲಿ
ಬಿಡದೆ ಸಟೆಯ ನುಡಿಯುತಿರಲಿ
[೩]ಕಡಿ[೩]ಯಲವರು ಅಲ್ಲ ಅಹುದು ಎನ್ನಲಮ್ಮೆನು
ಮೃಡಷಡಕ್ಷರಾಂಕ ಬಂದು
ಕೆಡಹಿ ನಾಲಿಗೆಯನು [೪]ಹಿಡಿದು[೪]
ಬಿಡದೆ [೫]ಕೀಳ್ವನೆಂದು[೫] ಹೆದರಿ ನುಡಿಯಲಮ್ಮೆನು ॥೫॥

೧ ಮಣ್ಣು (ಆಇ) ೨ ಕಡಿದ ಮರವು (ಧಾ) ೩ ಕಡೆ (ಕಗಚ) ೪ ಪಿಡಿದು (ಆಇ) ೫ ಕೀಳ್ವೆನೆನಲು (ಆಇ)

## ೨೦. ವಿಕಸವಾಗಲಿ

### ಭೋಗಷಟ್ಪದಿ

ಇಂದ್ರಿಯಂಗಳಿಚ್ಛೆಗಳಿಗೆ
ಮುಂದುವರಿದು [೧]ಮನವು[೧] ಕೆಟ್ಟು
ಇಂದುಧರನ ಕಡೆಗೆ [೨]ಮುಖವದಾಗಲೀಯದು[೨] ॥ಪ॥

ಪಿಕನ ಚೆಲ್ವ ಗಾನ ಧ್ವನಿಯ
[೩]ಶುಕನ[೩] ಶಿಶುವಿನಂತೆ ನುಡಿವ
ಸಖಿಯರುಗಳ ನುಡಿಗೆ ಕಿವಿಯು [೪]ಕಿವುಡು[೪] ಬೀಳಲ್ಕೈ
ಸಕಲ ಶಿವನ ಶಾಸ್ತ್ರಗಳನು
[೫]ಪ್ರಕಟವಾಗಿ[೫] ಕೇಳಿಕೇಳಿ
ಸುಖಿಸುವದಕೆ ಎನ್ನ [೬]ಶ್ರೋತ್ರ[೬] ವಿಕಸವಾಗಲ್ಕೈ ॥೧॥

[೭]ಹೊನ್ನಿನಲಗಿ[೭]ನಂತೆ ಹೊಳೆವ
ಕನ್ನೆಯರುಗಳಂಗ ಸೋಂಕ
ಲೆನ್ನ ತನುವು ಕಲ್ಲುಮರನ ಭಾವವಾಗಲ್ಕೈ
ಚೆನ್ನ ಶಿವನ ಚರಣಧೂಳಿ
ಯನ್ನು ಪೂಸಿ ಹೊರಳುವದಕೆ
ಎನ್ನ ತನುವು ಉಬ್ಬಿಕೊಬ್ಬಿ ವಿಕಸವಾಗಲ್ಕೈ ॥೨॥

೧ ತನುವು (ಆಇ) ೨ ಮುಖವದಾಗಲೊಯ್ಯನೆ (ಆಇಕಗಚ) ೩ ಸುಖದ (ಆಇ) ಶಕುನ (ಧಾ) ೪ ಬಳಸುತಾ (ಅ) ೫ ಪ್ರಕಟ ಮನಕೆ (ಆಇ) ೬ ಸ್ತೋತ್ರ (ಆಇ) ೭ ಹೊಂನಲಗೆ (ಆಇ) ಹೊನ್ನು ಹಲಿಗೆ (ಅ)



[೧]ತೊಳಪಗಣ್ಣ[೧] ಕಳಶಕುಚದ
ಎಳೆಯಪೆಣ್ಣ ನೋಡುವುದಕೆ
ಹೊಳೆವ ನಯನವೆರಡು ಎನಗೆ ಕುರುಡು ಬೀಳಲ್ಕೈ
ಎಳೆಯಚಂದ್ರಧರನ ಚೆಲುವ
[೨]ನಲಸದೊಲಿದು[೨] ನೋಡುವುದಕೆ
[೩]ಕಳೆಗಳಾಗಿಯೆನ್ನ[೩]ನಯನ ವಿಕಾಸವಾಗಲ್ಕೈ ॥೩॥

ಅಂಬುಜಾಕ್ಷಿಯರುಗಳಧರ
ಚುಂಬನಕ್ಕೆ ಎನ್ನ ಜಿಹ್ವೆ
[೪]ಹಂಬಲಿಸದ[೪] ಹಾಗೆ ಸೀಳಿ ಪುಗುಳವೇಳಲ್ಕೈ
ನಂಬಿ ಶಿವನ ಶರಣರುಗಳ
ತಂಬುಲವನು ಸವಿಸುವುದಕ್ಕೆ
ಅಂಬುರುಹದ [೫]ತೆರದಿ[೫] ಜಿಹ್ವೆ ವಿಕಸವಾಗಲ್ಕೈ ॥೪॥

ಅಂಗನೆಯರು [೬]ತೊಡೆದು ಸೂಡಿ[೬]
[೭]ದಂಗಪುಷ್ಪ ವಾಸಿಸುವೊಡೆ[೭]
ಹಿಂಗದೆನ್ನ [೮]ನಾಸಪುಟಕೆ[೮] ನೆಗಡಿಯಾಗಲಿ
ಮಂಗಳಾತ್ಮ ಷಡಕ್ಷರಿಯ
ಲಿಂಗದಂಘ್ರಿಗಿತ್ತ ಕುಸುಮ
ಹಾಂಗೆ ವಾಸಿಸುವರೆ ಘ್ರಾಣ ವಿಕಸವಾಗಲ್ಕೈ ॥೫॥

೧ ತೊಳಪ ಕಂಣೊಳೆ (ಆಇ) ೨ ಅಲಸದಂತೆ (ಕಗಚ) ೩ ಹೊಳೆವವೆರಡು (ಆಇ) ೪ ಹಂಬಲೀಸದಂತೆ (ಆಇ) ೫ ಹಾಗೆ (ಕಗಚ) ೬ ತೊಡಿದ ಮುಡಿದ (ಆಇಕಗಚ) ೭ ಅಂಗಗಂಪ ನಾಸಿಸುವುದಕೆ (ಆಇಕಗಚ) ೮ ನಾಸಿಕಕ್ಕೆ (ಕ).

## ೨೧. ಭಜತಿಯರರೆ

### ಭೋಗಷಟ್ಪದಿ

[೧]ಭಜತಿಯರರೆ ವಿಷ್ಣುವಾಯು[೧]
ಅಬ್ಜ [೨]ಜಾತ[೨] ಚಂದ್ರಸೂರ್ಯ
ಮಝರೆ ಭಾಪು ತಾಳ ಭಜತಿ ನಾಟ್ಯಲೀಲನಂ ॥ಪ॥

ಧಿಮಿಕು ಧಿಂಧಿ ದಿಮಿಕು ಧಿಮ್ಮಿ
ಧಿಮಿಕು ನಂದಿ ಕಾಯರುಗಳ
ಯಮಕಚಮಕ ಮೃದಂಗ ಭಜತಿ ನಾಟ್ಯಲೀಲನಂ
[೩]ಅಮಲ[೩] ವೀಣೆ ಸುಸ್ವರದಲಿ
[೪]ಗಮಪ ಧನಿಸ ರಿಸರಿ ಸರಿಸ[೪]
ಗಮಪ ಭಜತಿ ತುಂಬುರಾದಿ ನಾಟ್ಯಲೀಲನಂ ॥೧॥

[೫]ಚರಣಗತಿಗೆ ಧರಣಿ ಜಲಂ
ಶರಧಿ ಸಹಿತ ಅಷ್ಟಗಜಂ
ಜರಿಯೆ ಶೇಷ ಸಹಸ್ರ ಶಿರಸ ಒರಗಿ ಬಿದ್ದಿರೆ[೫]

---

೧ ಭಜತಿಯಾರವೆಷ್ಟುವಾಲೊ ಸೌಖ್ಯವೀವ (ಅ) ೨ ಭವಂ (ಕಗಚ) ೩ ವಿಮಲ (ಅಆಇ) ೪ ಸಸ್ಸರೀರೀ ಗಮನಿ ಪದನಿ ಸಸ್ಸರೀರೀ ಗಮನಿ (ಕಗಚ)

೫ ಚರಣ ಹತಿಗೆ ಧರಣಿ ಜಲವು
ಸಮಾನ ಮಟ್ಟವಾಗೆ
ಪರಿಜನವು ಸಹಸ್ರ ಶಿರವದಾಗಿ ಬಿದ್ದಿರೆ (ಧಾ)
ಚರಣನ ಜತಿ ಧರಣಿ ಜಾಲ
ಸರಸಮಾಗೆ ಅಷ್ಟದಿಗ್ಗಜ
ಜರಿಯೆ ಶೇಷ ಸಹಸ್ರ ಶಿರಸವರಗಿ ಬೀಳಿರೆ (ಆಇ)



ಕರವ [೧]ಬಿದಿರೆ[೧] ಶೈಲಮಟ್ಟಿ
ಉರುಳುತಿರಲು ದೆಸೆಗೆ ಕುಸುಮ
ವರುಷದಂತೆ[೨]ಯುರುಳಿ[೨] ಭಗಣ ನಷ್ಟವಾದವು ॥೨॥

ಸುರರು ಭಾಪು [೩]ಧಿರುರೆ[೩] ಎನಲು
ಹರಿ ಸುರೇಂದ್ರ ಜೀಯಮೆನಲು
ಹರಸಿ ಮುನಿಗಳ[೪]ಕ್ಷತೆಗಳ[೪] ಸೂಸಿಯಿರುತಿರೆ
ಇರದೆಯೆನ್ನ ಹೃದಯಕಮಲ
[೫]ಪರಮ[೫]ಪೀಠದಲ್ಲಿ ಷಡ
ಕ್ಷರಿಯ ವರನು ಒಪ್ಪಿ ಸೊಗಸಿ [೬]ರಾಜಿಸಿರ್ದನು[೬] ॥೩॥

---

೧ ಬರಕೆ (ಚ) ೨ ಉದುರಿ (ಆಇ) ೩ ಹರರೆ (ಗಚ) ೪ ಅಕ್ಷತೆಯನು (ಕಚ) ೫ ಹರಿಯ (ಅಆಕಗಚ) ೬ ರಾಜಿಸುತಿರ್ದನು (ಆಇ)

## ೨೨. ಮನದ ಬಲುಮೆ ಎಂದಿಗಪ್ಪುದೋ

**ಭೋಗಷಟ್ಪದಿ**

ಎಡರು ಕಂಟಕಗಳು ಬಂದು
ತೊಡರಿ ಕಾಡುವಲ್ಲಿ ಶಿವನ
[೧]ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ[೧] ॥ಪ॥

ಹಸಿವು ತೃಷೆಗಳಡಸಿ ತನುವ
ಹೊಸೆದು [೨]ಹುಸಿಯ[೨] ಮಾಡುತಿರಲು
[೩]ಬಿಸಿಲು ಕಾಲಪತ್ತಿ ಬೆಂಕಿ ನೆತ್ತಿಯಡರಲು[೩]
ಕುಸಿದು ಕುಗ್ಗಿ ಧರೆಗೆ ಬಿದ್ದು
ಅಸುವ[೪]ನಳಿವ ಸಮಯದಲ್ಲಿ[೪]
ಸಸಿನೆ ಬಿಡದೆ ಶಿವನ ನೆನೆವುದೆಂದಿಗಪ್ಪುದೋ ॥೧॥

ಶಿರವು ಹರಿದು ತುಂಡುಮಾಗಿ
ಧರೆಗೆ ಉರುಳಿ ಬಿದ್ದ ಬಳಿಕ
ಗುರುವೆ ಹರ ನಮಶ್ಶಿವಾಯ [೫]ಎನಲಿ[೫] ನಾಲಿಗೆ
[೬]ಮರಳಿಯಾಚೆ ಕಡೆಯ ಮುಂಡ[೬]
ಹೊರಳಿ ಶಿವನ ಕಡೆಗೆ ಮಗುಚಿ
ಕರವ ಮುಗಿವ ಮನದ ಬಲುಮೆಯೆಂದಿಗಪ್ಪುದೋ ॥೨॥

೧ ಬಿಡದೆ ನೆನೆಯುವಾ ಮನ ಪದದೆಂದಿಗಪ್ಪು ದೊ (ಅ) ೨ ವುಡಿಯ (ಕಗಚ) ೩ ಬಿಸಿಲು ಕಾದು ಬೆಂಕಿ ಹತ್ತಿ ನೆತ್ತಿಯಡರಲು (ಧಾ) ೪ ತಳೆವ ಕಾಲದಲ್ಲಿ (ಕ) ೫ ನೆರಹಿ (ಅ) ೬ ಇರದೆ ಮರಳಿ ಮುಂಡ ಕೆಡಹಿ (ಅ) ಮುಂಡ ಕೆಡದು (ಕಗಚ)



ಅಡವಿ[೧]ಯೊಳಗೆ ಸೊಕ್ಕಿದಾನೆ
ತೊಡರಿ ಬಂದು ಅಡ್ಡಗಟ್ಟಿ
ಕೆಡಹಿ ಕಾಲಿನಿಂದ ಮೆಟ್ಟಿ ಸುಂಡಿಲಿಂದಲಿ
ಹಿಡಿದು ಸೀಳಿ ಹೋಳನೆರಡ
ತೊಡಹಿ [೨]ಬೀಸುತಿರಲು[೨] ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ॥೩॥

ಓತು ನಿದ್ರೆಗೈಯುತಿರಲು
ಭೀತಿ [೩]ಬಡಿಸಿ[೩] ಸ್ವಪ್ನದಲ್ಲಿ
ಭೂತ ಬೇತಳಂಗಳೈದಿ [೪]ಭೀಷ್ಮ[೪] ರೂಪಿನಿಂ
ಘಾತಿಸುತ್ತಿರಲಿ ಮನವು
ಯಾತಕಂಜದಂತೆ ಭೂತ
ನಾಥನಡಿಯ ನೆನೆವ ಬಲುಮೆಯೆಂದಿಗಪ್ಪುದೋ ॥೪॥

ಅಡವಿಯಲ್ಲಿ [೫]ಬರುವ[೫] ಪಥದಿ
[೬]ಸುಡುತ ಬಂದು ಕಾಡ ಬೇಗ[೬]
ಅಡರಿ [೭]ತನುವನೆಲ್ಲ[೭] ಮುಸುಕಿ [೮]ಸುಟ್ಟುಹೋಗಲು[೮]
ಕೆಡೆದು ಉರುಳಿ ತನುವು ಪ್ರಾಣ
ಬಿಡುವ ಸಮಯದಲ್ಲಿ ಶಿವನ
ಬಿಡದೆ ನೆನವ ಮನದ ಬಲುಮೆಯೆಂದಿಗಪ್ಪುದೋ ॥೫॥

ಜ್ವರಗಳಡಸಿ ತನುವ ಸುಟ್ಟು
ಕರಿಯ ಮುರಿಯ ಮಾಡುತಿರಲು
[೯]ಬಿರಿದು[೯] ತನುವು [೧೦]ಹೃದಯವೆರಡು ಭಾಗದಿಂದಲಿ[೧೦]

೧ ಯಲ್ಲಿ (ಕ) ೨ ತಿಂಬುತಿರಲು (ಅಕಗಚ) ೩ ಹಿಡಿಸಿ (ಧಾ) ೪ ವಿಶ್ವ (ಅ) ೫ ಇರುವ (ಅ) ೬ ಪಡುತ ಬಂದು ಕಂಡು ಬೇಗೆ (ಅ) ೭ ತನುವೆಲ್ಲ (ಧಾ) ೮ ಹೋಹುವಾಗಲು (ಧಾ) ೯ ಸರಿವು (ಅ) ೧೦ ಬಾಹುಭಗ ದಳಂಗಳಿಂದಲಿ (ಧಾ)

ಚರಿಸದಂತೆ ಏಳದಂತೆ
ಉರುಳದಂತೆ ಮಾಡುವಾಗ
ಹರನ ನೆನೆವ ಮನದ ಬಲುಮೆಯೆಂದಿಗಪ್ಪುದೊ ॥೬॥

ನಡೆವ ನುಡಿವ ಕೊಡುವ ಉಂಬ
ಉಡುವ ತೊಡುವ ನಿದ್ರೆ ಪ್ರಾಣ
ಬಿಡುವ ಸಮಯದಲ್ಲಿ ಶಿವನ ನೆನೆವ ಮನವನು
ಮೃಡ ಷಡಕ್ಷರಾಂಕ ನಿಮ್ಮ
ಬಿಡದೆ ಬೇಡುತಿಹೆನು ನಾನು
[1]ಕೆಡುವ[1] [2]ಸಕಲವಾದ ಪದಗಳನ್ನು ಒಲ್ಲೆನು[2] ॥೭॥

೧ ಪಡದೆ (ಅ) ವಡನೆ (ಕಗಚ) ೨ ಒಡನೆ ನಿಮ್ಮ ಸಾಯುಜ್ಯವನು ಒಲಿದು ಕರುಣಿಸು (ಚ)



## ೨೩. ಮನವನಿಡಲಿಕಾಗದು *

### ಭೋಗಷಟ್ಪದಿ

ತಪವ ವಿದ್ಯೆ [1]ಸಾಸ[1]ಯೋಗ
ಜಪವ ವ್ರತವ ನಡೆಸಬಹುದು
ಗುಪಿತಲಿಂಗದಲ್ಲಿ ಮನವನಿಡಲಿಕಾಗದು ॥ಪ॥

ಶೈಲತಟಗಳಲ್ಲಿ ಪರ್ಣ
ಶಾಲೆಯನ್ನು ಕಟ್ಟಿ ಕಂದ
ಮೂಲಫಲವ ಸವಿದು ತಪವ ಮಾಡಿ ವಿದ್ಯದ
ಜಾಲವನ್ನು ಕಲಿತು ಇಂದ್ರ
ಜಾಲಗಳನ್ನು ತೋರಬಹುದು
ಮೇಲೆ ಲಿಂಗದಲ್ಲಿ ಮನವನಿಡಲಿಕಾಗದು ॥೧॥

ದೂರದೃಷ್ಟಿ ದೂರ ಶ್ರವಣ
ಮಾರಣಾದಿ ಮಂತ್ರತಂತ್ರ
ಏರಿ ಗಗನದಲ್ಲಿ ಚರಿಸೆ [2]ನೆನೆದ ಠಾವಿಗೆ[2]
[3]ಸೇರುವುದನು[3] ಪಡೆಯಬಹುದು
ಮಾರಿ ಯಕ್ಷಿಣಿಯರ [4]ಭಜಿಸಿ[4]
ಸೇರಿ ಲಿಂಗದಲ್ಲಿ ಮನವನಿಡಲಿಕಾಗದು ॥೨॥

* ಆ – ಪ್ರತಿಯಲ್ಲಿ ಈ ಪದ ಇಲ್ಲ
೧ ಸಾಹಸ (ಅ) ೨ ತನ್ನ ಆಲಿಗೆ (ಧಾ) ೩ ತೋರುವುದನು(ಧಾ) ೪ ರಚಿಸಿ (ಧಾ)

ಹುಲಿಯ ಕೂಡ ಸೆಣೆಸಬಹುದು
ಮಲೆತ ಗಜದ ಇದಿರಿನಲ್ಲಿ
ಚಲಿಸದಂತೆ ನಿಂದು ಕಾದಬಹುದು ಸಿಂಹದ

[೧]ಅಲಗ[೧] ಬಹುದು ಮೀಸೆಯನ್ನ
ಉಳಿದ [೨]ಸಾಸವಂತದಿರಲಿ[೨]
ಒಲಿದು ಲಿಂಗದಲ್ಲಿ ಮನವನಿಡಲಿಕಾಗದು ॥೩॥

[೩]ಅಂಬಿಕಾದಿ[೩] ಯೋಗದಿಂದ
ಕುಂಭಿಣಿಯನು ಸಹಜ ಬಿಟ್ಟು
[೪]ಅಂಬರವನು[೪] ಏರಬಹುದು ಆದಿಯಿಲ್ಲದೆ
ಸಂಭ್ರಮದಲಿನಿತ್ಯಕೋಟಿ
ತುಂಬ ಜಪವ ನಡೆಸಬಹುದು
ನಂಬಿ ಲಿಂಗದಲ್ಲಿ ಮನವನಿಡಲಿಕಾಗದು ॥೪॥

ಅನ್ಯವಾಕ್ಯವನ್ಯಜಪವ
ನನ್ಯ ದೈವಗಳನು ಬಿಟ್ಟು
ಉನ್ನತದಲಿ ನಡಿಸಬಹುದು ಸಕಲ ವ್ರತವನು
ಚೆನ್ನ ಷಡ[೫]ಕ್ಷರಿಯ[೫] ಲಿಂಗ
ತನ್ನ ತಾನೆ ಒಲಿಯದನಕ
ಇನ್ನು ಲಿಂಗದಲ್ಲಿ ಮನವನಿಡಲಿಕಾಗದು ॥೫॥

೧ ಅಗಲ (ಅ) ೨ ಸಹಸವಂತರಿರಲಿ (ಅಕಗಚ) ೩ ಕುಂಭಕಾದಿ (ಧಾ) ೪ ಗಗನಾಡಂಬರ (ಅಕಗಚ) ೫ ಕ್ಷರಾಂಕ (ಧಾ)



## ೨೪. ಕಿವಿಯನೊಡ್ಡಿ ಕೇಳಲಾಗದು

### ಭೋಗಷಟ್ಪದಿ

ಅಂದಿನವರಿಗಿಂದಿನವರು
ಹೊಂದಿ ಹೋಲಲರಿಯರೆಂಬ
ಕುಂದುನುಡಿಯ ಕಿವಿಯನೊಡ್ಡಿ ಕೇಳಲಾಗದು ॥ ಪ ॥

ಕಡಿದ ಶಿರವ ಪಡೆದರವರು
ಮಡಿದ ನರನ ಪಡೆದರವರು
ಜಡಜಸಖನ ತಡೆದರವರು ಇಂದಿನವರುವೆ
ಕಡಿದ ಶಿರವ ಜಡಜಸಖನ
ಪಡೆಯ ತಡೆಯಲಾರರೆಂಬ
ಜಡರ ನುಡಿಯ ಕಿವಿಯನೊಡ್ಡಿ ಕೇಳಬಾರದು ॥ ೧ ॥

ಸುಟ್ಟಬೀಜ ಬೆಳೆದರವರು
ಕೆಟ್ಟಕಣ್ಣ ಪಡೆದರವರು
ನೆಟ್ಟಕೊರಡ ಚಿಗಿತರವರು ಇಂದಿನವರುವೆ
ಸುಟ್ಟ ಕೆಟ್ಟ ನೆಟ್ಟ ಕೊರಡು
ದೃಷ್ಟವಾಗದಿವರಿಗೆಂಬ
ಭ್ರಷ್ಟನುಡಿಯ ಕಿವಿಯನೊಡ್ಡಿ ಕೇಳಲಾಗದು ॥ ೨ ॥

ತನುವ [೧]ಕೊಟ್ಟ[೧]ರಂದಿನವರು
ಧನವ ಕೊಟ್ಟರಂದಿನವರು
ವನಿತೆಯರನು ಕೊಟ್ಟರಂದು ಇಂದಿನವರುವೆ

೧ ಇತ್ತ (ಚ)

ತನುವ ಧನವ ವನಿತೆಯರನು
ಇನಿತನೀಯಲಾರರೆಂಬ
ಬಿನುಗುನುಡಿಯ ಕಿವಿಯನೊಡ್ಡಿ ಕೇಳಲಾಗದು ॥ ೩ ॥

[೧]ತಲೆಯ[೧] [೨]ಕೊಟ್ಟ[೨]ರಂದಿನವರು
ಹೊಳೆಯ ತಡೆದರಂದಿನವರು
ಚಲುವ ಮಗಳ ಮುಡಿಯ ಕೊಟ್ಟರಿಂದಿನವರುವೆ
[೩]ತಲೆಯ[೩] ಹೊಳೆಯ ಮಗಳ ಮುಡಿಯ
[೪]ಒಲಿದು ತೋರಿ ಕೊಡರು ಎಂಬ[೪]
ಹೊಲೆಯ ನುಡಿಯ ಕಿವಿಯನೊಡ್ಡಿ ಕೇಳಲಾಗದು ॥ ೪ ॥

ಅಂದಿಗೊಬ್ಬ ಶಿವನು ಮೇಣು
ಇಂದಿಗೊಬ್ಬ ಶಿವನದುಂಟು
[೫]ಎಂದು[೫] ನುಡಿದ ಪಾತಕರ್ಗೆ ನರಕ ತಪ್ಪದು
ಅಂದಿನವರು ಇಂದಿನವರು
ಎಂದು [೬]ನುಡಿಯಬೇಡ[೬] ನಿನಗೆ
ತಂದೆ ಷಡಕ್ಷರಿಯ ಲಿಂಗ ಕುಂದದೊಲಿವನು ॥ ೫ ॥

---

೧ ಲಲನೆ (ಆಇ) ೨ ಹೊಡೆದ (ಆಗ) ೩ ಲಲನೆ (ಆಇ) ೪ ಒಲಿದು ಕೊಡಲು ಅರಿಯರೆಂಬ (ಆಇ) ಒಲಿದು ತೋರಿ ತಡೆಯರೆಂಬ (ಕಗಚ) ೫ ಕುಂದು (ಕಗಚ) ೬ ಉಚಿತವಲ (ಕ)



## ೨೫. ನಿಮ್ಮ ನಿಜಪದ

### ಭೋಗಷಟ್ಪದಿ

ಲೋಕದವರ ಭಕ್ತಿಯುಕ್ತಿ
ಸಾಕು ಸೊಗಸದೆನಗೆ ನಿನಗೆ
ಏಕವಾಹ ಪರಿಯ ಮನವ ಬಯಸುತಿರ್ಪೆನು ॥ ಪ ॥

[೪]ನ್ನ ಒಡೆಯ ಎನ್ನ ದೇವ
ಎನ್ನ ಕರ್ತ ಬಂದನೆಂದು
ಉನ್ನತಾಸನವನು ಇಕ್ಕಿ [೧]ಕೈಯ[೧] ಮುಗಿವರು
ಹೊನ್ನು ಹೆಣ್ಣು ಹಿಡಿದು [೨]ಅವರು[೨]
ಚುನ್ನವಾಡುತಿಹರು ಅವರ
[೩]ಭಿನ್ನಭಕ್ತಿಯನ್ನು ಕಂಡು ಸಾಕು ಸೊಗಸದು[೩] ॥ ೧ ॥

ಲೀಲೆಯಿಂದ ಮನೆಗೆ [೪]ಕರೆದು[೪]
ಹಾಲುತುಪ್ಪಗಳನು ನೀಡಿ
[೫]ವೀಳೆಯವನು ಕೊಡುವ ಭಕ್ತಿಯಿಂದಲಿರ್ಪರು[೫]
ಮೇಲೆ ವನಿತೆ ಧನವು ಭೂಮಿ
ಮಾಲೆಯೊಳಗೆ ಸಿಲ್ಕಿ [೬]ನಲಿದು[೬]
[೭]ಲೋಲಾಡುವವರ[೭] ಭಕ್ತಿ ಸಾಕು ಸೊಗಸದು ॥ ೨ ॥

---

೧ ಕರವ (ಆಇ) ೨ ಮೇಲೆ (ಧಾ) ೩ ಭಿನ್ನ ಭಕ್ತಿ ಸಾಕು ಸೊಗಸು ದೋರದೆನ್ನೊಳು (ಧಾ) ೪ ಹೊಯ್ದು (ಕಗಚ) ೫ ಮೇಲೆ ವಿಳ್ಯೆಯನು ಕೊಡುತ ಭಕ್ತಿಯಿಂದಲಿ (ಆಇ) ೬ ಅವರು (ಕ) ೭ ಆಳವಾಡುತಿಹರ (ಅಆಇ)

ಇಚ್ಛೆಯಿಲ್ಲದಿರಲು ಅವರು
ಮೆಚ್ಚಿ ಪೂಜೆ ಮಾಡುತಿಹರು
ನಿಚ್ಚನಿಚ್ಚ ಕಂಡು [೧]ಅವರ[೧] ದುರ್ಗುಣಂಗಳ
[೨]ಬಿಚ್ಚಿ[೨] [೩]ಎತ್ತಿ[೩] ನುಡಿಯೆ [೪]ಮೋರೆ[೪]
ಕಿಚ್ಚಿನಂತೆ ಮಾಡುತಿಹರು
ಹುಚ್ಚರುಗಳ ಭಕ್ತಿ ಸಾಕು ಎನಗೆ ಸೊಗಸದು ॥ ೩ ॥

ಒಳ್ಳಿತಾಗಿ ಓದಿ ಹಾಡಿ
[೫]ಲಲ್ಲೆ[೫] ನುಡಿಯ ನುಡಿಯಲವರ
ಎಲ್ಲಿ ಗಮಿಸಬೇಡಿ ನೀವು ನಮ್ಮ ಮನೆಯೊಳು
ಇಲ್ಲಿ ಕ್ಷಮಿಸಿ ಎಂದ ಬಳಿಕ
ಎಳ್ಳನನಿತು ವಿಗಡೆ ತೋರ್ವ
[೬]ಜೊಳ್ಳುಗಾರ[೬]ರವರ ಭಕ್ತಿ ಸಾಕು ಸೊಗಸದು ॥ ೪ ॥

ಮರ್ತ್ಯರುಗಳು ಮಾಳ್ಪ ಭಕ್ತಿ
ವ್ಯಕ್ತವಾಗಿ ತೋರದೆನಗೆ
ನಿತ್ಯವಾಗಿ ತೋರುತಿಹುದು ನಿಮ್ಮ ನಿಜಪದ
[೭]ನಿತ್ಯ[೭] ನಿಮ್ಮ ಚರಣಯುಗವ
ಚಿತ್ತ ಮೆಚ್ಚಿ ಅಗಲದಂತೆ
ಕರ್ತೃ ಶಿವಷಡಕ್ಷರಾಂಕ ಮಾಡು ಎನ್ನನು ॥ ೫ ॥

೧ ತಮ್ಮ (ಧಾ) ೨ ಹೊಚ್ಚು (ಕಗಚ) ೩ ಹೊತ್ತು (ಅಆಇ) ೪ ಅವರು (ಕ) ೫ ಬಲ್ಲ (ಕ) ೬ ಹೊಳ್ಳುಗಳು ಅವರ (ಧಾ) ಜೊಳ್ಳುಗಳವರ (ಗಚ) ೭ ಮತ್ತೆ (ಕ)



## ೨೬. ಭೋಗ ಹರಿದು ಹೋಗಲಿ

### ಭೋಗಷಟ್ಪದಿ

ಧರೆಯ ಸುಖದ ಭೋಗವೆನಗೆ
ಹರಿದು ಹೋಗಲಯ್ಯ ನಿಮ್ಮ
ಚರಣಕಮಲದಲ್ಲಿ ಮನವು ಮಗ್ನವಾಗಲಿ ॥ ಪ ॥

ಒಡೆದ ಗಡಿಗೆ [೧]ಹರಿದ[೧] ಜೋಳಿ
ಗೆಡದ ಕೈಯ್ಯ ಮುರಿದ ಕೋಲು
[೨]ಹಿಡಿದು[೨] ಊರನ್ನೆಲ್ಲ ತಿರಿದು ತಂದು ನೋಡಲು
ಒಡಲಿಗಾಗದಂತೆ ಮಾಡು
ಪೊಡವಿ[೩]ಯೊಳಗೆ[೩] ಸುಖವ [೪]ಮೆಚ್ಚಿ[೪]
ಒಡೆಯ ನಿಮ್ಮ ಮರೆದು ಭವಕೆ ಬೀಳಲಾರೆನು ॥ ೧ ॥

[೫]ಊರನೆಲ್ಲ ತಿರಿದು ಒಡಲ[೫]
ಪೂರನುಂಬೆ[೬]ನೆಂದು ಬರಲು[೬]
ದಾರಿಯಲ್ಲಿ [೭]ತಿರಿದು[೭]ದೆಲ್ಲ ಚೆಲ್ಲಿ ಹೋಗಲಿ
ಮೀರಿಯಾಚೆ ಪುರವ ತಿರಿಯೆ
ಯಾರು ಇಲ್ಲ ಎನಲಿ ಎನಗೆ
ಮಾರಹರನ ನೆನೆವುದಿಂತುಟಲ್ಲದಾಗದು ॥ ೨ ॥

೧ ಹರುಕು (ಗಚ) ೨ ಬಿಡದೆ (ಆಇ) ೩ ಯಲ್ಲಿ (ಗಚ) ೪ ಬಯಸಿ (ಕ) ೫ ಊರನೆಲ್ಲ ತಿರಿದು ತಂದು (ಆಇ) ೬ ನೆನಲು ಮಧ್ಯ (ಧಾ) ೭ ಯಿದ್ದು (ಕ)

ಹಳೆಯ ಅರಿವೆ ರಗಟೆಗಳನು
ಬಲಿದು ಗಂಟನಿಕ್ಕಿ ಹೊದೆಯೆ
[೧]ಚಳಿಯದಾಗಲೊಂದು[೧] ಕಡೆಗೆ ಸಾಲದಂದದಿ
ಕಳೆಯುತಿರಲು ಅದರೊಳರ್ಧ
ಇಲಿಗಳೆಳೆದು [೨]ಒಯ್ಯುತಿರಲಿ[೨]
ಒಲಿದು ನಿಮ್ಮ ಚರಣ ನೆನೆವುದಿಂತುಟಾಗದು ॥ ೩ ॥

ಒಡೆಯರುಗಳ ಮಠಕೆ ಬರಲು
ಜಡಿದು [೩]ಜರಿದು[೩] ನೂಕಲೆನ್ನ
ಒಡನೆಯೊರ್ವರುಗಳ ಕೀಳಿನಲ್ಲಿ ಸೇರಲು
ಕಡೆಗೆ ಅಟ್ಟಲವರು ಹಾಳು
ಗುಡಿಗೆ ಬರಲು ಸೋರುತಿರಲು
[೪]ಒಡೆಯ[೪] ನಿಮ್ಮ ನೆನೆವುದಿಂತುಟಲ್ಲದಾಗದು ॥ ೪ ॥

ಅಂಗಳ[೫]ದೊಳು[೫] ನಿಲ್ಲಲಿಕ್ಕೆ
[೬]ಹಿಂಗದಿವನು[೬] ಕಳ್ಳನೆಂದು
ಹಿಂಗಿ [೭]ಹೋಗಲೆಂದು ಎನ್ನ ಜರಿದು ನುಡಿಯಲಿ[೭]
ಹೀಂಗೆಯಾಗದನಕ [೮]ಜನರ[೮]
ಸಂಗ ಬಿಡದು ಷಡಕ್ಷರಿಯ
[೯]ಲಿಂಗದಂಘ್ರಿ ನೆನೆವುದಿಂತುಟಲ್ಲದಾಗದು[೯] ॥ ೫ ॥

---

೧ ಚಳಿಗಳಾದರೊಂದು (ಆಇಕಗಚ) ೨ ಒಯ್ಯಲೆನ (ಗಚ) ಒಯ್ಯಲಿನ್ನು ಗೆ (ಕ) ೩ ಬಡಿದು (ಗಚ) ೪ ವಡನೆ (ಗ) ಬಿಡದೆ (ಕ) ೫ ದಲ್ಲಿ (ಗಚ) ೬ ಹಿಂಗಿದವನು (ಧಾ) ೭ ಹೋಗೊಳ ಕಡೆಗೆಯೆಂದು ನುಡಿಯಲೆಲ್ಲರು (ಧಾ) ಹಿಂಗಿಹೋಗೊಯೆಂದುಯಲ್ಲ ನುಡಿಯಲೆಂನನೂ (ಆಇ) ೮ ನರರ (ಆಇ) ೯ ಲಿಂಗದಂಘ್ರಿ ಭಜಿಸಿ ಸತತ ಸುಖದೊಳಿರ್ಪೆನು (ಆಇ) ಭಜಿಸು ನಿತ್ಯ ಸುಖಮಾದಪ್ಪುದು (ಕ)



## ೨೭. ಭಕ್ತ ಹೃದಯವಾಸ*

### ಭೋಗಷಟ್ಪದಿ

ಪುಣ್ಯತೀರ್ಥ ಪುಣ್ಯಕ್ಷೇತ್ರ
ಪುಣ್ಯಶೈಲದಲ್ಲಿ ಮೂರು
ಕಣ್ಣನಿಲ್ಲ ಭಕ್ತರುಗಳ ಹೃದಯವಾಸನು ॥ ಪ ॥

ತೀರ್ಥಪಕ್ಷಿ ಕೃಷ್ಣವೇಣಿ
ತೀರ್ಥಗಮ್ಯ ತುಂಗಭದ್ರೆ
ತೀರ್ಥಕೋಟಿ ಭಾಗಿರಥಿಯು ಭೀಮರಥಿಗಳು
ತೀರ್ಥಗೋಪ ಯಮುನೆ [೧]ಮೊದಲು[೧]
ತೀರ್ಥಗಳನು [೨]ತಿರುಗುತಿಹರು[೨]
ತೀರ್ಥ[೩]ಗಳಲ್ಲಿಲ್ಲ [೩]ಭಕ್ತರಲ್ಲಿಯಿಪ್ಪನು ॥ ೧ ॥

ಕಾಶಿ ನೀಲಕಂಠ ಸುರಾ
ಮೇಶ ಕಾಂಚಿ [೪]ಗೋವು[೪]ಕರ್ಣ
ಈಶ ನದಿಗಳಿಪ್ಪ ಗುಹೆಯು ಹಿಮದ ಕೇದಾರ
[೫]ದೇಶಗಳನು[೫] ತಿರುಗಿ [೬]ಶಿವನ[೬]
ವಾಸ[೭]ವನ್ನು[೭] ಅರಿಯವರು
ಈಶನಿಹನು ಭಕ್ತರುಗಳ ಹೃದಯವಾಸದಿ ॥ ೨ ॥

---

*ಆಇ – ಪ್ರತಿಗಳಲ್ಲಿ ಈ ಪದ ಇಲ್ಲ

೧ ಮುಖ್ಯ (ಚ) ೨ ತಿರುಗುತಿರಲು (ಧಾ) ೩ದಲ್ಲಿ ಇಲ್ಲ (ಚ) ೪ ಗವ್ಯ (ಅಕಗಚ) ೫ ವಾಸಗಳನು (ಅಕಗಚ) ೬ ಅವನ (ಧ) ೭ ಗಳನು (ಕಗಚ)

ಅನಿಲ[೧]ನೀಲ[೧] ಕಾರ್ತಿಕಾದ್ರಿ
ಘನಸುರತ್ನ ಶೈಲವಾದಿ
[೨]ಇನಿತ[೨]ನೆಲ್ಲ ತಿರುಗುತಿಹರು ಶಿವನನರಸುತ
[೩]ಇನಿತು[೩] ಸಾಧಕರುಗಳೆಲ್ಲ
ಘನಷಡಕ್ಷರಾಂಕನಿರ್ಪ
ಅನುವನರಿಯರವರು ಭಕ್ತರಲ್ಲಿ [೪]ಯೆಂಬುದ[೪] ॥ ೩ ॥

೧ ಶೈಲ (ಕಗಚ) ೨ ಇಷ್ಟ (ಚ) ಇನಿಸ (ಕಗ) ೩ ಎನಿಸು (ಗಚ) ೪ ಇರ್ಪನು (ಕ)



## ೨೮. ಏನನೋದಿ ಏನು ಫಲ

**ಭೋಗಷಟ್ಪದಿ**

ಎನಿಸನೋದಿ ಫಲವದೇನು
ಎನಿಸಕೇಳಿ ಫಲವದೇನು
ಮನಸು ತನ್ನ ದುರ್ಗುಣಗಳ ಬಿಡದು ಶಿವಶಿವ ॥ ಪ ॥

ಇಂದುಧರನ ಚರಣದಲ್ಲಿ
ಹೊಂದಿ ಸುಖದೊಳಿರದು ಮನವು
ಕುಂದದನ್ಯ ವಿಷಯದತ್ತ ಹರಿವುದೆಂತೆನೆ
ಒಂದು ಶುನಿಯ ಹಿಡಿದುತಂದು
ಅಂದಣವನು ಏರಿಸಿರಲು
ಮುಂದೆ ಅಡಗ ಕಂಡು ನೆಗೆದ ಮಾಳ್ಕೆಯಾಯಿತು ॥ ೧ ॥

ಸೊಗಸಿ ಶಿವನ ಮಂತ್ರವನ್ನು
[೧]ನೆಗಳುವದಕೆ[೧] ಎನ್ನ ಜಿಹ್ವೆ
[೨]ಸೊಗಡಿಸುವದು[೨] [೩]ಕಾಳುನುಡಿಗೆಯಲಸದೆಂತೆನೆ[೩]
ಹಗಲು ಇರುಳು ತನ್ನ [೪]ಬಾಯಿ
ಸಿಗುವುದರಿಯದಂತೆ ನಾಯಿ[೪]
[೫]ಜಗುಳು[೫]ವುದಕೆಯಲಸದಂತೆ ಜಿಹ್ವೆಯಲಸದು ॥ ೨ ॥

೧ ನುಡಿಯುವದಕ್ಕೆ (ಚ) ನೆಗಳಿ ನುಡಿಯುವದಕ್ಕೆ (ಆಇಕಗ) ೨ ಅವಗಡಿಸುವದು (ಅಆಇಕಗಚ) ೩ ಕೀಳು ನುಡಿಯ ಒಲಿವುದೆಂತೆನೆ (ಧಾ) ೪ ಬಾಯ ಸಸಿನ ಇರದೆ ಗ್ರಾಮಸಿಂಹ (ಚ) ಬಯಸಿ ನಿಲವನರಿಯದಂತೆ ನಾಯ (ಗ) ೫ ಬಗಳು (ಕ)

ಮಂಗಳಾತ್ಮ ಷಡಕ್ಷರಿಯ
ಲಿಂಗದಡಿಯ ಪೂಜಿಸು[೧]ವಡೆ[೧]
ಕೊಂಗಿ ಮನವು ಸ್ವಸ್ಥಿರವನು ಐದದೆಂತೆನೆ
ಹಿಂಗದೊಲಿದು [೨]ಗಂಧಪುಣುಗು[೨]
ಸಂಗಡಿಸುತ ತೊಡೆಯೆ [೩]ಹಂದಿ
ಹಾಂಗೆಯಿರದೆ ಗಂಜಳಕ್ಕೆ ಓಡುವಂದದಿ[೩] ॥ ೩ ॥

---

೧ ವರೆ (ಆಇ) ೨ ಘನ ಸುಗಂಧ (ಧಾ) ಗಂಧ ಪುಣಿಗೆ (ಅ) ೩ ಭೃಂಗವಾಡಿಯಿರದೆ ಪೋಡುವಂದದೀ (ಅ)



## ೨೯. ಎನಗೆ ದೊಡ್ಡಿತೆ

### ಭೋಗಷಟ್ಪದಿ

ಧರೆಯೊ[೧]ಳುಳ್ಳ[೧] ತನುವ ಧರಿಸಿ
ಗಿರಿಯು [೨]ಶರಧಿ[೨] ಸರಸಿಜಾಂಡ
[೩]ವರಿಯೆ[೩] ದೊಡ್ಡಿತಾದವೈಸೆ ಎನಗೆ ದೊಡ್ಡಿತೆ ॥ ಪ ॥

ಮೊಟ್ಟೆಯನ್ನು ಹೊತ್ತ ನರನು
ತಿಟ್ಟನಿಳಿಯಲಾರದಂತೆ
ಸೃಷ್ಟಿಯೊಳಗೆಯುದಿಸಿ ನಾನು ಕಷ್ಟತನುವನು
ತೊಟ್ಟ ದೆಸೆಗಳಿಂದ ಧರೆಳಯ[೪]
ಘಟ್ಟಬೆಟ್ಟ ಗಿರಿಗಳೆಲ್ಲ
ಶ್ರೇಷ್ಠವಾದವೈಸೆ ಮಳಲಗಪ್ಪೆಯೆನಗಿವು ॥ ೧ ॥

[೫]ಕೋಳ[೫]ದೊಳಗೆ ಸಿಲುಕಿದವನು
[೬]ಕಾಲ ನೆಗಹಿ ನೆಗೆವುದಕ್ಕೆ[೬]
[೭]ಮೇಲಕ್ಕೈದದಂಥ ತನುವನಾಂತ[೭] ಕಾರಣ
ಏಳು ವಾರಿಧಿಗಳು [೮]ತನಗೆ[೮]
ಕಾಲಿನಲ್ಲಿ ಮಳಲೊಳೆಳೆದ
ಕಾಲುವೆಗಳ ಹಾಗೆ ಎನಗೆ ದೊಡ್ಡಿತಪ್ಪುದೆ ॥ ೨ ॥

---

೧ ಳಾನು (ಧಾ) ೨ ಸರಸಿ (ಅ) ೩ ಹಿರಿದು (ಅಕಗಚ) ೪ ಯು (ಧಾ) ೫ ಕೊಳ (ಗಚ) ೬ ಕಾಲುವೆಗಳ ನೆಗವುದಕ್ಕೆ (ಅಕಗ) ಕಾಲು ಹೊರಗೆ ನೆಗೆಯುದಕ್ಕೆ (ಚ) ೭ ಸಾಲದಂತೆ ತನುವ ಧರಿಸಿ ಬಂದ ಕಾರಣಾ (ಅಕಗಚ) ೮ ಎನಗೆ (ಕಗಚ)

ಕೀರ ಪಂಜರದೊಳು ಸಿಲುಕಿ
ಹಾರಲಾರದಂತೆ ಎನಗೆ
ವಾರಿಜೋದ್ಭವಾಂಡವೆಲ್ಲ ದೊಡ್ಡಿತಪ್ಪುದೆ
ಮಾರವೈರಿ ಷಡಕ್ಷರಿಯು
[೧]ಮೀರಿ[೧] ಎನಗೆ ಮುನಿದು ದೊಡ್ಡ
ಘೋರತನುವ ತೊಡಿಸಿ [೨]ತಾನು[೨] ಕೊಟ್ಟ ಕಾರಣ ॥ ೩ ॥

೧ ನೀರ (ಗಚ) ವೀರ (ಕ) ೨ ನರಗೆ (ಅ) ತನಗೆ (ಚ) ಧರೆಗೆ (ಕಗ)



## ೩೦. ನಿಮ್ಮನರಿಯದೆ *

### ಭೋಗಷಟ್ಪದಿ

ಹಲವು ವಿದ್ಯೆ ಹಲವು ಶಾಸ್ತ್ರ
ಹಲವು ಮಂತ್ರಗಳನೆ ಕಲಿತು
ಹಲವು [೧]ಭವಕೆ[೧] ಬಂದರೈಸೆ ನಿಮ್ಮ [೨]ನರಿಯದೆ[೨] ॥ ಪ ॥

[೩]ಸುರಪಧನುಸು[೩] ಇಂದ್ರಜಾಲ
ತುರಗ[೪]ಯಾಗ[೪] ಯಕ್ಷವೈಸೆ
ಕೊರಳು ಬೆರಳು ಅಗ್ನಿ [೫]ಜಲದ[೫] ಸ್ತಂಭವೆಲ್ಲವ
ಅರಿವು[೬]ತಿರ್ಪೆ ಮರುಳೆ ನೀನು[೬]
ಗಿರಿಯನಗುಳಿ ಇಲಿಯ ಹಿಡಿದ
ಪರಿಗಳೈಸೆ ಏನು ಸಖವು [೭]ಹೇಳು[೭] [೮]ಸಾಧಕಾ[೮] ॥ ೧ ॥

[೯]ಛಂದ[೯] ಗಣಿತ [೧೦]ಧಾತು [೧೧]ಕೋಶ[೧೧] [೧೦]–
ಮುಂದೆ ಪಂಚಕಾವ್ಯ ಮಾಘ
ವೊಂದು ಉಳಿಯದಂತೆ ಕಲಿಯುತಿರ್ಪೆಯದರಿನಿಂ
ಒಂದು ಕಾಳು ನೆಲ್ಲಿಗಾಗಿ
ಮಂದರಾದ್ರಿಯನಿತು [೧೨]ಜಳ್ಳ[೧೨]
ತಂದು ತೂರುತಿರ್ಪ ನರನ ಮಾಳ್ಕೆ ಪಾತಕ ॥ ೨ ॥

* – ಆಇ – ಪ್ರತಿಗಳಲ್ಲಿ ಈ ಪದ ಇಲ್ಲ

೧ ಬಯಕೆ (ಕ) ೨ ಹಿರಿಯರು (ಅ) ೩ ಸುರಗಿ ಧನುವು (ಚ) ಸುಗಿ ಧನ್ವ (ಕಗ) ೪ ವಾಹ (ಕಗಚ) ೫ ಉದರ (ಧಾ) ಜಲ (ಅಗಚ) ೬ ತಿರ್ದು ಫಲವದೇನು (ಕ) ೭ ಕೇಳು (ಕ) ೮ ಪಾತಕ (ಧಾ) ೯ ಕಂದ (ಅ) ೧೦ ದಶನಿಘಂಟು (ಕಗಚ) ೧೧ ನಿಘಂಟು (ಅ) ೧೨ ಜೋಳ (ಧಾ)

ಧರೆಯೊಳಖಿಳ ಮಂತ್ರಗಳನು
ಬರೆದು ಕಲಿಯುತಿರ್ಪೆ ನೀನು
ಹಿರಿಯ ಗುಡಿಯ ಕೆಡಹಿ [೧]ಮೊಳೆಯ[೧] ಪಡೆದ ಮಾಳ್ಕೆಯಿಂ
ಅರಿದು ಷಡಕ್ಷರಿಯ ವರನ
ಪರಮಮಂತ್ರವನ್ನು ಜಪಿ[೨]ಸೆ[೨]
[೩]ಹರುಷ[೩] ನಿಧಿಯ ಪಡೆದ ಮಾಳ್ಕೆ ಕೇಳು ಮಾನವ ॥ ೩ ॥

೧ ಮಳೆ (ಕ) ೨ ಸಿ (ಗಚ) ೩ ಪರುಷ (ಕಗಚ)



## ೩೧. ಧರೆಯ ಭೋಗವಸ್ಥಿರ *

**ಭೋಗಷಟ್ಪದಿ**

ಧರೆಯ ಭೋಗದಸ್ಥಿರವನು
ಅರಿವ ಹಾಗೆ ಪೇಳ್ವೆ ಕೇಳು
ಅರಿದು ತಿಳಿದು ಮರೆದು ಶಿವನ ಭಜಿಸು ಸಂತತ ॥ ಪ ॥

ಪುರದೊಳೋರ್ವ ವಿದ್ಯೆ [೧]ಧರನು[೧]
ಹಿರಿದು ದಿವಸ ದೊರೆಯ ಕಾದು
ಹೊರಡದಿರಲು ಒಂದು ತಂತ್ರ ನೆನೆದನೆಂತೆನೆ
ಸುರರ ಚರ[೨]ನು ಹೊರಗೆ[೨] ಬಂದು
ಪುರದ ಬಾಗಿಲೊಳಗೆ ನಿಂದು
ದೊರೆಯ ಬರಲು ಹೇಳಿ[೩]ರೆಂದು[೩] ವನಕೆ ಬಂದನು ॥ ೧ ॥

ಓಡಿ ಹೋಗಿ ದೊರೆಗೆ ಹೇಳೆ
ನೋಡಿ ಬನ್ನಿ[೪]ರೆ[೪]ನುತ ಕಳುಹೆ
ನೋಡಿ ಬಂದು ಜೀಯ ದಿಟವು ಎನುತ ಹೇಳಲು
ಗಾಡ[೫]ನೆ[೫]ದ್ದು ಗಜದ ಶಿರದಿ
ರೂಢನಾಗಿ ಸೇನೆಸಹಿತ
ಓಡಿ ಬರಲು ವನದ ಮಧ್ಯೆ [೬]ದೊಳಗೆ[೬] ಸಂದಣಿ ॥ ೨ ॥

* – ಆಇ – ಪ್ರತಿಗಳಲ್ಲಿ ಈ ಪದ ಇಲ್ಲ
೧ ದವನು (ಕ) ೨ ರ ಹಾಂಗೆ (ಕಗಚ) ೩ ಇಂದ್ರ (ಕಗಚ) ೪ ಎ (ಕಗಚ) ೫ ಲೆ (ಕಗಚ) ೬ ದಲ್ಲಿ (ಕ)

ಅನಿತರಿಂದ ಮುಂದೆ ಬರಲು
ಕನಕಮಯದ ಬಾಗಿಲಲ್ಲಿ
ಮಿನುಗುತಿರ್ಪ [1]ಮೇಲುಕೋಟೆ[1] ರತ್ನ ಕಲಶವು
ಅನಿತರಿಂದ ಮುಂದೆ ಬರಲು
[2]ಕನಕಪೀಠದಲ್ಲಿ[2] [3]ಇಂದ್ರ
ನನುಪಮದ ಸುವೋಲಗವನು[3] [4]ನೃಪತಿ[4] ಕಂಡನು ॥ ೩ ॥

ಆವದಾವ ಕಡೆಗೆ ನೋಡೆ
ತೀವಿದಾನೆ [5]ಕುದುರೆ ಮಂದಿ[5]
ಭಾವಿಸಲ್ಕೆ ಅರಿದು ಕನಕರಥಗಳಿರ್ಪವು
ದೇವಕನ್ನೆಯರುಗಳಖಿಳ
ತೀವಿಯಿರಲು ಓಲಗ[6]ದೊಳು[6]
ಭೂಮಿಯಾಣ್ಮ ಕಂಡು ತಲೆಯ ತೂಗುತಿರ್ದನು ॥ ೪ ॥

ತಳಿತ ಸತ್ತಿಗೆಗಳು [7]ಕೋಟಿ[7]
ಬಳಸಿ[8]ಯ[8]ಲ್ಲಿ ಯೊಪ್ಪುತಿಹವು
ಮಿಳಿತ ಚಾಮರಗಳು ಕೋಟಿ ಢಾಳಿಸುತ್ತಿರೆ
ಬಳಸಿ ಸುರರು ಯಕ್ಷರುಗಳು
[9]ಕುಳಿತು ಇರಲು ಓಲಗದೊಳು[9]
ಒಳಗೆಯೊಳಗೆ ನೃಪತಿ ಹೆದರಿ ಕೈಯ ಮುಗಿದನು ॥ ೫ ॥

ಕೈಯ [10]ಮುಗಿದು[10] ಕುಳ್ಳಿರಿಸುತ
ಜೀಯ ಇದುವೆ [11]ವಿದ್ಯೆ[11]ಯೆ[12]ನಲು[12]
ಒಯ್ಯನೆಲ್ಲ ಬಯಲು ಮಾಡಿ ಹೋಗಲಾ [13]ನೃಪಂ[13]

೧ ಮೇಲೆ ಕೋಟೆ (ಗಚ) ಮೇಲೆ ವಿವಿಧ (ಕ) ೨ ಕನಕಮಯದ ಪೀಠದಲ್ಲಿ (ಕ) ೩ ಇನಿಸು ವೋಲಗದೊಳಿರಲು (ಕ) ಇಂದ್ರ ಇನಿಸು ವೋಲಗದೊಳಿರಲು (ಗಚ) ೪ ನೃಪನು (ಕ) ೫ ಮಂದಿ ಕುದುರೆ (ಕ) ೬ ದಲ್ಲಿ (ಕಗ) ೭ ಕೂಡಿ (ಅ) ೮ ನ (ಕಗಚ) ೯ ಕುಳಿತ ಓಲಗವನು ನೋಡಿ (ಕ) ೧೦ ಹಿಡಿದು (ಕವಚ) ೧೧ ಚೋದ್ಯವೆನಲು (ಕ) ೧೨ ವೆ (ಗಚ) ೧೩ ನೃಪನು (ಕ)



ಮೈಯ ಮರೆದು ಬೆರಗುವಟ್ಟು
ಜೀಯ ಇದುವೆ ಚೋದ್ಯವೆನಲು
[1]ಕೈಯನೆತ್ತಿ ವಿದ್ಯೆಧರನು[1] ಪೊಗಳೆ ಕಂಡನು ॥ ೬ ॥

ಸಾಂಗ[2]ವಾ[2]ಗಿ ಧರೆಯ ಭೋಗ
ಕಂಗಳಿಂಗೆ ತೋರುತಿಹುದು
ಹಿಂಗಿ[3]ಹೋಹು[3]ದನಿತು ಬೇಗ ಇದರ ತೆರನೊಲು
ಮಂಗಳಾತ್ಮ ಷಡಕ್ಷರಿಯ
ಲಿಂಗದಡಿಯ ಭಜಿಸು ನಿನಗೆ
ಅಂಗವಹುದು ನಿತ್ಯಪದವು ನಂಬು ಮಾನವ ॥ ೭ ॥

೧ ಈ ಸಾಲು 'ಧಾ' ಪ್ರತಿಯಲ್ಲಿಲ್ಲ. ೨ ಮಾ (ಕಗಚ) ೩ ಪೋಪು (ಕಗಚ)

## ೩೨. ಎಂದಿಗಪ್ಪುದೋ

### ಭೋಗಷಟ್ಪದಿ

ನಿನ್ನ ರೂಪಿನವರು ಬಂದು
ಎನ್ನ ಬಿಡದೆ [೧]ನೊಯಿಸಲವರ[೧]
ನಿನ್ನ ಹಾಗೆ ಕಾಂಬ ಭಕ್ತಿ ಎಂದಿಗಪ್ಪುದೋ ॥ ಪ ।\

ಬಂದ ಬಳಿಯ ಹೋದ ಬಳಿಯ
ನಿಂದ ಬಳಿಯ ನೆರೆದ ಬಳಿಯ
ಚೆಂದಗೆಡಿಸಿ ನುಡಿ[೨]ವು[೨]ತಿರಲು ಚರನದೊರ್ವನು
[೩]ಇಂದುಧರನು ಮನವ ನೋಡ
ಲೆಂದು ಬೈದನೆಂದು ನಂಬಿ[೩]
[೪]ಕುಂದದಿರ್ಪ[೪] [೫]ಭಕ್ತಿ ಎನಗೆ ಎಂದಿಗಪ್ಪುದೋ[೫] ॥ ೧ ॥

ಇಂದುಧರನ ರೂಪಿನಿಂದ
ಬಂದು [೬]ಚರಣ ರಕ್ಷೆವೆರಸಿ[೬]
[೭]ನೊಂದಿತೆಂದು ಅಳುಕದೆನ್ನ [೮]ಕೆಡಹಿ ತುಳಿದೊಡೆ[೮] [೭]
[೯]ಕುಂದದವರು[೯] ಶಿವಸ್ವರೂಪ
ರೆಂದು ಭಾವಿಸುತ್ತ ಮನವು
ಚಂದವಳಿಯದಿರ್ಪ [೧೦]ಭಕ್ತಿಯೆಂದಿಗಪ್ಪುದೋ[೧೦] ॥ ೨ ॥

---

೧ ನೊಯ್ಯನವರು (ಅ) ೨ ಯು (ಧಾ) ೩ ಇಂದುಧರನ ನೆನೆವ ಮನವನೆಂದು ನೋಡಬಯಿದನೆಂದು (ಅ) ೪ ಛಂದವಳಿಯದಿಪ್ಪ (ಕ) ೫ ಭಕ್ತಿ ಎಂದಿಗಪ್ಪುದೋ (ಕ) ೬ ಚರಣಕ್ಕೆವರಸಿ (ಆಇ) ೭ ನಿಂದು ಕೆಹಿ ಮೇಲೆ ತುಳಿದು ಘಾಸಿ ಮಾಡಲು (ಕ) ೮ ಕಳೆದೊಡೇ (ಅ) ೯ ಕುಂದದವರ (ಚ) ಕಂದದವರ (ಗ) ೧೦ ಮನವದೆಂದಿಗಪ್ಪುದೋ (ಅ)



ಮಾರಹರನ ರೂಪಿನಿಂದ
ಚೋರರುಗಳು ಬಂದು ಕಟ್ಟಿ
ದಾರಿಯಲ್ಲಿ ಸುಲಿದುಕೊಳಲು ಇರ್ದುದೆಲ್ಲವ
ಮಾರವೈರಿ ತಾನೆ ಬಂದು
ಸೂರೆ[೧]ಗೊಂಡು ಹೋದ[೧]ನೆಂಬ
ಸಾರಮನದ [೨]ಭಕ್ತಿ[೨]ಯೆನಗೆ ಎಂದಿಗಪ್ಪುದೋ ॥ ೩ ॥

ಹರನ ರೂಪಿನಿಂದ ಹಗೆಯು
ತರುಬಿ ಬಂದು ಎನ್ನ ಹಿಡಿದು
[೩]ಇರಿದು ಬಿಡದೆ ಕೆಡಹಿ ಕಡಿದು[೩] [೪]ಕೊರ್ಚುತಿರ್ದೊಡೆ[೪]
ಅರಿದು ಅವರ ಕಂಡ ಬಳಿಕ
ಗುರು ಸ್ವರೂಪರೆಂದು ನಂಬಿ
ಅರಿಗಳೆನ್ನದಿರ್ಪ ಭಕ್ತಿಯೆಂದಿಗಪ್ಪುದೋ ॥ ೪ ॥

[೫]ಚರನು ಓರ್ವ[೫] ಬಂದು ಎನ್ನ
[೬]ಶಿರದ ಮೇಲೆ ಕೆರವುಗಾಲ[೬]
[೭]ವರಸೆ ಶಿವ ಷಡಾಕ್ಷರಾಂಕ ಬಂದು[೭] ಕರುಣದಿ
ಚರಣ ಯುಗವನಿಟ್ಟನೆನ್ನ
ಶಿರದ ಮೇಲೆ ಎನುತ ನಂಬಿ
[೮]ಹರುಷಗೊಳುವ[೮] ಭಕ್ತಿಯೆನಗೆಂದಿಗಪ್ಪುದೋ ॥ ೫ ॥

---

೧ ಮಾಡಿ ಹೊಯ್ದು (ಕಗಚ) ೨ ಬಲುಮೆ (ಕ) ೩ ಇರಿದು ಕಡಿದು ಕೆಡಹಿ ಬಿಡದೆ (ಕಗಚ) ೪ ಅರ್ಚಿತಿದ್ದಡೆ (ಚ) ೫ ನರನದೋರ್ವ (ಅ) ಚರನದೋರ್ವ (ಕಗಚ) ೬ ಶಿರದಲಿಡಲು ಪಾದವನ್ನು (ಧಾ) ೭ ವರಷಡಕ್ಷರಾಂಕ ತಾನೆ ಬಂದು (ಧಾ) ೮ ಹರುಷದಳಿವ (ಆಇ) ಹರುಷದಳೆವ (ಕಗಚ)

## ೩೩. ಸಿರಿಯ ಕನಸಿನಂತೆ

### ಭೋಗಷಟ್ಪದಿ

ಧರೆಯ ಭೋಗವನ್ನು [೧]ಮೆಚ್ಚಿ[೧]
ಹರನ ಮರೆದು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ [೨]ಕೇಳು[೨] ಮಾನವ ॥ ಪ ॥

ತಿರುಕನೊರ್ವನೂರ ಮುಂದೆ
ಮುರುಕು ಧರ್ಮ[೩]ಶಾಲೆಯಲ್ಲಿ[೩]
ಯೊರಗಿರುತ್ತಲೊಂದು ಕನಸ ಕಂಡನೆಂತೆನೆ
ಪುರದ [೪]ರಾಜ ಸತ್ತನವಗೆ[೪]
ವರ[೫]ಕುಮಾರರಿಲ್ಲದಿರಲು[೫]
ಕರಿಯ ಕೈ[೬] ಗೆ[೬] ಕುಸುಮಮಾಲೆಯಿತ್ತು ಪುರದೊಳು ॥ ೧ ॥

ಬಿಡಲು [೭]ಯಾರ[೭] ಕೊರಳಿನಲ್ಲಿ
ತೊಡರಿ[೮]ಸುವದೊ[೮] ಅವರ ಪಟ್ಟ
ಕೊಡೆಯರನ್ನು ಮಾಳ್ಪೆವೆಂದು ಬಿಡಲು ಅಲ್ಲಿಯೆ
ಒಡನೆ [೯]ಬಂದು[೯] ಕೊರಳಿನಲ್ಲಿ
[೧೦]ತೊಡರಿಸಲ್ಕೆ[೧೦] ಕಂಡು ತಿರುಕ
ಪೊಡವಿ [೧೧]ಯಾಣ್ಮನಾದೆನೆಂದು[೧೧] ಹಿಗ್ಗುತಿರ್ದನು ॥ ೨ ॥

೧ ನೆಚ್ಚಿ (ಆಇಕ) ೨ ನೋಡು (ಅ) ೩ ಸಾಲೆಯೊಳು (ಆಇ) ಸಾಲೆಯಿರಲು (ಕ) ೪ ಅರಸು ಮೃತವಾಗಿರಲು (ಆಇಕ) ೫ ಕುಮಾರರುಗಳು ಇಲ್ಲ (ಕಗಚ) ೬ ಯ್ಯ (ಕಗಚ) ೭ ಹಾರ (ಅಆಇಕ) ಆರ (ಗಚ) ೮ ಸಲ್ಕೆ (ಕ) ೯ ತನ್ನ (ಧಾ) ೧೦ ತೊಡರಿಸುವುದ (ಆಇ) ೧೧ ಆಳ್ವೆನೆಂದು ಮನದಿ (ಆಇ)



[೧]ಪಟ್ಟ ಕಟ್ಟಿಯವಗೆ[೧] ನೃಪ[೨]ರು[೨]
ಕೊಟ್ಟರಖಿಳ ಕನ್ನೆಯರನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೆ
[೩]ಹೆಟ್ಟುಗೆಯರ ಕೂಡಿ ರತಿಯು[೩]
ಹುಟ್ಟಿ ಸುಖದೊಳಿರು[೪]ತಲವಗೆ[೪]
[೫]ಹುಟ್ಟಿ ಹೆಣ್ಣು ಗಂಡು ಮಕ್ಕಳಾದವಾಗಲೆ[೫] ॥ ೩ ॥

ಓಲಗದಲಿ ಇರುತ ತೊಡೆಯ
ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ [೬]ಚಾತುರಂಗ ಬಲವ[೬] ನೋಡುತ
ಲೋಲನಾಗಿ ಇರುತ ನೆನೆದ
ಕೇಳು ಮಂತ್ರಿ[೭]ಸುತರುಗಳಿಗೆ[೭]
[೮]ಬಾಲೆಯರನು[೮] ನೋಡಿ ಮದುವೆ [೯]ಮಾಡಬೇಕೆಲೈ[೯] ॥ ೪ ॥

ನೋಡಿಬನ್ನಿರೆನಲು ಜೀಯ
ನೋಡಿಬಂದೆವೆನಲು [೧೦]ಅವರು[೧೦]
[೧೧]ಮಾಡು[೧೧] [೧೨]ಲಗ್ನ[೧೨] [೧೩]ಮಂಟಪದೊಳು[೧೩] [೧೪]ಸಕಲ ಕಾರ್ಯವ[೧೪]
ಗಾಢವಾದ ಸಂಭ್ರಮಗಳ
ಮಾಡುತಿರ್ದ ಮದುವೆಗಳನು
ಕೂಡಿದಖಿಳ [೧೫]ರಾಯರುಗಳು[೧೫] ಮೆಚ್ಚುವಂದದಿ ॥ ೫ ॥

೧ ಪಟ್ಟಗಟ್ಟಲವರು (ಚ) ಪಟ್ಟಗಟ್ಟಲವಗೆ (ಕಗ) ೨ ಗೆ (ಚ) ೩ ಅಟ್ಟುಗೆಗಳು ಕೂಡಿ ಪತಿಯು (ಅ) ಹೆಟ್ಟಗೆಗಳ ಕೂಡೆ (ಅ) (ಕ) ಅಷ್ಟು ದಿವಸ ಕೂಡಿ ರತಿಯು (ಚ) ೪ ತವಗೆ (ಕ) ೫ ಹುಟ್ಟಿದವು ಹೆಣ್ಣುಗಂಡು ಮಕ್ಕಳಾಗಲೆ (ಕ) ೬ ಚಾತುಗಂಗ ಮಹರ್ಬಲವ (ಆಇ) ಚತುರಂಗಬಲವ (ಕಗಚ) ೭ ಮಕ್ಕಳಿಂಗೆ (ಧಾ) ೮ ಬಾಳಕಿಯರ (ಆಇ) ೯ ಮಾಡಬೇಕೆಂದಾ (ಆಇ) ೧೦ ಬೇಗ (ಧಾ) ೧೧ ಮಾಡಿ (ಕಗಚ) ೧೨ ವಿವಾಹ (ಅಆಇ) ೧೩ ಮಂಟಪಾದಿ (ಕಗ) ೧೪ ಮುಂಜಿ ಮದುವೆಯ (ಚ) ೧೫ ರಾಜ್ಯರುಗಳು (ಆಇ) ರಾಜರುಗಳ (ಕಗಚ)

ಧನದ ಮದವು ರಾಜ್ಯಮದವು
[೧]ವನಿತೆಮದವು ಸುತರ ಮದವು
ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು[೧]
[೨]ಅನಿತರೊಳಗೆ ನೃಪರ ದಂಡು[೨]
[೩]ಮನೆಯ[೩] ಮುತ್ತಿದಂತೆಯಾಗಿ
ಕನಸು ಮಾಣುತೆದ್ದು ಹೆದರಿ [೪]ಕಣ್ಣು[೪] [೫]ತೆರೆದನು[೫] ॥ ೬ ॥

[೬]ಮೆರೆಯುತಿರ್ದ[೬] ಭಾಗ್ಯವೆಲ್ಲ
ಹರಿದು [೭]ಹೋಯಿತೆಂದು[೭] [೮]ತಿರುಕ[೮]
ಮರಳಿ [೯]ನಾಚುತಿರ್ದ[೯] ಮರುಳನಂತೆಯಾಗಲೆ
ಸಿರಿಯು ಕನಸಿನಂತೆಯೆಂದು
ಅರಿದು ಷಡಕ್ಷರಿಯ [೧೦]ವರನ[೧೦]
ಹರುಷದಿಂದ ಭಜಿಸು [೧೧]ನಿತ್ಯ ಸುಖವು ತಪ್ಪದು[೧೧] ॥ ೭ ॥

---

೧ ವನಿತೆ ಸುತರ ನೋಡಿ ತಿರುಕ ಧನಿಕನಾಗಿ ಕಾಣುತಿರ್ದ ಕನಸಿನಲ್ಲಿಯೆ (ಆಇ) ವನಿತೆ ಸುತರ ಕೂಡಿ ಸುಖವು ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು (ಗಚ) ವನಿತೆ ಸುತರ ನೋಡಿ ಸುಖದಿ ಜನಿತಮಾಗಿ ಹಿಗ್ಗುತಿರ್ದ ಕನಸಿನಲ್ಲಿಯೆ (ಕ) ೨ ಅನಿತ ನೃಪರ ದಂಡು ಬಂದು (ಆಇ) ೩ ಪುರವು (ಆಇ) ೪ ಕಂಣ (ಅಆಇ) ೫ ಬಿಟ್ಟನು (ಚ) ೬ ಮರುಗುತಿರ್ದ (ಕಗ) ೭ ಹೋಯಿತೆನುತ (ಆಇ) ಪೋದುದೆನುತ (ಚ) ಹರಿಯಿತೆನುತ (ಅಗ) ಹರಿಯಿತೆಂದು (ಕ) ೮ ತಿರಿವುದಕ್ಕೆ (ಕಗ) ತಿರಿಯುದಕ್ಕೆ (ಚ) ೯ ನಾಚಿ ಹೋಗುತಿರ್ದ (ಆಇ) ೧೦ ಲಿಂಗ (ಧಾ) ೧೧ ನಿನಗೆ ಮುಕ್ತಿಯಪ್ಪುದು (ಆಇ) ನಿತ್ಯ ಸುಖಮಾದಪ್ಪುದು (ಕಗ)



## ೩೪. ಕಾಯಮೋಹವನ್ನು ಮರೆ

### ಭೋಗಷಟ್ಪದಿ

ಕಾಯ ಮಾಯ [೧]ಜಾಯ[೧]ವೆಂದು
ಕಾಯಮೋಹವನ್ನು ಮರೆದು
ಮಾಯವೈರಿ ಶಿವನ ನೆನೆ[೨]ವು[೨]ದೆಂದಿಗಪ್ಪುದೋ ॥ ಪ ॥

[೩]ಜಡವು[೩] ನಿದ್ರೆ [೪]ಆಕಳಿಕೆಯು[೪]
ಬಿಡದೆ ಹಸಿವು ತೃಷೆಯು ವ್ಯಸನ
ಒಡನೆ ಇದಕೆ ಸುಖವು ದುಃಖ ತಾಗುತಿರ್ಪುದು
ಒಡಲ ಮೆಚ್ಚಿ ಶಿವನ ಸುಖವ
ಕೆಡಿಸಿಕೊಂಬ ತನುವನಿದನು
ಒಡಕು ಓಡಿನಂತೆ ಕಾಂಬುದೆಂದಿಗಪ್ಪುದೋ ॥ ೧ ॥

ಹಗಲು ಇರುಳು ಓಗರವನು
ಮಿಗಿಲು ತುಂಬಿ ಸುರಿವುತಿಹುದು
ತೊಗಲಚೀಲ ಶುಕ್ಲದೊರತೆ ಕರುಳುಜಾಳಿಗೆ
ಅಘದ ಬೀಡು ಮುಕುತಿಗೇಡು
ಜಘದಿ ಜನಿಸಿ ಕೆಡುವ ತನುವ
[೫]ರಗಟೆ[೫]ಗಿಂತ ಕಡೆಯ ಕಾಂಬುದೆಂದಿಗಪ್ಪುದೋ ॥ ೨ ॥

---

೧ ಛಾಯ (ಅಇಕಗಚ) ೨ ವ (ಧಾ) ೩ ಜಡನು (ಅಇಕಗಚ) ೪ ಯಗಳುತಿರಲು (ಅ) ೫ ಹಳೆಯ ಕೆರಹಿ (ಚ)

[೧]ಬಿರಿತ[೧]ಕಿವಿಗಳಲ್ಲಿ ಗುಗ್ಗೆ
ವೊರತೆ ಕಣ್ಣಿನಲ್ಲಿ [೨]ಜಾರು[೨]
ಬರಿಯ ಶ್ಲೇಷ್ಮ ಉಗುಳು ಬಾಯ ಗೊಣ್ಣೆ ಮೂ[೩]ಗಿನ[೩]
ಸುರಿವ ತನುವ ಮೆಚ್ಚಿ ಶಿವನ
ಮರೆದು ಕೆಡುವ [೪]ಶರಿರವಿದನು[೪]
ಕೆರವಿಗಿಂತ ಕಡೆಯ ಕಾಂಬುದೆಂದಿಗಪ್ಪುದೋ ॥ ೩ ॥

ಚಳಿಯ ತಾಳಲಾರದೊಮ್ಮೆ
ಝಳವ ತಾಳಲಾರಳದೊಮ್ಮೆ[೫]
ಒಲಿದು ರಕ್ಷಣೆಯನು ಮಾಡಲೇನ ಕೊಡುವದು
ಗಳಿಸಿ ಪಾಪವನ್ನು ಯಮನ
ಬಳಿಗೆ ಒಯ್ವ ತನುವ ನಾಯ
ಹಳಗಿಗಿಂದ ಕಡೆಯ ಕಾಂಬುದೆಂದಿಗಪ್ಪುದೋ ॥ ೪ ॥

ಅಂಗವಿರಲಿ ಇರ್ದೊಡೇನು
ಅಂಗದಿಚ್ಛೆಗಾದರೊಲಿದು
ಮಂಗಳಾತ್ಮ ಷಡಕ್ಷರಿಯ ಲಿಂಗ ನೆನೆವನು
ಹಿಂಗದಂತೆ ಹೃದಯದಲ್ಲಿ
ಸಂಗಿಸುತ್ತಲಿರಲು [೬]ಭವದ[೬]
ಭಂಗವಳಿದು ನಿತ್ಯಪದಕೆ ಕರ್ತ[೭]ನಪ್ಪನು[೭] ॥ ೫ ॥

೧ ಭರಿತ (ಆಇಕಗಚ) ೨ ಜೋರು (ಧಾ) ೩ ಗಲಿ (ಕಗಚ) ೪ ದಿದನು ಹಳೆಯ (ಕಗಚ) ೫ ದಿದನು (ಕಗಚ) ೬ ಭೇದ (ಅ) ೭ ರಪ್ಪರ (ಕಗಚ)



## ೩೫. ಕೋಪವೇನಗೆ ಲೋಪವಾಗದು

### ಭೋಗಷಟ್ಪದಿ

ಚಂದ್ರಧರನಿಗೊಲಿಯದಿರ್ಪ
ಇಂದ್ರಿಯಗಳ [೧] ಜಯಿಸದನಕ[೧]
ಸಾಂದ್ರ[೨]ವಾ[೨]ದ ಕೋಪವೇನಗೆ ಲೋಪವಾಗದು ॥ ಪ ॥

[೩]ದುಷ್ಟ[೩] ನುಡಿಯ ಬಿಡದೆ ಒಲಿದು
ಮುಟ್ಟಿ ಕೇಳ್ವ ಹಾಗೆ ಶಿವನ
ಶ್ರೇಷ್ಠ[೪]ವಾದ[೪] ಶಾಸ್ತ್ರ ಕೇಳದಿರ್ಪ ಕಿವಿಯೊಳು
[೫]ಇಟ್ಟು ಮೊಳೆಯ ಕೊಡತಿಯಿಂದ[೫]
ತಟ್ಟಿ [೬]ಆಚೆ ಈಚೆಗಾಗು[೬]
[೭]ವಷ್ಟು ಬಡಿಯದನಕ[೭] [೮]ಎನ್ನ[೮] ಸಿಟ್ಟು ಹೋಗದು ॥ ೧ ॥

ಮೆಚ್ಚಿ ಶಿವನ[೯]ಸೋಂಕಿ ಸೊಕ್ಕಿ[೯]
ಹೆಚ್ಚಿ ಪುಳಕ[೧೦]ವೇರದೊಲಿದು[೧೦]
ನಿಚ್ಚಲನ್ಯ ಸೋಂಕುಗಳಿಗೆ ಎಳೆವ ತ್ವಕ್ಕನು

೧ ನೊಯಿಸಿದಲ್ಲದೆ (ಕಗಚ) ನೊಯ್ಸದನಕ (ಆಇ) ನೋಯಿಸದೊಡೆ (ಅ) ೨ ಮಾ (ಕಚ) ೩ ಕಷ್ಟ (ಅಆಇಕಗಚ) ೪ ವಾಹ (ಗಚ) ೫ ಹೆಟ್ಟಿ ಮೊಳೆಯ ಕೊಡಲಿಯಲ್ಲಿ (ಆಇ) ಹೆಟ್ಟಿ ಮೊಳೆಯ ಕೊಡತಿಯಲ್ಲಿ (ಕಗಚ) ೬ ಆಚೆಗಾಚೆಗಾಗಿ (ಕ) ಕುಟ್ಟಿಯಾಚೆ ಯಾಚೆಗಾಗಿ (ಗಚ) ೭ ತಟ್ಟು ಬಗೆಯದನಕ (ಆಇ) ತಟ್ಟುವುಗಿಯದನಕ (ಅಗಚ) ೮ ಮನದ (ಚ) ೯ ಮೆಚ್ಚಿ ಬಿಡದೆ ಶಿವನ ಸೋಂಕಿ ಸೋಂಕಿ (ಚ) ಸೋಂಕಿನಿಂದ (ಕ) ೧೦ ವಾಗದನಕ (ಗ) ವಾಗದೊಲಿದು (ಕಚ)

ಕೊಚ್ಚಿ ಕೊಚ್ಚಿ ಕಡಿದು ಕಡಿದು
ನುಚ್ಚುನುರಿಯ ಮಾಡದನಕ
ಕೆಚ್ಚುಗೊಂಡ [೧]ಕೋಪದುರಿಯ ಕಿಚ್ಚು[೧] ಪೋಗದು ॥ ೨ ॥

ಬಿಡದೆ ಲಿಂಗವನ್ನು ನೋಡ
ಲೊಡನೆಯಶ್ರುಜಲಗಳುಕ್ಕಿ
ಕಡೆಗೆ ಪರಿಯ[೨]ದನ್ಯ[೨]ರೂಪ ನೋಳ್ಪ[೩]ನಯನಕೆ[೩]
ಒಡೆಯ ! ಹೆಟ್ಟಿ ಮಳಲ ತಂದು
[೪]ಕೆಡಹಿ[೪] ಹೊಯ್ದು ದಸಿಗಳಲ್ಲಿ
ಜಡಿಯದನಕ ಎನ್ನ ಕೋಪ[೫]ವಡಗಿ[೫] ಪೋಗದು ॥ ೩ ॥

ಶೂಲಧರನ ಹಾಡಿಹಾಡಿ
ಲೀಲೆ [೬]ಮಿಕ್ಕು[೬] ಹೊಗಳದನ್ಯ
ಕಾಳುನುಡಿಯ ಹಗಲು ಇರುಳು ನುಡಿವ ಜಹ್ವೆಯ
ಸೀಳಿಸೀಳಿ [೭]ಹೋಳು[೭] ಮಾಡಿ
ಮೇಲೆ ಸುಣ್ಣ [೮]ನೀರ[೮] ನೆರೆದು
[೯]ಮಾಲೆಗಟ್ಟದನಕ[೯] ಮನದ ಜ್ವಾಲೆ ಹೋಗದು ॥ ೪ ॥

ಲಿಂಗಕೀಯ[೧೦]ದಿರುವ ಅರಳ[೧೦]
ಭೃಂಗ[೧೧]ದಂತೆ[೧೧] ಅರಿವ ಮೂಗ
ಹಾಂಗೆ ಸೀಳದನಕ ಕೋಪ [೧೨]ಹಿಂಗಿ[೧೨] ಹೋಗದು
ಮಂಗಳಾತ್ಮ ಷಡಕ್ಷರಿಯ
ಲಿಂಗ [೧೩]ನಡಿಗೆ[೧೩] ಒಲಿಯದಿಂದ್ರಿ
ಯಂಗಳಳಿಯದನಕ ಸುಖವು [೧೪]ಸಾಂಗ[೧೪]ಮಾಗದು ॥ ೫ ॥

೧ ಕೋಪವೆನಗೆ ಅಡಗಿ (ಕ) ಲೋಪದುರಿಯ ಕಿಚ್ಚು (ಅಇ) ೨ ಅಧಮ (ಅ) ೩ ನಯನದ (ಕಗಚ) ೪ ಕೆಡದಿ (ಕಗಚ) ೫ ಒಡನೆ (ಆಇ) ೬ ಯಿಂದ (ಆಇ) ೭ ಹೋಳ (ಕಗಚ) ೮ ಗದಡ (ಕ) ೯ ಹೋಳದನಕ ಎನ್ನ (ಕ) ೧೦ ದನಕ ಅರಳ (ಆಇಕ) ೧೧ ನಂತೆ (ಕಗಚ) ೧೨ ಹರಿದು (ಧಾ) ಹೀಗೆ (ಆಇ) ೧೩ ದಡಿಗೆ (ಕ) ೧೪ ಸಾಂದ್ರ (ಆಇ)



## ೩೬. ಎನಗೆ ಭೋಗಭಾಗ್ಯ ಬೇಡ

**ಭೋಗಷಟ್ಪದಿ**

ಎನಗೆ ಭೋಗಭಾಗ್ಯ ಬೇಡ
ಎನಗೆ [೧]ಜಪವು ತಪವು[೧] ಬೇಡ
ಎನಗೆ ನಿಮ್ಮ ತೊತ್ತುಸೇವೆ ನಿತ್ಯವಾಗಲ್ಯೆ ॥ ಪ ॥

ಎನ್ನ ಕಂದಿಸುತ್ತ ಬಹಳ
ಎನ್ನ [೨]ಬಾಧಿಸುತ್ತ[೨] ಬಿಡದೆ
ಎನ್ನನೊಂದು ನೆವಗಳಿಂದ ಕಾಡಿದವರಿಗೆ
ಎನ್ನ ಕೊಂದಡವರಿಗೆಲ್ಲ
ಎನ್ನ ಪೂಜೆ ಫಲಗ[೩]ಳೆಲ್ಲ[೩]
[೪]ಉನ್ನತದೊಳಗವರಿಗಾಗಿ[೪] ಸುಖದಿ ಬಾಳಲಿ ॥ ೧ ॥

ಹಿಂದೆಯೆನ್ನ ಬೈದವರಿಗೆ
ಮುಂದೆಯೆನ್ನ ಬೈದವರಿಗೆ
ಕುಂದದೆಲ್ಲ ಜನರ ನಡುವೆ ಬೈದಡವರಿಗೆ
ಇಂದುಧರನ ಕರುಣದಿಂದೆ
ಅಂದಣವನು ಏರುವಂತೆ
ಕುಂದದೊ[೫]ಲೆ[೫]ದು ಅವರಿಗೆಲ್ಲ [೬]ಭೋಗ[೬]ವಾಗಲಿ ॥ ೨ ॥

* ಅ – ಪ್ರತಿಯಲ್ಲಿ ಈ ಪದ ಇಲ್ಲ.

೧ ಸುಖವು ದುಃಖವು (ಚ) ೨ ಬಂದಿಸುತ್ತ (ಕಗಚ) ೩ ಳೈಸೆ (ಚ) ೪ ಉನ್ನತಿ ಅವರುಗಳು (ಚ) ೫ ಲಿ (ಕಗಚ) ೬ ಭಾಗ್ಯ (ಗಚ)

[೧]ಹಿಂಗದೆನ್ನ[೧] ನಿಂದಿಸಿ ಜ
ನಂಗಳೆಲ್ಲ ಸುಖದೊಳಿರುವ
ಹಾಂಗೆ ಶಿವನು ಅವರಿಗೆಲ್ಲ [೨]ಭಾಗ್ಯ[೨]ವೀಯಲಿ
ಮಂಗಳಾತ್ಮ ಷಡಕ್ಷರಿಯ
ಲಿಂಗ ನಿನ್ನ ತೊತ್ತುಸೇವೆ
ಸಾಂಗ[೩]ಮಾಗಿ[೩] [೪]ಧರೆಯೊಳೆನಗೆ[೪] ನಿತ್ಯವಾಗಲಿ ॥ ೩ ॥

೧ ಹಿಂದೆಯನ್ನ (ಆಇಗಚ) ಹಿಂಗೆ ಎನ್ನ (ಕ) ೨ ಭೋಗ (ಕಗಚ) ೩ ವಾಗಿ (ಕಗಚ) ೪ ಯೆನಗೆ ಬಿಡದೆ (ಧಾ)



## ೩೭. ಡಿಂಭದೊಳಗೆ ಒಂದು ಪ್ರಾಣ *

### ಭೋಗಷಟ್ಪದಿ

ಡಿಂಭದೊಳಗೆ ಒಂದು ಪ್ರಾಣ
ಕಂಭಸೂತ್ರ ಬೊಂಬೆಯಂತೆ
ಎಂದಿಗಾದರೊಂದು ದಿನವು ಸಾವು ತಪ್ಪದು ॥ ಪ ॥

ಹುಟ್ಟುತೇನು ತರಲು ಇಲ್ಲ
[೧]ಬಿಟ್ಟು[೧]ತೇನು ಒಯ್ಯಲಿಲ್ಲ
ಸುಟ್ಟಸುಣ್ಣದರಳಿನಂತೆ ಆಯ್ತು ದೇಹವು
ಹೊಟ್ಟೆ ಬಹಳ ಕೆಟ್ಟುದೆಂದು
ಎಷ್ಟು ಕಷ್ಟ [೨]ಪಟ್ಟೆ[೨] ಪ್ರಾಣ
ಬಿಟ್ಟು ಹೋಗುವಾಗ ಒಂದು ಬಟ್ಟೆಯಿಲ್ಲವು ॥ ೧ ॥

ಹೊನ್ನುಹೆಣ್ಣು ಮಣ್ಣು ಮೂರು
ತನ್ನೊಳಿರ್ದು ಉಣ್ಣಲಿಲ್ಲ
ಅಣ್ಣತಮ್ಮ ತಾಯಿತಂದೆ ಬಗೆಯಲಿಲ್ಲವು
ಅನ್ನವಸ್ತ್ರಭೋಗಿಯಾಗಿ
ತನ್ನ ಸುಖವನರಿಯಲಿಲ್ಲ
ಮಣ್ಣುಪಾಲಾದ ಮೇಲೆ ಯಾರಿಗಾಯಿತು ॥ ೨ ॥

* ಅ–ಪ್ರತಿಯಲ್ಲಿ ಈ ಪದ ಇಲ್ಲ
೧ ಹೋಗು (ಧಾ) ೨ ಮಾಡಿ (ಆಇ)

ಹತ್ತು ಎಂಟು ಲಕ್ಷಗಳಿಸಿ
ಮತ್ತೆ ಸಾಲದೆಂದು ಪರರ
[೧]ಸೊತ್ತಿಗಾಗಿ[೧] ಆಶೆಮಾಡಿ ನ್ಯಾಯ ಮಾಡುವ
ಬಿತ್ತಿಬೆಳೆದು ಉಂಡೆನೆಂಬ
ವ್ಯರ್ಥಚಿಂತೆ ಮಾಡದಿರೆಲೊ
ಸತ್ತುಹೋದ ಮೇಲೆ ನಿನ್ನ ಅರ್ಥದಾರಿಗೆ ॥ ೩ ॥

ಬೆಳ್ಳಿಬಂಗಾರಿಟ್ಟುಕೊಂಡು
ಒಳ್ಳೆ ವಸ್ತ್ರ ತೊಟ್ಟುಕೊಂಡು
ಒಳ್ಳೆ ಚಲುವ ಬೊಂಬೆಯಂತೆ ಆಡಿಹೋದೆಲೊ
ಹಳ್ಳ ಹರಿದ ಮೇಲೆ ನೀರ
ಗುಳ್ಳೆಯುರುಳಿ ಹೋದ
ಸುಳ್ಳುರೂಪು [೨]ಸಂಸ್ಕೃತಿ[೨]ಯನು ನೋಡಿರಕ್ಕಟ ॥ ೪ ॥

ಸತ್ಯನೆನಿಸಿಕೊಂಡು ಜನರ
ತಥ್ಯವಾಕ್ಯದಲ್ಲಿ ನೀನು
ಮುಕ್ತಿಯಾದಮೇಲೆ ನಿನಗೆ ಸ್ತೋತ್ರ ಮಾಳ್ಪರು
ನಿತ್ಯ ಷಡಕ್ಷರಿಯ ಲಿಂಗ
ತೊತ್ತು ಆಗಿ ಭಜಿಸು ನಿನಗೆ
ಉತ್ತಮತ್ವಪದವಿ ದೊರಕಿ ಸುಖಿಪೆ ಸಂತತಂ ॥ ೫ ॥

---

೧ ಅರ್ಥಕಾಗಿ (ಆಇ) ೨ ಸಂಸ್ಕೃತಿ (ಆಇ)



## ೩೮. ಹಿರಿದು ಕಿರಿದು ಇಲ್ಲ

### ಭೋಗಷಟ್ಪದಿ

ಲಿಂಗದಲ್ಲಿ ಮನವ ಬೆರಸಿ
ದಂಗೆ ಕಿರಿದು ಹಿರಿದು ಇಲ್ಲ
ಅಂಗಗುಣವನಳಿದು ನಿಜವನರಿದ ಕಾರಣ ॥ ಪ ॥

[೧]ಅಂಬಕಳವು[೧] ಅಮೃತದನ್ನ
ಕಂಬಳಿಗಳು ಕನಕ[೨]ದುಪಟಿ[೨]
ಅಂಬುಧಿಗಳು ಕಾಲುವೆಗಳು ಸಮವದಾತಗೆ
ನಂಬಿ ಲಿಂಗದಲ್ಲಿ ಮನವು
ತುಂಬಿ ಹೊರಗೆ ಮರೆದನಾಗಿ
ಕುಂಭಿಣಿಯೊಳು ಹಿರಿದು ಕಿರಿದು ತೋರದಾತಗೆ ॥ ೧ ॥

[೩]ಕನಕದುಪ್ಪರಿಗೆಯು ತಿಪ್ಪೆ
ಕನಕಶೈಲ ಹುಲ್ಲು ಮರಡಿ
ಮಿನುಗುತಿಪ್ಪ [೪]ರನ್ನ[೪]ಕಲ್ಲು ಸಮವದಾತಗೆ[೩]
ಘನಕೆ ಘನವದಾದ ಲಿಂಗ
ಮನವ ನುಂಗಿಕೊಂಡಿತಾಗಿ
ಇನಿತು ಹಿರಿದು ಕಿರಿದು [೫]ಕಾಣ[೫]ಬಾರದಾತಗೆ ॥ ೨ ॥

---

೧ ಅಂಬಲಿಯದು (ಧಾ) ಅಂಬಕಹುಳ (ಅ) ಅಂಬಲಿಯು (ಕ) ೨ ಕುದುಕುಲ (ಗಚ) ೩ ಈ ಸಾಲುಗಳು 'ಚ" ಪ್ರತಿಯಲಿಲ್ಲ ೪ ರತ್ನ (ಆಇಕಗ) ೫ ತೋರ (ಆಇ)

ಅರಲಮಂಚ [೧]ಸರಳ[೧]ಹಾಸು
ವರ ಸುಗಂಧ [೨]ಪುಡಿಯು[೨] ಧೂಳಿ
[೩]ಹಿರಿಯ ಕನಕದುಡಿಯದಾರ[೩] [೪]ನೂಲು[೪] ಸಮವದು
ಪರಕೆ ಪರವದಾದ ಲಿಂಗ
ಶರಧಿಯಲ್ಲಿ ಮುಳುಗಿ ಬಳಿಕ
ಹೊರಗೆ ಮೆರೆದನಾಗಿ ಹಿರಿದು ಕಿರಿದು ತೋರದು ॥ ೩ ॥

ಹಿರಿಯರಿವರು ಕಿರಿಯರಿವರು
ಅರಿಗಳಿವರು ಮಿತ್ರರಿವರು
ಅರಸರಿವರು [೫]ಭಂಟರಿವರು[೫] ಎಂದು ತೋರದು
ಕರಣ ಹರಣವೆಲ್ಲ ಲಿಂಗ
ಕಿರಣವಾಗಿ ಹೊರಗೆ ಮರೆದು
ಇರುವ [೬]ಶರಣ[೬] ಹಿರಿದು ಕಿರಿದು [೭]ಕಾಣಬಾರದು[೭] ॥ ೪ ॥

ಇದುವೆ ಸುಖವು ಇದುವೆ ದುಃಖ
[೮]ವಿದುವೆ ಮೃದುವು ಇದುವೆ ಕಠಿಣ[೮]
ವಿದುವೆ ಶೀತವಿದುವೆ ಉಷ್ಣವೆಂದು ತೋರದು
ಮುದದಿ ಷಡಕ್ಷರಿಯ ಲಿಂಗ
ಒದಗಿ ತಾನೆಯಾದನಾಗಿ
ಇದಿರಿನಲ್ಲಿ ಹಿರಿದು ಕಿರಿದು [೯]ಕಾಣಬಾರದು[೯] ॥ ೫ ॥

---

೧ ಮುಳ್ಳು (ಧಾ) ಬರಳ (ಚ) ಮುರುಳು (ಕ) ೨ ವಿಡಿಯು (ಕಗಚ) ೩ ಅರಕಿ ಕನಕ ಪುಡಿಯದಾರ (ಅಆಇ) ೪ ನುಲಿ (ಆಇ) ೫ ತಿರುಕರಿವರು (ಧಾ) ೬ ನಾಗಿ (ಗಚ) ೭ ತೋರಬಾರದು (ಅ) ೮ ಆ ಇ ಪ್ರತಿಯಲ್ಲಿಲ್ಲ ೯ ತೋರದಾತಗೆ (ಕ)



## ೩೯. ನಾನು ಒಲಿದು ಫಲವದೇನು

**ಭೋಗಷಟ್ಪದಿ**

ನಾನು ಒಲಿದು ಫಲವದೇನು
ನೀನು ಒಲಿಯದನಕ ಶಿವನೆ
ಏನು ಮಾಡಿ ಫಲವದೇನು ಬಯಲ ಭ್ರಮೆಯದು ॥ ಪ ॥

ಜಪವ ಮಾಡಿ ಫಲವದೇನು
ತಪವ ಮಾಡಿ ಫಲವದೇನು
ಅಪರಿಮಿತದ ಶಾಸ್ತ್ರ ಪಠಿಸಿ ಫಲವದೇನಲ್ಲೈ
ತ್ರಿಪುರವೈರಿ ತನ್ನ ತಾನೆ
ಸುಪಥ [೧]ದೋರಿ ಒಲಿಯದನಕ[೧]
ಉಪಮೆಯಿಂದ ಮಾಡೆ ತುದಿಗೆ ಕೆಟ್ಟು ಪೋಪುದು ॥ ೧ ॥

ಹೆಣ್ಣ ಬಿಟ್ಟು [೨]ಫಲವದೇನು[೨]
ಹೊನ್ನ ಬಿಟ್ಟು ಫಲವದೇನು
[೩]ಮಣ್ಣ ಬಿಟ್ಟು ನಿರಾಭಾರಿಯಾದಡೇನಲ್ಲೈ[೩]
ಪನ್ನಗೇಂದ್ರಭರಣನೊಲಿದು
[೪]ತನ್ನ ಸುಪಥ ತೋರದನಕ[೪]
ಅನ್ಯರುಗಳ ನೋಡಿ ಮಾಡೆ ಕೆಟ್ಟು ಪೋಪುದು ॥ ೨ ॥

---

೧ ದೋರದನಕ (ಗ) ಅನ್ಯರುಗಳ ನೋಡಿ ಮಾಡಿರಿವರಿಯದನಕ (ಚ) ೨ ಬ್ರಹ್ಮಚಾರಿಯಾದಡೇನಲ್ಲೈ (ಚ) ೩ ಹೊನ್ನು ಬಿಟ್ಟು ನಿರಾಭಾರಿಯಾಗಿ ಫಲವೆನ್ಯೆ (ಆಇ) ಮಣ್ಣನುಳಿದು ಬಡವನಾಗಿ ಫಲವದೇನಲ್ಲೈ (ಧಾ) ೪ ಉನ್ನತದಿ ಫಲ ಕೊಡುವದನಕ (ಅ)

ಗಿರಿಗಳಲ್ಲಿ ಗವಿಗಳಲ್ಲಿ
[೧]ತರಗ ಸಲಿಸಿಕೊಂಡು ತನುವ[೧]
[೨]ಮರೆದು ಅಸ್ಥಿ ಮಾತ್ರವಿರಲು ಫಲವದೇನಲ್ಯೈ[೨]
ಹರನು ತನ್ನ ತಾನೆ ಒಲಿದು
[೩]ಪರಮಸುಖದ ತೋರದನಕ[೩]
ಪರರ ನೋಡಿ ಮಾಡೆ [೪]ಕಡೆಗೆ[೪] ಕೆಟ್ಟುಪೋಪುದ್ಯೈ ॥ ೩ ॥

ಕೋಡುಗಲ್ಲ ತುದಿಯ ಮೇಲೆ
ನೀಡಿ ಕಾಲ ಗಗನಕಾಗಿ
ಕೂಡೆ ಉಗ್ರತಪವ ಮಾಡಿ ಫಲವದೇನಲ್ಯೈ
ರೂಢಿಗೀಶ [೫]ಕರುಣ ಹುಟ್ಟಿ[೫]
[೬]ನೋಡಿ ಒಲಿಯದನಕ[೬] ಪರರ
ನೋಡಿ ಮಾಡಲೆಲ್ಲ [೭]ಕಡೆಗೆ[೭] ಕೆಟ್ಟು ಪೋಪುದು ॥ ೪ ॥

ಮುನ್ನ ಮಾಡಿದವರ ಕಂಡು
ಇನ್ನು ನೋಡಿ ಮಾಡಿ [೮]ಬಳಲಿ[೮]
ಬನ್ನ ಬಡುತ ಇರಲು [೯]ಕಡೆಗೆ[೯] ಕೆಟ್ಟು ಪೋಪುದ್ಯೈ
ತನ್ನ ತಾನೆ ಪಕ್ವವಾಗಿ
ತನ್ನ ತಾನೆ ಪಥಕೆ [೧೦]ಬರಲು[೧೦]
[೧೧]ಚನ್ನ ಷಡಕ್ಷರಿಯ ಲಿಂಗ ತಾನೆ ಒಲಿವನು[೧೧] ॥ ೫ ॥

---

೧ ತರುಗಳಲ್ಲಿ ಸೇರಿ ತನುವ (ಧಾ) ೨ ಇರದೆ ಗಾಳಿ ನೀರು ಆಹಾರ ಕೊಂಡು ಫಲವೇನೈ (ಆಇ) ೩ ಕರುಣವಾಗದನಕ ತಾನೆ (ಕಗಚ) ೪ ತುದಿಗೆ (ಆಇ) ೫ ಕರುಣದಿ ಒಲಿದು (ಅ) ೬ ನೋಡಿ ಮಾಡಿ ಒಲಿಯದನಕ (ಗ) ೭ ತುದಿಗೆ (ಆಇ) ೮ ಬಹಳ (ಧಾ) ೯ ತುದಿಗೆ (ಆಇಗ) ೧೦ ನಿಲ್ಲಿಸಲು (ಅ) ೧೧ ತನ್ನ ತಾನೆ ಷಡಕ್ಷರಿಯ ಲಿಂಗನೊಲಿವನು (ಕಗಚ)



## ೪೦. ಪನ್ನಗೇಂದ್ರಭರಣ

**ಭೋಗಷಟ್ಪದಿ**

ಪನ್ನಗೇಂದ್ರಭರಣ ಕೇಳು
ನಿನ್ನ ವಿಕಳವಸ್ಥೆಯಲ್ಲಿ
ಎನ್ನ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ ॥ ಪ ॥

[೧]ಎರಳೆ ಶಿಶುವು ತಾಯ ತಪ್ಪಿ[೧]
ಅರಸಿಯರಸಿ ತೊಳಲಿಬಳಲಿ
ಇರದೆ ತಾಯ [೨]ವಿಕಳದಲ್ಲಿ ಸಾಯುವಂದದಿ[೨]
ಹರನ ಮೆಚ್ಚಿ ಮರುಳಗೊಂಡು
ಇರುಳು ಹಗಲು ನೆನೆದುನೆನೆದು
[೩]ಹರಣ[೩] ಬಿಡುವ ಹಾಗೆ ಎನಗೆ ಎಂದಿಗಪ್ಪುದೋ ॥ ೧ ॥

[೪]ದಶದವಸ್ಥೆಯುಳ್ಳ ಕಾಂತ[೪]
ಒಸೆದು ಪುರುಷ ಬಾರದಿರಲು
ಸಸಿನೆ [೫]ಅವನ[೫] ವಿಕಳತೆಯಲಿ ಸಾವ [೬]ತೆರದೊಲು[೬]
ಶಶಿಯ ಧರಿಸಿದವಗೆ ಸೋತು
[೭]ಹಸಿವನರತು[೭] ವಿಕಳತೆಯಲಿ
ಅಸುವ ಬಿಡುವ ಹಾಗೆ ಎನಗೆ ಎಂದಿಗಪ್ಪುದೋ ॥ ೨ ॥

---

೧ ಕಿರಿಯ ಶಿಶುವು ತಾಯನಪ್ಪಿ (ಅ) ೨ ವಿಕಳತೆಯಲ್ಲಿ ಸಾವ ತೆರನೊಳು (ಆಇ) ೩ ಹರನ (ಧಾ) ೪ ದಶಾವಸ್ಥೆಯುಳ್ಳ ಕಾಂತೆಗೆ (ಆಇಗ) ೫ ಯಮನ (ಧಾ) ೬ ತೆರೆದೊಳು (ಧಾ) ೭ ನೆರವ ಮೋಹ (ಚ)

ಧನವ ಬಹಳ ಗಳಿಸಿದವನು
ತನುವ ಬಿಡುವ ಕಾಲದಲ್ಲಿ
ಧನವ ವಿಕಳತೆಯಲ್ಲಿ ಪ್ರಾಣ ಬಿಡುವ ತೆರನೊ[೧]ಳು[೧]
ಮನಸಿಜಾರಿಯನ್ನು [೨]ಮೆಚ್ಚಿ[೨]
ನೆನೆದುನೆನೆದು ವಿಕಳತೆಯಲಿ
ತನುವ ಬಿಡುವ [೩]ಹಾಗೆ[೩] ಎನಗೆ ಎಂದಿಗಪ್ಪುದೋ ॥ ೩ ॥

ಬಂಧುವರ್ಗವುಳ್ಳ ನರನು
ಸಂದು[೪]ಹೋಹ[೪] ಕಾಲದಲ್ಲಿ
ಕುಂದದವರ ವಿಕಳತೆಯಲಿ ಸಾವ ತೆರನೊಳು
ಇಂದುಧರನ ನೆನೆದುನೆನೆದು
ಕುಂದಿಕುಸಿದು ವಿಕಳತೆಯಲಿ
ಹಿಂದೆ ಮರೆದು ತನುವ ಬಿಡುವುದೆಂದಿಗಪ್ಪುದೋ ॥ ೪ ॥

ಎಲ್ಲಿ ಮೆಚ್ಚು ಎಲ್ಲಿ ಮೋಹ
ಎಲ್ಲಿ ಪ್ರೀತಿ ಎಲ್ಲಿ ಪ್ರೇಮ
ಅಲ್ಲಿ ಅವರ ವಿಕಳತೆಯಲಿ ಸಾವ ತೆರನೊಳು
[೪]ಇಲ್ಲಿ[೪] ಹಿಂದುಮುಂದು ಮರೆದು
[೫]ಅಲ್ಲಿ[೫] ಷಡಕ್ಷರಿಯ ಲಿಂಗ
ದಲ್ಲಿ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ ॥ ೫ ॥

---

೧ ಲು (ಕಗಚ) ೨ ನೆಚ್ಚಿ (ಆಇಕ) ೩ ಹಾಂಗೆ (ಕಗಚ) ೪ ಮೋಹ (ಆಇ) (ಕಗಚ) ೫ ಎಲ್ಲ (ಆಕಚ) ೬ ಇಲ್ಲಿ (ಅಆಕಗಚ)



## ೪೧. ನಿನ್ನ ನೀನೆ ತಿಳಿದು ನೋಡು

### ಭೋಗಷಟ್ಪದಿ

ಏಕೆ ಬಯಲು ಭ್ರಾಂತು ನಿನಗೆ
ಸಾಕು ಪರರ ತಿಳುಹದಿರು ವಿ
ವೇಕಿಯಾಗಿ ನಿನ್ನ ನೀನೆ ತಿಳಿದು ನೋಡೆಲೈ ॥ ಪ ॥

ತನ್ನ ತಾನೆ ಪಕ್ವಮಾದ
ಹಣ್ಣು ತೊಟ್ಟು ಕಳಚಿ ಬಿದ್ದು
ಮುನ್ನಿನಂತೆ ಹೋಗಿ ತೊಟ್ಟು ಹತ್ತಬಲ್ಲುದೆ
ಬನ್ನಬಡುವ ಜನ್ಮ ತೀರಿ
ತನ್ನ ನಿಜವ [೧]ಅರಿದ ಆತ್ಮ[೧]
ಮುನ್ನಿನಂತೆ ಲೋಕದವರ [೨]ಕೂಡಬಲ್ಲನೇ[೨] ॥ ೧ ॥

ಹಸಿಯ ಕಾಯ ಕೊಯ್ದು ತಂದು
[೩]ಬಿಸಿಯ[೩] ತೋರಿ ಮುಸುಕಿ ಇಡಲು
ನಸಿದು[೪]ಹೋಹುದಲ್ಲ[೪] ದದುವೆ ಪಕ್ವವಪ್ಪುದೇ
[೫]ವಸುಧೆಯಾತ್ಮನನ್ನು ತಂದು[೫]
ಸಸಿನೆ [೬]ಇಟ್ಟು[೬] ಭೋದಿಸಿದಡೆ
ಅಸಮಜ್ಞಾನಿಯಾಗಿ ಶರಣರೊಳಗೆ ಬೆರೆವನೇ ॥ ೨ ॥

---

೧ ನರಿದ ಮೇಲೆ (ಧಾ) ಅರಿಯದಾತ್ಮ (ಅ) ೨ ಕೂಡಲಪ್ಪುದೇ (ಅ) ೩ ಬಿಸಿಗೆ (ಆಇಕ) ೪ ಕೆಡುವದಲ್ಲ (ಧಾ) ೫ ಒಸೆದು ತಂದು ಆತ್ಮನನ್ನು (ಧಾ) ವಸೆದು ಪಕ್ವ ಆತ್ಮನನ್ನು (ಗ) ವಸೆದು ಪಕ್ವವಾಗದವನ (ಚ) ೬ ತಿಳುಹಿ (ಆಗ) ಎಷ್ಟು (ಕ)

[೧]ಸತ್ಯ ಜ್ಞಾನ[೧] ತಪವು ಮೌನ
ನಿತ್ಯ ಕ್ಷಮೆಯು ದಮೆಯು ಶಾಂತಿ
ಉತ್ತಮತ್ವವಿರಲು ಪಕ್ವವೆಂದು [೨]ತಿಳಿವುದು[೨]
ಒತ್ತಿ ನೋಡಲವರ [೩]ಮನವ[೩]
ಮತ್ತೆ ಬೈದು ಹೊಯ್ದು ನೋಡೆ
ಚಿತ್ರದಲ್ಲಿ ಸ್ವಸ್ಥವಾಗಿ [೪]ಕಲಕದಿರ್ಪುದು[೪] ॥ ೩ ॥

ಹುಸಿಯು [೫]ಹುಳುಕು[೫] ಡಂಭಕತ್ವ
ಕೊಸರು ಕೋಪ [೬]ನೀಚ[೬]ಹೃದಯ
ನುಸುಳು ವಿಷಯ ವಿರಲಪಕ್ವವೆಂದು [೭]ಅರಿವುದು[೭]
ಸಸಿನೆ ಅವನ ಕೆಣಕಿ ನೋಡೆ
ಕಿಸುಕುಳತ್ವ ತೋರುತಿಹುದು
ಒಸೆದು ಅವರ [೮]ತಿಳುಹ[೮] ಸ್ವಸ್ಥ ಶರಣರಪ್ಪರೆ ॥ ೪ ॥

ಇವರ ಭೇದ [೯]ಅರಿಯ[೯]ದನಕ
ಅವರ ತಿಳುಹಿ ಫಲವದೇನು
ಭವಕೆ ಹೋಗಲವರು ತನಗೆ [೧೦]ಕೊರತೆಯಪ್ಪುದೇ[೧೦]
ಭವದ ಕಡೆಯ ಕಂಡ ಬಳಿಕ
ಶಿವನ ನಿಜವು ತಾನೆ[೧೧]ಯಹುದು[೧೧]
[೧೨]ಶಿವ[೧೨] ಷಡಕ್ಷರಾಂಕ ನಿಮ್ಮ ಶರಣರಪ್ಪರು ॥ ೫ ॥

೧ ನಿತ್ಯಜ್ಞಾನ (ಅ) ೨ ಅರಿವುದು (ಆಗ) ೩ ಹೃದಯ (ಆಇ) ೪ ಕದಲದಿಪ್ಪುದು (ಆಇ) ಕಲಕದಿರ್ಪರೆ (ಅ) ೫ ಹುರುಡು (ಆಇಕಗಚ) ೬ ಸಂಚ (ಆಇಗಚ) ೭ ತಿಳಿವುದು (ಆಇಕ) ೮ ತಿಳಿಯೆ (ಧಾ) ೯ ವಳಿಯ (ಧಾ) ೧೦ ತೋರಬರ್ಪುದೆ (ಅ) ಕೊರತೆ ಬಪ್ಪುದೆ (ಗಚ) ೧೧ ಬಹುದು (ಅಗಚ) ೧೨ ಮೃಡ (ಚ)



## ೪೨. ನಿಮ್ಮ ಹಾಗೆ ಕಾಂಬೆನಯ್ಯ *

**ಭೋಗಷಟ್ಪದಿ**

ದೇವ ನಿಮ್ಮ ರೂಪಿನವರು
ಆವ ಪರಿಯ ನಟಿಸುತಿರಲು
[೧]ದೇವ ನಿಮ್ಮ ಹಾಗೆ ಕಾಂಬೆನನ್ಯಗಾಣೆನು[೧] ॥ ಪ ॥

ಚರನದೊರ್ವ ಪರರ ಸತಿಯ
ಕರೆದು ತಂದು ಮುಂದೆ
ನೆರೆಯುತಿರಲು [೨]ಜರಿದು ಅವರ[೨] ನನ್ಯಭಾವದಿ
ಮರಳಿ ಕಂಡೆನಾದಡೆನ್ನ
ಕೊರೆದು ಮೂಗನಿಟ್ಟಿಗೆಯಲಿ
ಒರಸಿ ಕನ್ನಡಿಯನು ತೋರಿ ನಗಿಸು [೩]ಜಗದೊಳು[೩] ॥ ೧ ॥

ಅಳುಕದೊರ್ವ ಚರನು ಕನ್ನ
ಗಳವು ತಂದು ಎನ್ನ ಮುಂದೆ
ಇಳುಹಿಕೊಂಡು ಇರಲು ಅವರನನ್ಯಭಾವದಿ
[೪]ತಿಳಿವೆನಾದೊಡೆನ್ನ ಹಿಡಿದು[೪]
ಘಳಿಲನೆನ್ನ ನಾಲಿಗೆಯನು
ಉಳಿಯದಂತೆ ಕೊರೆದು ಬಿಸುಟಿ ನಗಿಸು ಜಗದೊಳು ॥ ೨ ॥

* ಆಇ – ಪ್ರತಿಗಳಲ್ಲಿ ಈ ಪದ್ಯ ಇಲ್ಲ
ದೇವರೆಂದು ಕಾಂಬೆನಲ್ಲ ದನ್ಯಗಾಣೆನು (ಕ) ೨ ಅರಿಯಲವರ (ಕ) ೩ ಜಗದಲಿ (ಧಾ) ೪ ತಿಳಿದು ಕಂಡೆನಾದೊಡೆನ್ನ (ಕ)

[೧]ಹರನ ರೂಪು ಧರಿಸಿಯೊರ್ವ[೧]
ನೆರೆಯುತಿರಲು ಹೊಲತಿಯನ್ನು
ಅರಿತು ಅವರನನ್ಯ ಭಾವದಿಂದ ಕಂಡೊಡೆ
ಹರನೆ ನೀನೆ ಹಿಡಿದು ಎನ್ನ
ಕರಗಿ ಕಾದಸೀಸವನ್ನು
[೨]ಎರೆದು[೨] ಬಾಯೊಳಿರದೆ ಸುಣ್ಣಗದಡು ತುಂಬಿಸು ॥ ೩ ॥

ಕಳ್ಳರಾಗಲವರು ಬಹಳ
ಸುಳ್ಳರಾಗಲವರು ವಿಷಯ
ದಲ್ಲಿ ಪ್ರೀತರಾಗಿ ತಿರುಗುತಿರಲಿ ಧರೆಯೊಳು
ಒಳ್ಳಿತಪ್ಪ ಶಿವನ ರೂಪ
ದಲ್ಲಿ ಇರಲು ಅವರ ನಾನು
ಖುಲ್ಲತನದಿ ಜರಿದೆನಾದೊಡೆನ್ನ ಶಿಕ್ಷಿಸು ॥ ೪ ॥

ಒಡೆಯ ನಮಗೆ ಏಕೆ ನಾಡ
ಗೊಡವೆ ನಿಮ್ಮ ರೂಪು ಇರಲು
ಒಡೆಯನೆಂದು [೩]ನಮಿಸಿ ಶುದ್ಧರಾಗೊದಲ್ಲದೆ[೩]
ಮೃಡ ಷಡಕ್ಷರಾಂಕ ನಿಮ್ಮ
[೪]ಬೆಡಗು ತಿಳಿಯಬಾರದಾಗಿ[೪]
ಒಡೆಯರುಗಳ[೫]ನಂತುಇಂತು[೫] ಎನ್ನಬಾರದು ॥ ೫ ॥

---

೧ ಹರನ ರೂಪು ಧರೆಯೊಳೊರ್ವ (ಕ) ೨ ಎರಸಿ (ಅಗಚ) ೩ ನಮಿಸೆ ಶುದ್ಧ ಹಲವದೇತಕೆ (ಧಾ) ನಮಿಸಿ ಶುದ್ಧನಾದೆ ಹಲವದೇತಕೆ (ಚ) ನಮಿಸಿ ಶುದ್ಧ ಹಲವದೇತಕೆ (ಗ) ೪ ಬಿಡದೆ ಬೇಡುತಿಹೆನು ನಾಮ (ಕ) ೫ ತಿಳಿಯಲರಿಯೆವಾಗಿ (ಧಾ)



## ೪೩. ನನ್ನ ಮೇಲೆ ಹಗೆಯೇಕೆ *

**ಭೋಗಷಟ್ಪದಿ**

ಮುನ್ನ ನಮ್ಮ ಶರಣರುಗಳು
ನಿನ್ನ ಕಾಡಿದುದಕೆ ಈಗ
ಎನ್ನಮೇಲೆ ಹಗೆಯ [೧]ಮಗುಚುತಿಹೆಯೊ[೧]ಕಾಣೆನು ॥ ಪ ॥

ಶರಣ ನಂಬಿಯಣ್ಣ ಹಿಂದೆ
ತಿರುಗಿಸಿದನು ಹಡಪ ಹಿಡಿಸಿ
ಬೆರೆಸಿ ಕೊಲ್ಲಬಂದ[೨]ಕಲಿಯ[೨] [೩]ಕಾಯ[೩]ನೆನುತಲಿ
ಪರಮ [೪]ಮೂಗಿದೇವ[೪] ತನ್ನ
ಹೊರೆಯ ಹೊರಿಸಲಾಗಿ ತಲೆಯು
ಉರಿದು[೫]ದಕ್ಕೆ ಎನ್ನ ಕಾಡುತಿಹೆಯೋ ಕಾಣೆನು[೫] ॥ ೧ ॥

ಚೋಳಿಯಕ್ಕ ಉಂಡು [೬]ಬಿಟ್ಟ[೬]
ಹಾಲಹುಗ್ಗಿಯನ್ನು ಮರೆಸಿ
ಹೇಳದಾಕೆ ತನಗೆ ಕೊಟ್ಟಳೆಂಬ ಸಿಟ್ಟಿಗೆ
ಚೋಳರಾಯ ತನ್ನ ಕೆರೆಗೆ
ಬಾಳವಾಗಿ ಮಣ್ಣ ಹೊರಸಿ
ಆಳುಗೊಳಲು ಎನ್ನ ಕಾಡು[೭]ತಿಹೆಯೊ[೭] ಕಾಣೆನು ॥ ೨ ॥

---

* ಆಇ – ಪ್ರತಿಗಳಲ್ಲಿ ಈ ಪದ ಇಲ್ಲ

೧ ಮಚ್ಚುತಿಹರೋ (ಚ) ಮಗುಚುತಿಹರೊ (ಗ) ೨ ಕವಿಯ (ಅ) ೩ ಕಾಮ (ಕಗಚ) ೪ ಅಮುಗಿದೇವ (ಕಗಚ) ೫ ಎನ್ನ ಕಾಡಿದಪಿರೊ ಕಾನಬಾರದು (ಕ) ೬ ಬಿಸುಟಿ (ಗಚ) ೭ ಕಾಡಿದಪಿರೊ (ಅಕಗಚ)

ಸತ್ತಿಯಕ್ಕ ಹುಟ್ಟಿ[೧]ನಿಂದ[೧]
ಒತ್ತಿ [೨]ತನ್ನ[೨] ತಿವಿದಳೆಂದು
[೩]ಮಿಥ್ಯ[೩] ತನವ [೪]ಮಡಗಿ[೪]ಕೊಂಡು ಮತ್ತದಲ್ಲದೆ
ನಿತ್ಯ [೫]ಸಾಂಖ್ಯತೊಂಡ ನಿಮ್ಮ
ನೆತ್ತಿ ಕಲ್ಲಿಲಿಟ್ಟನವರ[೫]
ಭೃತ್ಯನಿವನು ಎಂದು ಕಾಡು[೬]ತಿಹೆಯೊ[೬] ಕಾಣೆನು ॥ ೩ ॥

ಶಂಭು ನೀವು ಉಣ್ಣದಿರಲು
ನಂಬಿಯಕ್ಕ ಕೊಲ್ಲಬಂದ
ಳೆಂಬ ಸಿಟ್ಟು ಮಡಗಿಕೊಂಡು ಮತ್ತದಲ್ಲದೆ
ಕುಂಭಿಣಿಯೊಳು ಬಾಣ ಬೈದ
ನಂಬಿದವನು [೭]ನಾನು[೭] ಅವರ
ನೆಂಬ [೮]ಸಿಟ್ಟಿನಿಂದ ಕಾಡುತಿಹೆಯೊ[೮] ಕಾಣೆನು ॥ ೪ ॥

ಅಲ್ಲದಿರ್ದೊಡೆನ್ನನೇಕೆ
ಇಲ್ಲಿ ಕಾಡಿದಪಿರಿ ನೀವು
ಎಲ್ಲರಲ್ಲಿ ಕರುಣಿಯೆಂಬರಯ್ಯ ನಿಮ್ಮನು
ಪುಲ್ಲ [೯]ವಿಶಿಖಮಯನಿ[೯]ಗೆನ್ನ
ನಿಲ್ಲಿ ಕೊಡದೆ ನಿಮ್ಮ ಚರಣ
ದಲ್ಲಿ ಎನ್ನನಿರಿಸು ಷಡಕ್ಷರಿಯ ಲಿಂಗವೆ ॥ ೫ ॥

---

೧ಯಲ್ಲಿ (ಅ) ನಲ್ಲಿ (ಕಗಚ) ೨ ನಿನ್ನ (ಕಗಚ) ೩ ಮತ್ತ (ಕ) ನಿತ್ಯತ್ವವನು (ಚ) ೪ ಇರಿಸಿ (ಕ) ೫ ಸೌಖ್ಯಕೊಂಡ ನಿಮ್ಮ ನೆತ್ತಿಯನ್ನು ಕುಟ್ಟಿದವರ (ಧಾ) ೬ ಕಾಡಿದಪಿರೊ (ಕ) ೭ ಇವನು (ಕಗಚ) ೮ ಸಿಟ್ಟಿಗವರ ಕಾಡಿದಪಿರೊ (ಅ) ಸಿಟ್ಟಿಗೆನ್ನ ಕಾಡಿದಪಿರೊ (ಕಗಚ) ೯ ವಿಸಿಯಮನಿ (ಚ)



## ೪೪. ಮನವನಾಳ್ವರಾರ ಕಾಣೆನು

**ಭೋಗಷಟ್ಪದಿ**

ಹುಲಿಯ ಕರಡಿ ಕರಿಯ ಫಣಿಯ
ಬಲುಹಿನಿಂದಲಾಳ್ವ [೧]ರುಂಟು[೧]
ಚಲಿಸದಂತೆ ಮನವನಾಳ್ವರಾರ ಕಾಣೆನು ॥ ಪ ॥

ಮೊರೆದು ಗರ್ಜಿಸುತ ಬರುವ
ಹಿರಿಯ ಹುಲಿಯ ಹಿಡಿದು ತಂದು
ಇರದೆ ತಮ್ಮ ಇಚ್ಛೆಯಲ್ಲಿ ಆಳುತಿರ್ಪರು
ಚರಿಸುತಿರ್ಪ ಕಿರಿಯ ಮನವ
ಪರಮಲಿಂಗದಲ್ಲಿ ಇರಿಸಿ
[೨]ಹರಿಯದಂತೆ[೨] ಆಳ್ವ ಹಿರಿಯರುಗಳ ಕಾಣೆನು ॥ ೧ ॥

ಕರಿಯ ಹಿಡಿದು ನಿಲಿಸಬಹುದು
ಕರಡಿಯನ್ನು ಕಟ್ಟ [೩]ಬಹುದು[೩]
ಮೊರೆವ ಫಣಿಯ [೪]ಹೆಡೆಯ[೪] ಕೈಯೊಳಿರಿಸಬಹುದೆಲ್ಲೈ
ಕಿರಿಯ ಮನವ ಹಿಡಿದು ತಂದು
ಇರಿಸಿ ಲಿಂಗದಲ್ಲಿ [೫]ನೆರೆವ[೫]
ಹಿರಿಯರುಗಳ ಕಾಣೆ [೬]ಬರಿಯ ಬಲ್ಮೆ[೬] ನುಡಿವರು ॥ ೨ ॥

---

೧ ಬಹುದು (ಆಇ) ೨ ಚರಿಸದಂತೆ (ಕಗಚ) ೩ ಲಹುದು (ಆ) ೪ ಹೇಳಿಗೆಯಲ್ಲಿ (ಕಗ) ಹೇಳಿಗೆ (ಆಇ) ೫ ಬೆರೆವ (ಗ) ನೆನೆವ (ಚ) ನೆರವ (ಕ) ೬ ಸುರಿಯಬಲ್ಲ (ಅ) ಬಲು (ಗಚ) ಬಾಹ್ಯ (ಕ)

ಹರಿಸುರೇಂದ್ರದಿವಿಜರುಗಳ
ಪರಮಯೋಗಿ ಮನುಮುನಿಗಳ
ಮರವೆಯೆಂಬ ಕೂಪದಲ್ಲಿ ಇಕ್ಕಿ ತುಳಿವುದು
[೧]ಹಿರಿಯ ಧ್ಯಾನಿ ಮೌನಿಯೆಂಬ[೧]
ಹಿರಿಯರುಗಳ[೨]ನೆಲ್ಲರನ್ನು[೨]
ಅರಿವುಮರವೆಯಲ್ಲಿ ಇಕ್ಕಿ ನುಸುಳಿ ಪೋಪುದು ॥ ೩ ॥

ಜಪದ ಬಲುಮೆಯಲ್ಲಿ ಇರದು
ತಪದ ಉಗ್ರಕಂಜಿ ನಿಲದು
ಅಪರಿಮಿತದ ಶಾಸ್ತ್ರಪಾಠಕರಿಗೆ [೩]ಸಿಲುಕದು[೩]
ಚಪಲ[೪]ತನದಿ[೪] ಹಿಡಿವೆನೆನಲು
ಉಪರಿಯಾಗಿ ನಿಲುಕದಿಹುದು
[೫]ಗುಪಿತ[೫]ಮನವ ಹಿಡಿವ ಪರಿಗಳಾವುವೆಂದೊಡೆ ॥ ೪ ॥

[೬]ಮುನ್ನ[೬] ತಾನು ಯಾರು ಎಂದು
ತನ್ನ ನಿಜವನರಿದ ಬಳಿಕ
ಚನ್ನ ಷಡಕ್ಷರಿಯ ಲಿಂಗ ತಾನೆಯಾಗಿಹ
[೭]ಇನ್ನು ಸರ್ವಜಗವದೆಲ್ಲ
ತನ್ನ [೮]ನಿಲುವೆ[೮]ಯಾಗಿ ತಾಗಿ
ಅನ್ಯವಿಲ್ಲವಾಗಿ ಮನವು ತಾನೆ ನಿಲುವುದು[೭] ॥ ೫ ॥

೧ ಹಿರಿದು ಧ್ಯಾನ ಮೌನವೆಂಬ (ಅಆಇಕಗಚ) ೨ ಎಲ್ಲವನ್ನು (ಅಆಇಗ) ೩ ನಿಲುಕದು (ಅ) ೪ ಮನದಿ (ಅ) ೫ ಕುಪಿತ (ಧಾ) ೬ ತನ್ನ (ಆಇಕ) ೭ ಆಇ–ಪ್ರತಿಗಳಲ್ಲಿ ಈ ಸಾಲುಗಳು ಇಲ್ಲ ೮ ನಿಜವೆ (ಚ)



## ೪೫. ಏನು ಮಾಡಲಯ್ಯ

### ಭೋಗಷಟ್ಪದಿ

ಏನು ಮಾಡಲಯ್ಯ ಎನ್ನ
ಹೀನ[೧]ಮನದ[೧] [೨]ಬಯಕೆಗಳನು[೨]
ಜ್ಞಾನ ಖಡ್ಗದಿಂದ ಕಡಿವರಾರ ಕಾಣೆನು ॥ ಪ ॥

ಹಿಡಿವುದದನೆ ಹಿಡಿಯದಯ್ಯ
ಹಿಡಿಯದದನೆ ಹಿಡಿವುದಯ್ಯ
ಕೆಡುವ ನಡೆಯ ನಡೆಸಿ ಎನ್ನ ಭವಕೆ ಬರಿಸಿತು
ಬಡವ ನಾನು ಕಾಡುತಿಹುದು
[೩]ಹಿಡಿದು ಮನದ ಕೈಯ ಕಾಲ[೩]
ಕಡಿದು ಕಡಿದು ಹಾಕುವವರನಾರ ಕಾಣೆನು ॥ ೧ ॥

ನಾನು ನಿಮ್ಮ ನೆನೆವೆನೆನಲು
ತಾನು ನಿಮ್ಮ ನೆನೆಯದಯ್ಯ
ಶ್ವಾನನಂತೆ ಹಲವು ಕಡೆಗೆ ಹರಿಯುತಿರ್ಪುದು
ಧ್ಯಾನಮೌನಜಪದೊಳಿರದು
ನಾನು ಇದರ ಸಂಗದಿಂದ
ಜ್ಞಾನಹೀನನಾಗಿ [೪]ಕೆಟ್ಟುಹೋದೆನಕ್ಕಟಾ[೪] ॥ ೨ ॥

* ಆಇ – ಪ್ರತಿಗಳಲ್ಲಿ ಈ ಪದ ಇಲ್ಲ
೧ ಗುಣದ (ಚ) ೨ ಅವಯಂಗಳ (ಕಗಚ) ಅವಯವಗಳ (ಅ) ೩ ಹಿಡಿಯುವವರ ನಾನು ಕಾಣೆ (ಧಾ) ೪ ಹೋದನಕ್ಕಟಕ್ಕಟ (ಧಾ)

ಅಂಗಗುಣದ ನಡೆಗಳೆನಲು
[೧]ಹಿಂಗಿಸುತ್ತ[೧] ಬರುತಲಿಹುದು
ಲಿಂಗನೆನಹು ಎನಲು [೨]ಎಲ್ಲೊ[೨] ನುಸುಳಿ ಪೋಪು[೩]ದು[೩]
ಮಂಗಳಾತ್ಮ ಷಡಕ್ಷರಿಯ
ಲಿಂಗ ನಿಮ್ಮ [೪]ನೆನೆಯದಿರ್ಪ[೪]
ಕೊಂಗು ಮನವ ಶಿಕ್ಷಿಸೆನ್ನ ಅಳಲು ಪೋಗಲಿ ‖ ೩ ‖

೧ ಅಂಗಿಸುತ್ತ (ಅ) ಲಂಘಿಸುತ್ತ (ಕಗಚ) ೨ ಎಲ್ಲಿ (ಕಗಚ) ೩ ದೊ (ಅ)
೪ ಭಜಿಸದಿರ್ಪ (ಕ)



## ೪೬. ಕಾಡಲೇಕೆ ನರರುಗಳನು

### ಭೋಗಷಟ್ಪದಿ

ಕಾಡಲೇಕೆ ನರರುಗಳನು
ಬೇಡಿ ಬಳಲಲೇಕೆ ಮನವೆ
ರೂಢಿಗೀಶ[೧]ನೆಮಗೆ[೧] [೨]ದೈವವಾಗೆ[೨] ಇರುತಿರೆ ‖ ಪ ‖

ಮೃಡನ ಪೂಜೆ ಮಾಡುವುದಕೆ
ಮಡುವಿ[೩]ನಗ್ಗವಣಿ[೩]ಗಳುಂಟು
ಅಡವಿಯಲ್ಲಿ ಕಾಡಪ[೪]ತ್ರಿ[೪]ಪುಷ್ಪವುಂಟಲೈ
ಒಡಲಿಗನ್ನ [೫]ತಿರಿದರುಂಟು[೫]
ಗುಡಿಗಳುಂಟು ಶಯನಕೆ [೬]ಮ[೬]ಗೆ
ಒಡೆಯರುಗಳು [೭]ಬಿಸುಟಿದರುವೆ[೭] ಶೀತಕುಂಟಲೈ ‖ ೧ ‖

ಬುದ್ಧಿಯನ್ನು ಹೇಳುವುದಕೆ
ಆದ್ಯರುಗಳ ವಚನವುಂಟು
ಉದ್ಧರಿಸುವಡೆಮಗೆ ಶಿವ ಮಂತ್ರವುಂಟೆಲೈ
ಅರ್ಧನಾರಿಯೆಂಬ ದೈವ
ಇದ್ದ ಬಳಿಕ ಕರದೊಳೆಮಗೆ
ಹೊದ್ದಲೇಕೆ ನರರ ಆಶೆ ಮಾಡೆನಕ್ಕಟ ‖ ೨ ‖

೧ ಎನಗೆ (ಗಚ) ೨ ಕರುಣವಾಗಿ (ಕ) ೩ ಅಘ್ರಣಿ (ಅಆ) ೪ ತ್ರೆ (ಕಗಚ)
೫ ದುಡಿದರುಂಟು (ಧಾ) ೬ ನ (ಧಾ) ೭ ಬಿಟ್ಟಿರುವರುವೆ (ಆ)

ಮಿಗಿಲು ಮನೆಗಳೇತಕೆ[೧]ಮ೧[ಗೆ]
ಅಗಲಲೇಕನುಭಾವಿಗಳ
ಜಗದೊಳೆಮಗೆ ಹಲವು ಕೋಟಲೆಗಳು [೨]ಏತಕ್ಕೆ[೨]
ಸೊಗಸು ಷಡಕ್ಷರಿಯ ಲಿಂಗ
ಅಗಲದೆಮ್ಮ ಕರದೊಳಿರಲು
ಬೆಗಡುಗೊಳ್ಳಲೇಕೆ ಮನವೆ [೩]ನರರಮಾಳ್ಕೆಯಿಂ[೩] ॥ ೩ ॥

---

೧ ನ (ಧಾ) ೨ ಏತಕೆ (ಕಗಚ) ೩ ನರರಿಗಕ್ಕಟಾ (ಆ)



## ೪೭. ವಿರತಿ ಸುಲಭವಲ್ಲವಯ್ಯ

### ಭೋಗಷಟ್ಪದಿ

ವಿರತಿ ವಿರತಿ ಎಂಬರಯ್ಯ
ವಿರತಿ ಸುಲಭವಲ್ಲವಯ್ಯ
ವಿರತಿ ತನುವಿನಾಶೆ [೧]ಯಳಿದೊಡಾತ[೧] ವಿರತನು ॥ ಪ ॥

ಅನ್ನವನ್ನು [೨]ಉಳಿದು[೨] ತನುವ
ಸಣ್ಣಿಸಿರಲು ಬಹುದು ವಸ್ತ್ರ
ವನ್ನು ಬಿಟ್ಟು [೩]ದಿಗಂಬರದೊಳಡಾಬಹುದೆಲ್ಲೈ[೩]
ಎಣ್ಣೆ ನೀರನುಳಿದು ಜಡೆಗ
ಳನ್ನು ಮಾಡಿಕೊಳಲು
ತನ್ನ ದೇಹ [೪]ಭಾವವಳಿದೊಡಾತ ವಿರತನು[೪] ॥ ೧ ॥

ತನ್ನ ನಿಜವ ತಿಳಿದು ನೋಡಿ
ತನ್ನ ತನುವಿದಲ್ಲ ಕೃತಕ
ವನ್ನು ಹಿಡಿದು ಆಡಬಾರದೆಂದು [೫]ತಿಳಿವುತ[೫]
ಅನ್ಯರುಗಳ ಒಡವೆಯಂತೆ
ತನ್ನ ತನುವಿನಲ್ಲಿ ಮೋಹ
ವನ್ನು ಉಳಿದು ಆಡಬಲ್ಲಡಾತ ವಿರತನು ॥ ೨ ॥

---

೧ ತಡೆದರಾಗ (ಅ) ೨ ಉಳಿದ (ಧಾ) ೩ ದಿಗಂಬರತ್ವವಾಗಬಹುದಲ್ಲೈ (ಅ) ದಿಗಂಬರದಿ ಚರಿಸಬಹುದಲ್ಲೈ (ಚ) ೪ ಅಳಿಯೆ ವಿರತಿಯಪ್ಪುದೂ (ಅ) ಆಸೆ ಅಳಿದೊಡಾತ (ಆ) ದಾಸೆಯಳಿದ ವಿರತಿಯತಿಶಯಾ (ಗ) ದಾಸೆಯಳಿದಡಾತನತಿಶಯಾ (ಚ) ೫ ತಿಳಿಯುತ (ಅಆ)

ಕರಿಯು ಕರಡಿ ವ್ಯಾಘ್ರ [೧]ಸಿಂಹ[೧]
ಉರಗ ಸಿಡಿಲು ಚೋರರಿಂದ
[೨]ಮರಣಭೀತಿ ಇಲ್ಲದಿರ್ದೊಡಾತ ಜಗದೊಳು[೨]
ಪರಮಷಡಕ್ಷರಿಯ ಲಿಂಗ
[೩]ವರಿದು[೩] ಚರಿಸುತಿರ್ಪನಾಗಿ
ನಿರುತ ಲೋಕ[೪]ಭರಿತಚರಿತ ವಿರತ[೪]ನಾತನು ॥ ೩ ॥

೧ ಭೂತ (ಆಕ) ೨ ಮರಣವಿಲ್ಲದಿರ್ದೊಡಾತ ವಿರತನದರೊ ೩ ದಿರುವೆ (ಅಆಗ) ೪ ಭರತಿವಿರತ (ಗ) ಭರಿತಚರಿತ ವಿರತ (ಕಚ)



## ೪೮. ನೀನು ರಕ್ಷಿಸಭವ

### ಭೋಗಷಟ್ಪದಿ

ದೇವನೀನು ರಕ್ಷಿಸಲ್ಪ
ಜೀವಿ ನಾನು ಕರುಣಿ ನೀನು
ಸಾವುಹುಟ್ಟು [೧]ಗಳಿಗೆ ಬೆದರಿ[೧] ಹೆದರುತ್ತೈದೆನೆ ॥ ಪ ॥

ಎಡಹಿಬೀಳಬಲ್ಲೆ [೨]ನಾನು[೨]
ಒಡನೆ ಏಳಲರಿಯೆನಯ್ಯ
ನುಡಿಯಬಲ್ಲೆನಯ್ಯ ಮಿಗಿಲು [೩]ನಡೆಯಲಾರೆನು[೩]
ನುಡಿದ ಹಾಗೆ ನಡೆಯದವರ
ಒಡೆಯ ನೀನು ಒಲ್ಲೆಯವರ
ನಡೆಗಳಿಲ್ಲದಧಮ ನಾನು ರಕ್ಷಿಸೆನ್ನನು ॥ ೧ ॥

ಭಕ್ತಿ ಎನಗೆ ಇಲ್ಲವಯ್ಯ
ನಿತ್ಯಜ್ಞಾನವಿಲ್ಲವೆನಗೆ
ಮತ್ತೆ [೪]ವಿರತಿ ಎನಗೆ ಮೊದಲೆ[೪] ತಾನೆ ಇಲ್ಲವು
ಕರ್ತೃ ನೀನೆ ಒಲಿದು [೫]ನಿಮ್ಮ[೫]
ಚಿತ್ತದಲ್ಲಿ ಕರುಣ ಹುಟ್ಟಿ
ಎತ್ತಿ ರಕ್ಷಿಸೆನ್ನನಲ್ಲದಿರಲು [೬]ಕೆಡುವೆನು[೬] ॥ ೨ ॥

೧ ವುದಕೆ ನಾನು (ಕ) ವುದಕೆ ಹೆದರಿ ಬೆದರುತ್ತೈದೆನೆ (ಗಚ) ೨ ನಯ್ಯಾ (ಕ) ೩ ನಡಿಯಲರಿಯನು (ಕ) ನಡೆಗಳರಿಯೆನು (ಅಗಚ) ೪ ವೈರಾಗ್ಯ ಮುನ್ನ (ಅಆ) ಎನಗೆ ವೈರಾಗ್ಯವು ಮುನ್ನ ಇಲ್ಲವು (ಕಗಚ) ೫ ನೀನೆ (ಆ) ೬ ಕಡೆಗೆ ಕೆಡುವೆನು (ಚ)

ನರಶರೀರವೆಂಬ ದೊಡ್ಡ
ಹಿರಿಯ [೧]ಕೋಳ[೧]ದೊಳಗೆ ಸಿಕ್ಕಿ
ಕರಗಿಕೊರಗಿಮರುಗಿ [೨]ಅಳಲಿ[೩] ಬಳಲುತ್ತೈದೆನೆ
[೪]ಮರುಕ[೫]ವೇಕೆ ಇಲ್ಲವಯ್ಯ
ಕರುಣಿಯೆಂಬರಯ್ಯ [೪]ನಿಮ್ಮ[೪]
ಕೊರತೆ [೫]ನಿಮಗೆ[೫] ಬಾರದಂತೆ ರಕ್ಷಿಸೆನ್ನನು ॥ ೩ ॥

[೬]ಧೀರ[೬]ನಲ್ಲವಯ್ಯ [೭]ನಾನು[೭]
[೮]ವೀರ[೮]ನಲ್ಲವಯ್ಯ [೯]ಶಿವನೆ[೯]
[೧೦]ಘೋರ[೧೦]ತನುವ ತೊಡಿಸಿ [೧೧]ಎನ್ನನಿಳೆಗೆ[೧೧] ಬಿಟ್ಟಿರಿ
ಮಾರಹರನೆ [೧೨]ನಿನ್ನನುಳಿದು[೧೨]
ದೂರ ಕೇಳ್ವರಾರು [೧೩]ಎನ್ನ[೧೩]
[೧೪]ಪಾರಗಾಣಿಸಯ್ಯ[೧೪] ಕರುಣಶರಧಿ ಚಂದ್ರಮ ॥ ೪ ॥

ಕರುಣಿ ನೀನೆ ಬಲ್ಲೆ [೧೫]ನಾನು[೧೫]
ಹರಗಣೆನಲು [೧೬]ಕರುಣಿಸಿದಿರಿ[೧೬]
ಇರದೆ ಅಹರ ಪ್ರಹರ[೧೭]ವೆ[೧೭]ನಲು ಒಡನೆ ಒಲಿದಿರಿ
ಸರಿದ ಕುಸುಮ [೧೮]ಶಿವನಿಗೆನಲು[೧೮]
ಕರುಣಿಸಿದಿರಿ [೧೯]ಬಿಡದೆ ಎನ್ನ[೧೯]
ಕರುಣಿಸಯ್ಯ [೨೦]ಪರಮ[೨೦] ಷಡಕ್ಷರಿಯ ಲಿಂಗವೆ ॥ ೫ ॥

---

೧ ಕೊಳ (ಗಚ) ೨ ಬಳಲಿ (ಆ) ೩ ಮರುಳ(ಗ) ೪ ನಿನಗೆ (ಆ) ೫ ನಿನಗೆ (ಅ) ೬ ವೀರ (ಆಕ) ೭ ಶಿವನೆ (ಅಗಚ) ೮ ಧೀರ (ಆಕ) ೯ ನಾನು (ಧಾ) ೧೦ ತೋರ (ಆ) ೧೧ ಇಳಿಯ (ಆಗ) ಎನ್ನನಿಲ್ಲಿ (ಧಾ) ಎನ್ನನಿಲ್ಲೇ (ಕ) ೧೨ ನೀನೆ ವುಳಿದು (ಅಆಗ) ನಿಮ್ಮ ಕರುಣ (ಕ) ೧೩ ಕಾಣೆ (ಆಕ) ೧೪ ಮಾರವೈರಿ ಸಲಹು (ಧಾ) ಪಾರವೈದಿಸೈಯ್ಯಾ (ಅಆಗ) ೧೫ ನಯ್ಯ (ಕ) ೧೬ ಪಾಲಿಸಿದಿರಿ (ಆ) ೧೭ ನೆ (ಗ) ೧೮ ಹರನಿಗೆನಲು (ಧಾ) ೧೯ ಎನಗೆ ಬಿಡದೆ (ಕ) ೨೦ ವರ (ಆ)



## ೪೯. ಎಂದಿಗಪ್ಪುದೋ

### ಭೋಗಷಟ್ಪದಿ

ಲಿಂಗವಂಗದಲ್ಲಿ ಇರಲು
ಲಿಂಗ[೧]ವೆಂದು[೧] ಕಾಂಬ ಮನವ
ಲಿಂಗ ನೀನೆ ಕೊಟ್ಟು ಸಲವು ಬಯಕೆ ಎನಗಿದು ॥ ಪ ॥

ಅಂದಣವನ್ನೇರಿ ಭಕುತ
ಗೊಂದಣ[೨]ದಿಂ[೨] ನುತಿಸಿಕೊಳುತ
ಚಂದದಿಂದ ಬರಲು ಆಚೆಯಲ್ಲಿಯೊರ್ವರು
ಕುಂದಿಕುಸಿದು ವೃದ್ಧರಾಗಿ
ಚಂದವಳಿದು [೩]ಬರಲು ಅವರ[೩]
ಇಂದುಧರನ ಸಮ[೪]ವ[೪]ಕಾಣ್ಬುದೆಂದಿಗಪ್ಪುದೊ ॥ ೧ ॥

ಯತಿಗಳೆನಿಸಿಕೊಂಡು ಕಾಮ
ಜಿತರು ಎನಿಸಿಕೊಂಡು [೫]ಜ್ಞಾನ[೫]
[೬]ಮತಿಗಳೆನಿಸಿಕೊಂಡು[೬] ಬರಲು ಆಚೆಯೊರ್ವರು
ಸತಿಯ ಕೂಡಿಕೊಂಡು [೭]ಬರುತ
ನುತಸುಲಿಂಗ ಕೊರಳೊಳಿರಲು[೭]
[೮]ಶಿತಿಸುಕಂಠ[೮]ನೆಂದು ಕಾಂಬುದೆಂದಿಗಪ್ಪುದೋ ॥ ೨ ॥

---

೧ ವೆಂಬ (ಆಇ) ೨ ದಲಿ (ಅಆಇ) ೩ ಬಳಲುವವರ (ಧಾ) ೪ ವು (ಧಾ) ೫ ಧರೆ (ಅ) ೬ ವ್ರತಿಗಳೆನಿಸಿಕೊಂಡು(ಆಇ) ೭ ಪುತ್ರಯುತರು ಸಹಿತ ಬರಲು ಅವರ (ಅ) ೮ ಕಪ್ಪುಗೊರಲನೆಂದು (ಚ)

[೧]ವಸ್ತ್ರಭೂಷಣವನ್ನು ಹೊದೆದು[೧]
ಪುಸ್ತಕವನು ಹಿಡಿದುಕೊಂಡು
ಅರ್ತಿಯಿಂದ ಬರಲು ಆಚೆಯಲ್ಲಿಯೊರ್ವರು
ಹಸ್ತ ಪಾದ ಮುಡುಬರಾಗಿ
ಹಸ್ತದಲ್ಲಿ ಲಿಂಗವಿರಲು
ವಸ್ತುವೆಂಬ ಕಾಂಬ ಮನವು ಎಂದಿಗಪ್ಪುದೊ ॥ ೩ ॥

ಕಾವಿಯಂಬರವನು ಹೊದೆದು
ಸಾವಿರಕ್ಷಮಾಲೆ ಕೊರಳ
ತೀವಿ ಧರಿಸಿ ಬರಲು ಆಚೆಯಲ್ಲಿಯೊರ್ವರು
ಸೇವಕತ್ವದಿಂದ [೨]ತುರುವ[೨]
ಕಾವುತಿರಲು ಲಿಂಗ[೩]ವಿರಲು[೩]
ದೇವನೆಂದು ಕಾಂಬ ಮನವದೆಂದಿಗಪ್ಪುದೊ ॥ ೪ ॥

[೪]ಸ್ಪಷ್ಟ[೪]ವಾಗಿ ನುಡಿದು ಶಾಸ್ತ್ರ
[೫]ಶ್ರೇಷ್ಠ[೫]ರೆನಿಸಿಕೊಂಡು ಭಕುತಿ
[೬]ನಿಷ್ಠೆ[೬]ವಂತರಾಗಲಾಚೆಯಲ್ಲಿಯೊರ್ವರು
ಕುಷ್ಠರಾಗಿ ಹಸ್ತಪಾದ
ನಷ್ಟರಾಗಿ ಇರಲು [೭]ಅವರು[೭]
ಸೃಷ್ಟಿಗೀಶನೆಂದು ಕಾಂಬುದೆಂದಿಗಪ್ಪುದೊ ॥ ೫ ॥

ಕುರಿಯ ಕಾಯುತಿರಲಿ [೮]ಅ[೮]ವರು
[೯]ಕರುವ[೯] ಕಾಯತಿರಲಿ ಅವರು
ಕೆರವ ಹೊಲಿಯುತಿರಲಿ ಅವರು ಲಿಂಗವಂಗದಿ

೧ ವಸ್ತ್ರಾಭರಣವಲಂಕರಿಸಿ (ಅಕಗಚ) ೨ ದನವ (ಆಇ) ೩ ವಿಡಿದು (ಕಗಚ) ೪ ಶ್ರೇಷ್ಠ (ಗಚ) ೫ ಭ್ರಷ್ಟ (ಅ) ೬ ನೈಷ್ಠೆ (ಕಗಚ) ೭ ಅವರ (ಕಗಚ) ೮ ಯ (ಗ) ೯ ತರುವ (ಧಾ)



ಧರಿಸಿ ಭಸಿತವಕ್ಷಮಾಲೆ
ಇರಲು ಶಿವನ ಸಮವದೆಂದು
ಅರಿದು ಶರಣು ಮಾಡುತಿರ್ಪುದೆಂದಿಗಪ್ಪುದೊ ॥ ೬ ॥

ಅಷ್ಟಷಷ್ಠಿ ತೀರ್ಥಗಳನು
ಮೆಟ್ಟಿ ಬಂದ [೧]ಮಹಿಮೆ[೧]ಯನ್ನು
[೨]ದೃಷ್ಟಗೊಳಿಸಿ[೨] ಮೆರೆಯಲಾಚೆಯಲ್ಲಿಯೊರ್ವರು
[೩]ಕಟ್ಟಿಗೆಯನು ಹೊತ್ತುಕೊಂಡು
ಕಷ್ಟಪಡುತ[೩] ಬರಲು ಅವರ
ಶ್ರೇಷ್ಠರಿವರು ಎಂದು ಕಾಂಬುದೆಂದಿಗಪ್ಪುದೊ ॥ ೭ ॥

ಮಲಿನಕಾಯರಾಗಿ ಬಹಳ
ಮಲಿನಕಪಡವನ್ನು ಹೊದೆದು
[೪]ಹೊಲೆಯರಂಗಳದಲಿ[೪] ಮನೆಯ ಕಟ್ಟಿಕೊಂಡಿರೆ
ಚಲುವಲಿಂಗವಂಗದಲ್ಲಿ
ನೆಲಸಿ ಇರಲು ಅವರ ಶಿವನ
ಕುಲವಿದೆಂದು ನಮಿಸುತಿರ್ಪುದೆಂದಿಗಪ್ಪುದೊ ॥ ೮ ॥

ಕಾಕರಾಗಲವರು ವಿಷಯ
ನೀಕರಾಗಲವರು ಬಹಳ
ಪೋಕರಾಗಲವರ ಅಂಗದಲ್ಲಿ ಲಿಂಪು
ಸೋಂಕಿ ಸೊಗಸುತಿರಲು ಅವರ
ನೇಕನಾಥನೆಂದು ಕಾಂಬ
ಏಕ [೫]ಚಿತ್ತವೆನಗೆ[೫] ಬಿಡದೆ ಎಂದಿಗಪ್ಪುದೊ ॥ ೯ ॥

೧ ಬಣಿಮೆ (ಆಇ) ೨ ದೃಷ್ಟವಾಗಿ (ಕಗಚ) ೩ ಕಟ್ಟಿ ಹೊತ್ತುಕೊಳಲು ಮಿಣಿಯ ಬಟೆಯಲ್ಲಿ (ಅಕಗಚ) ೪ ಹೊಲೆಯ ನಿಂದದಲ್ಲಿ (ಅ) ೫ ಅಚ್ಚೆ ಎನಗೆ (ಅ)

ಹಗೆಗಳಣ್ಣ ತಮ್ಮ ಹಿತವ
ಬಗೆವ ತೊತ್ತು ಮಿತ್ರ ಬಂಟ
ಅಗಲದಿರ್ಪ ಸತಿ ಸುಪುತ್ರ ಮಾತೆ ಪಿತರೊಳು
ಸೊಗಸಿ ಬೆಳಗುತಿರಲು ಲಿಂಗ
ಅಗಲದವರ ಅಂಗದಲ್ಲಿ
ನಗಜೆ ಪತಿಯ ಸಮವ ಕಾಂಬುದೆಂದಿಗಪ್ಪುದೊ॥ ೧೦ ॥

ವೇಶಿಯರನು ಕೂಡಿಕೊಂಡು
ಓಸರಿಸದೆ ಅವರ ಹೆಗಲ
ವಾಸದಲ್ಲಿ ತೋಳನಿಡಿದುಕೊಂಡು ಬರುತಿರೆ
ಈಶ ಲಾಂಛನಗಳು ಇರಲು
ಶ್ರೀ ಷಡಕ್ಷರಾಂಕನೆಂದು
ಓಸರಿಸದೆ ನಮಿಸುತಿರ್ಪುದೆಂದಿಗಪ್ಪುದೊ ॥ ೧೧ ॥



## ೫೦. ನಿತ್ಯಸುಖಿಯಾಗು

**ಭಾಮಿನಿಷಟ್ಪದಿ**

ಎಲ್ಲ ವರಗಳ ಕೊಡುವ ದೇವರು
ಇಲ್ಲಿ ಕರಪೀಠದೊಳು ಬಂದಿರೆ
ಖುಲ್ಲ ಮನವೇ [೧]ನಿತ್ಯ[೧]ಪದವಿಯ ಪಡೆದು
ಸುಖಿಯಾಗು ॥ ಪ ॥

ಸೂಳೆ ನಂಬಿಗೆ ಹೊನ್ನ ಮಳೆಯನು
ಚೋಳರಾಯಗೆ ಕನಕವೃಷ್ಟಿಯ
ಹೇಳಲಾಕ್ಷಣ ಕರಸಿದಾತನು ಹಸ್ತದೊಳಗಿರಲು
ಖೂಳಮನವೇ ನಿತ್ಯ ಪೂಜಿಸಿ
ಕಾಲಕಾಮರ ಗೆಲಿದು ಶಿವಗಣ
ಮೇಳದೊಳ[೨]ಗಿರುತಿರ್ಪ[೨] ಪದವಿಯ ಪಡೆದು
ಸುಖಿಯಾಗು ॥ ೧ ॥

ನಂದಿಯುಂಡಿಗೆ ಹೊನ್ನಪಡಿಯಂ
ಒಂದುನುಳಿಯದೆ ನಂಬಿಯಣ್ಣಗೆ
ತಂದು [೩]ಕೊಡುವಾ[೩] ದೇವ ನಿನ್ನಯ ಹಸ್ತದೊಳಗಿರಲು
ಬೆಂದಮನವೇ ಬೇಡಿಕೊಂಬೆನು
[೪]ಕುಂದರಿಳೆಯೊಳು[೪] ಭಜಿಸಿ ಸುಖರಸ
ಸಿಂಧು[೫]ತೆರೆಯೊಳಗಾಳುತಿರು[೫] ನೀ ನಿತ್ಯ
ಸುಖಿಯಾಗು ॥ ೨ ॥

---

೧ ನೀನು (ಕಗಚ) ೨ ಗಿರ್ಪ (ಧಾ) ೩ ಕೊಟ್ಟ (ಆಇ) ೪ ಕುಂದವೀಗಳು (ಆಇ)
೫ ಸಿಂದುಧರೆಯೊಳಗಾಡುತಿರು (ಆಇ)

ಬಾಣ ಮಾಯೂರರಿಗೆ ಇಷ್ಟವ
[೧]ನೊಣೆ[೧] ಯಾಗದ ಹಾಂಗೆ [೨]ಕೊಟ್ಟಿಹ[೨]
ಜಾಣ [೩]ಬಂದುರೆ[೩] ಒಲಿದು ನಿನ್ನಯ ಹಸ್ತದೊಳಗಿರಲು
ಹೀನ ಮನವೇ ನಿತ್ಯ [೪]ಪೂಜಿಸು[೪]
ಏನುವನು ಪಡಿಯದೆಲೆ ಭಕ್ತಿ
ಜ್ಞಾನವೈರಾಗ್ಯವನು ಪಡೆ[೫]ಯುತ[೫] ನಿತ್ಯ
ಸುಖಿಯಾಗು ॥ ೩ ॥

ಕಾಳಿದಾಸಂಗೊಲಿದು [೬]ಮೂಗಳ[೬]
ಲೋಲಲೋಚನಗಳನ್ನು ಕೊಟ್ಟಾ
ಭಾಳನೇತ್ರನು ಬಂದು ನಿನ್ನಯ ಹಸ್ತದೊಳಗಿರಲು
ಮೇಲುಗತಿ [೭]ಮತಿಯನ್ನು ಬಯಸುತ[೭]
ಲೀಲೆಯಿಂದಲಿ ನಿತ್ಯ ಪೂಜಿಸು
ನಾಳೆಗಿಂದಿಗೆ ಎನ್ನದೇ ನೀ ನಿತ್ಯ ಸುಖಿಯಾಗು ॥ ೪ ॥

ದಾಸಿಮಯ್ಯನಿಗೊಲಿದು ತವನಿಧಿ
ಏಸುಕಾಲಕೆ ಸವೆಯದಂದದಿ
ದೇಶವರಿಯಲು ಕೊಟ್ಟ ದೇವನು ಹಸ್ತದೊಳಗಿರಲು
ಘಾಸಿಯಾಗದೆ ಯಮನ ದೂತರ
[೮]ಪಾಶಕಾಗದೆ[೮] ನಿತ್ಯ ಪೂಜಿಸು
ಮೋಸಹೋಗದ ಈಶಪದವಿಯ ಪಡೆದು
ಸುಖಿಯಾಗು ॥ ೫ ॥

ಸಿಂಧುಬಲ್ಲಾಳನಿಗೆ ಕರುಣಿಸಿ
[೯]ಕುಂದದಿಳೆಯೊಳು[೯] ಲಿಂಗಪದವಿಯ
ಚೆಂದದಿಂದಲಿ ಕೊಟ್ಟ ದೇವನು ಹಸ್ತದೊಳಗಿರಲು

೧ ನೂನ (ಧಾ) ೨ ಕೊಟ್ಟತಿ (ಗಚ) ೩ ಬಂದಿರೆ (ಕಗ) ೪ ಪೂಜಿಸಿ (ಕಗ) ೫ ದತಿ (ಕ) ದೆಲೆ (ಗಚ) ೬ ಮಗಳಿಗೆ (ಧಾ) ಮುಗುಳ (ಗ) ೭ ಬಯಸುವಡೆ ನೀ (ಆಇ) ಯನು ಬಯಸುವಡೆ (ಕಗಚ) ೮ ವಾಸವಾಗದೆ (ಅಆಇಕಗಚ) ೯ ಕುಂದದೀಗ (ಆಇ)



ಮಂದಮತಿಯಲಿ ಕೆಡುವ ಮನವೇ
[೧]ಹೊಂದಿಯಡಿಗಳ[೧] ನುತಿಸಿ ಪೂಜಿಸಿ
ಮುಂದೆ ಸದ್ಗತಿ ಪಡೆದು ಶಿವನೊಳು ನಿತ್ಯ
ಸುಖಿಯಾಗು ॥ ೬ ॥

ಮಲ್ಲಿಕಾರ್ಜುನ ಪಂಡಿತರಿಗಾ
ಖುಲ್ಲಜೈನನು ಕಣ್ಣು ಕೀಳಿಸೆ
ಒಳ್ಳಿತಾಗಿಯೆ ಕಣ್ಣ ಕೊಟ್ಟವ ಹಸ್ತದೊಳಗಿರಲು
[೨]ಖುಲ್ಲಮನವೇ[೨] ನಿತ್ಯ ಪೂಜಿಸಿ
ಒಳ್ಳಿತೆನಿಸುವ ಮಾರ್ಗದಿಂದಲಿ
ಎಲ್ಲರಹುದೆನೆ ನಡೆದು ಶಿವನೊಳು ನಿತ್ಯ
ಸುಖಿಯಾಗು ॥ ೭ ॥

ಲೋಲ ಶಂಕರದಾಸಿಮಯ್ಯಗೆ
[೩]ಕಾಳು[೩] ದೈವವ ಸಡಲಿಗೋಸುಗ
ಭಾಳನೇತ್ರ ಕೊಟ್ಟ ದೇವನು ಹಸ್ತದೊಳಗಿರಲು
ಕೋಳುಹೋಗದೆ ನಿತ್ಯ ಪೂಜಿಸಿ
ಲೀಲೆಯಿಂದಲಿ ಹಾಡಿ ಹೊಗಳನು
ಕೂಲವಾಗಿರು [೪]ಶರಣರಿಗೆ[೪] ಶಿವನೊಳಗೆ
ಸುಖಿಯಾಗು ॥ ೮ ॥

ಭೂಮಿಯೊಳಗಾ [೫]ಮಲುಹಣ[೫]ಯ್ಯಗೆ
ಕಾಮಿತಾರ್ಥವ[೬]ವಿತ್ತ[೬] ದೇವನು
ಪ್ರೇಮದಿಂದಲಿ ಬಂದು ನಿನ್ನಯ ಹಸ್ತದೊಳಗಿರಲು

೧ ಹೊಂದಿದೀಗಳು (ಗಚ) ೨ ಇಲ್ಲಿ ಮನವೆ (ಆಇ) ೩ ಕಾಳ (ಧಾ) ೪ ನೀನೊಲಿದು (ಆಇ) ೫ ಮಲ ಹಣ (ಧಾ) ೬ ಕೊಟ್ಟ (ಆಇಕ)

ಸೋಮಧರನೊಳು ಬೆರಸಬಲ್ಲೊಡೆ
ಕಾಮ [೧]ಕ್ರೋಧಗಳಳಿದು[೧] ಪೂಜಿಸು
ಆ ಮಹಾ ಶಿವಶರಣರೊಳು ನೀ[೨]ನಿತ್ಯ[೨]
ಸುಖಿಯಾಗು ॥ ೯ ॥

ಧರೆಯೊಳೆಲ್ಲರು ಅರಿಯೆ ಬಾಣಾ
ಸುರಗೆ ಸಾಸಿರತೋಳ ಕೊಟ್ಟವ
ಕರುಣದಿಂದಲಿ ಬಂದು ನಿನ್ನಯ ಹಸ್ತದೊಳಗಿರಲು
ಮರೆಯದೆ [೩]ಅಷ್ಟ[೩] ವಿಧದ ಪೂಜೆಯ
ಹರುಷದಿಂದಲಿ ಮಾಡಿ ಸುಖರಸ
ಶರಧಿ ತೆರೆಯೊಳ[೪]ಗಾಳುತಿರು[೪]ನೀ ನಿತ್ಯ
ಸುಖಿಯಾಗು ॥ ೧೦ ॥

ಎಲ್ಲ ಮುನಿಗಳು ಎಲ್ಲ ಮನುಗಳು
ಎಲ್ಲ ಸಿದ್ಧರು ಎಲ್ಲ ಸಾಧ್ಯರು
ಇಲ್ಲಿ ಪಡೆದರು [೫]ನಿನ್ನ[೫] ಹಸ್ತದ ಲಿಂಗವನು ಭಜಿಸಿ
ಅಲ್ಲಿಗಲ್ಲಿಗೆ ಹರಿವ ಬುದ್ಧಿಯ
[೬]ಸಲ್ಲವಿಡು[೬] ನೀ ನಿತ್ಯ ಪೂಜಿಸು
ಇಲ್ಲಿರುವ [೭]ಶಿವಷಡಕ್ಷರಿ[೭]ವರನಲ್ಲಿ
ಸುಖಿಯಾಗು ॥ ೧೧ ॥

---

೧ ಕ್ರೋಧವನಳಿದು (ಕಗಚ) ೨ ಕೂಡಿ (ಆಇ) ೩ ದೆಲ್ಲಾ (ಧಾ) ೪ ಶಿವನೊಳು (ಆಇ) ೫ ನಿಮ್ಮ (ಗಚ) ೬ ನೆಲ್ಲರಿದು (ಕ) ೭ ಷಡಕ್ಷರಿಯ (ಧಾ) ನಿಜವರ (ಆಇ)



## ೫೧. ಎಂದಿಗಾದಪುದೋ

### ಭಾಮಿನಿಷಟ್ಪದಿ

ಅಂಗಜಾರಿಗೆ [೧]ಮೆಚ್ಚಿ[೧] ಮರುಳಾ
ಗಂಗಭಾವವ [೨]ತೊರೆದು[೨] ಕೃತ್ಯವ
[೩]ಹಿಂಗಿ[೩] ಹೊರಗನು ಮರೆವ ಸುಖವದು
ಎಂದಿಗಾದಪುದೊ ॥ ಪ ॥

ಎಳೆಯಚಂದ್ರನ ಧರಿಸಿದಾತಗೆ
[೪]ಒಲೆವ[೪] ಫಣಿಕುಂಡಲದ ಗರುವಗೆ
ಪುಲಿಯ ಚರ್ಮವನುಟ್ಟು ಗಜಚರ್ಮವನು [೫]ಪೊದೆದವಗೆ[೫]
ಹೊಳೆವ ಕೆಂಜೆಡೆ [೬]ಮುಗುಳು[೬] ನಗೆಗಳ
ಚೆಲುವ ಶಿವನಿಗೆ ಮೆಚ್ಚಿ ಮರುಳಾ
ಗಳಿದು ತನುಗುಣ[೭]ವರಿಯ[೭]ದಿರ್ಪುದು
ಎಂದಿಗಾದಪುದೋ ॥ ೧ ॥

ಭಸಿತಕಾಂತಿಯ ಕಾಯದಾತಗೆ
[೮]ಮಿಸುಪ[೮] ಫಣಿ ಕಂಕಣದ [೯]ನೀರಗೆ[೯]
ಹಸಿಯ ಶಿರಮಾಲೆ[೧೦]ಯನು[೧೦] ಕೊರಳೊಳು ಧರಿಸಿದಾತನಿಗೆ

---

೧ ಸಿಕ್ಕಿ (ಅಗಚ) ಸಿಲ್ಕಿ (ಕ) ೨ ಮರೆದು (ಆಇ) ೩ ಅಡಂಗಿ (ಆಇಕಗಚ) ೪ ಒಲಿದ (ಧಾ) ೫ ಹೊದ್ದವಗೆ (ಧಾ) ೬ ಯುಗಳ (ಕ) ೭ ಅಳಿಯ (ಚ) ೮ ಮಿಸುನಿ (ಆಇ) ೯ ಧೀರಗೆ (ಕ) ೧೦ ಗಳ (ಧಾ)

[೧]ಬಸಿಯ[೧] ಶೂಲದಿ ಹೆಣನ ಪಿಡಿದಿಹ
ಅಸಮನೇತ್ರಗೆ ಮೆಚ್ಚಿ ಮರುಳಾ
ಗಶನವುದಕವ ತೊರೆವುದದು ತಾನೆಂದಿಗಾದಪುದೋ ॥ ೨ ॥

ಕೊರಳ ಗರಳದ ರೇಖೆಯಾತಗೆ
ಮರುಳುಗಣ ಕೂಡಾಡುವಾತಗೆ
ಹರಿ ಸುರೇಂದ್ರರ ಹೆಣ್ಣತೊತ್ತಿರ ಮಾಡಿಕೊಂಡವಗೆ
ಸರಸಿಜಾಸನ ಶಿರವ [೨]ಕರದೊಳು[೨]
ಧರಿಸಿದಾತಗೆ ಮೆಚ್ಚಿ ಮರುಳಾ
ಗಿರುಳು ಹಗಲೆಂದರಿಯದಿಹ ಸುಖವೆಂದಿಗಾದಪುದೋ ॥ ೩ ॥

ತನ್ನ ಮೋಹದಿ ನೆನೆವ ಭಕುತರ
[೩]ಮುನ್ನವೇ ತಾ ನೆನೆವೆ ಮೋಹದಿ[೩]
ತನ್ನನೊಲಿಸುವ ಶರಣರಿಗೆ ತಾ ಮುನ್ನನೊಲಿವವಗೆ
ಹೊನ್ನುಹಾವಿಗೆ ಮೆಟ್ಟಿ ಸುಳಿವಗೆ
ಎನ್ನ ಮನ ತಾ ಮೆಚ್ಚಿ ಮರುಳಾ
ಗಿನ್ನು ಹೊರಬಳಕೆಗಳ ಮರೆವುದು ಎಂದಿಗಾದಪುದೋ ॥ ೪ ॥

ಬೆರಳನಾದರು ಕೊಟ್ಟು ಆತಗೆ
[೪]ಕುರುಳ[೪]ನಾದರು ಕೊಟ್ಟು [೫]ಅವನಿಗೆ[೫]
[೬]ಇರದೆ ತನುಮನ ಧನವನೆಲ್ಲವ ಸೂರೆಗೊಟ್ಟವಗೆ[೬]
ಗರುವನಾತನ ಇಚ್ಛೆಯೊಳು ನಾ
ನಿರುತ [೭]ಒಲಿಸಿಯೆ[೭] ಮೆಚ್ಚಿ ಮರುಳಾ
ಗಿರುತ ಜಡನಿದ್ರೆಗಳ ಮರೆವುದು ಎಂದಿಗಾದಪುದೊ॥ ೫ ॥

---

೧ ನಿಶಿತ (ಧಾ) ೨ ಕೊರಳೊಳು (ಅ) ೩ ಮುನ್ನತಾನೇ ಮೋಹಿಪವನಿಗೆ (ಧಾ) ತಾ ನೆನೆವ ತವಕಿಯ (ಆಇಕಗಚ) ೪ ಕರುಳ (ಧಾ) ೫ ಆತಗೆ (ಧಾ) ೬ ತವಕದಿಂದಲಿ ಇರದೆ ತನುಮನ ಸೂರೆಗೊಂಡವಗೆ (ಚ) ೭ ವರಿಸಿಯೆ (ಧಾ)



ಚಂದ್ರಕೋಟಿಯ ಪ್ರಭೆಗಳೊಬ್ಬುಳಿ
ಸಾಂದ್ರವಾಗಿಯೆ ಪುರುಷ [೧]ಕೃತಿಯಿಂ[೧]
ಚಂದವಡೆದಿಹ ಚೆಲುವದೇವಗೆ ಮೆಚ್ಚಿ ಮರುಳಾಗಿ
ಬಂದಡರಿಯದೆ ಬೈದಡರಿಯದೆ
ನಿಂದಡರಿಯದೆ ನೆರೆದಡರಿಯದೆ
[೨]ಕೊಂದಡರಿಯದ[೨] ಹೊರಗೆ ಮರೆವುದು ಎಂದಿಗಾದಪುದೋ
॥ ೬ ॥

ಕಂತುಕೋಟಿಯ ರೂಪಪಾದದೊ
ಳಾಂತ ಚೆಲುವಿನ ಶಿವಷಡಕ್ಷರ
ಕಾಂತನಿಗೆ ನಾ[೩]ಸಿಕ್ಕಿ[೩] ಹೊರಗನು ಮರೆದು ಮರುಳಾಗಿ
ನಿಂತೊಡೆಲ್ಲಿಯು ಕುಂತೊಡೆಲ್ಲಿಯು
ಭ್ರಾಂತನಂದದಿ ಕಲ್ಲುಮರನಾ
ಗಿಂತು ಪರವಶದಂಗಭಾವವು ಎಂದಿಗಾದಪುದೋ ॥ ೭ ॥

---

೧ ಕೃತಿಯೊಳು (ಚ) ೨ ಹೊಂದರರಿಯದೆ (ಕ) ೩ ಸಿಲ್ಕಿ (ಕಚ)

## ೫೨. ಎಂದಿಗೊಲಿದಪನೋ*

### ಭಾಮಿನಿಷಟ್ಪದಿ

ಹಾಡಿದವರಿಗೆ ಬೈದಡವರಿಗೆ
ಕಾಡಿದವರಿಗೆ [೧]ಕೊಂದಡವರಿಗೆ[೧]
ಬೇಡಿದಿಷ್ಟವ ಕೊಡುವ ದಯನಿಧಿ ಎಂದಿಗೊಲಿದಪನೋ ॥ಪ॥

ಕಲ್ಲಿಲಿಟ್ಟಂಥವರಿಗೊಲಿದನು
ಬಿಲ್ಲಿನಲಿ ಹೊಯ್ದವರಿಗೊಲಿದನು
ಫುಲ್ಲಶರನ ವಿಕಾರಿಯೆನಿಸಿದ ಶ್ವೇತನಿಗೆ ಒಲಿದ
ಸಲ್ಲದುದನೇ [೨]ನುಡಿದು[೨] ನಗಿಸಿದ
ಗಲ್ಲಿಯಾಕ್ಷಣ ಒಲಿದ ದೇವನು
ಒಳ್ಳಿದನು ಇಂತಪ್ಪ ದಯನಿಧಿ ಎಂದಿಗೊಲಿದಪನೋ ॥೧॥

ಮರೆದು ಈಶನ ನೆನೆದರಾದಡೆ
ಸುರರ ಪದವಿಗಳಾಗುತಿರ್ಪವು
ಅರಿದು ಈಶನ ನೆನೆದರಾದಡೆ ತನ್ನ ಪದವೀವ
ದುರುಳನಾದೆನು ಮೊದಲೆ ಭಜಿಸದೆ
ಮರುಳನಾದೆನು ಘನವನರಿಯದೆ
ಹರಹರಾ ಇಂತಪ್ಪ ದಯನಿಧಿ ಎಂದಿಗೊಲಿದಪನೋ ॥೨॥

---

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ
೧ ಕೊಂಡಾಡಿದವರಿಗೆ (ಕ) ೨ ನುಡಿಸಿ (ಕ)



ಬಿದಿರಿದುದಕಕೆ ಹರಿದ ಎಸಳಿಗೆ
ಪದಪಿನಿಂದಲಿ ಇಂದ್ರಪದವಿಯ
ನೊದಗಿಸಿಯೆ ತಾನವರಿ[೧]ಗಿತ್ತನು[೧] [೨]ಮುದದಿ[೨]ಯೆನ್ನಾಳ್ದ
ಪದುಳದಿಂ ಪೂಜಿಸದೆ ಕೆಟ್ಟೆನು
ಮುದದಿ ಮುನ್ನವೆ ಹೊಗಳದಾದೆನು
ಸದಮಲಾತ್ಮಕನಾದ [೩]ದಯನಿಧಿ[೩] ಎಂದಿಗೊಲಿದಪನೊ ॥೩॥

ಸಟೆಗಳಿಂದಲಿ ಪೂಜಿಸಲು ತಾ
[೪]ದಿಟಗಳಿಂದಲಿ[೪] ಪೂಜಿಸಲು ತಾ
ನಟಮಟ[೫]ವ್ಯಾಪಾರ[೫]ದಿಂದಲಿ ಪೂಜಿಸಲು ಬಳಿಕ
ಕುಟಿಲದಿಂದಲಿ ಪೂಜಿಸಿದೊಡಂ
ನಿಟಿಲನೇತ್ರನು ತನ್ನ ಪದವಿಯ
ಘಟಿಸಿ ಕೊಡುವಿಂತಿಪ್ಪ ದಯನಿಧಿ ಎಂದಿಗೊಲಿದಪನೋ ॥೪॥

[೬]ದುರುಳನಾದೆನು ಮೊದಲೆ ಭಜಿಸದೆ
ಮರುಳನಾದೆನು ಘನವರಿಯದೆ[೬]
ಹರಹರಾ ಇಂತಪ್ಪ ಹರನೇ ನಿಮ್ಮ [೭]ನೊಲಿಸಿಹರ[೭]
ಚರಣರಕ್ಷೆಗೆ ಸರಿಯನಾಹೆನೆ
ಬಿರುದುನಿಂದೆನಗಿಲ್ಲ ಕೊರತೆಯು
ಬಿರುದಿನ ಷಡಕ್ಷರಿಯ ಲಿಂಗವೆ ಒಲಿದು ಕೃಪೆಯಾಗು* ॥೫॥

---

೧ ಈವನ (ಗಚ) ಈವುದು (ಕ) ೨ ಮುಗ್ಧ ೩ ಕರುಣನಿಧಿ (ಕಗಚ) ೪ ಮನವ್ಯಸನದಿಂ (ಚ) ೫ ಭಾವ (ಕ) ೬ ಈ ಸಾಲುಗಳು ಕಗಚ ಪ್ರತಿಗಳಲ್ಲಿಲ್ಲ ೭ ಶರಣರುಗಳ (ಅ)

* ಹರನೇ ನಿಮ್ಮಯ ಶರಣರುಗಳ
ಚರಣ ರಕ್ಷೆಗೆ ಸರಿಯದಾಹೆನೆ
ಬಿರುದು ನಿಮ್ಮದು ಕೊರತೆ ಎನಗಿನಿಸಿಲ್ಲ ಎಲೆ ದೇವ
ಬರಿದೆ ನಿತ್ಯ ಕೂಗಿ ಕೂಗಿಯೆ
ಬರಿದೆ ಹೋದೆನು ಎನಿಸೀಗಳೆ
ಗುರು ಷಡಾಕ್ಷರಿ ಲಿಂಗವೆ ಎನಗೊಲಿದು ಕೃಪೆಯಾಗು (ಕಗ)

## ೫೩. ಲಿಂಗವು ಇರಲು ಶಿವ

**ಭಾಮಿನಿಷಟ್ಪದಿ**

ಆವ ಪರಿಯಲಿ ತಿಳಿಯಬಾರದು
ದೇವ ನಿಮ್ಮಯ ಶರಣರಿ[೧]ರವನು[೧]
ಭಾವದೊಳು ನಾ ತಿಳಿವೆ ಲಿಂಗವು ಇರಲು
ಶಿವನೆಂದು ॥ಪ॥

ಧಾರುಣಿಯೊಳಾ ಉದ್ಭಟಯ್ಯನು
ಚಾರಮಾಂಕನು ಚೋಳರಾಯನು
ಮಾರವೈರಿಯ ಬೆರಸಲಿಲ್ಲವೆ ಅವರ ಪರಿಯಂತೆ
ಧಾರುಣಿಯ ಪಾಲಿಸುತ ಗುಪ್ತ ಉ
ದಾರಭಕ್ತಿಯ ಮಾಡುತಿಹರೋ
ಆರು ಬಲ್ಲರು ನಿಮ್ಮ ಶರಣರ ತಿಳಿಯಲೆಂತಹುದೋ ॥೧॥

ಬಸವರಾಜನು ಚೊಕ್ಕನೈನಾ
ರಸಮ ಕೇಶಿಯ ರಾಜರಿವರುಗ
ಳೊಸೆದು ಶಿವನೊಳು ಬೆರೆದರಲ್ಲವೆ ಅವರ ಪರಿಯಂತೆ
ವಸುಧೆಯೊಳು [೨]ಮಂದ್ರಪ್ರಭಾವ[೨]ದಿ
ಎಸೆವ ಶಿವನೊಳು ಗುಪ್ತಭಕ್ತಿಯ
ಬೆಸಗೆಯೊಳಗಿರುತಿಹರು ಶರಣರ ತಿಳಿಯಲೆಂತಹುದೋ ॥೨॥

---

೧ ರವಂ (ಕಗ) ೨ ಮಂತ್ರಿ ಭಾವದಿ (ಆಇಕಗಚ)



ಧಾರುಣಿಯೊಳಾ ಮಲುಹಣಯ್ಯನು
ದಾರಸೌಂದರ [೧]ಮಿಂಡ[೧] ಜಂಗಮ
ವಾರವಧುಗಳ ಬೆರಸಲಿಲ್ಲವೆ ಅವರ ಪರಿಯಂತೆ
ಆರು ಬಲ್ಲರು ವಿಟರ ತೆರದಿಂ
ಮಾರ ವೈರಿಯ ಗುಪ್ತಭಕ್ತಿಯ
ನಾರ ಪರಿಯಲಿ ಮಾಡುತಿಹರೋ ತಿಳಿಯಲೆಂತಹುದೋ ॥೩॥

ಮೇದಿನಿಯೊಳಾ ಮಲ್ಲಶೆಟ್ಟಿಯು
ಆದಿಮೈಯನು ಶಂಕರೇಶನು
ಸಾಧಿಸುತ್ತಲೆ [೨]ವ್ಯವಹರಂಗಳ[೨]ಲಿರ್ದರವರಂತೆ
ಆದಿವಿಡಿದೊಂದು[೩]ದ್ಯಮಂಗಳ[೩]
ಆದಿಲಿಂಗದ ಗುಪ್ತಭಕ್ತಿಯ
ವೇದಿಸಿಹರೋ ನಿಮ್ಮ ಶರಣರು ತಿಳಿಯಲೆಂತಹುದೋ ॥೪॥

ಪೊಡವಿಯೊಳಗೆಲ್ಲರಿವ ತೆರದಿಂ
ಮಡಿವಳು [೪]ಯಂಕಾಳಿ[೪]ಗಳು ಪುಲಿ
ಯುಡುಪರೆಂಬರು ದುಪಟಿ ತೊಳೆವುತಲಿರ್ದರವರಂತೆ
ಮಡಿಯ ಮಾಡುತ [೫]ಭಕ್ತವಸ್ತ್ರವ[೫]
[೬]ಅಡಗಿ[೬] ಶಿವನೊಳು ಗುಪ್ತಭಕ್ತಿಯ
ನಡೆಸುತಿಹರೋ ನಿಮ್ಮ ಶರಣರು ತಿಳಿಯಲೆಂತಹುದೋ ॥೫॥

ಧಾರುಣಿಯೊಳಾ ಅಮುಗಿದೇವನು
ದಾರಜೇಡರದಾಸ[೭]ನುರೆ[೭] ಸಂ
ಸಾರದೊಳಗಿರುತಿರ್ದುದಿಲ್ಲವೆ ಅವರ ಪರಿಯಂತೆ

---

೧ ಪುಂಡ (ಧಾ) ೨. ಜೀಯ ಹೆಂಗಳ (ಅ) ೩ ದ್ಯೋಗಂಗಳ (ಆಇಗಚ) ದ್ಯೋಗದಿಂದಲಿ (ಕ) ೪ ಯಕ್ಕಲಿಗ (ಕಗ) ಕಾಳಿ (ಚ) ೫ ಭಕ್ತರೊಸ್ತ್ರವ (ಅಆಇ) ೬ ಕಡಿಗೆ (ಆಇ) ೭ ನತಿ (ಧಾ)

ಆರು ಬಲ್ಲರು ಶರಣರನು ಸಂ
ಸಾರವನು ಮರೆಗೊಂಡು ಗುಪ್ತದಿ
ಮಾರವೈರಿಯ [೧]ಬೆರೆಸುತಿಹರೋ[೧] ತಿಳಿಯಲೆಂತಹುದೋ ॥೬॥

[೨]ಇಲ್ಲಿ[೨] ಚೆನ್ನಯ್ಯಗಳು ಲದ್ದೆಯ
ಹುಲ್ಲು ಸೋಮಯ್ಯಗಳು ಬಡತನ
ದಲ್ಲಿ ಶಿವನೊಳು ಬೆರಸಲಿಲ್ಲವೆ ಅವರ ಪರಿಯಂತೆ
ಹುಲ್ಲು ಮಾರುತ ಬಡವರಂದದಿ
ಖುಲ್ಲಮಾನವರರಿಯ[೩]ದೊಳ್[೩] ಶಿವ
ನಲ್ಲಿ ಗುಪ್ತದಿ ಬೆರಸುತಿಹರೋ ತಿಳಿಯಲೆಂತಹುದೋ ॥೭॥

ಕುರಿಯ ಕಾಯುತ ಗೊಲ್ಲಳಯ್ಯನು
[೪]ತರುವ[೪] ಕಾಯುವ [೫]ಚಂಡಿ[೫]ದೇವನು
ಪರಮತಿರುಮೂಲಯ್ಯಗಳು ಇರುತಿರ್ದರವರಂತೆ
ಕುರಿಯ ತುರುವಂ ಕಾಯ್ದು ಗುಪ್ತದಿ
ಹರನ ಭಕ್ತಿಯ ಮಾಡುತಿಹರೋ
ಶರಣರಿರವನು ನರರ[೬]ಭಾವಕ[೬] ತಿಳಿಯಲೆಂತಹುದೋ ॥೮॥

ಉದಿಸಿ [೭]ಧರೆಯೊಳು[೭] ಹಲವು ಪರಿಯಲಿ
ಹುದುಗಿ ಲಿಂಗದಿ ಗುಪ್ತಭಕ್ತಿಯ
ಪದುಳದಿಂದಲಿ ಮಾಡುತಿಹರೋ ತಿಳಿಯಲೆಂತಹುದು
ಅದರ ದೆಸೆಯಿಂದರಿಯಬಾರದು
ಸದಮಲಾತ್ಮಕ ಲಿಂಗ[೮]ವಿದ್ದರ[೮]
ಮುದದಿ ಶಿವಷಡಕ್ಷರಿಯ ವರ ನೀನೆಂಬೆನದರಿಂದ ॥೯॥

೧ ಭಜಿಸುತಿಹರೋ (ಆಇ) ೨ ನುಲಿಯ (ಕಗಚ) ೩ ದಾ (ಧಾ) ೪ ತರುವ (ಧಾ) ೫ ದುಂಡಿ (ಕ) ೬ ಭಾವದಿ (ಧಾ) ೭ ಧಾತ್ರಿಯೊಳಗೆ (ಆಇ) ಧಾತ್ರಿಗೆ (ಕಗಚ) ೮ ವಂತರ (ಧಾ)



## ೫೪. ಕರುಣಿ ಎಂತಹನು*

### ಭಾಮಿನಿಷಟ್ಪದಿ

ಕರುಣಾವಾರಿಧಿ ಶಿವನು ಎನುತಲಿ
ಅರಿದ ಮರುಳರ ಕವಿಗಳೆಂಬರು
ಬರಿಯ ತರಕಟ ಕಾಡುವಾತನು ಕರುಣಿ ಎಂತಹನು ॥ಪ॥

ಆದಿಮೈಯನು ಜೈನರುಗಳಾ
ವಾದಕೋಸುಗ ಕರೆಯ ಬರುತಿರೆ
ಹಾದಿಯೊಳಗಂ ಕಾಡಿದಾತನು [೧]ಅಂತುಮಲ್ಲದೆಲೆ[೧]
ಮಾದಿರಾಜನ ಅರಸಿ ಬರುತಿರೆ
ಭೇದಿಸದೆಯುರೆ ಕಾಡಿದಾತನು
ಮಾಧವೋದ್ಭವವೈರಿಯೀತನು ಕರುಣಿ ಎಂತಹನು ॥೧॥

ಭೂಮಿಯೊಳಗತಿಚೋದ್ಯ ಮೈದುನ
ರಾಮ ತಂದೆಯು ಕರೆಯಬರುತಿರೆ
ಆ ಮಹಾತ್ಮನ ಕಾಡಿದಾತನು ಅಂತುಮಲ್ಲದಲೆ
ಪ್ರೇಮ ತನ್ನೊಳಗಿರ್ದ ನೃಪಸತಿ
ಕಾಮದೇವನ ಬಳಿಯ ನಂಬಿಯ
ನಾಮವನು ನೆನೆವುತಲಿ ಕಾಡಿದ ಕರುಣಿ ಎಂತಹನು ॥೨॥

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ
೧ ತನ್ನವಾದವನು (ಕ) ೨ ದೇಶ (ಕ)

ಕ್ಷಿತಿಗೆ ಮೆರೆವಾ ಕಾಂಚಿ[೧]ಪುರ[೧]ದಲಿ
ಪತಿವ್ರ[೨]ತಾಮಣಿ[೨] ಚಂಗಳವ್ವನ
ಸುತನ ಕೊಲಿಸಿದ ಮರುಕವಿಲ್ಲದೆ ಅಂತುಮಲ್ಲದಲೆ
ಸುತನನೋರ್ವನ ಪಿಡಿದು ಬಡತನ
[೩]ಯುತದಿ[೩] ಬಾಳುವ ನಂಬಿಯಕ್ಕನ
ಕೃತಕದಿಂದಲಿ ಮಗನ ಕೊಲಿಸಿದ ಕರುಣಿ ಎಂತಹನು ॥೩॥

[೪]ಕೋಲುರೋ[೪]ಳ[೫]ಗೆಲ್ಲವರ[೫] ತೆರದಿಂ
ಹಾಲ [೬]ಸವಿಸಲು[೬] ತಂದ ಮುಗ್ಧಾ
ಬಾಲೆಯನು ತರಕಟವ ಕಾಡಿದನಂತುಮಲ್ಲದತಿ
ನೀಲಕಂಠಯ್ಯಗಳು ಆಣೆಗೆ
ಬಾಲೆಯೊಳು ಮಾತಾಡದಿರುತಿರೆ
ಬಾಳವಾಗಿಯೆ ಕಾಡಿದಾತನು ಕರುಣಿ ಎಂತಹನು ॥೪॥

ಮಡದಿ ಪುರುಷರು ನುಡಿಯ[೭]ದಿರ್ದೊಡೆ[೭]
ಜಡಿದು ಜರಿದರೆ ಕೋಪ[೮]ಮಪ್ಪುದೆ[೮]
[೯]ಕಡೆಗೆ[೯] ಪುರುಷರಿಗದರ ಹೋಲುವೆಯಂತೆ ನಾನಿನ್ನ
ಬಿಡದೆ ಬಣ್ಣಿಸಿ ಪಾಡುತಿರೆ ಎ
ನ್ನೊಡನೆ ನುಡಿಯದೆ [೧೦]ಇರಲು[೧೦] ಜರಿದೆನು
ಮೃಡ ಷಡಕ್ಷರವರನೆ ಕೋಪವು ಬೇಡ ಎನ್ನೊಡನೆ ॥೫॥

---

೧ ದೇಶ (ಕ) ೨ ತೋತ್ತಮ (ಕಗಚ) ೩ ಮತದಿ (ಕ) ೪ ಕೋಳೂರು (ಕಗಚ) ೫ ಜನರರಿವ (ಚ) ೬ ಸವಿಯಲು (ಧಾ) ೭ ದಿದ್ದರೆ (ಕ) ೮ ಪುಟ್ಟದೇ (ಚ) ೯ ಕಡವೆ (ಕ) ೧೦ ಇರಲ್ಕೆ (ಕ)



## ೫೫. ನರರಿಗೆಂತಹುದು

**ಭಾಮಿನಿಷಟ್ಪದಿ**

ಒಲಿದ ಲಲನೆಯನಗಲುವದು ತಾ
[೧]ಒಲಿದು[೧] ಲಿಂಗದಿ ಮನ[೨]ವನಿಟ್ಟರೆ[೨]
ಚಲಿಸ[೩]ದದು[೩] [೪]ಶಿವನಂಶಕ[೪]ಲ್ಲದೆ ನರರಿಗೆಂತಹುದು ॥ಪ॥

ಮುನಿದ [೫]ನಲ್ಲಗೆ[೫] ಲಲ್ಲೆಗರದತಿ
[೬]ಬಿನದದಿಂದಲಿ ತೋರಕುಚಗಳ[೬]
ಇನಿಯನೆದೆಯೊಳು ಸಾರ್ಚಿಯಧರವ ಜಿಹ್ವೆಯೊಳಗಿರಿಸಿ
ಮುನಿಸು ತಿಳಿಯದಡೆನ್ನ ಕೊಲ್ಲೆಂ
ದೆನುತ ಮುದ್ದಿಸಿ ದೈನ್ಯಗರೆವಳ
[೭]ಮನದಿ ನೆನೆಯದೆ ಇರ್ಪುದದು ತಾ[೭] [೮]ನರರಿ[೮]ಗೆಂತಹುದು
॥೧॥

ಒಲಿದ ಪುರುಷನ [೯]ಸಲುಗೆಯಿಂದಲಿ[೯]
ಎಳೆದು ಮಂಚದ ಮೇಲೆ ಮಲಗಿಸಿ
ಬಲುಹಿನಿಂ ತಾಂಬೂಲ ಗುಟುಕನು ಕೊಟ್ಟು ಬಿಗಿ[೧೦]ದ[೧೦]ಪ್ಪಿ
[೧೧]ನಲಿದು[೧೧] ಅಧರವ [೧೨]ಸವಿದು[೧೨] ಸೊಗಸಿಂ

---

೧ ಬಲಿದು (ಅಆಇಕಗಚ) ೨ ವುನೆಟ್ಟರೆ(ಗಚ) ೩ ದಿಹ (ಗಚ) ದಿಹದು(ಕ) ೪ ಶರಣಗಲ್ಲದೆ (ಕ) ೫ ಶರಣ (ಅ) ೬ ವಿನಯದಿಂದಲಿ ತೋರಿ ಕುಚವನು (ಧಾ) ತೋರ ಕುಚವನು (ಗಚ) ೭ ಮುನಿವದದು ಶಿವಶರಣಗಲ್ಲದೆ (ಕ) ೮ ಶರಣ (ಅ) ೯ ವಿನಯದಿಂದಲಿ (ಧಾ) ೧೦ ಯ (ಕಗಚ) ೧೧ ಬಲಿದು (ಕ) ೧೨ ಹರಿದು (ಕ)

[೧]ಬಳಲು[೧]ಗಂಗಳ ಮುಚ್ಚಿ ತೆರೆವಳ
[೨]ನುಳಿಪುದದು[೨] ಶಿವನಂಶಕಲ್ಲದೆ ನರರಿಗೆಂತಹುದು ॥೨॥

ಕರುಳು ಕುಣಿ[೩]ವು[೩]ತ ಮುತ್ತಿನೋಲೆಯ
ಮಿರುಗು ಹೊಳೆವುತ ಕೊರಳ ಮುತ್ತಿನ
ಸರವು ಕಲಕುತ [೪]ತೋರ[೪] ಕುಚಯುಗವದರುತಿರೆ ಬಳಿಕ
ಸೆರಗಿನಿಂದಲಿ ಬೆಮ[೫]ತ[೫] ನಲ್ಲನ
ಒರಸಿ ಮುಖವನು ಮರಳಿ ನೆ[೬]ರೆವಳ
[೭]ತೊರೆವುದದು[೭] ಶಿವನಂಶಕಲ್ಲದೆ ನರರಿಗೆಂತಹುದು ॥೩॥

ತೊಡೆಗ[೮]ಳದರುತ[೮] [೯]ನಡವು ಬಳಕುತ[೯]
ಮುಡಿ[೧೦]ಯು ಕುಣಿಯುತ[೧೦] ಸಡಲಿ [೧೧]ಬೈತಲೆ[೧೧]
ಒಡನೆ ಗಂಟಿಕ್ಕಿರಲು ತಿಲಕವು ಬೆಮರಿನಿಂದಿಳಿಯೆ
[೧೨]ಸಡಿಲೆ[೧೨] ಮುತ್ತಿನ ಬೊಟ್ಟು [೧೩]ಪಣೆಯೊಳು[೧೩]
ಮುಡಿದ ಕುಸುಮದ ಭಾವ[೧೪]ದವಳನು[೧೪]
ಬಿಡುವುದದು ಶಿವನಂಶಕಲ್ಲದೆ ನರರಿಗೆಂತಹುದು ॥೪॥

ಸುರತದಂತ್ಯದಿ ಬಳಲಿದಾತನ
ನೊರಗಿಸುತ ಕುಚಯುಗ[೧೫]ಳ[೧೫] ಮಧ್ಯದಿ
ಪರವಶದಿ [೧೬]ಮರೆ[೧೬]ದಿರುವ ಚೆಲು[೧೭]ವೆಯ[೧೭]
[೧೮]ಸೊಗಸನಗಲುವರ[೧೮]
ಪರಕೆ ಪರತರ ಶಿವ ಷಡಕ್ಷರ
ಪರಮ ಲಿಂಗದಿ ಮನವು [೧೯]ಸಿಲ್ಕಿರೆ[೧೯]
ಹೊರಗೆ ಮರೆದಿಹ ಶರಣಗಲ್ಲದೆ ನರರಿಗೆಂತಹುದು ॥೫॥

೧ ತಳಪು (ಧಾ) ೨ ಮುಳಿವುದದು (ಕಗಚ) ೩ ಯು (ಚ) ೪ ತೊಟ್ಟಿ (ಧಾ) ೫ ರ್ದ (ಚ) ೬ ನೆ (ಚ) ೭ ಮರವುದು (ಗ) ೮ ಳಲುಗಲು (ಕ) ಳೊಂದಿರೆ (ಗ) ಳೊಪ್ಪಿರೆ (ಚ) ೯ ನುಡಿದ ನೇಹುರ (ಚ) ನುಡಿಯನೇವರ (ಕ) ನಡುವೆ ನೇಹುರ (ಗ) ೧೦ ಯ ಕೇಶವು (ಕಗಚ) ೧೧ ಭ್ರೂಲತೆ (ಕ) ೧೨ ಮಡದಿ (ಧಾ) ೧೩ ರಂಜಿಸೆ (ಧಾ) ೧೪ ದಳವನು (ಧಾ) ೧೫ ದ (ಧಾ) ೧೬ ಮೆರೆ (ಧಾ) ೧೭ ವೆಗೆ (ಗ) ವಿಗೆ (ಕ) ವಿಕೆ (ಚ) ೧೮ ಸಿಕ್ಕಿ ಬಿಡುವುದಕೆ (ಕಗಚ) ೧೯ ನಿಲ್ಲಿಸಿ (ಚ) ನಿಲಿಸಿಯೆ (ಕ)



## ೫೬. ಎಂದಿಗಹುದೋ*

### ಭಾಮಿನಿಷಟ್ಪದಿ

ಎಂದಿಗಹುದೊ ನಿಮ್ಮ [೧]ನೆನಹು[೧]
ಎಂದಿಗಹುದೊ ನಿಮ್ಮ ನಿಜವು
ಎಂದಿಗಹುದೊ ನಿಮ್ಮ [೨]ಪೂಜೆಯ ಮಾಳ್ಪ ಸುಖವದು[೨] ॥ಪ॥

ಕಂಡ ಬಳಿಯ ನದಿಯು [೩]ಕೊಳನು[೩]
ಕಂಡ ಬಳಿಯ ಪತ್ರೆ ಪುಷ್ಪ
ಕಂಡ ಬಳಿಯ ನಿಮ್ಮ ಪೂಜೆ ಮಾಡಲೊಲ್ಲದೆ
ಕಂಡ ಕಂಡ [೪]ಊರ ತಿರುಗಿ[೪]
ಕಂಡ ಕಂಡ [೫]ಮನೆಯ ಹೊಕ್ಕು[೫]
[೬]ತುಂಡ ನಾಯ ಹಾಗೆ ತಿರಿಗಿ ಕೆಟ್ಟೆನಕ್ಕಟಾ[೬] ॥೧॥

ಶೂಲ[೭]ಧರನ[೭] ಚರಣಯುಗವ
ಲೀಲೆಯಿಂದ ನೆನೆದು ನೆನೆದು
ಕಾಲ[೮]ಕಾಮರುಗಳ[೮]ಗೆಲ್ದು ಮುಕ್ತಿ ಪಡೆಯದೆ
[೯]ಮಲವ ನರಸಿ[೯] ತಿರುಗುತಿರ್ಪಾ

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ. ಈ ಪದ 'ಧಾ' ಪ್ರತಿಯಲ್ಲಿ ಭಾಮಿನಿ ಷಟ್ಪದಿಯಲ್ಲಿದೆ.

೧ ನೆನೆವುದು (ದ) ೨ ಪೂಜೆಯ ಮಾಡುವಾ ಸುಖವು (ಧಾ) ೩ ಕೊಳಗಳು (ಧಾ) ಜಲವು (ಚ) ೪ ಊರುಗಳ ತಿರುಗುತ (ಧಾ) ೫ ರ ಮನೆಗೆ ಹೊಕ್ಕರೆ (ಧಾ) ೬ ತುಂಡು ಮೂಳನು ಆಗಿ ಸುಮ್ಮನೆ ಕೆಟ್ಟೆನಕಟಕಟ (ಧಾ) ೭ ಪಾಣಿಯ (ಧಾ) ೮ ಕಾಲಕರ್ಮಂಗಳನು (ಧಾ) ೯ ಹೇಲನರಸುತ (ಧಾ) ಹಾಳ ನರಸಿ (ಕಗ)

ಮೂಳ [1]ಹಂದಿ[1]ಯಂತೆ ಮೂರು
[2]ಮಲವ ನೆಚ್ಚಿ[2] [3]ನಿಮ್ಮ ನಿಜವ ಮರೆದೆನಕ್ಕಟಾ[3] ॥೨॥

ಎಳೆಯ ಚಂದ್ರಧರನಿಗೊಲಿದು
ಎಳಸದನ್ಯಸುಖವನಂಗ
ಕಳೆಗಳರತು ನಿತ್ಯ ಸುಖವ ಪಡೆಯಲೊಲ್ಲದ
ಎಲುವು ನರವು ತೊಗಲು ಪುದಿದ
[4]ಹಳಗವನ್ನು ಹೊತ್ತು ನಾನು
ಹೊಲಯರಂತೆ ನಿಮ್ಮ ಮರೆದು ಕೆಟ್ಟೆನಕ್ಕಟಾ[4] ॥೩॥

ಸತ್ಯರುಗಳ ಕೂಡಲಾಡಿ
ನಿತ್ಯ ಶಿವನ ಭಜಿಸಿ ನುತಿಸಿ
ಮರ್ತ್ಯ[5]ದತ್ತ ಬಾರದಂತೆ[5] ಮಾಡಿಕೊಳ್ಳದೆ
ವ್ಯರ್ಥವಾಗಿ ಕೆಡುವ ಹೆಣ್ಣು
[6]ವಿತ್ತ ಭೂಮಿಗಳನು ಕಚ್ಚಿ
ಕತ್ತೆ ಹೊಲೆಯ ನಾನು ನಿಮ್ಮ ಮರೆದೆನಕ್ಕಟಾ[6] ॥೪॥

ಸೃಷ್ಟಿಯೊಳಗೆ ಉದಿಸಿ ನಾನು
ಶ್ರೇಷ್ಠನಲ್ಲ ಹಿರಿಯರೊಳಗೆ
ನಿಷ್ಠೆಯಿಲ್ಲ ಲಿಂಗದಲ್ಲಿ ಭಕ್ತ ನಾನಲ್ಲ
ಕಷ್ಟತನವ ಮರೆಸಿ ನಿಮ್ಮ
ನಿಷ್ಠೆ ನಿಜವನಿತ್ತು ಕರುಣ
ದೃಷ್ಟಿಯಲ್ಲಿ ನೋಡು ಷಡಕ್ಷರಿಯ ಲಿಂಗವೇ ॥೫॥

೧ ವರಹ (ಕ) ೨ ಹೇಳನದ ಹುಚ್ಚಿಂದ (ಧಾ) ಹಾಳಮೆಚ್ಚಿ (ಗ) ಹಾಳನರಸಿ (ಕ) ೩ ನಿಮ್ಮನು ಮರೆತೆನಕಟಕಟ (ಧಾ)
೪ ಹಳೆಯ ತೊಗಲನು ಹೊತ್ತು ನಾ ನೆರೆ
ಹೊಲೆಯನಂತಿರೆ ಮರೆದು ನಿನ್ನನು ಕೆಟ್ಟೆನಕಟಕಟಿ (ಧಾ)
೫ ದಾರ್ತಿಯು ಬಾರದಂತದು (ಧಾ) ೬ ಚಿತ್ತ ಕೆಡಿಸುತಲಧರ ಕಚ್ಚುವ ಕತ್ತೆ ಹೊಲೆಯನದಾಗಿ ನಿಮ್ಮನು ಮರೆದೆನಕಟಕಟ (ಧಾ)



## ೫೭. ಒಡಲು ಹಿಡಿದ ಜಡನು ನಾನು*

### ಭೋಗಷಟ್ಪದಿ

ಒಡಲು [1]ವಿಡಿದ[1] ಜಡನು [2]ನಾನು[2]
ಒಡಲು ಇಲ್ಲದಜಡ [3]ನೀನು[3]
ಒಡೆಯ [4]ನೀನು ಒಲಿಯದನಕ ಒಲಿಸಲಾಪೆನೆ[4] ॥ಪ॥

ಹೆಳವ ಮರದ ತುದಿಯಲಿರ್ದ
ಫಲವ ಬಯ[5]ಸಿ[5] ಬಳಲು[6]ವಂತೆ[6]
ಚೆಲುವ ಹೆಣ್ಣ ಅಧಮ ಬಯಸಿ ಬಳಲುವಂದದಿ
ಎಳೆಯ ಚಂದ್ರಧರನ ಸುಖವ
ಎಳೆಸಲಹುದೆ ಎನಗೆ ಶಿವನೆ
[7]ಒಲಿದು ನಿನ್ನ ನೀನೆ ಕರುಣವಾಗದನ್ನಕಾ[7] ॥೧॥

ದಾಸಿಯರಸ ಬಯಸಿ ಶರಗ
ಓಸರಿಸು[8]ವ ಹಾಂಗೆ[8] [9]ಮುರಿದ್
ಘೋಷ ಗಂಟೆ [10]ಜಾವವ[10] ತಾ ಬಯಸುವಂದದಿ

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ. ಈ ಪದ 'ಧಾ' ಪ್ರತಿಯಲ್ಲಿ ಭಾಮಿನಿ ಷಟ್ಪದಿಯಲ್ಲಿದೆ.
೧ ಹಿಡಿದಿಹ (ಧಾ) ೨ ನಾನ್ಯೆ (ಧಾ) ೩ ನೀನ್ಯೆ (ಧಾ) ೪ ನೀನೇ ಒಲಿಸದನಕಾ ಒಲಿಸಲಾಪುವೆನೇ (ಧಾ) ೫ ಯೆ (ಧಾ) ೬ ವಂದದಿ (ಧಾ) ೭ ನೊಲಿದ ನಿಮ್ಮಯ ಕರುಣವೆನ್ನೊಳಗಾಗದಿರದನಕ (ಧಾ) ೮ ವಂದದಲಿ (ಧಾ) ೯ ಮುಂದದು (ಧಾ) ಮುಸುಡು (ಚ) ಮುದುಡು (ಗ) ೧೦ ಚಾಮರವನು (ಕಗಚ)

[೧]ಈಶ ನಿಮ್ಮ ನಿತ್ಯ ಸುಖವು
ಹೇಸಿ ಮನುಜ ಎನಗೆ ಬಹುದೆ
ವಾಸರಿಸದೆ ನಿನ್ನ ಒಲಿಯದನ್ನಕಾ[೧] ॥೨॥

ಒಡೆದು ಹೋದ [೨]ಬೊಂಬೆ[೨] ಚಲುವ
ಗುಡಿಯ ಬಯಸುವಂತೆ ಇರದೆ
ಬಡವ ಧನವ ಬರಿದೆ ಬಯಸಿ ಬಳಲುವಂದದಿ
ಒಡೆಯ ನಿಮ್ಮ ನಿತ್ಯಸುಖವ
ಬಡವ ನಾನು ಬಯಸಲಹುದೆ
ಬಿಡದೆ [೩]ನೀನು ಒಲಿದು ಕರುಣವಾಗದನ್ನಕಾ[೩] ॥೩॥

ಬಾಳ ತೊತ್ತು ಕನಕ ಚಿತ್ರ
ಶಾಲೆಯ ತಾ ಬಯಸುವಂತೆ
ಆಳು ಅಂದಣವನು ಏರ ಬಯಸುವಂದದಿ
ಶೂಲಧರನೆ ನಿಮ್ಮ ಸುಖವ
ಕಾಲ ಬಡವ ಬಯಸಬಹುದೆ
ಲೀಲೆಯಿಂದ ನಿನ್ನ ನೀನೆ ಒಲಿಯ[೪]ದನ್ನಕಾ[೪] ॥೪॥

ಒಡಲನಿತ್ತು ಸುತರನಿತ್ತು
ಮಡದಿ ಧನವ ಧರಣಿಯಿತ್ತು
ಪಡೆದರೈಸೆ ಶಿವನ ಸುಖವ ಬರಿದೆ ಬಪ್ಪುದೆ
ಒಡೆಯ ಷಡಕ್ಷರಿಯ ಲಿಂಗ
ಬಡವನಿವನು ಎಂದು ಬಿಡದೆ
ಒಡನೆ ಕರುಣೆಯಾಗದನಕ ಎನ್ನೊಳಪ್ಪುದೋ ॥೫॥

---

೧ ಈಶ ನಿಮ್ಮಯ ಸತ್ಯ ಸುಖವನು
ಹೇಸಿ ಮನುಜನು ತನಗೆ ಬಹುದಿನ
ಆಸರಿಸದೆ ನಿನ್ನ ನೀನೆ ಒಲಿಯದಿರದನಕಾ (ಧಾ)
೨ ಪ್ರತುಮೆ (ಧಾ) ೩ ನೀನೆ ಕರುಣೆಯನ್ನೊಳಗಾಗದಿರದನಕ (ಧಾ)
೪ ದಿರದನಕ (ಧಾ)



## ೫೮. ಎಂದಿಗೆ ದೊರಕುವುದೋ*

### ಪರಿವರ್ಧಿನಿಷಟ್ಪದಿ

ಎಂದಿಗೆ ದೊರಕುವದನವರತಭವನ
ನಂದದಿ [೧]ಪೂಜಿಪ ಪರಸೌಖ್ಯವು ತಾ[೧]
ಸಂದು ಸುಖಾರ್ಣವ ತೆರೆಯೊಳಗಿಪ್ಪುದು ಎಂದಿಗೆ
ದೊರಕುವದು ॥ಪ॥

ಕಾಡುವ ಮಾಯೆಯ ಜಾಡಿಸಿ ಭವವ ವಿ
ಭಾಡಿಸಿ ಕಾಲನನೇಡಿಸಿ ಕಾಮನ
ನೋಡಿಸಿ ಮರವೆಯ ಕಾಡಿಗೆ ವಹ್ನಿಯ ಪರಿವೇಷ್ಟಿಸಿ ಬಳಿಕ
ನೋಡುತ ಲಿಂಗವ ಮೂಡುತ ಗದ್ಗದ
ಪಾಡುತ [೨]ಸುಖಜಲ[೨]ವಾಡುತ ನೇತ್ರದಿ
ಬೇಡುತ ಭಕ್ತಿಯ ಕೂಡುವ ಶಿವಸುಖವೆಂದಿಗೆ ದೊರಕುವದು ॥೧॥

ಕೆರೆ ತೊರೆ ಮಡು ಡೊಣೆ ಪರಿವಾ ನಿರ್ಝರ
ಗಿರಿ ಗುಹೆ ವನಲತೆ ಪರ್ಬಿದ ಕಾನನ
[೩]ಸರರುಹ[೩] ಕೊಳದೊಳು ಧುಮುಕುವ ನದಿತಟದೊಳು
ಶಶಿಶಿಲೆಯೊಳಗೆ
ಅರೆಯೊಳು ಪುಳಿನಸ್ಥಳದೊಳು ನಿರ್ಮಳ
ಪರಮಸುಖಸ್ಥಳದೊಳು ಘನಲಿಂಗಕೆ
ಹರುಷದಿ ಪೂಜೆಯ ಮಾಡುವ ಶಿವಸುಖವೆಂದಿಗೆ
ದೊರಕುವದು ॥೨॥

---

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ.
೧ ಪೂಜಿಸುವ ಪರವ ಕೂಡಲಂ(ಅ) ೨ ಪಾಡುತಾಶ್ರುಜಲ(ಅ) ೩ ಸುರರುಹ (ಧಾ)

ಶಶಿಕಾಂತದ ಶಿಲೆಯಿಂದಲಿ [೧]ರಚಿಸಿದ[೧]
ಮಿಸುಪಾ ಕೊಳದೊಳು ಚಂದ್ರನ ಕಿರಣದ
ಪಸರದ ಜಲದೊಳು ಕುಂಕುಮ ಚಂದನ ಕರ್ಪುರಮಂ ಕದಡಿ
ಬಿಸರುಹ ದಳದಿಂದರ್ಘ್ಯಮ ನೀಡುವ
[೨]ಬಿಸರುಹಗಳೊಳಂ[೨] ಮೂರ್ತವ ಮಾಡಿಸಿ
ಶಶಿಕಳೆಧರನಂ ಪೂಜಿಪ ಶಿವಸುಖವೆಂದಿಗೆ ದೊರಕುವದು ॥೩॥

ಒಪ್ಪುವ ಲಿಂಗದ ಮೊಗದೊಳು ಮೊಗಮಿ
ಟ್ಟೊಪ್ಪುತ ಗಲ್ಲದೆ ಬೆಮರುವ ಜಲದಿಂ
ದೊಪ್ಪನೆ ನೆನೆವುತ ನಟ್ಟಾಲಿಗಳಂ ಚಲಿಸದೆ ದೃಢದಿಂದ
ಒಪ್ಪುವ ನಿಟ್ಟಿರೊ ಲಿಂಗವನಾವಗ
ತಪ್ಪದೆ ಚಿತ್ರಿಸಿ ಬರೆದರೊಯೆಂಬು
ತ್ತಿಪ್ಪಾ ಪರವಶನಂದದ ನಿಜಸುಖವೆಂದಿಗೆ ದೊರಕುವುದು ॥೪॥

ಕಮಲಪರಾಗದ ಪೀಠವನಿಕ್ಕಿಸಿ
ಕಮಲದ ಸತ್ತಿಗೆಗಳ ಬಳಸುತ ತ
ತ್ಕಮಲದ ಪತ್ರದ ಬೀಸಣಿಗೆಗಳನು ಬೀಸುತ ಹರುಷದಲಿ
ಕಮಲದ ಕರ್ಣಿಕದರ್ಪಣದಿಂದಲಿ
ಕುಮುದದ ಘಂಟೆಯ ನುಡಿಸುತ ಪೂಜಿಪ
ವಿಮಲಷಡಕ್ಷರ ಲಿಂಗದ ನಿಜಸುಖವೆಂದಿಗೆ ದೊರಕುವುದು ॥೫॥

---

೧ ವಿರಚಿಸಿದ (ಅ) ೨ ಬಿಸರುಹದೊಳು (ಅ)



## ೫೯. ಏತರ ಭಯವೆಮಗೆ

### ಪರಿವರ್ಧಿನಿಷಟ್ಪದಿ

ಕಂಗೆಡಲೇತಕೆ ಕಳವಳಿಸಿಯೆ ನಾ
ನಂಗಜ[೧]ಮಾಯೆಯ ಮನದಬ್ಬರಕಂ[೧]
ಲಿಂಗದ ಸೂತ್ರವ[೨]ಕರದಲಿ ಪಿಡಿದಿರಲೇತರ ಭಯವೆಮಗೆ[೨] ॥ಪ॥

ಅಂಧಕನಿಗೆ [೩]ಸತ್ಪಥವನು[೩] ತೋರುವ
[೪]ಚಂದದಿ ಮೂಕಗೆ ಮಾತುಂ ಜೀವಿತ[೪]
ಸಿಂಧುವಿನೊಳಗಣ [೫]ಹೊಳವನು[೫] ತಪ್ಪಿಸಿ ಪಥವನು ತೋರ್ಪಂತೆ
ಹಿಂದಣ ವಾಸನೆಯನು ಪರಿಹರಿಸು[೬]ವ[೬]
ಮುಂದಣ ಸದ್ಗತಿಯನು ತೋರುವ [೭]ಘನ[೭]
ಸಂದ ಪುರಾತರ ವಚನಗಳಿರುತಿರೆ ಏತರ ಭಯವೆಮಗೆ ॥೧॥

ವರಸಂಜೀವನದೌಷಧವಿರುತಿರೆ
ಮರಣದ [೮]ಭೀತಿಗೆ[೮] ಅಂಜಲದೇತಕೆ
ಪರುಷದ ಖಣಿ ತಾ ಮನೆಯೊಳಗಿರುತಿರೆ ಬಡತನಕಂಜುವರೇ
ಶರಣರ ನಿಧಿಯೆಂದೆನಿಸುವ ಪಂಚಾ
ಕ್ಷರಿಜಿಹ್ವಾಗ್ರದ ಕೊನೆಯೊಳಗಿರುತಿರೆ
ದುರಿತಕ್ಕಂಜುವರೇ ಬಡಮನವೇ ನಂಬಿರು ಭಯ ಬೇಡ ॥೨॥

---

೧ ಮಾಯೆಗೆ ಮನ ಭಯದಿಂ (ಅ) ೨ ಪಿಡಿದಿರುತಿರೆಯನ್ನಂಗದಿ ಭಯವ್ಯಾಕೆ (ಅ) ೩ ಸತ್ಯಾರ್ಥವ (ಅ) ೪ ಚಂದದಿ ಮೇಗಣ ಕೂಕಂಬಿಗತಾ (ಆಇಗಚ) ೫ ಹೊಳ್ಳನು (ಧಾ) ೬ ತ (ಅಗಚ) ೭ ಜನ (ಧಾ) ೮ ಮೇರೆಗೆ (ಅ)

ಅಮೃತಾಂಬುಧಿಯಿರೆ ಹಸಿವಿನ ಭಯವೇ
ದ್ಯುಮಣಿಯು ತಾನಿರೆ ತಿಮಿರದ ಭಯವೇ
ಹಿಮಭಯವೇತಕೆ ತಾನಗ್ನಿಯ ಸನ್ನಿಧಿಯಲಿ ಮೂರ್ತವ ಮಾಡಿ
ಕ್ರಮಗೆಡಲೇತಕೆ ಚಿದ್ಘನಮೂರುತಿ
ಅಮಲನಿರಾಮಯ ನಿರ್ಗುಣ ನಿಷ್ಕಲ
ಅಮಮ ಷಡಕ್ಷರಿ ಲಿಂಗವು ಇರುತಿರಲೇತರ ಭಯ ನಮಗೆ ॥೩॥



## ೬೦. ಶಿವಯೋಗದೊಳೆಂದಿಹೆನೋ*

### ಪರಿವರ್ಧಿನಿಷಟ್ಪದಿ

ಶಿವಲಿಂಗ[೧]ವ ಹೃತ್ಪಿಂಡದ[೧] ಮಧ್ಯದಿ
ತವೆ[೨]ಜಾ[೨]ನಿಸು[೩]ತ[೩] ಪರವ[೪]ಶಾ[೪]ನಂದದಿ
ಭವಗಿರಿಪವಿಯೆಂದೆನಿಸುವ [೫]ಘನ[೫] ಶಿವಯೋಗ
ದೊಳೆಂದಿಹೆನೋ ॥ಪ॥

ಪದ[೬]ಪಿಂ[೬] ಭಾವದ ಗುಡಿತೋರಣದಿಂ
ಮದ[೭]ಗಜಹಯದಿಂದೆಸೆವನಲತ್ವದಿ[೭]
ಮುದವೆಡೆಗೊಂಡಿಹ [೮]ಕರಚರಣ[೮] ಚತುಷ್ಟಯ
[೯]ಮಂತ್ರದಿ ಕೂಡಿ[೯]
ಒದಗಿ[೧೦]ದ ಬಹುಸುಖ[೧೦] [೧೧]ಕರಣ[೧೧] ಪದಾತಿಯ
ಪದುಳ[೧೨]ದಿ[೧೨] ಮಧ್ಯದ ತನುವಿ[೧೩]ನ[೧೩] ರಥದಿಂ
ಸದಮಳಲಿಂಗವ ಹರುಷದಿ ನಾನಿದಿರ್ಗೊಂಬುತ
ಲೆಂದಿಹೆನೋ ॥೧॥

ಚಿನ್ನದ ನೆ[೧೪]ಲೆಯೊ[೧೪]ಳು ಬೆಳ್ಳಿಯ [೧೫]ಮೊರಡಿ ಸು[೧೫]
ರನ್ನದ ಗಿರಿಗಳ್ಬಚ್ಚೆಯ [೧೬]ಕೋಡ್ಗಲ್

---

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ.

೧ ದ ಹೃತ್ಪೀಠದ (ಕಗಚ) ೨ ಧ್ಯಾ (ಕಗಚ) ೩ ತಂ (ಕಗಚ) ೪ ಶ (ಕಗಚ) ೫ ನಿಜ (ಚ) ೬ ದಿಂ (ಕಗಚ) ೭ ಗಜದಿಂದೆಸವನಿಲಾಶ್ಚರ್ಯದಿ (ಕ) ೮ ಕರಣ (ಕಗಚ) ೯ ಮಂತ್ರಿಗಳೊಡಗೂಡಿ (ಕಗಚ) ೧೦ ಸಿ ಬಹುಮುಖ (ಧಾ) ೧೧ ಚರಣ (ಧಾ) ೧೨ ದ (ಕ) ೧೩ ಸೂ (ಕಗಚ) ೧೪ ಲದೊ (ಕಗಚ) ೧೫ ಮರುಡಿ (ಕ) ೧೬ ಕೊಡುಗಳುನ್ನತ (ಧಾ)

ಉನ್ನತ[೧೬] ನೀಲದ ಗುಂಡು ಪ್ರ[೧]ವ[೧]ಳದ ಲತೆ
ವೈಡೂರ್ಯಗಳ
ಸನ್ನುತವೆಸೆವಾ ಹಸಿರು ಮುತ್ತು[೨]ನಲ
ವಿನ್ನಿಸು[೨] ವಜ್ರದ [೩]ಧರೆಯಂತೊಪ್ಪುವ[೩]
ಹೃನ್ಮಂಡಲ ಚಿದ್ಭೂಮಿಯ ಮಧ್ಯ[೪]ದ[೪]
ಲಿಂಗದೊಳೆಂದಿಹೆನೋ ॥೨॥

ಭೋಂಕನೆ [೫]ತೋರುವ[೫] ವಿದ್ಯುಲ್ಲತೆಯ ಶ
ಶಾಂಕನ ಭಾಸ್ಕರ ಶತಕೋಟಿಪ್ರಭೆ
ಧಿಂಕಿಡುತಂ [೬]ತಾಂ[೬] ಬೆಳಗುವ ಬ್ರಹ್ಮ [೭]ಸುರಂಧ್ರ[೭]ದ ಮಧ್ಯದಲಿ
ಶಂಖದ ಘಂಟೆಯ ಜಾಗಟೆ ವಾಸುಕಿ
ಕಿಂಕಿಣಿ ಕಿನ್ನರಿ [೮]ವೀಣೆಯ[೮] [೯]ತೆರದಿಂ[೯]
[೧೦]ಝೇಂಕಾರಿಪ[೧೦] [೧೧]ಓಂಕಾರದ[೧೧] ಪ್ರಣವ
ಸುನಾದದೊಳೆಂದಿಹೆನೋ ॥೩॥

ಕುಟಿಲ[೧೨]ದ[೧೨] ಮಾಯೆಯ ಹರಿಸಿ [೧೩]ತಮಸ್ಸಿನ[೧೩]
ಪಟಲಕೆ ಜ್ಞಾನದ ಜ್ಯೋತಿಯ ಬೆಳಗಿಸಿ
ಪಟುಗೊಳಿಸುತ ಮ[೧೪]ನ[೧೪]ಮಾರುತ[೧೫]ರಂ[೧೫]
[೧೬]ತಾನೇಕವ[೧೬] ಮಾಡುತಲಿ
ಪುಟನೆ[೧೭]ಗೆದೂರ್ಧ್ವ[೧೭]ವನಡರಿಯಾತ್ಮನ
ನಿಟಿಲ[೧೮]ದ[೧೮] ಮಧ್ಯದ ತೇಜೋರಾಶಿಯ
[೧೯]ಮಠದೊಳು ಬೆಳಗುವ ಚಿದ್ಘನಲಿಂಗದ
ಮೇಳದೊಳೆಂದಿಹನೋ[೧೯] ॥೪॥

೧ ವಾ (ಧಾ) ೨ ಮುತ್ತಿನದಿನ್ನಿಸು (ಕ) ೩ ಅರಗಿಂದೊಪ್ಪುವ (ಧಾ) ೪ ದಿ (ಧಾ) ೫ ಕೊತ್ತುವ (ಧಾ) ೬ ತಾ (ಧಾ) ೭ ಸುರೇಂದ್ರ (ಕ) ೮ ವೇಣಿಯ (ಕ) ೯ ಸ್ವರದಿಂ (ಚ) ೧೦ ಝೇಂಕರಿಸುವ (ಚ) ೧೧ ಝೇಕಾರದ (ಕ) ೧೨ ವಿ (ಕಗಚ) ೧೩ ಮನಸಿನ (ಚ) ೧೪ ದ (ಧಾ) ೧೫ ನಂ (ಚ) ವಂ (ಧಾ) ೧೬ ತಾನೇಕಾ (ಕ) ೧೭ ತದೂರ್ಧ್ವನ (ಧಾ) ೧೮ ಭ್ರೂ (ಕಗಚ) ೧೯ ಮಠದೊಳು ಚಿನ್ಮಯ ಲಿಂಗದ ಸಮರಸ ಮೇಳದೊಳೆಂದಿಹೆನೋ(ಧಾ)



ಕ[೧]ರ[೧]ಣದ ಕಳಕಳವಿಲ್ಲದ ಸುರರುಗ
ಳರುವಿಗೆ ನಿಲುಕದ [೨]ತಾರ್ಕಿಕರುಗಳ[೨]
ಬ[೩]ರಿ[೩] ಕೋಟಲೆಗಳ ಹೋರ[೪]ಟೆ[೪]ಗೈದ[೫]ವ[೫]
ಮುನಿಗಳ ಭಾವಕ್ಕೆ
ಅರಿಸದ ಶಾಸ್ತ್ರಕೆ ನಿಲುಕದ ವೇದವು
[೬]ಕುರುಪಿಡಲರಿಯದ ಚರಿತನನಘಹರ[೬]
ಪರಮ ಷಡಕ್ಷರಿಲಿಂಗದ ನಿಜಸುಖ[೭] ಎಂದಿಗೆ
ದೊರಕುವದೋ[೭] ॥೫॥

೧ ರು (ಧಾ) ೨ ಕಾರ್ತಿಕ ತರುಗಳ (ಧಾ) ೩ ರು (ಗ) ಲು (ಚ) ೪ ಟ (ಧಾ ಟ (ಚ) ೫ ದ (ಕಗಚ) ೬ ಕುರುಹಿನ ಅಂಕಿತನದ್ವಯನಘಹರ (ಚ) ಕುರುಹಿಡಲಚಲಿತನದ್ವಯ ಅಘಹರ (ಗ) ಕುರುಹಿಡಿಯದಚಲಿತನದ್ವಯನಘಹರ (ಕ) ೭ ಧ್ಯಾನದೊಳೆಂದಿಹೆನೋ (ಧಾ)

## ೬೧. ಧ್ಯಾನದೊಳೆಂದಿಹೆನೋ

**ಪರಿವರ್ಧಿನಿಷಟ್ಪದಿ**

ತಾನೆಂದರಿಯದೆ ಇದಿರೆಂದರಿಯದ
ಏನೂ ಇಲ್ಲದೆ ಇರುತಿಹ ಶಿವ ತಾ
ನಾ[೧]ನಂದದಿ[೧] ವರ ಮೂರುತಿಯಾದನ
ಧ್ಯಾನದೊಳೆಂದಿಹೆನೋ ॥ಪ॥

ಘನಮಹಿಮ[೨]ನು[೨] ನೆನೆದಾಕ್ಷಣ[೩]ಮಾತ್ರದಿ[೩]
ಜನಿಯಿಸಿ [೪]ಗತಿಸುತಿರುವ[೪] ಬ್ರಹ್ಮಾಂಡವು
ವನಜೋದ್ಭವ ವನಜಾಕ್ಷರು [೫]ಜನಿಸಲು ಕರೆದವರೊಲುವಿನಲಿ[೫]
ವನಜೋದ್ಭವ ನೀ [೬]ಸೃಜಿಯಿಸು[೬] ಲೋಕವ
ವನಜಾಕ್ಷನೆ ನೀ ರಕ್ಷಿಸು ಎನುತಲಿ
ಅನುವಿತ್ತವರಿಂ ವಂದಿಸಿಕೊಂಬನ
ಧ್ಯಾನದೊಳೆಂದಿಹೆನೋ ॥೧॥

ತಪ್ತಸುಕಾಂಚನ ಪ್ರಭೆಗಳ ನೆಲದೊಳು
[೭]ದೀಪ್ತಿಸುತಿಹ[೭] ರತ್ನಂಗಳ ಕಂಬದಿ
ಒಪ್ಪುವ ವಜ್ರದ ತೊಲೆ[೮]ಬೋದಿಗೆಯಿಂ[೮] ನೆಟ್ಟನೆ ಚಲುವಾಗಿ

೧ ನೆಂದರಿ (ಗಚ) ೨ ನ (ಧಾ) ೩ ಮಂತ್ರದಿಂ (ಆಇ) ೪ ಜಗಜಗಿಸಿತು (ಕಚ) ೫ ಜನಿಸಿದರೆಲ್ಲರನೊಲವಿಂದ (ಚ) ೬ ಸೃಷ್ಟಿಸು (ಆಇಕಗಚ) ೭ ದೀಪಿಸುತಿಹ (ಆಇ) ೮ ಲೋವೆಗಳಿಂ (ಧಾ) ಬೋದಿಗೇ (ಕ) ಬೋದಿಗೆಗಳಿಂ (ಚ) ಬೋದಿಗೆ ಲೋವೆಗಳಿಂ (ಗ)



ತಪ್ಪದೆ ಬೆಳಗುವ ಓಲಗಶಾಲೆಯೊ
ಳಿಪ್ಪಾ ಶಿವಗಣಚಕ್ರದ ಮಧ್ಯ[೧]ದಿ[೧]
ಸರ್ಪಾಭರಣ[೨]ವ[೨] ಧರಿಸಿದ ಚಲುವನ
ಧ್ಯಾನದೊಳೆಂದಿಹೆನೋ ॥೨॥

ಜಗದಗಲದ ಶಶಿಕಾಂತದ ವೇದಿಕೆ
ಮುಗಿಲುದ್ದದ ಮಾಣಿಕ್ಯದ ಕಂಬದಿ
ಬಿಗಿದಿಹ ನೀಲದ ತೊಲೆಗಳು ಒಪ್ಪುವ [೩]ಮಣಿಮಂಟಪದೊಳಗೆ[೩]
ಹಗಲಿರುಳೆನ್ನದೆ ತುಂಬಿಹ [೪]ಮುನಿಗಳ[೪]
[೫]ಉಘೆಉಘೆ ಜಯಜಯ ಘೋಷದ ಮಧ್ಯದಿ
ಸೊಗುಸುತ್ತಿರುತಿಹ ನಗಜೆಯ ರಮಣನ
ಧ್ಯಾನದೊಳೆಂದಿಹೆನೋ[೫] ॥೩॥

[೬]ಹರಿಯಜ[೬]ಸುರದೇವೇಂದ್ರರ [೭]ಯಕ್ಷರ[೭]
[೮]ಗರುಡೋರಗ ಸುರಗಂಧರ್ವಾಸುರ[೮]
ವರಕಿನ್ನರಕಿಂಪುರುಷರ ಸಿದ್ಧರ ಸಾಧ್ಯರ ಯೋಗಿಗಳ
[೯]ಸುರುಚಿರ[೯] ವರಮಣಿಮಕುಟದ ಬೆಳಗಿಂ
ತೆರಹಿಲ್ಲದ [೧೦]ಕಲಕಲರವ[೧೦]ದೋಲಗ
ದಿರುವಿನ ಮಧ್ಯದೊಳೊ[೧೧]ಪ್ಪುವ[೧೧] ಪರಶಿವ
[೧೨]ಧ್ಯಾನದೊಳೆಂದಿಹೆನೋ[೧೨] ॥೪॥

೧ ದ (ಕಗಚ) ೨ ನ (ಕ) ೩ ಮಂಟಪಮಧ್ಯದೊಳು (ಕಗಚ) ೪ ಮನೆಗಳು (ಆಇ) ಮನೆಯೊಳು (ಕ) ೫ ವೊಗುಮಿಗೆ ವಂದ್ಯದ ಜಯಜಯ ಘೋಷದಿ ಸೊಗಸುತಲಿಹ ನಗಜಾಪತಿಯೋರುಗ ಧ್ಯಾನದೊಳೆಂದಿಹೆನೋ (ಅ) ೬ ಹರಿಯಜೇಂದ್ರ (ಗ) ೭ ದಿಕ್ಪಾಲಕ (ಆಇ) ೮ ಗರುಡ ಗಂಧರ್ವರು ಸುರರು ನರೋರುಗ (ಆಇಕಗಚ) ೯ ವರಸೊಗಸುವ (ಆಇಕಚ) ೧೦ ಕಳಕಳ (ಅಆಇಗ) ೧೧ ಇರುತಿಹ (ಆಇ) ೧೨ ಧ್ಯಾನಿಸುತೆಂದಿಹೆನೋ (ಕ)

ಝುಗಝುಗಿಸುವ ಶಶಿಸೂರ್ಯರ ಬೆಳಗಿಂ
ಮಿಗೆ ದೇವರ್ಕಳ ಮಕುಟದ [೧]ಬೆಳಗಿಂ[೧]
[೨]ಸೊಗಸುತ್ತಿರುತಿಹ[೨] ರತ್ನದ ಓಲಗ[೩]ಶಾಲೆಯ[೩] ತೇಜದೊಳು
ಗಗನ[೪]ವ ತುಂಬಿದ ಮಿಗೆ ಬೆಳಗಿನೊಳುರೆ[೪]
ಹಗಲಿರುಳೆನ್ನದೆ ಓಲಗದೊಳಗಿಹ
ನಗೆಮೊಗ[೫]ದಾಳ[೫] [೬]ಸುಷಡ[೬]ಕ್ಷರ ಲಿಂಗದ
ಧ್ಯಾನದೊಳೆಂದಿಹೆನೋ ॥೫॥

೧ ಪ್ರಭೆಯಿಂ (ಆಇಕ) ೨ ಸೊಗಸೊಗಸುತಲಿಹ (ಧಾ) ೩ ಶಾಂತಿಯ (ಆಇ) ಸೇವೆಯ (ಕ) ೪ ದಕಕುಭಂಗಳನುರೆ ತೀವಿದ (ಧಾ) ೫ ದರ (ಕಚ) ೬ ಅರಸು (ಆಇ)



## ೬೨. ಎನ್ನಪರಾಧವ ನೋಡದೆ ರಕ್ಷಿಸು

### ಪರಿವರ್ಧಿನಿಷಟ್ಪದಿ

ಎನ್ನಪರಾಧವ ನೋಡದೆ ರಕ್ಷಿಸು
ಪನ್ನಗಧರವರ ಮೂರ್ತಿ [೧]ಕೃಪಾಕರ[೧]
ಚನ್ನ ಷಡಕ್ಷರ ಲಿಂಗವೆ [೨]ಎನಗೊಲಿದೊಮ್ಮಿಗೆ[೨] ಕೃಪೆಯಾಗು ॥ಪ॥

[೩]ಕ್ಷುಲ್ಲನು[೩] ಕ್ಷುದ್ರನು ಪರರಭಿಮಾನಕೆ
ಭುಲ್ಲವಿಸುವ[೪]ಖಿಲ ಕಪಟಾತ್ಮಕ[೪] ಬಹು
ಸುಳ್ಳನು ಕಳ್ಳರ ಮೇಳಾಪನು ಮನ ತಲ್ಲಣಿಸದೆ [೫]ಪಾಪ
ವೆಲ್ಲನು[೫] ಮಾಡುವ ದುರ್ಜನ ದುರ್ಮುಖ
ನಿಲ್ಲದೆ ಸತ್ಪುರುಷರ ನಿಂದಿಸುತಿಹ
ಖುಲ್ಲಾತ್ಮಕನವಗುಣಗಳ ನೋಡದೆ [೬]ಒಮ್ಮಿಗೆ[೬] ಕೃಪೆಯಾಗು ॥೧॥

[೭]ಕನ್ಯಾರ್ಥವ ಪತಿಕರಿಸುತ ಭೂಮಿಯ[೭]
ಮನ್ನಣೆಯಳಿದಿಹ ದಾಸಿಯ ದುಷ್ಕುಲ
ವೆನ್ನದೆ ವರ್ತಿಪ ಶಿಶ್ನಪರಾಯಣ [೮]ಕಾಮುಕ[೮]ನಜ್ಞಾನಿ
ಸನ್ನುತ ಗುರುಚರವಾಕ್ಯವ ಮೀರಿಯೆ
ಭಿನ್ನವ ಮಾಡಿ ಶಿವಾಗಮಶಾಸ್ತ್ರಗ
ಳೆನ್ನದೆ ಮುಂದಣ ಸದ್ಗತಿಯರಿಯೆನು ಒಮ್ಮಿಗೆ
[೯]ಕೃಪೆಯಾಗು[೯] ॥೨॥

೧ ಮಹಾಘನ (ಅಗ) ೨ ನೀನೊಲಿದೊಮ್ಮೆಗೆ (ಕ) ನೀನು ಎನಗೊಲಿದೊಮ್ಮೆಗೆ (ಗ) ೩ ಖುಲ್ಲನು (ಧಾ) ೪ ಕಳ್ಳನು ಕಪಟಾತ್ಮನು (ಆಇ) ೫ ಪಾಪೀಯೆಲ್ಲನು (ಅ) ೬ ನಿರ್ಲಯ (ಕ) ೭ ಕನ್ಯಧವಾಸತಿ ಪತ್ನಿ ಭುಜಂಗಿಯ (ಆಇಕಗ) ಅನ್ಯವಿತ್ತ ಪತಿಪತ್ನಿ ಭುಜಂಗಿಯು (ಚ) ೮ ದುರ್ಮುಖ (ಆಇ) ಕಾಮುಕಿ (ಗ) ೯ ಗುರಿಯಾಗು (ಆಇ)

ಈಕ್ಷಿಸಲೊಲ್ಲದೆ ಲಿಂಗವ ವನಿತಾ
ವಕ್ಷೋಜಾನನ ಕಟಿ [೧]ಪೊರೆವಾರವ[೧]
ನೀಕ್ಷಿಪಪೇಕ್ಷಾ ತಾಮಸದಿಂದಲಿ[೨]ಮತಿ ಮಸಳಿಸಿತಡಗಿ[೨]
[೩]ಲಕ್ಷಿಸಲೊಲ್ಲದೆ[೩] ಹಿರಿಯರ [೪]ವಚನವ[೪]
ಭಕ್ಷಣೆಗೋಸುಗ ಡಂಭಕರೂಪನು
ಮೋಕ್ಷವನರಿಯದ [೫]ಗುಪ್ತ[೫]ದ್ರೋಹಿಗೆ ಒಮ್ಮೆಗೆ
ಕೃಪೆಯಾಗು ॥೩॥

ಖೂಳನು ಪಾಪಿಷ್ಠನು [೬]ಭವಿಧೂರ್ತರ[೬]
ಮೇಳನು ಹಿಂಸೆಗೆ ಹೆದರದೆ ಹಿರಿಯರ
ಝೂಳಿಸಿ[೭]ನುಡಿದಪ[೭]ಕೀರ್ತಿಯ [೮]ಪಡೆದನ[೮]ಕಾಕು ವಿಚಾರನಿಗೆ
ಢಾಳಕತನದಲಿ ವಾಗ್ಜಾಲದೊಳತಿ
ಕಾಲನ ಬಾಧೆಗೆ [೯]ಬಿದ್ದು[೯] ಪುನರ್ಭವ
ಮಾಲೆಯ ಕೊರಳಿಗೆ ತೊಡರಿಸಿಕೊಂಬನಿಗೊಮ್ಮೆಗೆ
ಕೃಪೆಯಾಗು ॥೪॥

ಹೀನನು ಬಹುಮುಖಶಾಸ್ತ್ರವ ಕಲಿತನು
ಜ್ಞಾನವ [೧೦]ಮಾನಿಗಳು[೧೦] ಧಿಕ್ಕರಿಸುವಾ
ನಾನಾಕೃತ್ಯವನೆಸಗಿ ಗುರೂನ್ನತನಾಗದೆ ಭವಭವದ
ಕಾನನದೊಳು ಕಣ್ಗಾಣದೆ ತಿರುಗುವ
ವಾನರ[೧೧]ನಂತೆ[೧೧] ಪರಾಪರಮುಕ್ತಿಯ
ನೇನೆಂದರಿಯದ [೧೨]ಬಹು[೧೨]ಮುಖ ಜಡನಿಗೆ ಒಮ್ಮೆಗೆ
ಕೃಪೆಯಾಗು ॥೫॥

೧ ಪರಿವಾರವಾ (ಆಇ) ಪೊರವಾರವ (ಕಗಚ) ೨ ಮತಿ ಮಸುಳಿದು ಮಮಕಾರಡಗೀ (ಅ) ೩ ಲೆಕ್ಕಿಸಲೊಲ್ಲದೆ (ಆಇ) ೪ ಓದಣ (ಆಇ) ೫ ವಿಪ್ರ (ಅ) ೬ ದುಷ್ಟರಭವಿ (ಧಾ) ಬಲುಧೂರ್ತರ (ಅ) ಮಿಗೆ ಧೂರ್ತರ (ಕ) ೭ ನಾಚಿಪ (ಅ) ೮ ಒಡಲಿನ (ಧಾ) ೯ ಬಿಡುಮನ (ಅ) ೧೦ ಮಾನಿನಿಗಳು (ಅ) ೧೧ ಪರಮ (ಆಇ) ೧೨ ಬಹು (ಧಾ)



ಸುರಪಶುವಿಗೆ ಗೊಡ್ಡಾವಿನ ಸಂಗವೆ
ಸುರತರುವಿದ್ದಂತೆಲುವದ ಮರನಂ
ವರಚಿಂತಾಮಣಿ ಇರುತಿರೆ ಗಾಜಿನ [೧]ಚಟಿಕೆಯ[೧]
ಹಿಡಿವಂತೆ
ಹರಮಂತ್ರ[೨]ವು[೨] ಪಂಚಾಕ್ಷರಿ ಇರುತಿರೆ
[೩]ಪರಿಪರಿ[೩] ಕೃತಕದ [೪]ಮಂತ್ರವ ಬಯಸುತ[೪]
[೫]ನರರು[೫]ಗಳಂದದಿ ನಿರಯಕೆ ಬೀಳ್ವನಿಗೊಮ್ಮೆಗೆ
ಕೃಪೆಯಾಗು ॥೬॥

[೬]ಅವ[೬]ಗುಣಗಳನಿನ್ನಾರಿಗೆ [೭]ಹೇಳಲಿ[೭]
ತವೆ ಗುರುವಾಕ್ಯವ ಮೀರಿದ ಕಾರಣ
ಶಿವನೊಲಿಯನು [೮]ಶಿವನೊಲಿಯದಿರಲು[೮]
ಶಿವಶರಣರು ಒಲಿಯರಲಾ
ಭವ [೯]ಹೀಗಾದರೆ[೯]ಯೆಂದಿಗೆ ಬಿಡುವದು
[೧೦]ತವೆ[೧೦]ಯಾನಂದದಯಾಂಬುಧಿ ಭವಗಿರಿ
ಪವಿಯೇ ರಕ್ಷಿಸು ಕೊರತೆಯದಾರಿಗೆ ಒಮ್ಮೆಗೆ
ಕೃಪೆಯಾಗು ॥೭॥

ತಂದೆಯ ಮಾತನು ಮೀರಲು [೧೧]ಶಿಕ್ಷೆಯು[೧೧]
[೧೨]ಒಂದಾಡದೆ[೧೨] ಉಂಟಲ್ಲದೆ [೧೩]ಸದ್ಗುರು[೧೩]
ತಂದೆಯ ಮಾತನು ಮೀರಲು [೧೪]ಶಿಕ್ಷೆಯು ಎಂದಿಗು
ಉಂಟಷ್ಟೆ[೧೪]

೧ ಟಿಕ್ಕಿ (ಅಆಇಕಗಚ) ೨ ದ (ಧಾ) ೩ ಪರಮಾತ್ರವ (ಅ) ಪರಮಂತ್ರದ (ಗ) ೪ ಬಯಲಾಸೆಯ (ಅ) ೫ ಪರರು (ಅ) ೬ ಆವ (ಧಾ) ೭ ಪೇಳುವೆ (ಆಇಕ) ೮ ಶಿವನೊಲಿದರೆ (ಕಗಚ) ೯ ಹಿಂಗದೊಡೆ (ಆಇ) ಹಿಂಗದೆ (ಕ) ೧೦ ಸವೆ (ಕಗಚ) ೧೧ ಪ್ರಾಯಶ್ಚಿತ (ಆಇಗಚ) ೧೨ ಎಂದಾದೊಡೆ (ಆಇ) ೧೩ ಶ್ರೀಗುರು (ಆಇ) ೧೪ ಪ್ರಾಯಶ್ಚಿತ್ತ ಎಂದೆಂದಿಗೆಯುಂಟೆ (ಆಇಕಗಚ)

ಮುಂದಾದ ಸದ್ಗುರುವಿಂದಲ್ಲದೆ ಶಿವ
[೧]ನಿಂದಾದೊಡೆ ಶಿಕ್ಷೆಯು ತಾನಹುದಾ[೧]
ನಂದ ದಯಾಪರಸಿಂಧುವೆ ಹರನೇ ಒಮ್ಮಿಗೆ
ಕೃಪೆಯಾಗು ॥೮॥
[೨]ಸುರಧನು[೨] ತೃಣಕಣ ಮರುತನ ಜ್ಯೋತಿಯ
ಯಿರವತಿ ಸಂಧ್ಯಾರಾಗವು ಜ್ವಲಿಸಿರೆ
ಕರಿ ಶುಂಡಾಲದ ಶಿಶುವಸಿಧಾರೆಗೆಯೊಡ್ಡಿದ ಕುರಿ[೩]ಯೆಂದು[೩]
ಅರಿದರಿದೀತನು ನಿತ್ಯವೆನುತ್ತಲಿ
[೪]ಹರಿಯಜ ಸುರ[೪]ಮನು ಮುನಿಗಳು ಕೆಟ್ಟಾ
[೫]ಪರಿಯೇಂ ವ್ಯರ್ಥದಿ ನಾ ಕೆಡಲಾರೆನು[೫] ಒಮ್ಮಿಗೆ
ಕೃಪೆಯಾಗು ॥೯॥

ಮೇರುವ ಸಾರುವ ವಾಯಸ ಕನಕ ಶ
ರೀರಮದಾಗಿರದಾರಿಗೆ ಪರುಷವು
ಸೇರಿದ ಕಬ್ಬಿಣದವಗುಣವಳಿಯದ ದಾರಿಗೆ ಕೊರತೆಯದು
[೬]ಘೋರಭವಾಟವಿಯಾನಲನುರಿಯೊಳು
ಘೋರುಂಗೊಳುತಿಹನಾರಯ್ಯದರಿರೆ
ಸಾರಿಯೆ ತಟ್ಟುವ ಕೊರತೆಯದಾರಿಗೆ ಒಮ್ಮಿಗೆ
ಕೃಪೆಯಾಗು ॥೧೦॥

೧ ನಿಂದಾದೊಡೆಯಾಗದು ಪ್ರಾಯಶ್ಚಿತ (ಆಇಕಗಚ) ೨ ಸುರಭನು (ಧಾ) ೩ ಯಂತೆ (ಆಇ) ೪ ಸುರದನುಜರು (ಆಇ) ೫ ಕೆಟ್ಟರು ಕರುಣಿಸಿ ರಕ್ಷಿಸು ಚಿದ್ಘನ ಗುರುವೆ (ಆಇ)

೬ ಬಾರದ ತಿಳುಹದ ದಾರ್ಯೆಯೆಡರರದು
ಸೂರಿಯನುದಯದಿ ಕಮಲವು ಮುಗುಳಿರೆ
ಸೇರಿದ ಕೊರತೆಯದಾರಿಗೆ ಶಿವ ನೀನೊಮ್ಮಿಗೆ ಕೃಪೆಯಾಗು (ಧಾ)
ಘೋರಭವರಾಟಳದಿ ತಿರುಗುವ ಕ್ರೂರನ
ತಿಳುಹಲು ಬಾರದುಯಂದೊಡೆ ತಿಳಿದರಿದಡೆ
ಯದು ಕೊರತೆಯದಾರಿಗೆ ಒಮ್ಮೆಗೆ ಕೃಪೆಯಾಗು (ಚ)



ತರುಗಳ ಗುಣಗಳ ನೋಡಿತೆ ಚಂದನ
ಪರುಷವು ಲೋಹದ ಅವಗುಣವರಸಿತೆ
ಅರಿಯಿತೆ [೧]ಕೀಟಕ[೧] ಗುಣವನು ಭ್ರಮರವು ಆ ಪರಿಯಂದದಲಿ
ಬರಿಯವಗುಣಿಯಲಿ ಸದ್ಗುಣವರಸದೆ
ಪರಮಚಿದಂಬುಧಿಯದ್ವಯನಘಹರ
ಗುರುವೆ ಷಡಕ್ಷರಲಿಂಗವೆ ಎನಗೊಲಿದೊಮ್ಮಿಗೆ ಕೃಪೆಯಾಗು ॥೧೧॥

೧ ಕಂಟಕ (ಧಾ)

## ೬೩. ಯುಗವನಂತವು ಹೋಗುತಿರುತಿಹವು*

**ವಾರ್ಧಕಷಟ್ಪದಿ**

ಯುಗವನಂತವು [೧]ಹೋಗುತಿರುತಿಹವು[೧] ಅವರಲ್ಲಿ
ಜಗವನಾಳಿದ ರಾಯರುಗಳು [೨]ಹೋದರು ಕೆಲರು[೨]
ಮಿಗೆ ದನುಜಮನುಜರವಧಿಗಳಿಲ್ಲದಮರಗಣ
ಸುರಸಿದ್ಧರುಗಳಳಿದರು ॥ಪ॥

[೩]ಆನಂದ ಸ್ವೇದಜಂ ತಾನುಂ ಜರಾಯುಜಂ
ಏನೆಂಬೆನಂಡಜಂ ಬೀಜಜಂ[೩] ಯುಗ ಮುಂದೆ
[೪]ನೀ ನೋಡು[೪] [೫]ಭಿನ್ನ ಯುಕ್ತಾಯುಕ್ತವೆ ಮದಾಯು
ಮನ್ಯರಣ[೫]ಮಾನ್ಯರಣವು
ನೂನಯುಗ [೬]ವಿಶ್ವರಾಜ್ಞಾಕಾಲಸಮ್ಮಿತಂ[೬]
ನೀನು ತಿಳಿ [೭]ಕೃತ[೭]ತ್ರೇತ ದ್ವಾಪರಂ ಕಲಿಯುಗಂ
ತಾನು ತಿರುತಿರುಗಿ ಮರಮರಳಿ ಹೋಗುತ್ತಿಹವು
ಮೂಢರಿವಗಳನರಿಯರು ॥೧॥

* ಆಇ–ಪ್ರತಿಗಳಲ್ಲಿ ಈ ಪದ ಇಲ್ಲ

೧ ಹಿಂಗುತಿರುತಿಹವು (ಧಾ) ಹೋಗುತಿಹವು (ಕ) ೨ ಕೆಲರು (ಕ) ೩ ಅನಂತ ಅದ್ಭುತಂ ತಮಂಧ ತಾರಜಂ ಏನೆಂಬೆ ತಂಡಜಂ ಭಿನ್ನಜಂ (ಕಗಚ) ೪ ತಾನೋಡು (ಕ) ೫ ಭಿನ್ನಾಯುಕ್ತಾವ್ಯಕ್ತವೆ ಮದಾಯು ಮಣಿರಣಂ (ಗಚ) ಭಿನ್ನಜಂ ವ್ಯಕ್ತಮಯದಾಯು ಮಣಿರಣ (ಕ) ೬ ವಿಶ್ವರಣಿ ವಿಶ್ವಾವಸುವಲಂಕೃತಂ (ಗಚ) ಈಶ್ವರಣಿ ವಿಶ್ವ ವಸುಲಂಕೃತಂ (ಕ) ೭ ಕೃತಯುಗಂ (ಕಗಚ)



[೧]ಆದಿ ಮನುವಿಂದ್ರನು ಕಾಲ ಸ್ಥಲಂ ದುಂದು
ಮಾದಿ ತ್ರಿಶಂಕು ಸುತ ಹರಿಶ್ಚಂದ್ರ ಲೋಹಿತಂ
ಆದಿ ನಳ ಕೃಪ ಚ್ಯವನ ಪುರುರವಸುಗಳಿಂ ಪರೀತಾ
ಪ್ರಿಯವರನಿಂದ
ಭೂಧವಂ ಮಾಂಧಾತನಾ ಭಗೀರಥನಾದಿ
ಯಾದ ಪರಿತಾಪಿಯಾಗಿರುವ ಗೋಪಾಲ ತಾ
ನಾದಿಯಹ ನಂದಗೋಪಾಲ ವಸುದೇವ
ಶ್ರೀಕೃಷ್ಣಾದಿಗಳು ಅಳಿದರು[೧] ॥೨॥

[೨]ತಾಳಾಸುರಂ ಪಂಚಮೇಢ್ರಾಸುರಂ ವ್ಯಾಘ್ರ
ಲಾಳಾಸುರಂ ಶಕಟ ವಿಕಟಾಸುರಂ ನರಕ
ವ್ಯಾಳಾಸುರಂ ಕಾಕ ಮೂಕಾಸುರಂ ರಾವಣಂ
ಸೋಮಕಾಸುರಕನು
ಜ್ವಾಲಾಸುರಂ ರಕ್ತಬೀಜಾಧರಂ ನಮುಚಿ
ಕಾಳಾಧರಂ ಬಲಿಯು ದೇವಾಂತಕಂ ಜಂಭ
ಜಾಳಂಧರ ಭಸ್ಮದೇವಾಸುರಂ ಮುಖ್ಯ
ವಾಗಿರ್ದಸುರರಳಿದರು[೨] ॥೩॥

೧ ಆದಿನಯನೇಂದ್ರಿಯಂ ಕಾಲ ಸ್ವಲಂ ದುಂದುಮಾದಿ
ತ್ರಿಶಂಕು ಸುತ ಹರಿಶ್ಚಂದ್ರ ಲೋಹಿತಂ
ಆದಿ ನಳ ಕೂರ್ಪಶ್ಯವರ ಪುರೂರಸಿಗಳಂ ಪರಿತಾಪಿಯಮರನಿಂದ
ಭೂಧವಂ ಮಾಂಧಾತ ಮಾಂಫ್ರೀ ಚ ಬಿಂದು ಲವಣಾದಿ
ಪರಿತಾಪಿಯಾ ಶಿಳ್ಕ ಗೋಪಾಲಕನಾದಿ
ಸುನಂದ ಗೋಪಾಲ ವಸುದೇವ ಶ್ರೀಕೃಷ್ಣಾದಿಗಳಳಿದರು ॥೨॥ (ಗಚ)

೨ ತಾಳಾಸುರಂ ಪಂಚಮೇಘ್ರಾಸುರಂ ವ್ಯಾಘ್ರ
ಲಾಳಾಸುರಂ ಶಕಟವಿಕಟಾಸುರಂ ನರಕ
ದೇವಾಸುರಂ ತಾರಕಾದಿ ಮೂಕಾಸುರಂ ರಾವಣಂ ಸೋಮಕಾದಿ
ಜ್ವಾಲಾಸುರಂ ರಕ್ತಬೀಜಂ ಜಲಂಧರಂ
ಕಾಳೋಧರಂ ಬಲಿಮದೇಭಾಸುರಂ ಜಂಭ
ಕಾಳಾಸುರಂ ಭಸ್ಮದೇವಾಸುರಂ ಮುಖ್ಯದಾನವಾದಿಗಳಳಿದರು ॥೩॥ (ಕ)

ಗೋರಟಂ ಚರ್ಪಟಿಯು ರತ್ನಗೋಪಂ ವ್ಯಾಳಿ
[೧]ಮತ್ಸೇಂದ್ರ[೧] ನಾಗಾರ್ಜುನಂ ಖರ್ಪರಂ
ಧಾರುಣಿಯೊಳಳಿದರೀ ಮನದಿಚ್ಛೆಮರಣದಾ ದ್ರೋಣ
ಭೀಷ್ಮರು ಅಳಿದರು
ವಾರಿಜಾಕ್ಷಂ ವಾರಿಜೋದ್ಭವಂ ಮೊದಲಾದ
[೨]ಸುರೇಂದ್ರ[೨] ನಿರ್ಜರರು ಯಕ್ಷ ಕಿನ್ನರ ಗರುಡ
ಮಾರುತಾಸನನವರು ಈರೇಳು ಲೋಕದೊಳಗಳಿದರು
[೩]ಳಿದರ[೩] ಕಾಣೆನು ॥೪॥

ಇವರ ಮಾತಂತಿರಲಿ ಔದುಂಬರದ ವೃಕ್ಷ
ತವೆ ಕಾಲಕಾಲಕ್ಕೆ ಫಲದೋರಿಯಳಿವಂತೆ
ಶಿವನೊಳಗೆ ಬ್ರಹ್ಮಾಂಡಕೋಟಿಗಳು ಬಗೆದೊಗೆದು
ತೋರಿಯಡಗುತಲಿರ್ಪವು
ಭವರಹಿತ ಮಲಮಾಯೆಗಳ ರಹಿತ ಫಲರಹಿತ
ಶಿವಗಣಂಗಳು ನಿತ್ಯಸುಖದೊಳಿರುತಿಹರು ಗಡ
ಶಿವಷಡಕ್ಷರ ಲಿಂಗದೊಳಡಗಿ ಹೊರಗಿನಳಿವು ಉಳಿವುಗಳ
ನೋಡುತಿಹರು ॥೫॥

೧ ಮದ್ಯಾಂಧ್ರ (ಧಾ) ೨ ಸೂರೀಂದ್ರ (ಧಾ) ೩ ಳಿದರವರ (ಚ)



## ೬೪. ದೇವತ್ವವಾವುದು

ದೇವತ್ವವೆಂಬುದದಾವುದೆಂದರಿಯರು ಕೇಳು ಮನವೆ
ಭಾವದೊಳು ಲಿಂಗ ನೆಲಸಿರೆ ದೇವತ್ವವಪ್ಪುದು ಕೇಳು ಮನವೆ
॥ಪ॥

ಉರಿವ ಕಿಚ್ಚನೆ ಹೊಕ್ಕು ಬೇಯದೆ ಹೊರಟರೆ ಕೇಳು ಮನವೆ
ನರರುಗಳದನು ದೇವತ್ವವೆಂದೆಂಬರು ಕೇಳು ಮನವೆ
ಭರದಿಂದ ಬಂದು ಹೊಳೆಯ ಮೇಲೆ ನಡೆದರೆ ಕೇಳು ಮನವೆ
ಅರರೆ [೧]ಅವರಾಚರಿಸಿದುದೇ[೧] ದೇವತ್ವವೆಂಬರು ಕೇಳು ಮನವೆ
॥೧॥

ಚಿತ್ತದೊಳಿಹ ಮಾತು ಹೇಳಲು [೨]ಮರ್ತ್ಯರು[೨] ಕೇಳು ಮನವೆ
ಸತ್ಯವಿದತಿಶಯ ದೇವತ್ವವೆಂಬರು ಕೇಳು ಮನವೆ
ಹತ್ತಿ ಗಗನದಲ್ಲಿ ನಡೆದರೆ ಧರೆಯೊಳು ಕೇಳು ಮನವೆ
ಉತ್ತರೋತ್ತರ ದೇವತ್ವವೆಂಬರು ಕೇಳು ಮನವೆ ॥೨॥

ದೂರದೃಷ್ಟಿ ದೂರಶ್ರವಣಗಳಿಂದಲಿ ಕೇಳು ಮನವೆ
ಸಾರಿ ದೃಷ್ಟನ ಹಳೇ ದೇವತ್ವವೆಂಬರು ಕೇಳು ಮನವೆ
ಆರೈವ ಮನದಿ ಷಡಕ್ಷರಲಿಂಗವ ಕೇಳು ಮನವೆ
ಬೇರಿಲ್ಲದೊಡಗೂಡಬಲ್ಲರೆ ದೇವತ್ವ ಕೇಳು ಮನವೆ ॥೩॥

೧ ಆಶ್ಚರ್ಯ (ಆಇಕಗಚ) ೨ ಕೇಳುತ (ಧಾ)

## ೬೫. ತನ್ನ ನಾವು ಏನು ಬೇಡಿದೆವು

[೧]ಎನ್ನ ಕರದೊಳಗಿದ್ದು ಎನ್ನೊಳು ನುಡಿಯನು ಕೇಳು ಸಖಿಯೆ
ತನ್ನ ನಾವು ಏನು ಬೇಡಿದೆವವ್ವ ಕೇಳು ಸಖಿಯೆ[೧] ॥ಪ॥

ಸಾಲೋಕ್ಯ ಮೊದಲಾದ ನಾಲ್ಕು [೨]ಪದಂಗಳು[೨] ಕೇಳು ಸಖಿಯೆ
ಮೇಲೆ ನಮ್ಮವರ ಬಾಗಿಲ ಕಾಯ್ದಿರ್ಪವು ಕೇಳು ಸಖಿಯೆ
ಲೀಲೆಯಿಂದಲವನು ಬೇಡುವಳಲ್ಲ ತನ್ನನು ಕೇಳು ಸಖಿಯೆ
ಭಾಳಾಕ್ಷ [೩]ನಮ್ಮೊಳು[೩] [೪]ನುಡಿಯದನೆ ಕೇಳವ್ವ[೪] ಕೇಳು
ಸಖಿಯೆ ॥೧॥

ಅಣಿಮಾದಿ ಅಷ್ಟಸಿದ್ಧಿಗಳ ನಮ್ಮವರೆಲ್ಲ ಕೇಳು ಸಖಿಯೆ
ತೃಣ[೫]ಮಾತ್ರ[೫] ಲೆಕ್ಕಿಸಿ ಬಗೆಯರು ಮನದೊಳು ಕೇಳು ಸಖಿಯೆ
ಅಣಿಮಾದಿ ಸಿದ್ಧಿಗಳನು ಬೇಡಿದೆವೆ ತನ್ನ ಕೇಳು ಸಖಿಯೆ
ತ್ರಿಣಯ ತಾ ನಮ್ಮೊಳು ನುಡಿಯ[೬]ದೇಕವ್ವ[೬] ಕೇಳು
ಸಖಿಯೆ ॥೨॥

ಅರವತ್ತು ನಾಲ್ಕು ವಿದ್ಯೆಯು ನಮ್ಮ ಶರಣ ಕೇಳು ಸಖಿಯೆ
ಚರಣ ರಕ್ಷೆಗೆ [೭]ಸರಿಯ ಬಾರದವೆಲ್ಲವು[೭] ಕೇಳು ಸಖಿಯೆ
ಅರವತ್ತು ನಾಲ್ಕು ವಿದ್ಯೆಯ ಬೇಡಿದೆವೆ ತನ್ನ ಕೇಳು ಸಖಿಯೆ
ಹರನು ತಾ ನಮ್ಮೊಳು ನುಡಿಯ[೮]ದಿರ್ಪುದೇಕವ್ವ[೮] ಕೇಳು
ಸಖಿಯೆ ॥೩॥

೧ ಎನ್ನ ಕರದೊಳಿರ್ದು ಎನ್ನೊಳು ನುಡಿಯುತಾ ಎನ್ನನೆ ಪೂಜಿಸಿ ಎನ್ನನೆ ಬೇಡುವ ದೇವನ ಸಖಿಯನು ಕೇಳು ಸಖಿಯೇ (ಅ) ೨ ವಿಧಂಗಳು (ಅ) ೩ ತಮ್ಮೊಳು (ಅ) ೪ ನುಡಿಯೆನಗೇಕವ್ವ (ಆಇಗಚ) ೫ ವೆಂದು (ಗಚಕ) ೬ ದಿರ್ಪುದು (ಗ) ೭ ಸರಿಯಲ್ಲವೆಲ್ಲವು (ಅಗ) ೮ ನದೇಕವ್ವಾ (ಆಇಗಚ)



[೧]ಹೊಟ್ಟೆಗನ್ನವನಿಕ್ಕಿದಳು ನಮ್ಮ ಪಿಟ್ಟವ್ವೆ[೧] ಕೇಳು ಸಖಿಯೆ
ಉಟ್ಟುಕೊಂಬಡೆ ನಮ್ಮ ದಾಸಯ್ಯ ಬಟ್ಟೆ ಕೊಟ್ಟನು ಕೇಳು ಸಖಿಯೆ
ಕೊಟ್ಟರು ತನಗೆ ಬೇಡಿದುದನ್ನೆಲ್ಲ ಶರಣರು ಕೇಳು ಸಖಿಯೆ
ಕೊಟ್ಟನೋ [೨]ಹರ[೨] ನಮ್ಮವರಿಗೆ ನುಡಿಯನು ಕೇಳು
ಸಖಿಯೆ ॥೪॥

[೩]ಆದವರನು ಮರೆದನು ತನ್ನೊಳು ಕೇಳು ಸಖಿಯೆ
ಭೇದಿಸಿ ತನ್ನೊಳಗಿಲ್ಲದೆ ಕೇಳು ಸಖಿಯೆ[೩]
ನಾದಮಯನು ಶಿವಷಡಕ್ಷರಿಲಿಂಗವು ಕೇಳು ಸಖಿಯೆ
ವೇಧಿಸಿ ನಮ್ಮೊಳು ನುಡಿಯನದೇಕವ್ವ ಕೇಳು ಸಖಿಯೆ ॥೫॥

೧ ಹೊಟ್ಟೆಗೆ ತನಗೆ ಕೊಟ್ಟಳು ತಮ್ಮ ಪಿಟ್ಟವ್ವೆ (ಆಇ) ೨ ಕರ (ಆಇ)
೩ ಆದವರನು ಮರವದು ಚಾಳ ತಮ್ಮೊಳು ಕೇಳು ಸಖಿಯೆ
ಆದರಿಂದಲ್ಲದೆ ನಮ್ಮೊಳು ನಿಲ್ಲರು ಕೇಳು ಸಖಿಯೆ (ಆಇ)

## ೬೬. ಮೋಹವಿಲ್ಲದ ಪೂಜೆ

ಮೋಹವಿಲ್ಲದ ಪೂಜೆ [೧]ಎನಿಸು[೧] ಕಾಲಗಳಿಂದ ಕೇಳು ಮನವೆ
[೨]ದೇಹಿಗೆ[೨] ತಾ ಮಾಡಿ ಫಲವೇನು ಅದರಿಂದ ಕೇಳು ಮನವೆ ॥ಪ॥

ಹಸಿಯ [೩]ಗೋಡೆಗೆ[೩] ಹರಳಿಂದ[೪]ಲಿಡಲು[೪] ಕೇಳು ಮನವೆ
ಮಸೆದ [೫]ಕೂರಲಗಿಂದ[೫] ಬಾಳೆಯನು [೬]ಎಚ್ಚಂತೆ[೬] ಕೇಳು ಮನವೆ
ಒಸೆದು ಲಿಂಗವ ನೋಡಿದಾಕ್ಷಣ [೭]ಚಿತ್ತವು[೭] ಕೇಳು ಮನವೆ
ಬೆಸುಗೆಗಳಿಲ್ಲದ ಮೋಹವದೇತಕೆ ಕೇಳು ಮನವೆ ॥೧॥

ಪುರುಷ[೮]ನಂಗವ[೮]ಬಯಸುವ ಲಲನೆಯವೊಲು ಕೇಳು ಮನವೆ
ಪರಿಮಳದರಳಿಗೆ ಭ್ರಮರನೆಳಸುವಂತೆ ಕೇಳು ಮನವೆ
ಪರಮ[೯]ಚಿದ್ಘನ[೯]ಲಿಂಗ ಕರದೊಳಗಿರುತಿರೆ ಕೇಳು ಮನವೆ
[೧೦]ಉರವಣಿಸದ[೧೦] ಚಿತ್ತವೇತ್ತರ ಮೋಹವು ಕೇಳು ಮನವೆ ॥೨॥

ಬಿಸಿಯಾದ ಹಾಲೊಳು ಮುಸುಡಿಕ್ಕಿದ [೧೧]ಬೆಕ್ಕು[೧೧] ಕೇಳು ಮನವೆ
ಸಸಿನೆ ಕಾಣುತ [೧೨]ಕೊಸರೋಡುವ[೧೨] ತೆರನಂತೆ ಕೇಳು ಮನವೆ
ನುಸುಳುವ ಚಿತ್ತವ ಬಲುಹಿಂದ ಪಿಡಿತಂದು ಕೇಳು ಮನವೆ
ಶಶಿಧರನೊಳ[೧೩]ಗಿಡದೇತರ[೧೩] ಮೋಹವು ಕೇಳು ಮನವೆ ॥೩॥

೧ ಎನಿತು (ಕ) ಏಸು (ಗ) ೨ ಹೇಗೆ (ಗ) ೩ ಗಾಲಿಯ (ಕ) ೪ ಇಟ್ಟೊಲು (ಕಗಚ) ೫ ಅಲಗಿಂದಲಿ (ಕ) ೬ ಎಚ್ಚಲು (ಚ) ೭ ಬೇಗವು (ಧಾ) ೮ ನಂಗಾಂಗವ (ಧಾ) ೯ ಭೇದ (ಧಾ) ೧೦ ಪರರೆಣಿಸದು (ಧಾ) ೧೧ ಶುನಿಯೊಲು (ಕಗಚ) ೧೨ ಕೊಡರಾಡುವ (ಧಾ) ೧೩ ಗಡಗದ (ಚ)



ಸವತಿಯ ಶಿಶು ಹಸಿದಳುತಿರೆ ಸವತಿಯು ಕೇಳು ಮನವೆ
[೧]ತವೆ ಜನನುಡಿಗೆ[೧] ಮೊಲೆಯೂಡುವಂದದಿ ಕೇಳು ಮನವೆ
ಶಿವಲಿಂಗವನು ನೋಡಿ ಕರದಲ್ಲಿ [೨]ಚಿತ್ತಕ್ಕೆ[೨] ಕೇಳು ಮನವೆ
ಭವಕಂಜಿ ನೆನೆದರದೇತರ ಮೋಹವು ಕೇಳು ಮನವೆ ॥೪॥

ಬಿಡದೆ ಜಾರನು ಜಾರೆ ಕಣ್ಮರೆ[೩]ಯಾದರೆ[೩] ಕೇಳು ಮನವೆ
[೪]ತಡೆಯದೋಡುವಾನಂದದೊಳು[೪] [೫]ಚಿತ್ತವು[೫] ಕೇಳು ಮನವೆ
ಮೃಡಷಡಕ್ಷರಲಿಂಗವನು ಕಾಣುತಾಕ್ಷಣ ಕೇಳು ಮನವೆ
ಬಿಡಿಸದಂದದಿ ತೊಡರದ ಮೋಹವೇತಕ್ಕೆ ಕೇಳು ಮನವೆ ॥೫॥

೧ ತವೆ ಜನ ಸುಡಿಗೀಗೆ (ಕಗ) ಜವನೂರನಡಿಗೆಗೆ (ಧಾ) ೨ ಗುರುಚಿತ್ತ (ಕ) ೩ ಯಾಗಲು (ಚ) ೪ ತಡಮಾಡದೋಡುವಂದದಿ (ಕ) ತಡಮಾಡದೋಡುವ ನಂದದಿ (ಗಚ) ೫ ಚಿತ್ತವೇತಕೆ (ಕ)

## ೬೭. ಬಂದನು ಮರ್ತ್ಯಕೆ*

ಬಂದನು ಮರ್ತ್ಯಕಿನ್ನುದ್ಧಾರವನು ಮಾಳ್ಪ
ಇಂದುಧರ ಓಂ ನಮಃ ಶಿವಾಯನೆಂಬ ನಾಮದಲಿ ॥ಪ॥

ಮುಖವೈದನೆ ಏಕಮುಖವನೆ ಮಾಡುತಲಿ
ಶಿಖಿನೇತ್ರ ಗುಪ್ತತರವಾಗಿ ರಂಜಿಸಲು
ಅಕಳಂಕ ದಶಭುಜ ದ್ವಯಭುಜದೊಳುಂ ಮರೆಸಿ
ಮಕರಧ್ವಜನ ಸುಟ್ಟು ಭಸಿತವನೆ ಧರಿಸಿ ॥೧॥

ರುಂಡಮಾಲೆಯ ಬಿಟ್ಟು ರುದ್ರಾಕ್ಷಿಗಳ ಧರಿಸಿ
ಚಂಡಶೂಲವ[೧]ನು[೧]ಳಿದು [೨]ಸುಜ್ಞಾನ[೨]ವಿಡಿದು
ಮಂಡೆಯೊಳು ಪೊತ್ತ ಚಂದ್ರಮನ ಶಾಂತಿಯೊಳಿಟ್ಟು
ಕುಂಡಲದ ಫಣಿಯ ಧರೆಗಿಳುಹಿಯಳವಟ್ಟು ॥೨॥

ಹರಿಗೆ ಹೇಳದೆ ಸರಸಿಜೋದ್ಭವಗೆ ಸೂಚಿಸದೆ
ವರವೀರಪ್ರಮಥರಿಗೆ [೩]ಸನ್ನೆ[೩] ಮಾಡಿ
ನರಲೋಕನಾಟಕವ ನೋಡಬೇಕೆಂದೆನುತ
ಸರಸದಿಂ ಬಂದಂ ಷಡಕ್ಷರಿಯ ದೇವ ॥೩॥

---

* ಅ – ಪ್ರತಿಯಲ್ಲಿ ಈ ಪದ ಇಲ್ಲ
೧ ಉ (ಆಇ) ೨ ಪೌರಾಣ (ಆಇ) ೩ ಸೊನ್ನೆ (ಆಇ)



## ೬೮. ಆರು ಕಾಣರು ಪುಣ್ಯಕ್ಷೇತ್ರವನು

ಧಾರುಣಿ[೧]ಯನು[೧] ತಿರುಗುವರೈಸೆ –ಅಲ್ಲಿ
ಆರು ಕಾಣರು ಪುಣ್ಯಕ್ಷೇತ್ರವನು ॥ಪ॥

ಗಗನಗಿರಿಯ ಶಿಖರದ ಮೇಲೆ – ಅಲ್ಲಿ
[೨]ಸೊಗಸುವ[೨] ರತ್ನಮಂಟಪದೊಳು
ಝುಗಝುಗಿಸುವ ಶಶಿಸೂರ್ಯಪ್ರಭೆ – ಅಲ್ಲಿ
ಅಗಲದೆ ಬೆಳಗುವ ತೇ[೩]ಜ[೩] ॥೧॥

ಶಂಖ ಕಿನ್ನರಿ ನಾಗಸರ ವೀಣೆ – ಅಲ್ಲಿ
ಝೇಂಕರಿಸುವ ಘಂಟೆಜಾಗಟೆ
ಕಿಂಕಿಣಿಭೇರಿದುಂದುಭಿ[೪]ಯೊಲು – ಅಲ್ಲಿ
ಓಂಕಾರನಾದವಾಗುತಲಿದೆ[೪] ॥೨॥

ತೊಳಗುವ ಚಂದ್ರಾರ್ಕ ಮಿಂಚಿನ – [೫]ಅಲ್ಲಿ
ಬೆಳಗ ಕೀಳ್ಪಡಿಸುತ ಬೆಳಗುತ[೫]
ಒಲಿದ ಷಡಕ್ಷರಲಿಂಗವು – ಅಲ್ಲಿ
ನೆಲಸಿರ್ಪ ಭೇದವನರಿಯದೆ ॥೩॥

---

೧ ಯಲ್ಲಿ (ಆಇ) ೨ ಸೊಗಸಾಗಿ (ಆಇಕ) ೩ ಜದಿ (ಕಗಚ) ೪ ಅಲ್ಲಿ ಓಂಕಾರನಾದವಾಗುತ್ತಿದೆ (ಧಾ) ಡೊಳ್ಳ – ಅಲ್ಲಿ ಝೇಂಕಾರ ಶಬ್ದ ಕೇಳುತಲದೆ (ಕ) ೫ ಕೋಟಿ ಬೆಳಕಿಂದ ಸಕಲವು ಬೆಳಗುತ್ತ (ಧಾ) ಕೋಟಿ ಬೆಳಗಕೊಳ್ಪಎಡಿಸುತ ಬೆಳಗುತ (ಆಇ) ಕೋಟಿ ಬೆಳಗ ಕೀಳ್ಪಡಿಸಿ ತಾ ಬೆಳಗುತ (ಗ)

## ೬೯. ಕಾಯ್ಯೆ ಕಾಯ್ಯೆ*

[೧]ಕಾಯ್ಯೆ ಕಾಯ್ಯೆ[೧] [೨]ಕರುಣದಿ[೨] ನಾನು
ಸಾಯಲಾರೆನು ಮಾಯೆ ಕೈಯಲ್ಲಿ
॥ಪ॥

ಹರಿಯಜ ಸುರ ಮನು ಮುನಿಗಳ –[೩]ಮಾಯೆ[೩]
ಗಿರಿಯ ಮರೆಯೊ[೪]ಳಿಕ್ಕಿ ಕೊಲ್ಲುತಿದೆ[೪]
ಗಿರಿಯ ಮರೆಯೊಳಿ[೫]ರಲಾರದೆ[೫] ನಿಮ್ಮ
ಚರಣರಕ್ಷೆಯ ಮರೆಯನು ಹೊಕ್ಕೆ ॥೧॥

ಆಶೆಯ ಪಾಶದಿಂದಲಿ ಕಟ್ಟಿ–ಮಾಯೆ
ವಾಸವಾದಿಗಳನು ಕೊಲುತಲಿದೆ
ಆಶಾಪಾಶದೊಳಿರ[೬]ಲಂಜಿ[೬] ಜಗ
ದೀಶ [೭]ನಿಮ್ಮಯ ಮರೆಯ[೭]ನು ಹೊಕ್ಕೆ ॥೨॥

ಬಲು ಹಿರಿಯರನ್ನು ಕೊಲುತಿದೆ – ಮಾಯೆ
ಗೆಲುವವರಿಲ್ಲ ತ್ರಿಜಗದೊಳು
ಅಲಸಿ ನಿಮ್ಮನು ಮರೆಯ ಹೊಕ್ಕೆ
ಎನ್ನ ಸಲಹು ಷಡಕ್ಷರಿಯ ಲಿಂಗವೆ ॥೩॥

* ಆಇ ಮತ್ತು ಚ – ಪ್ರತಿಗಳಲ್ಲಿ ಈ ಪದ ಇಲ್ಲ
೧ ಕಾಯಯ್ಯ ಕಾಯಯ್ಯ (ಅಕಗ) ೨ ಕರುಣ ಗುರುವೆ (ಕ) ೩ ಹಿಮ (ಧಾ) ೪ ಳಡಗಿಕೊಂಡಿರೆ (ಧಾ) ೫ ರಲೊಲ್ಲದೆ (ಕ) ೬ ಲೊಲ್ಲದೆ (ಗ) ೭ ನಿಮ್ಮನು ಮರೆಯ (ಧಾ) ನಿಮ್ಮ ಮರೆಯನು (ಗ)



## ೭೦. ನಮ್ಮ ದೇಶಕೆ ಹೋಹ ದಿನ ಬಂತು

[೧]ನಮ್ಮ[೧] ದೇಶಕೆ ಹೋಹ ದಿನ ಬಂದು [೨]ಮುಂದೆ[೨]
ಗಮ್ಮನೆಲ್ಲರನೊಬ್ಬುಳಿ ಮಾಡು ॥ಪ॥

ಅಂಗಭೋಗಂಗಳ ಮರೆ ನೀನು – ಮುಂದೆ
ಹೆಂಗಳ ಸುಖವನು ತೊರೆ ನೀನು
ಅಂಗಜಗುಣಗಳ ಹರಿ ನೀನು – ಮುಂದೆ
ಲಿಂಗವ ಮನದೊಳಗರಿ ನೀನು ॥೧॥

ಮಲತ್ರಯದಾಸೆಯ ಬಿಡು ನೀನು – ಮುಂದೆ
ಹಲವು ಬುದ್ಧಿಗಳನು [೩]ತೊಡೆ[೩] ನೀನು
[೪]ಫಲಿಸದ[೪] ವೃಕ್ಷವನು ಕಡಿ ನೀನು – ಮುಂದೆ
ಸಲೆ ಲಿಂಗದೊಳು ಮನವಿಡು ನೀನು ॥೨॥

ಬಿಡು ತನುವಿನ ಮೇಲಣಾಸೆಯನು – ಮುಂದೆ
ಹಿಡಿ ಶಿವಶರಣರ ಭಾಷೆಯನು
[೫]ಮೃಡ[೫]ಷಡಕ್ಷರಾಧೀಶರನು – ಮುಂದೆ
ಯೊಡಗೂಡು ಭವಪಾಶನಾಶನನು ॥೩॥

೧ ನಿಮ್ಮ (ಅ) ೨ ಮುನ್ನ (ಆಇ) ೩ ತೊರೆ (ಅಆಇ) ೪ ಫಲಪದ (ಗಚ) ೫ ಬಿಡದೆ (ಆಇ)

## ೭೧ ಸೆರಗನೊಡ್ಡಿ ಬೇಡಿಕೊಂಬೆನು

ಸೆರಗನೊಡ್ಡಿ ಬೇಡಿಕೊಂಬೆನು – ಶಿವ ಶಿವಾ
[೧]ಮರೆದು[೧] ಹೋಗಬೇಡವೆನ್ನನು – ಶಿವ ಶಿವಾ ॥ಪ॥

[೨]ಎನ್ನನೊಲಿದು ನಿನಗೆ ಕೊಟ್ಟರು – ಶಿವ ಶಿವಾ
ನಿನ್ನನೊಲಿದು ಎನಗೆ ಕೊಟ್ಟರೊ[೨] – ಶಿವ ಶಿವಾ
[೩]ಎನ್ನ[೩] ಮಾತ ಮೀರ[೪]ಬೇಡವೆಂದು[೪] – [೫]ಶಿವ ಶಿವಾ[೫]
ಎನ್ನ ನಿನ್ನನೊಂದುಗೂಡಿದ – ಶಿವ ಶಿವಾ ॥೧॥

ತಪ್ಪನೆನ್ನ ಮೇಲೆ ಹೊಂದಿಸಿ – ಶಿವ ಶಿವಾ
ತಪ್ಪಿಸೆನ್ನ ಬಿಟ್ಟು ಹೋದರೆ – ಶಿವ ಶಿವಾ
ಒಪ್ಪರಯ್ಯಾ ಗುರುವಿನಾಜ್ಞೆಗೆ – ಶಿವ ಶಿವಾ
ತಪ್ಪಿ ನಡೆ[೬]ದ[೬]ರೆಂದು ನಮ್ಮನು – ಶಿವ ಶಿವಾ ॥೨॥

ಎನ್ನನೊಲ್ಲದಿರ್ದೊಡೆ ನೀನು – ಶಿವ ಶಿವಾ
[೭]ಮುನ್ನದೇಕೆ ಎನ್ನ ಕೂಡಿದೆ[೭] – ಶಿವ ಶಿವಾ
[೮]ಎನ್ನ ಕೈಯ ಬಿಡುವೆನೆಂದರೆ[೮] ನೀನು – ಶಿವ ಶಿವಾ
ನಿನ್ನ ಬಿಡೆನು ಗುರುವಿನಾಜ್ಞೆಗೆ – ಶಿವಾ ಶಿವಾ ॥೩॥

೧ ಮರಸಿ (ಕಗಚ) ೨ ನಿನ್ನ ಕರೆದು ಎನಗೆ ಕೊಟ್ಟರು ಗುರುಸ್ವಾಮಿ ಎನ್ನ ಕರೆದು ನಿಮಗೆ ಕೊಟ್ಟರು (ಧಾ) ೩ ತನ್ನ (ಧಾ) ೪ ಬೇಡೆಂದು (ಕಗಚ) ೫ ಗುರುಸ್ವಾಮಿ (ಧಾ) ೬ ವ (ಧಾ) ೭ ಎನ್ನ ಮುನ್ನದೇಕೆ ಕೂಡಿದೆ (ಧಾ) ೮ ಎನ್ನ ಬಿಡುವೆನೆಂದೊಡೆ (ಧಾ)



ನೋಡಬೇಡ ಎನ್ನ ಗುಣವನು – ಶಿವ ಶಿವಾ
ಕೂಡಿ ಅಗಲಬೇಡವೆನ್ನನು – ಶಿವ ಶಿವಾ
ಬೇಡಿಕೊಂಬೆ ನಾನು ನಿಮ್ಮನು – ಶಿವ ಶಿವಾ
ನೋಡು ನಿಮ್ಮ ಕರುಣದೃಷ್ಟಿಯಲ್ಲಿ – ಶಿವ ಶಿವಾ ॥೪॥

[೧]ಕಂಗಳರತ[೧] ಕುರುಡನಂದದಿ – ಶಿವ ಶಿವಾ
ಭಂಗ ಬಡುತೆ [೨]ತಿರುಗುತ್ತೈದೆನೆ[೨] – ಶಿವ ಶಿವಾ
ಹಿಂಗದೆ ಷಡಕ್ಷ[೩]ರಾಂಕ[೩]ನೆ – ಶಿವ ಶಿವಾ
ಲಿಂಗ ನಿಮಗೆ ಕೊರತೆಯಿಲ್ಲ[೪]ವು[೪] – ಶಿವ ಶಿವಾ ॥೫॥

೧ ಕಂಗಳಿರದ (ಧಾ) ೨ ತಿರುಗುತಿರುವೆ (ಧಾ) ೩ ರಿಯ (ಗಚ) ೪ ವೆ (ಕಗಚ)

## ೭೨. ತಂದು ತೋರೆ

ತಂದು ತೋರೆ ಎನ್ನ ಮನ ಘನ ಪ್ರಿಯನ
ಇಂದುಧರ ಕಡು ಚಲ್ವ ಮನದತ್ತ ಸುಳಿ[೧]ಯನು[೧] ॥ಪ॥

ಪುಲಿಯ ಚರ್ಮ[೨]ದುಡಿಗೆ[೨]ಯವನ ಸುಲಿಪಲ್ಲ ಚಲುವನ
ಪೊಳೆವ ಫಣಿಕುಂಡಲದ [೩]ನೀರನ[೩]
ಒಲಿಸುವರಿಗೆ ಮುನ್ನ [೪]ಒಲಿವಂತ[೪] [೫]ತವಕಿಯು[೫]
[೬]ಒಲಿದೆನ್ನ ಮನದತ್ತ[೬] ಸುಳಿಯನು ಕೆಳದಿ ॥೧॥

ಹೃದಯಕೋಣೆಗಳಲ್ಲಿ ಮನದ ಮಂಚವ ಹಾಸಿ
ಪದುಳದಿ ಭಾವದ ಗುಡಿಯ ಗಟ್ಟಿದೆ
ಸದಮಲಜ್ಞಾನ ಜ್ಯೋತಿಯ [೭]ಬೆಳಗಿನೊಳ್
ಉದಮಯ ಭಕ್ತಿಯೌವನವಾದೆ[೭] ಕೆಳದಿ ॥೨॥

ಎನ್ನಾತ್ಮ ಜ್ಯೋತಿ ತಾನೆನ್ನ ಹೃದಯದಲಿ
ಹೊನ್ನ ಹಾವುಗೆ ಮೆಟ್ಟಿ ಸುಳಿಯೆ ನಾನು
ಉನ್ನತದಿ ಹೆಚ್ಚಿ ಹಿಗ್ಗುವೆನು ಷಡಕ್ಷರ
ಚನ್ನಲಿಂಗದ ಸುಳುವಡಗಿದೆ ಕೆಳದಿ ॥೩॥

೧ ಯಾ (ಅಆಇ) ೨ ಉಡುಗೆ (ಕಗಚ) ೩ ಕರ್ನನ (ಕ) ೪ ಒಲಿಸುವ (ಧಾ) ೫ ತಾವಕಿಯ (ಕ) ೬ ಚೆಲುವ ಪಾದನು ಯಿತ್ತ (ಕ) ೭ ಬೆಳಗಿದನಲ್ಲದೆಮ್ಮದು ಭಕ್ತಿಯೌವನದಾಸೆ (ಧಾ) ಬೆಳಗಿದೆ (ಕಗ) ಉದಯ ಭಕ್ತಿಯ ಮನವಾಯಿತು (ಕ)



## ೭೩. ಹೇವವನಿಕ್ಕಲಾರೆ

[೧]ಹೇವವ[೧] ನಿಕ್ಕಲಾರೆ ಲಿಂಗವೆ ನಾನು ಹೇವವನಿಕ್ಕಲಾರೆ
ಭಾವಿಸಿ ಎ[೨]ನ್ನ[೨] ಮನವೆಂಬ ವಧುವನು
ಜಾವ ನೀನಾಳಲಾರೆ ॥ಪ॥

[೩]ಶಿಖಂಡಿಗಳ[೩] ಕೈಯಲ್ಲಿ ಕೊಲ್ಲಿಸಿಗೊಂಡು
ಮುಖಭಂಗಿತ ನೀನಾದೆ
ಸಖಿಯ[೪]ಳಂ[೪]ಜದೆ ನಿನ್ನ ಶಿರವನೇರಿದ ಮೇಲೆ
ಸುಖ ನಿನಗೆಲ್ಲಿಯ[೫]ದೊ[೫] ॥೧॥

ಹಿರಿಯತನಗಳೆಂಬವು ನಿಮ್ಮೊಳು
[೬]ಕಿರಿದಾಗಿ ಹೋಯಿತಲ್ಲ[೬]
ಕೆರವುಗಾಲಲಿ ತಲೆಯನು ಬೇಡನೊರಸಲು
ಪರಿಹಾಸ್ಯವಾಯಿತಲ್ಲ ॥೨॥

ಏಣಾಂಕಧರ ಲಿಂಗವೆ ನೀ ಹೋಗಿಯಾ
ಬಾಣಾಸುರನ ಬಾಗಿಲ
ಕೇಣ್ಮಸರವ[೭]ನರಿಯದೆ ಕಾಯ್ದೆ [೮]ಧರೆಯೊಳು[೮]
ಊಣೆಯವು ಬಂದಿತಲ್ಲ ॥೩॥

೧ ಹೇಹವ (ಆಇ) ೨ ನ್ನಯ (ಕಗಚ) ೩ ಷಂಡರ (ಚ) ೪ ರಂ (ಕಗಚ) ೫ ದು (ಧಾ) ೬ ಬರನಾಗಿ ಹೋಯ್ತುಲ್ಲಾ (ಧಾ) ೭ ಪರವ (ಆಇ) ೮ ಜಗದೊಳು (ಆಇ)

ಹೆಗಲ ಸಂಚಿಯನೆ ಹೊತ್ತು ಕುಂಟಣಿಯಾಗಿ
ಹಗಲಿರುಳೆಡತಾಕಿದೆ
ಜಗದೊಳು ಹಿರಿಯ[೧]ತನವು[೧] ನಿಮಗುಚಿತವೆ
ನಗೆ[೨]ಗೆಡೆ[೨]ಯಾಯಿತಲ್ಲಾ ॥೪॥

ಜಿನುಗುವ ಮನಕಾರದೆ ನಿಮಗೆ ನಾನು
ಕನಲಿ ಹೇವವನಿಕ್ಕಿದೆ
ಮುನಿಸು ಬೇಡಯ್ಯ ಷಡಕ್ಷರಿಲಿಂಗವೆ
ಮನವ ನಿಮ್ಮೊಳಗಿರಿಸು ॥೫॥

೧ ತಾನಾಗಿ (ಧಾ) ತನಕೆ (ಆಇ) ೨ ಗೇಡು (ಆಇಕಚ)



## ೭೪. ಹಾರು ಕಂಡ್ಯಾ ಹಂಸ

ಹಾರು ಕಂಡ್ಯಾ ಹಂಸ ಹಾರು ಕಂಡ್ಯಾ – ನೀನು
ಮೂರು ಬಲೆಗಳೊಳಗೆ ನಿಲುಕದೆ ॥ಪ॥

ಆಶಾಪಾಶ[೧]ದೊಳಗೆ ಸಿಲ್ಕಿ – ಮಾಯಾ[೧]
ರೋಷ ಕಿಚ್ಚಿನಲಿ [೨]ಬೇಯದೆ[೨]
ವಾಸವ ಹರಿಯಜರುಗಳು ಸಿಕ್ಕಿ [೩]ಕೆಟ್ಟ[೩]
ಹೇಸಿ ಪಥವ ನೀನು [೪]ಮೆಟ್ಟಿದೆ[೪] ॥೧॥

ನಿರಯದ ಸರಸಿಯೊಳಾಡದೆ – ನೀನು
ಇರದೆ [೫]ಘನದತ್ತ[೫] ಹಾರು ಕಂಡ್ಯಾ
[೬]ಗಿರಿಯ ಸರಸಿಯೊಳಗೊಪ್ಪುವ[೬] ನೀನು
ಉರುತರ ಕ್ಷೀರವ ಸವಿ ಕಂಡ್ಯಾ ॥೨॥

ಸಾಸಿರದಳ ಕಮಲದ ಕರ್ಣಿಕೆಯೊಳು – ಅಲ್ಲಿ
ಭಾಸುರ [೭]ಪ್ರಣಮದ[೭] ಪ್ರಭೆಯೊಳು
ವಾಸವಾಗಿರ್ಪ ಷಡಕ್ಷರವರ ಮಹಾ
ಧೀಶನ ನೀ ಹೋಗಿ ನೆರೆ ಕಂಡ್ಯಾ ॥೩॥

೧ ಸಿಲುಕದೆ ನೀನು (ಆಗ) ೨ ಬೀಳದೆ (ಅಗ) ೩ ಸತ್ತ (ಧಾ) ೪ ಮುಟ್ಟದೆ (ಧಾ) ೫ ಗಗನದತ್ತ (ಆಇಗ) ೬ ನಿರಯದ ಸರಸಿಯೊಳೊಪ್ಪುವ (ಆಇ) ೭ ಬೆಳಗಿನ (ಆಗಚ)

## ೭೫. ಶಿವಯೋಗಾಷ್ಟಕ

ಸಂಪಿಗೆ ಹೂವಿನ ಕಂಬವು
[೧]ಸೊಂಪಿನ[೧] [೨]ಪಂಕಜದಿಮೆಸೆವ ತೊಲೆಗಳು ಮೆರೆವಾ[೨]
ಸೊಂಪಿನ ಮನೆಯೊಳು ಫಣಿಪತಿ
ಜೊಂಪಿನ ಕುಂಡಲನ ನೆನೆವುತಾನೆಂದಿಹೆನೋ ॥೧॥

ಜಾತಿ ಸುಪಾಟಲ [೩]ಕದಂಬ[೩]
ಕೇತಕಿ [೪]ಸೆಳೆ[೪]ದೊಲೆಯು ಜಂತೆ ಚೂತದ ತಳಿರಂ
ನೂತನ ಕಂಪಿನ ಮನೆಯೊಳ್
ಭೂತೇಶನ [೫]ನೆನೆದು[೫] ಸುಖಿಸುತಾನೆಂದಿಹೆನೋ ॥೨॥

ವರ ಕಸ್ತೂರಿ ನೆಲಗಟ್ಟಂ
[೬]ನರುಗಂಪಿನ[೬] [೭]ಪುನುಗು ಭಿತ್ತಿ ಕರ್ಪುರದೊಲೆಯಂ[೭]
ಕರ ರಚಿಸಿದ ಕರುಮಾಡದಿ
[೮]ಗಿರಿಜಾತೆಯ ಪತಿ[೮] ನೆನೆವುತಾನೆಂದಿಹೆನೋ ॥೩॥

ಬೆಳ್ದಿಂಗಳ ಭಿತ್ತಿಗಳಿಂ
ಖದ್ಯೋತನ ಕಂಭವರ್ಧಚಂದ್ರನ ತೊಲೆಯಿಂ
[೯]ಬಳ್ದೈಸಿದ[೯] ಮಂಟಪದೊ
[೧೦]ಳದ್ರಿಜೆಯ ಕಾಂತನ[೧೦]ನೆನೆವುತಾನೆಂದಿಹೆನೋ ॥೪॥

೧ ನುಂಪಿನ (ಆಇಕ) ೨ ಪಂಕದ ಎಸಳಾ ತೊಲೆಗಳ ಮೆರೆವ (ಕ) ಪಂಕಜದ ಎಸಳಂ ತೊಲೆಗಳ ಮೇರುವ (ಆಇ) ೩ ಕಂಬಂ (ಆಇಕ) ೪ ಸಲ (ಕ) ೫ ನೆರದು (ಗಚ) ೬ ನರಗುಂಪಿನ (ಧಾ) ೭ ಪುನುಗು ಜಂತೆ ಕರ್ಪುರದೊಲೆಯಂ (ಅಕಗಚ) ೮ ಗಿರಿಜೆಯ ಪತಿಯಂ (ಕ) ೯ ಬದ್ಯೆಸಿದ (ಕಗಚ) ೧೦ ಳದ್ವಿಜಾಂಕನ (ಆಇ)



ಬಳಸಿದ ರತ್ನದ [೧]ಗಿರಿಯೊಳ್[೧]
ಥಳಥಳಿಸುವ ವಜ್ರ ಶೃಂಗ ಶೈಲದ ತುದಿಯೊಳ್
ಎಲೆ ಮುತ್ತಿನ ಮಂಟಪದೊ
ಳಳಿವಿಲ್ಲದೆ ಶಿವನ ನೆನೆವುತಾನೆಂದಿಹೆನೋ ॥೫॥

ಬೆಳ್ದಿಂಗಳ ಭಿತ್ತಿಗಳಿಂ
ಖದ್ಯೋತನ ಕಂಭವರ್ಧಚಂದ್ರನ ತೊಲೆಯಿಂ
ತಪ್ಪದೆ ಬೆಳಗಿನ ಮಂಚದಿ
ದರ್ಪಕ ಮರ್ದನನ ನೆನೆವುತಾನೆಂದಿಹೆನೊ ॥೬॥

ಶಶಿಕಾಂತದ ನೆಲೆಗಟ್ಟಂ
ಪೊಸ ಪವಳದ ಕಂಬ ಪೊಳೆವ ನೀಲದ ತೊಲೆಯಿಂ
ಹಸನಾದ ಹರ್ಮ್ಯದೊಳಗಾ
ಶಶಿಧರನಂ ನೆನೆದು ಸುಖಿಸುತಾನೆಂದಿಹೆನೋ ॥೭॥

ತಿಂಗಳು ಗಂಗೆಯ ಸೂಡಿದ
ಮಂಗಳಮಯ ಭಸಿತಲಸಿತ ಒಪ್ಪುತ ಮೆರೆವಾ
ಅಂಗದ ಚಲುವ ಷಡಕ್ಷರ
[೨]ಲಿಂಗವ ನೆರೆದಪ್ಪಿ ಅಗಲದಾನೆಂದಿಹೆನೋ[೨] ॥೮॥

ಈ ಶಿವಯೋಗಾಷ್ಟಕಮಂ
[೩]ಬೇಸರಿಸದೆ[೩] ಬರೆದು ಓದಿ [೪]ಪೇಳಿದವರ್ಗಂ[೪]
[೫]ಈಶನು ತನ್ನಯ ಪುರದೊ
ಳ್ಭಾಸುರ ಗಣಪದವನಿತ್ತು[೫] ರಕ್ಷಿಪನೊಲವಿಂ ॥೯॥

೧ ಸಿರಿಯೊಳ್ (ಧಾ) ೨ ಲಿಂಗವ ನೆರೆ ನೆರವಿಯಗಲದಾನೆಂದಿಹೆನೊ (ಧಾ) ೩ ಸಂತಸದಿಂದ (ಕ) ೪ ಪಠಿಸಿದವರ್ಗಂ ೫ ಕಂತುಹರ ತನ್ನಯ ಪುರದೊಳ್ ಮೂಂತೆ ಗಣಪದವನಿತ್ತು (ಕ)

## ೭೬. ಶಿವಪೂಜಾಷ್ಟಕ

ಎಳೆ ಮುತ್ತಿನ ನವರತ್ನದ
ಥಳಥಳಿಸುವ ನೀಲ ಪವಳ ಪಚ್ಚೆಯ [೧]ಮಳಲಿಂ[೧]
ಧಳಧಳ ಘುಳುಘುಳು ನಾದದ
ಹೊಳೆಯೊಳ[೨]ಗನವರತ[೨] ಲಿಂಗ ಮಜ್ಜನಗೈಯ್ವೆಂ ॥೧॥

ಶಶಿಕಾಂತದ [೩]ಪಾಸರಿಯೊಳ್[೩]
ಹೊಸ ವಜ್ರದ ಗುಂಡು ಬಂಡೆ [೪]ತುರುಗಿದ[೪] ಗಿರಿಯಿಂ
ದೊಸರುವ ನಿರ್ಝರ ಜಲದಿಂ
ಶಶಿಕಳೆಯಂ [೫]ಧರಿಸಿದಭವಗೆ[೫] ಮಜ್ಜನಗೈಯ್ವೆಂ ॥೨॥

ಗಗನವ[೬]ನಡರುವ[೬] ಗಿರಿಯೋ
ಳ್ಮಿಗೆ ಬೆಳೆದಿಹ ಗುಲ್ಮಲತೆಯ ವೃಕ್ಷದ ನೆಳಲೊಳ್
ಸೊಗಸುವ ಮಡು ಡೊಣೆ ಜಲದಿಂ
ಮಿಗೆ ಮನದಣಿವಂತೆ ಲಿಂಗ ಮಜ್ಜನಗೈಯ್ವೆಂ ॥೩॥

ಕೆರೆ ತೊರೆ [೭]ಸರಬೆಂಚೆಗಳಾ[೭]
ವರತೆಗಳಿಂ ಕೂಪ ಕೊಳನ ನಿರ್ಮಲ ಜಲದಿಂ
ಸರಸಿಜದೆಸಳರ್ಘ್ಯಗಳಿಂ
ಹರನಿಗೆ ಪುರಹರನಿಗೊಲಿದು ಮಜ್ಜನಗೈಯ್ವೆಂ ॥೪॥

೧ ಬೆಳಗಿಂ (ಧಾ) ೨ ಗಣರಸದಿ (ಧಾ) ೩ ಪಾಸಗೆಯಿಂ (ಧಾ) ವಾರಿಯೊಳಂ (ಗ) ಪಾಸರೆಯಂ (ಚ) ೪ ತುಂಬಿದ (ಧಾ) ೫ ಧರಿಸಿದಂತೆ (ಧಾ) ಧರಿಸಿದವಗೆ (ಕಗ) ೬ ತುಳುಕುವ (ಕ) ೭ ಸರುಯಂಚೆಗಳಂ (ಚ)



[೧]ಸುತ್ತೊತ್ತಿ[೧] ಬೆಳೆದ ಬಿಲ್ವ
ಕತ್ತರಿಸಿಯೆ ಕಾತು ತಳಿತು [೨]ತಂಪಿನ ವನದೊಳ್[೨]
ಚಿತ್ತಜವೈರಿಯ ಚರಣವ
ನರ್ತಿಯೊಳಾ ಪತ್ರಿಯಿಂದ ಪೂಜಿಪೆನೊಲವಿಂ ॥೫॥

ಸೊಂಪಿನ ನುಂಪಿನ ಝುಂಪಿನ
ಗಂಪಿನ ಸಂಪಿಗೆಯ ವನದ ತಂಪಿನ [೩]ನೆಳಲೊಳ್[೩]
ಕಂಪಿನ ಸಂಪಿಗೆಯರಳಿಂ
ಬಿಣ್ಪಿನ ಚಲುವಂಗದವನ ಪೂಜಿಪೆನೊಲವಿಂ ॥೬॥

ಜಾತಿ ಸುಪಾಟಲಿ ವೃಕ್ಷ
ವ್ರಾತಂ ಜೋ[೪]ತೊರಗಿ[೪]ಕಾತು [೫]ಪೂತಿಹ[೫] ವನದೊಳ್
[೬]ಮಾತುಳ[೬] ಕುಸುಮದಿಂ ಬಿಡದೆ
ಭೂತೇಶನ ಚರಣಯುಗವ ಪೂಜಿಪೆನೊಲವಿಂ ॥೭॥

ಭೃಂಗಂ ಬಳಸದ [೭]ಪೂವಿನ[೭]
ಶೃಂಗಾರದ ವನಗಳಲ್ಲಿ ವರಕುಸುಮಗಳಿಂ
ಸಾಂಗಮುಮಾಗಿ ಷಡಕ್ಷರ
ಲಿಂಗವನನವರತ ಬಿಡದೆ ಪೂಜಿಪೆನೊಲವಿಂ ॥೮॥

ಈ ಶಿವಪೂಜಾಷ್ಟಕಮಂ
ಓಸರಿಸದೆ ಬರೆದು ಓದಿ ಪಠಿಸಿದವರ್ಗಂ
ಈಶನು ತನ್ನಯ ಪುರದೊಳ್
ಭಾಸುರಗಣಪದವನಿತ್ತು ರಕ್ಷಿಪನೊಲವಿಂ ॥೯॥

೧ ಹೊತ್ತೊತ್ತಿ (ಕಗಚ) ೨ ತಣ್ಣನದಳದೊಳ್ (ಧಾ) ೩ ನೆಲದೊಳ್ (ಧಾ) ವನದೊಳ್ (ಕ) ೪ ತೊಡನೆ (ಧಾ) ೫ ಕೊನರಿಹ (ಧಾ) ಕೂಡಿಹ (ಕ) ೬ ಮತ್ತಾ (ಗಚ) ೭ ತಣ್ಪಿನ (ಕಗಚ)

## ಮುಪ್ಪಿನ ಷಡಕ್ಷರಿಗಳ ಹೆಚ್ಚಿನ ಪದಗಳು

# ೭೭. ಎನ್ನ ಆಳ್ದ ಇಷ್ಟಲಿಂಗ

**ಭೋಗಷಟ್ಪದಿ**

ಎನ್ನ ಆಳ್ದ ಇಷ್ಟಲಿಂಗ
ನಿನ್ನ ಪಾದಪದ್ಮವನ್ನು
ಎನ್ನ ಮನವು ಮಚ್ಚುವಂತೆ ಎಂದಿಗಪ್ಪದೊ ॥ಪಲ್ಲವಿ॥

ಬಡವಗೆ ಭಾಗ್ಯದ ಪ್ರೀತಿ
ಒಡಲ ಅಸುವಿಗನ್ನ ಪ್ರೀತಿ
ಕಡುಚಲುವ ಪುರುಷನ ಪ್ರೀತಿ ಮಡದಿಗಿರ್ಪಂತೆ
ಮೃಡನೆ ನಿಮ್ಮ ಪಾದಪ್ರೀತಿ
ಬಿಡದೆ ಚಿತ್ತಶುದ್ಧದಿಂದ
ಒಡನೆ ನಂಬುವಂತೆ ಮನವು ಎಂದಿಗಪ್ಪದೊ ॥೧॥

ನಲ್ಲನ ಮತ್ತೊಬ್ಬ ಸತಿಯು
ನಿಲ್ಲದೆ ಕಂದರ್ಪನ ಬಾಣ
ದಲ್ಲಿ ಭ್ರಮಿಸಿದಶದವಸ್ಥೆ ನೋಡುತಿರುವೊಲು
ಎಲ್ಲ ದೇವದೇವಗೆಲ್ಲ
ನಲ್ಲ ನಿಮ್ಮ ಪಾದಪದ್ಮ
ದಲ್ಲಿ ಮನವು ಮೆಚ್ಚುವಂತೆ ಎಂದಿಗಪ್ಪುದೊ ॥೨॥

ದೂರದಲ್ಲಿ ಪತಿಯು ಇರಲು
ನಾರಿ ಪುರುಷ ಸಂಗ ನೆನೆದು
ಮಾರಬಯಕೆಯಲ್ಲಿ ಮನವನೊಪ್ಪಿಸುವೊಲು



ಮಾರಹರನೆ ನಿಮ್ಮ ಪಾದ
ವಾರಿಜಕ್ಕೆ ಎನ್ನ ಮನವು
ಸೂರೆಗೊಂಬುವಂತೆ ಬುದ್ಧಿ ಎಂದಿಗಪ್ಪುದು ॥೩॥

ತಾಯ ತಪ್ಪಿ ಕರುಳ ಶಿಶುವು
ಸಾಯುತಿರಲು ದರ್ಪಗುಂದಿ
ಮಾಯೆ ಹುಟ್ಟಿ ಮಾತೆ ಬಂದು ಮೊಲೆಯ ಕೊಡುವೊಲು
ಕಾಯಜಾರಿ ದೇವ ನಿಮ್ಮ
ಪ್ರೀಯ ಕರುಣದಿಂದಲೆನ್ನ
ಕಾಯ್ದು ರಕ್ಷಿಪಂತ ಮನವು ಎಂದಿಗಪ್ಪುದೊ ॥೪॥

ಹರನೆ ಎನ್ನ ಕರಕಮಲಕೆ
ಸ್ಥಿರವಾಗಿ ಬಂದು ನಿಂದು
ದುರಿತ ಭವದ ಬಾಧೆಗಳನು ಬಿಡಿಸಿದೊಂದನು
ಹರನೆ ನೀನು ಪಾಲಿಸಯ್ಯ
ಸೆರಗನೊಡ್ಡಿ ಬೇಡಿಕೊಂಬೆ
ಪರಮ ಷಡಕ್ಷರಿಯ ಲಿಂಗ ಪೊರೆದು ಸಲಹಯ್ಯಾ ॥೫॥

## ೭೮. ಎನ್ನ ತನುಗುಣಗಳ ಭ್ರಾಂತುಗೆಡಿಸು

**ಭೋಗಷಟ್ಪದಿ**

ಹೇವಗೈಯಾ ಎನ್ನ ಮನೋ
ಭಾವದೊಳಗೆ ಲಿಂಗವಿರದು
ತೀವಿ ತನುಗುಣಗಳು ಮುಸುಕಿ ಕೆಟ್ಟೆನಕ್ಕಟಾ ॥ ಪಲ್ಲವಿ॥

ಎನ್ನ ಒಳಗೆ ಕಾಮ ಕ್ರೋಧ
ಎನ್ನ ಒಳಗೆ ಲೋಭ ಮೋಹ
ಎನ್ನ ಒಳಗೆ ಮದವು ಮತ್ಸರಂಗಳಿರ್ಪವು ।
ಎನ್ನ ಒಳಗೆ ತಾಪತ್ರಯದ
ವಹ್ನಿ ಹೊತ್ತಿ ಉರಿವುತಿವುದು
ಎನ್ನೊಳೊಲಿದು ಶಿವನ ನೆನವು ಇಲ್ಲವಕ್ಕಟಾ ॥೧॥

ಎನ್ನ ಒಳಗೆ ಜಾರರಿಹರು
ಎನ್ನ ಒಳಗೆ ಚೋರರಿಹರು
ಎನ್ನ ಒಳಗೆ ಘೋರಪಾಪ ಪೋರರಿಹರು
ಎನ್ನ ಒಳಗೆ ಕ್ರೂರದೃಷ್ಟಿ
ಎನ್ನ ಒಳಗೆ ಸೇರಿಕೊಂಡು
ಎನ್ನನೊಲಿದು ಶಿವನ ನೆನೆಯಲೀಯವಕ್ಕಟಾ ॥೨॥

ಎನ್ನ ಒಳಗೆ ಸೆಟೆಯು ಡಂಬ
ಎನ್ನ ಒಳಗೆ ಹಟವು ಶಟವು
ಎನ್ನ ಒಳಗೆ ಆಟಮಾಟ ಇಂಬುಗೊಂಡವು



ಎನ್ನ ಒಳಗೆ ಪಟುಲ ಕ್ಷುದ್ರ
ಎನ್ನ ಒಳಗೆ ಮಠವ ಮಾಡಿ
ಎನ್ನನೊಲಿದು ಶಿವನ ನೆನೆಯಲೀಯವಕ್ಕಟಾ ॥೩॥

ಎನ್ನ ಒಳಗೆ ಗರ್ವಪರ್ವ
ಎನ್ನ ಒಳಗೆ ವಿದ್ಯೆ ಡೊಂಕು
ಎನ್ನ ಒಳಗೆ ವಿಷಯಕೂಪ ವಿಷಯದಾಗರ
ಎನ್ನ ಒಳಗೆ ಕೋಪಸಿಡಿಲು
ಎನ್ನ ಒಳಗೆ ಆಸೆಮೇಘ
ಎನ್ನ ಮುಸುಕಿ ಶಿವನ ನೆನೆಯಲೀಯವಕ್ಕಟಾ ॥೪॥

ಇಂತು ತನುಗುಣಂಗಳೆಲ್ಲ
ಸಂತ ತಾನೆ ಮುಸುಕಿಕೊಂಡು
ಕಂತುಹರನೆ ನಿಮ್ಮ ನೆನೆಯಲೀಯವಕ್ಕಟಾ
ಮುಂತೆ ಎನ್ನ ತನುಗುಣಗಳ
ಭ್ರಾಂತುಗೆಡಿಸು ನಿಮ್ಮ ಧರ್ಮ
ಚಿಂತೆರಹಿತ ಗುರುವೆ ಷಡಕ್ಷರಿಯ ಲಿಂಗವೆ ॥೫॥

## ೭೯. ಎನ್ನ ಏಕೆ ಕಾಯಲೊಲ್ಲೆ?

### ಭೋಗಷಟ್ಪದಿ

ಎನ್ನ ಏಕೆ ಕಾಯಲೊಲ್ಲೆ
ಅನ್ಯರುಗಳ ಕಾವಿರಯ್ಯ
ನಿನ್ನ ಚರಣ ಚರಣರಕ್ಷೆ ನನ್ನದಲ್ಲವೆ ॥ಪಲ್ಲವಿ॥

ದುಷ್ಟ ಹರಿಯು ಸೊಕ್ಕಿ ತಾನು
ಶ್ರೇಷ್ಠ ದೇವರೆಂದು ನುಡಿಯೆ
ಸುಟ್ಟು ಕಳೆದಿರವನ ಹಣೆಯ ಕಣ್ಣಿನಿಂದಲಿ
ನಿಷ್ಠೆಯಿಂದ ನುತಿಸೆ ಕಾಮ
ಕೊಟ್ಟಿರವಗೆ ಪದವಿಗಳನು
ಸೃಷ್ಟಿಗೀತ ಎನ್ನ ಏಕೆ ಕಾಯಲೊಲ್ಲಿರಿ ॥೧॥

ಹಮ್ಮಿನಲ್ಲಿ ಸೊಕ್ಕಿ ಮೆರೆದು
ಬೊಮ್ಮ ತಾನೆ ದೇವರೆನಲು
ನಿಮ್ಮ ಜರಿಯಲವನ ಶಿರವ ಛೇದಿಸಿದಿರಾಕ್ಷಣ
ನಿಮ್ಮನವನು ನುತಿಸೆ ಒಲಿದು
ನೆಮ್ಮಿಸಿದಿರಿ ಸೃಷ್ಟಿಗವನ
ನಿಮ್ಮ ಭಂಟ ನನ್ನ ಏಕೆ ಕಾಯಲೊಲ್ಲಿರಿ ॥೨॥

ಗರಳದುರಿಯ ಬೇಗೆಯಲ್ಲಿ
ಸುರರು ದಾನವರುಗಳು ಎಲ್ಲ
ಉರಿದು ಬೆಂದು ಓಡಿ ಬಂದು ನಿಮ್ಮ ನೆನೆಯಲು



ಗರಳವನ್ನು ಗರಳದಲ್ಲಿ
ಧರಿಸಿ ಕಾದಿರವರ ನೀವು
ಹರನೆ ನಿಮ್ಮ ಭಂಟನನೇಕೆ ಕಾಯಲೊಲ್ಲೆ ॥೩॥

ದಕ್ಷ ಕಾಲ ಮದನ ಗಿರಿಜ
ರಾಕ್ಷಸರುಗಳೆಲ್ಲರನ್ನು
ಶಿಕ್ಷಿಸಿದಿರಿ ಅವರು ನಿಮ್ಮನೊಲಿದು ನುತಿಸಲು
ಆ ಕ್ಷಣದಲಿ ಮರಳಿ ನೀವು
ರಕ್ಷಿಸುವಿರಿ ಅವರ ಎನ್ನ
ರಕ್ಷಿಸುವೊಡೇತಕೊಲ್ಲೆ ರೂಕ್ಷವಾಹನ ॥೪॥

ಸೊಕ್ಕಿದವರ ಶಿಕ್ಷಿಸಿದಿರಿ
ಸೊಕ್ಕದವರ ರಕ್ಷಿಸುವಿರಿ
ಸೊಕ್ಕಲಿಲ್ಲ ನಾನು ನಡೆಸಿದಂತೆ ನಡೆವೆನು
ದಿಕ್ಕುದೆಸೆಯು ಗತಿಯು ನೀವು
ಮಿಕ್ಕುದೆನಗದಾರುವುಂಟು
ಅಕ್ಕರಿಂದ ಸಲಹು ಷಡಾಕ್ಷರಿಯ ಲಿಂಗವೇ ॥೫॥

## ೮೦. ನಿಮ್ಮ ಮರೆಸಬೇಡ

### ಭೋಗಷಟ್ಪದಿ

ಸಿರಿಯು ಸಂಪದಗಳನಿತ್ತು
ಹರನೆ ನಿಮ್ಮ ಮರಸಬೇಡ
ತಿರಿದುವುಂಡು ನಿಮ್ಮ ನೆನೆವ ಸುಖವ ಬಯಸುವೆ ॥ಪಲ್ಲವಿ॥

ಹೆಣ್ಣು ಮಣ್ಣು ಹೊನ್ನು ಚಿನ್ನ
ಅಣ್ಣ ತಮ್ಮ ಅಕ್ಕ ತಂಗಿ
ಹೆಣ್ಣು ಗಂಡು ಮಕ್ಕಳಾದಿ ಭಾಗ್ಯವೀಯದೆ
ಎನ್ನ ಕ್ಷುಧೆಗೆ ಅನ್ನವಿತ್ತು
ಎನ್ನ ಶೀತಕರುವೆಯಿತ್ತು
ನಿನ್ನ ಚರಣ ಧ್ಯಾನದಲ್ಲಿ ಇರಿಸು ಎನ್ನನು ॥೧॥

ಅಂದಣಾತಪತ್ರ ಚಾಮ್ರ
ಹಿಂದೆ ಮುಂದೆ ರಥಪದಾತಿ
ಸಂದಣಿಸಿದ ಆನೆ ಕುದುರೆ ಶಾನೆಯೀಯದೆ
ಕುಂದದೊಂದು ಹಾಳುಗುಡಿಯ
ಗೊಂದಿಯೊಳಗೆಯಿರಿಸಿ ಶಿವನಾ
ನಂದ ರಸದ ಸಿಂಧು ತೆರೆಯೊಳೊಂದಿಸೆನ್ನದು ॥೨॥

ಪರಡಿ ಕಡುಬು ದೋಸೆ ತರಗು
ಹಿರಿಯ ತುಪ್ಪ ಬೇಳೆ ಬೆಲ್ಲ
ಪರಿಪರಿಯಾ ಶಾಕಪಾಕದೂಟವೀಯದೆ



ಹರನ ಭಕ್ತರುಗಳ ಮನೆಯ
ತಿರಿದು ತಂದುವುಂಡು ನಿಮ್ಮ
ಇರುಳು ಹಗಲು ನೆನೆವ ಹಾಂಗೆ ಮಾಡು ಎನ್ನನು ॥೩॥

ಛಂದ ಗಣಿತ ದಶನಿಘಂಟು
ಮುಂದೆ ಪಂಚಕಾವ್ಯ ಮಾಘ
ವೃಂದ ಮಾತು ಗೀತದಲ್ಲಿ ಜಾಣನೆನಿಸದೆ
ಒಂದನರಿಯ ಇವನು ಬಹಳ
ಮಂದಮತಿಯ ಮರುಳನೆನಿಸಿ
ಇಂದುಧರನೆ ನಿಮ್ಮ ಧ್ಯಾನದೊಳೊಂದಿಸೆನ್ನನು ॥೪॥

ಸಕಲಭಾಗ್ಯಗಳನು ಒಲ್ಲೆ
ಸಕಲವಿದ್ಯೆಗಳನು ಒಲ್ಲೆ
ಸಕಲಫಲಪದಗಳ ನಾನದೇನ ಒಲ್ಲೆನು
ಸಕಲಸುಖವು ನೀನೆ ಎನಗೆ
ಸಕಲಮುಕ್ತಿ ನೀನೆ ಎನಗೆ
ಸಕಲ ನೀನೆ ಎನಗೆ ಷಡಕ್ಷರಿಯ ಲಿಂಗವೆ ॥೫॥

## ೮೧. ಎತ್ತು ತೊತ್ತು ತೊಂಡನಾಗಿ ಇರಿಸು

**ಭೋಗಷಟ್ಪದಿ**

ಮಿಥ್ಯವನ್ನು ಅಳಿದು ಸಹಜ
ಸತ್ಯವುಳ್ಳ ಶರಣರಲ್ಲಿ
ಎತ್ತು ತೊತ್ತು ತೊಂಡನಾಗಿ ಇರಿಸು ಎನ್ನನು ॥ಪಲ್ಲವಿ॥

ತಂದೆ ತಾಯಿ ಸತಿಯು ಸುತರು
ಬಂಧು ಬಳಗ ಮಿತ್ರರಾದಿ
ಅಂದು ಇಲ್ಲ ಇಂದು ಎನಗೆ ಸಟೆಗಳೆನುತಲಿ
ಇಂದುಧರನ ಸುತನು ನಾನು
ಎಂದು ತಿಳಿದ ಶರಣರುಗಳ
ಕಂದನಾಗಿ ಇರಿಸು ನಿಮ್ಮ ಧರ್ಮದಿಂದಲಿ ॥೧॥

ಹೊನ್ನು ಎನಗದೇಕೆ ಕೃತಕ
ಹೆಣ್ಣು ಎನಗದೇಕೆ ಮಿತ್ತು
ಮಣ್ಣು ಎನಗದೇಕೆ ಎಲ್ಲ ಸಟೆಗಳೆನುತಲಿ
ಪನ್ನಗೇಂದ್ರಾಭರಣ ಪಾದ
ನನ್ನಿ ಎಂದು ನಂಬಿ ತಿಳಿದ
ಚನ್ನ ಶರಣರುಗಳ ತನುಜನೆನಿಸು ಎನ್ನನು ॥೨॥

ಆಸೆ ಎನಗದೇಕೆ ಬಹಳ
ರೋಷವೆನಗದೇಕೆ ಭವದ
ಪಾಶ ಎನಗದೇಕೆ ಎಲ್ಲ ಸಟೆಗಳೆನುತಲಿ



ಈಶ ನಿಮ್ಮ ನಂಬಿ ನಚ್ಚಿ
ವಾಸರಿಸದ ಶರಣರುಗಳ
ವಾಸದಲ್ಲಿ ದಾಸನಾಗಿ ಇರಿಸು ಎನ್ನನು ॥೩॥

ಎನಗೆ ಯಮನ ಭೀತಿ ಏಕೆ
ಎನಗೆ ಮದನ ಭಯವದೇಕೆ
ಎನಗೆ ಮಾಯೆ ಮರವೆಯೆಲ್ಲ ಸಟೆಗಳೆನುತಲಿ
ಎನಗೆ ಶಿವನೆ ಕರ್ತನೆಂದು
ಮನದೊಳರಿದ ಶರಣರುಗಳ
ಮನೆಯ ತನಯನೆನಿಸು ನಿಮ್ಮ ಕರುಣದಿಂದಲಿ ॥೪॥

ಲಿಂಗದಲ್ಲಿ ಜನನವೆನಗೆ
ಲಿಂಗದಲ್ಲಿ ಮರಣವೆನಗೆ
ಲಿಂಗವೆನಗೆ ಸ್ವಸ್ತಿಧಾಮ ಎಂದು ತಿಳಿವುತ
ಹಿಂಗದಿರುವ ಶರಣರುಗಳ
ಲೆಂಗಿಯೆನಿಸು ಷಡಾಕ್ಷರಿಯ
ಲಿಂಗ ನಿಮ್ಮ ಧರ್ಮದಿಂದ ಬಿಡದೆ ಎನ್ನನು ॥೫॥

## ೮೨. ಶಿವನ ಪೂಜೆಯನ್ನು ಮಾಡು

**ಭೋಗಷಟ್ಪದಿ**

ಶಿವನ ಪೂಜೆಯನ್ನು ಮಾಡು
ಭವದ ವಾರುಧಿಯನು ದಾಂಟು
ವಿವರಗೇಡಿಯಾಗದಿಹದ ಸುಖಕೆ ಸಿಲ್ಕದೆ ॥ಪಲ್ಲವಿ॥

ಸವಿಸು ಗುರುವಿಗರ್ಥವನ್ನು
ಸವಿಯೊ ಸುಪ್ರಸಾದವನ್ನು
ಹವಣದಿಂದ ಹಾರು ಅತ್ತಯಿತ್ತಬಾರದೆ
ಕವಿದೆ ಮಾಯೆ ಜಾಲವನ್ನು
ಸವರಿ ಒಡೆದು ನುಚ್ಚು ಮಾಡಿ
ಪವನದಿಂದ ಗೆಲಲು ಬಲ್ಲಡಾತನುತ್ತಮ ॥೧॥

ಅರಿವಿನೊಳಗೆ ಅರಿತು ಬೆರತು
ಇರಲಿಬೇಡ ಎಲ್ಲರೊಡನೆ
ಸರಸಗಾರನಾಗಿ ಬಾಳು ಬಲ್ಲತನದಲಿ
ಇರುವೆ ಮೊದಲು ಆನೆ ಕಡೆಯು
ಸರ್ವಜೀವರಾಸಿಯೊಳಗೆ
ಉರುಳಿ ಹೊರಳಿ ಉಳಿದು ಬಂದ ಶಿವನ ಕರುಣದಿ ॥೨॥

ನಿತ್ಯವಲ್ಲ ಕಾಯವಿದ–
ನಿತ್ಯವೆಂದು ತಿಳಿದು ನೋಡು
ತೊತ್ತಿನಂತೆ ಮರೆತು ಬೆರತು ಹೊತ್ತುಗಳೆಯದೆ



ಚಿತ್ತಶುದ್ಧನಾಗಿ ನೀನು
ಕತ್ತರಿಸು ಭವದ ಬೇರ
ತತ್ತ್ವಜ್ಞಾನದಿಂದ ತಿಳಿದು ನೋಡಿಕೊಳ್ಳಲಿ ॥೩॥

ಮಂದಮತಿಯ ಮನುಜ ಕೇಳು
ಬಂದದೇನು ಉಣಲಿಬೇಕು
ಒಂದ ಒಂದ ಬಯಸಿ ನೀನು ಭ್ರಷ್ಟನಾಗದೆ
ಹಿಂದುಗಳೆಯಬೇಡ ದಿನವ
ಇಂದುಧರನ ಪೂಜೆಮಾಡು
ಅಂದವುಳ್ಳ ಜನ್ಮ ನಿನಗೆ ದೊರಕಿದಾಗಲೆ ॥೪॥

ಗಾಳಿ ಬಂದ ಕೈಲಿರಾಸಿ
ಜೋಳವನ್ನು ತೂರಿಕೊಳ್ಳೊ
ಏಳುಜನ್ಮದಲ್ಲಿ ಮಾಡಿಬಂದ ಪಾಪವ
ಕೇಳಿದಾಕ್ಷಣ ಕಳೆಯಬೇಕು
ನಾಳೆ ನಾಡದೆನ್ನಬೇಡ
ಭಾಳಲೋಚನ ಇಷ್ಟಲಿಂಗ ಕರದೊಳಿರಲಿಕೆ ॥೫॥

ಇಷ್ಟಲಿಂಗ ಕರದೊಳಿರಲು
ನೆಟ್ಟ ಪ್ರತುಮೆಗೆರಗಬಹುದೆ
ಭ್ರಷ್ಟನಾಗಿ ಕೆಡಲಿಬೇಡ ಬಾಧೆ ಬರ್ಪುದು
ಕಟ್ಟಿಕೊಂಡ ಕರ್ತ ನಿನ್ನ
ಮೆಟ್ಟಿ ಮೂಗ ಕೊಯ್ದು ಮೆಣಸ
ಹಿಟ್ಟ ಹೊಯ್ದು ಶರಗ ಹರಿದು ಬಿಟ್ಟು ಕೊಡುವನು ॥೬॥

ಮಾಡಿದನ್ನು ಉಣುವರೆಂದು
ಹಾಡುತಿಹರು ಇಳೆಯ ಮೇಲೆ
ಗಾಢದಿಂದ ತಿಳಿದು ನೋಡು ಗರ್ವ ಬೇಡವು

ಪಾಡುವರನು ಮೇಲೆ ಬಿರಿದು
ಪಾಡಿಕೊಂಡು ಅಳಲಬಹುದೆ
ಮೂಢಮನುಜ ಮಾಡು ಬೇಗ ಶಿವನ ಪೂಜೆಯ ॥೭॥

ಸಿರಿಯು ಬರಲು ಶಿರವು ತಗ್ಗು
ಗರುವೆ ಬೇಡ ಎಲ್ಲರೊಡನೆ
ಸರಸಗಾರನಾಗಿ ಬಾಳು ಭಕ್ತಿಯಿಂದಲಿ
ಗುರುಹಿರಿಯರೆಂದು ನೋಡು
ಪರಹಿತಾರ್ಥವನ್ನು ಮಾಡು
ಸ್ಥಿರವಿದಲ್ಲ ಭಾಗ್ಯ ನಿನಗೆ ಅರಿತು ನೋಳ್ಪುದು ॥೮॥

ಮುನ್ನ ತಾನದಾರು ಎಂದು
ತನ್ನ ನಿಜವನರಿದ ಬಳಿಕ
ಚನ್ನ ಷಡಕ್ಷರಿಯ ಲಿಂಗ ತಾನೆಯಾಗಿಹ
ಇನ್ನು ಸರ್ವಜಗದ ಒಳಗೆ
ತನ್ನ ನಿಜವೆಯಾಯಿತಾಗಿ
ಅನ್ಯವಿಲ್ಲವಾಗಿ ಬಾಳುವಾತನೇ ಶಿವಾ ॥೯॥



## ೮೩. ಕೊಟ್ಟು ಹುಟ್ಟಿ ಪಡೆಯಲಿಲ್ಲ

### ಭೋಗಷಟ್ಪದಿ

ಕೊಟ್ಟು ಹುಟ್ಟಿ ಪಡೆಯಲಿಲ್ಲ
ಮುಟ್ಟಿ ಶಿವನ ನೆನೆಯಲಿಲ್ಲ
ಭ್ರಷ್ಟಮನುಜ ನಿನಗೆ ಪದವಿ ಹೇಗೆ ದೊರೆವುದು ॥ಪಲ್ಲವಿ॥

ಶಿವನ ಪೂಜೆ ಮಾಡಲಿಲ್ಲ
ಗುರುವಿಗಿನ್ನು ಎರಗಲಿಲ್ಲ
ಶರಣರುಗಳ ಪಾದವನ್ನು ಸ್ಮರಿಸಲಿಲ್ಲವು
ಧರೆಯ ದಾತರುಗಳ ಕಂಡು
ಹರುಷದಿಂದೆ ನೋಡಲಿಲ್ಲ
ದುರುಳಮನುಜ ನಿನಗೆ ಪದವಿ ಹೇಗೆ ದೊರೆವುದು ॥೧॥

ದಾನಧರ್ಮ ಮಾಡಲಿಲ್ಲ
ಜ್ಞಾನವಂತರ ಸಂಗವಿಲ್ಲ
ಮಾನಿನಿಯರ ಕಂಡು ಮನ ಸೈರಿಸಲಿಲ್ಲವು
ಧ್ಯಾನಮೌನ ವ್ರತವು ಇಲ್ಲ
ತಾನು ಪರರಿಗಿಕ್ಕಲಿಲ್ಲ
ಹೀನಮನುಜ ನಿನಗೆ ಪದವಿ ಹೇಗೆ ದೊರೆವುದು ॥೨॥

ಸತ್ಯವಂತನಾಗಲಿಲ್ಲ
ಮತ್ತೆ ಒಂದು ಕ್ರಿಯಾವಿಲ್ಲ
ಉತ್ತಮರನು ಕಂಡು ಶಿರವು ಬಾಗಲಿಲ್ಲವು

ಪೃಥ್ವಿಯೊಳಗೆ ಕೆರೆಯು ಭಾವಿ
ಮತ್ತೆ ನೀನು ತೆಗೆಸಲಿಲ್ಲ
ಕತ್ತೆಮನುಜ ನಿನಗೆ ಪದವಿ ಹೇಗೆ ದೊರೆವುದು ||೩||

ಅನ್ನದಾನ ಮಾಡಲಿಲ್ಲ
ಹೊನ್ನುದಾನ ಮಾಡಲಿಲ್ಲ
ಅನ್ಯದೈವಭಜನೆ ಬಿಟ್ಟು ನಡೆಯಲಿಲ್ಲವು
ಹೊನ್ನು ಹೆಣ್ಣು ನಚ್ಚಿ ನೀನು
ಚನ್ನ ಶಿವನ ನೆನೆಯಲಿಲ್ಲ
ಕುನ್ನಿಮನುಜ ನಿನಗೆ ಪದವಿ ಹೇಗೆ ದೊರೆವುದು ||೪||

ಹರನ ಪೂಜೆ ಮಾಡಲಿಲ್ಲ
ಶರಣರುಗಳ ಪಾಡಲಿಲ್ಲ
ಮರಣಗಾಲದಲ್ಲಿ ಶಿವನ ನೆನೆಯಲಿಲ್ಲವು
ಶರೀರವನ್ನು ತೊರೆಯಲಿಲ್ಲ
ಪರಮ ಷಡಾಕ್ಷರನಲ್ಲಿ
ಎರದು ಬೆರೆದು ಏಕವಾಗೆ ಪರಮ ಮುಕ್ತಿಯು ||೫||



## ೮೪. ಇದರ ತೆರನ ಕರುಣಿಸು

### ಭೋಗಷಟ್ಪದಿ

ಗುರುವೆ ಎನಗೆ ಮೋಕ್ಷಮಾರ್ಗ
ದಿರವು ದೊರೆವ ಪರಿಯ ಹೇಳಿ
ಅರಿಯಬಾರದೆನಗೆ ಇದರ ತೆರನ ಕರುಣಿಸು ||ಪಲ್ಲವಿ||

ಗುರುವೆ ಜಯತು ಎನ್ನ ಕಲ್ಪ
ತರುವೆ ಜಯತು ಎನ್ನ ಭಾಗ್ಯ
ದಿರುವೆ ಜಯತು ಜಯತು ಎನ್ನ ಒಳಗಳರುಹಿನ
ತರುವೆ ಜಯತು ಎನ್ನ ಪರಮ
ಚರವೆ ಜಯತು ಎನ್ನೊಳಿರುವ
ಮರವೆಯನ್ನು ಪೊರಡಗುಟ್ಟಿ ದೇವ ರಕ್ಷಿಸು ||೧||

ಮಗನೆ ಕೇಳು ಮೋಕ್ಷಮಾರ್ಗ
ಜಗದಿ ನಿನಗೆ ದೊರೆವ ಪರಿಯ
ಅಗಜೆಯಾಣ್ಮನಂಘ್ರಿಯುಗಳ ವಾರಿರುಹವನು
ಹಗಲು ಇರುಳು ಜಪಿಸುತಿರಲು
ವಿಗಡಮಾಯೆಯನ್ನು ಗೆಲಿದು
ಅಗಲಲೀಯದಿರ್ಪೆ ನಿನಗೆ ಮೋಕ್ಷ ದೊರೆವುದು ||೨||

ದಾನಗುಣವ ಮರೆಯಬೇಡ
ದೀನತನವ ಮಾಡಬೇಡ
ಹಾನಿ ಮಾಡಬೇಡ ನಿನ್ನ ಜ್ಞಾನವೃತ್ತಿಯ

ಹೀನವಿಷಯಕೆಳಸಬೇಡ
ನಾನೆ ಎಂದು ಮೆರೆಯಬೇಡ
ನೀನು ಇದನು ತಿಳಿದು ನೋಡು ಮೋಕ್ಷ ಮಾರ್ಗವ ॥೩॥

ಯತಿಗಳೊಳಗೆ ಮಥನ ಬೇಡ
ಮತಿಯ ಗತವ ಮಾಡಬೇಡ
ಕ್ಷಿತಿಯ ಭೋಗವನ್ನು ನಚ್ಚಿ ಮರೆಯಬೇಡವೈ
ವ್ರತವ ತಪ್ಪಿ ನಡೆಯಬೇಡ
ಪತಿಯರುಳ್ಳ ಸತಿಯರುಗಳ
ರತಿಯ ಕೇಳಿಗೆಳಸಬೇಡ ನಿನ್ನ ಮನವನು ॥೪॥

ನೋಡು ನೀನು ಬಂದ ಪಥವ
ಮಾಡು ಮನವು ಮುಟ್ಟಿ ತಪವ
ಪಾಡು ನಿನ್ನ ಜಿಹ್ವೆ ತುಂಬಿ ಶಿವನ ಪಾದವ
ಬೇಡು ಮುಕ್ತಿಯನ್ನು ಮೃಡನ
ಲಾಡು ಎಲ್ಲಿ ನಿಲ್ಲದಘಕೆ
ಕೂಡು ಲಿಂಗದಲ್ಲಿ ಮನವ ಮಗನೆ ಸಂತತ ॥೫॥

ಒರೆಸು ಅಜನು ಬರೆದ ಲಿಪಿಯ
ಸ್ಮರಿಸು ನೀನು ಪಂಚಾಕ್ಷರಿಯ
ತರಿಸು ಮನದ ವಿಷಯವನ್ನು ಬೇರು ಸಹಿತಲಿ
ಹರಿಸು ಬರ್ಪ ಪಾಪ ಲತೆಯ
ತೊರೆಸು ಮನದ ಕಾಂಕ್ಷೆಗಳನು
ಮುರಿದು ಬಿಸುಡು ಕಾಡುತಿಪ್ಪ ಮನದಬಾಣವ ॥೬॥

ಬಿಡಿಸು ಮನದ ರೋಷಗಳನು
ನಡೆಸು ಹಿಡಿದ ಛಲಗಳನ್ನು
ಉಡಿಸು ಶಾಂತಿಯೆಂಬ ವಸ್ತ್ರವನ್ನು ಮನಸಿಗೆ



ನಡೆಸು ಸತ್ಯವೆಂಬ ವಾಕ್ಯ
ಕೆಡಿಸು ಪರ್ಬಿ ಬರುವ ಪುಸಿಯ
ಬಿಡಿಸು ಆಸೆಯೆಂಬದೊಂದು ಧರಣಿರುಹವನು ॥೭॥

ಸಂಗ ಬೇಡ ಜೀವರುಗಳ
ಹಿಂಗ ಬೇಡ ಶರಣತತಿಯ
ಲಿಂಗದೊಳಗೆ ಸಾವಧಾನಿಯಾಗಿರಲಸದೆ
ನುಂಗ ಬೇಡ ಲೇಸ ಪರರ
ಭಂಗ ಬೇಡ ಮುಂದಲಾಗ
ಕಂಗಳೊಡವೆ ಮೋಸ ನಾಶ ಮೋಕ್ಷವಾಗದು ॥೮॥

ಕುಂದು ಹೆಚ್ಚಿ ನುಡಿಯಬೇಡ
ನಿಂದ್ಯಕೋಡಿ ಹೋಗಬೇಡ
ಹೊಂದಬೇಡ ಮಾಯೆ ಭೋಗವನ್ನು ಪರಶಿವ
ಕಂದ ಎಡರಿಗಂಜಬೇಡ
ಸಂದ ಶರಣರಡಿಯ ನೆನಹ
ಕಂದ ನೀನು ಮರೆಯಬೇಡ ಮೋಕ್ಷ ದೊರೆವುದು ॥೯॥

ಹಾರಬೇಡ ಅನ್ಯರುಗಳ
ಹೋರಬೇಡ ಹಿರಿಯರೊಡನೆ
ಮೀರಬೇಡ ದೇಶಿಕೇಂದ್ರ ವರದ ವಚನವ
ಆರ ಜರಿಯಬೇಡ ನೀನು
ಭೂರಿ ದೈವಕೆರಗಬೇಡ
ಊರ ಸೇರಿ ನಿಲ್ಲಬೇಡ ಯತಿಯು ಆದಡೆ ॥೧೦॥

ತೋರಿ ಹಾರಿ ಕೆಡುವ ತನುವ
ಹಾರಬೇಡ ನಿತ್ಯವೆಂದು
ಊರಬೇಡ ಯೋನಿಮುಖದಿ ಬಿಂದು ಬ್ರಹ್ಮವ

ಧಾರುಣಿಯೊಳು ಸಕಲರೊಡನೆ
ಕ್ರೂರನೆನಿಸಿ ನಡೆಯಬೇಡ
ಗೌರಿಯರಸನಡಿಯ ಹೃದಯದಲ್ಲಿ ನೆನವುದು ॥೧೧॥

ಸತಿಯರುಗಳ ಭಕ್ತಿಯನ್ನು
ಹಿತವಿದೆಂದು ನಂಬಬೇಡ
ಅತಿ ವಿಚಿತ್ರದನ್ನವಿಕ್ಕಿ ಕ್ರಮುಕ ಪರ್ಣವ
ಹಿತದಿಂದಲಿಯಿತ್ತು ನಿಮ್ಮ
ಯತಿತನಕ್ಕೆ ಕೇಡ ತಹರು
ಕ್ಷಿತಿಯೊಳಿದರ ಬೆಡಗ ತಿಳಿದು ನಡೆವುದೈ ಮಿತ್ರ ॥೧೨॥

ಕೆಲರು ನಿನ್ನ ಹಳಿದರೆಂದು
ಕಲಹ ಬೇಡ ಅವರ ಕೂಡೆ
ಹಲವು ಕಡೆಗೆ ಹಾಯಬೇಡ ಮನಸಿನಿಚ್ಛೆಗೆ
ಕುಲವನೆತ್ತಿ ನುಡಿಯಬೇಡ
ಚೆಲುವ ಶಿವನ ಶರಣರುಗಳ
ತೊಲಗದಿರು ಶಿವಾನುಭಾವಿಗಳನು ನಂದನಾ ॥೧೩॥

ಕೊಡುವರೆಡೆಗೆ ಆಸೆಬಟ್ಟು
ನಡೆಯಬೇಡ ಒಡಲಿಗನ್ನ
ಮೃಡನು ಕೊಟ್ಟ ಪಡಿಯನುಣಲು ಅದು ಗುರುತ್ವವು
ಉಡುಪಧರನು ಕೋಪಗೊಂಬ
ಹಿಡಿಯಬೇಡ ವರ್ಗದವರ
ಜಡನು ನೀನು ಆಗಬೇಡ ಮೋಕ್ಷ ದೊರೆಯದು ॥೧೪॥

ಕುವರ ಜಿಹ್ವೆ ಗುಹ್ಯ ಲಂಪ
ಟವನು ಒಮ್ಮೆ ನೆನೆಯಬೇಡ
ಶಿವನ ದೂಷಣೆಗಳ ಮಾಳ್ಪ ನರರ ವಾಕ್ಯವ



ಕಿವಿಯೊಳಾಂತು ಕೇಳಬೇಡ
ಭವಿಯ ಸಂಗ ಬೇಡ ದೋಷ
ಶಿವನ ಶರಣರಡಿಗೆ ಭೃತ್ಯಭಾವದಿಂದಿರು ॥೧೫॥

ಬಲ್ಲೆನೆಂದು ಬೆರೆಯಬೇಡ
ಎಲ್ಲರೊಳಗೆ ಕಲಹ ಬೇಡ
ನಿಲ್ಲಬೇಡ ಕುಟಿಲ ಕುಹಕರಿರ್ದ ಬಳಿಯಲಿ
ಅಲ್ಲದಾಟವಾಡಬೇಡ
ಕಳ್ಳತನವ ನೆನಸಬೇಡ
ಫುಲ್ಲಶರನ ದಹನನ ನೆನಹ ಮರೆಯದಿರುವುದೈ ॥೧೬॥

ರಾಗವನ್ನು ತೊರೆಯಬೇಕು
ನೀಗಬೇಕು ವ್ಯಸನ ವ್ಯಾಪ್ತಿ
ಸಾಗಲೊದೆಯಬೇಕು ಅಷ್ಟಮದಗಳೆಲ್ಲವ
ಭೋಗವನ್ನು ಮಾಜಬೇಕು
ಬಾಗಬೇಕು ಪರಮಶಿವನ
ಯೋಗಿಗಳಿಗೆ ಎನ್ನ ಕಂದ ಗರ್ವವಿಲ್ಲದೆ ॥೧೭॥

ತರಳಬುದ್ಧಿಯಿಂದ ಮಾಯೆ
ಉರುಳಿನೊಳಗೆ ಸಿಲ್ಕಿ ನಿನ್ನ
ಶರಿರಕೆಡರ ತರಲಿಬೇಡ ಅಂಗಭೋಗಕೆ
ಮರುಗಬೇಡ ಶಿವಕುಮಾರ
ಪರಕೆ ದೂರನಾಗಬೇಡ
ಅರಿದು ನೋಡು ನಿನ್ನ ಆದಿ ಮಧ್ಯ ಅಂತ್ಯವ ॥೧೮॥

ಅರುಹುದೋರಿತೆಂದು ಮತ್ತೆ
ನರರ ಒಳಗೆ ಬೆರೆಯಬೇಡ
ಕರದೊಳಿರುವ ಲಿಂಗ ಮೆಚ್ಚನಾ ಚರಿತ್ರಕೆ

ಗುರುವಿನೊಳಗೆ ಇರುವನರಿದು
ಹರನ ಧ್ಯಾನ ಅಗಲದಿಹುದು
ಅರಿದು ಮೂರು ಲಿಂಗ ಒಂದೆಯೆಂದು ಭಜಿಪುದು ॥೧೯॥

ಅಂಗಗುಣವನಳಿದು ಇಷ್ಟ
ಲಿಂಗವನ್ನು ಒಳಗೆ ಹೊರಗೆ
ಹಿಂಗದೆ ನೀ ಭಜಿಸು ಭಾವದಿಂದ ಮನದೊಳು
ಲಿಂಗ ಬೇರೆ ಮತ್ತೆ ನಿನ್ನ
ಅಂಗ ಬೇರೆ ಎನ್ನದಿಹುದು
ಲಿಂಗ ಅಂಗ ಒಂದೆಯೆಂಬ ಭಾವದಿಂದಿರು ॥೨೦॥

ಲಿಂಗವಿತ್ತುದುಂಡು ಮರಳಿ
ಲಿಂಗ ಕೊಟ್ಟುದುದನೆ ಹೊದೆದು
ಲಿಂಗ ತೋರಿದಲ್ಲಿ ಶಯನವನ್ನು ಮಾಡುತ
ಲಿಂಗ ನಡೆಸಿದಂತೆ ನಡೆದು
ಲಿಂಗ ನುಡಿಸಿದಂತೆ ನುಡಿದು
ಲಿಂಗದಲ್ಲಿ ಲೀಯವಾಗಿ ಬೆರೆದಡುತ್ತಮ ॥೨೧॥

ಭವದಿ ಸುಖವು ದುಃಖ ಬರಲು
ದೇವಗಿತ್ತು ತಾನು ಸಲಿಸಿ
ಸಾವಧಾನದಿಂದಲಿದ್ದು ಜನರ ಕಾಡದೆ
ಕಾವನಿರುವ ಠಾವ ಗೆಲಿದು
ಜೀವ ಜೀವನ್ಮುಕ್ತಿಯಾದ
ಭಾವೆಯನ್ನು ನೆರೆವುದಯ್ಯಾ ಮಗನೆ ಸಂತತ ॥೨೨॥

ಆರು ನಾನು ಎಂದು ನೋಡು
ಮಾರ ಶಿವನನ್ನು ಕೂಡು
ಸಾರಹೃದಯರೊಳಗೆ ಆಡು ನಿನ್ನ ರಕ್ಷಿಪ



ಮೂರು ಲಿಂಗವನ್ನು ಪಾಡು
ಸೇರು ನೀನು ಬಂದ ಠಾವ
ಮಾರಹರನು ತೋರ್ಪ ನಿನಗೆ ಮೋಕ್ಷಮಾರ್ಗವ ॥೨೩॥

ಅಂತರಂಗ ಬಾಹ್ಯರಂಗ
ಇಂತಿವೆರಡನೊಂದುಮಾಡು
ಭ್ರಾಂತಿ ಭ್ರಮೆಗಳೆಲ್ಲವನ್ನು ಸುಟ್ಟು ನಿಲಿಸಿಯೆ
ಕಾಂತನೊಳಗೆ ಸಮರಸೈಕ್ಯ
ವಾಂತು ನಿಲ್ಲಲಾಗಿ ಮೋಕ್ಷ
ಕಾಂತೆಯನ್ನು ಮದುವೆಯಾಗಿ ಸುಖದೊಳಿರ್ಪುದು ॥೨೪॥

ದೀಕ್ಷಮೋಕ್ಷವನ್ನು ಮಾಡಿ
ತ್ರ್ಯಕ್ಷನನ್ನು ಕರದಲ್ಲಿಟ್ಟು
ಲಕ್ಷ್ಯದಿಂದ ಭಸಿತವಿಟ್ಟು ಗುರುವರೇಣ್ಯಾ ಪ್ರ
ತ್ಯಕ್ಷವಾಗಿಯಿರಲು ಮುಂದೆ
ಮೋಕ್ಷದೊರೆಯದೆನ್ನಬೇಡ
ಈಕ್ಷಿಸಯ್ಯ ಕಂದ ನೀನು ಗರ್ವವಿಲ್ಲದೆ ॥೨೫॥

ಕರಣ ಗುಣಗಳೆಲ್ಲ ಬಿಟ್ಟು
ಬರಿಯವು ಮಾಯೆಗಳ ಮೆಟ್ಟು
ತ್ವರಿತದಿಂದ ದುರಿತ ಲತೆಯ ಹರಿಯ ಹೊಯ್ದಿಡು
ಹರಿವ ಮನವ ಹರನೊಳಿಟ್ಟು
ತುರಿಯ ಮೋಹವನ್ನು ಬಿಟ್ಟು
ಚರಿಸಲಿಂತು ಮುಕ್ತಿವನಿತೆ ಬಹಳು ನಿನ್ನೊಳು ॥೨೬॥

ಹೃದಯ ಶಾಂತನಾಗಬೇಕು
ಪದುಳದಿಂದ ಚರಿಸಬೇಕು
ಮಧುರವಚನವಾಡಬೇಕು ಜಿಹ್ವೆಯಾಗ್ರದಿ

ಕದನವನ್ನು ತೊರೆಯಬೇಕು
ಕದಡದಿರಲುಬೇಕು ಚಿತ್ತ
ಮದನಹರನು ತೋರ್ಪ ನಿನಗೆ ಮೋಕ್ಷಮಾರ್ಗವ ॥೨೭॥

ಕಾಯದೊಳಗೆ ಜೀವ ಸಿಲ್ಕಿ
ಮಾಯಪಾಶದೊಳಗೆ ಬಿದ್ದು
ಬಾಯ ಬಿಡುತಲಿರ್ಪವಂಗೆ ನಿಮ್ಮ ಪಾದದ
ತೋಯವನ್ನು ಜಿಹ್ವೆಗೆರೆದು
ಸಾಯಸಂಗಳನ್ನು ಕಳೆದು
ಕಾಯಜಾರಿ ಬೆರೆವನಯ್ಯಾ ಆ ಮಹಾತ್ಮನ ॥೨೮॥

ಮರನ ವಟ್ಟಲುಗಳ ಬೊಂಬೆ
ಎರಡು ಪಾದ ಪಾಣಿ ವದನ
ಉರಗಳನ್ನು ಮಾಡಿ ಸೂತ್ರ ಹೂಡಿಯಾಡಿಪ
ತೆರದಿ ಗುರುವೆ ಎನ್ನ ನೀವು
ಕರದಿ ಪಿಡಿದು ಬುದ್ಧಿಗಲಿಸಿ
ಶರಣು ಹೊಗಿಸಿಕೊಳ್ಳಲಾನು ಕಂಡೆ ನಿಮ್ಮುವ ॥೨೯॥

ಮತ್ತ ಮದದ ಮರುಳ ಕರುಳ
ಹೊತ್ತು ಪೊತ್ತ ಕ್ರೂರ ನರನ
ಚಿತ್ತಜಾರಿಯಲ್ಲಿ ಮನವು ಇಲ್ಲದಧಮನ
ಹತ್ತೆಗರೆದು ಹರುಷದಿಂದ
ಚಿತ್ತವನ್ನು ನೆಲೆಗೆ ನಿಲಿಸಿ
ಕರ್ತೃ ನೀವು ಪೊರೆದಿರೆನ್ನ ಕರುಣದಿಂದಲಿ ॥೩೦॥

ಮರವೆಯೊಡನೆ ಮಂದನಾಗಿ
ಅರುವ ಮರವ ತರಳಗೊರೆದು
ಹರುಷದಿಂದ ಮೋಕ್ಷಮಾರ್ಗದಿರವ ತೋರಿಸಿ



ಇರದೆ ಇಹಪರಂಗಳೆರಡ
ನುರುಹಿ ಪರಮಪದವನಿತ್ತ
ಗುರುವೆ ನಿಮಗೆ ಸರಿಯೆ ಹರನು ತಿಳಿದು ನೋಡಲು ॥೩೧॥

ಗುರುವೆ ಎನ್ನ ಬಯಸಿದಿಷ್ಟ
ದೊರಕಿತೆಂದು ಧನ್ಯನಾದೆ
ಶರಿರ ವಚನ ಮನವು ನಿಮ್ಮ ಪಾದಕಮಲದ
ಸ್ಮರಣೆಗೊಂಡು ನಿಂದುದೀಗ
ಕರಸರೋಜ ಬೇಸರಿಸದೆ
ಶರಣಗಣ್ಯ ನಿಮ್ಮ ಪುಣ್ಯ ಕರುಣಬೋಧೆಯಿಂ ॥೩೨॥

ಶರಣು ಪಾಪನಾಶ ಶರಣು
ಶರಣು ಚಿತ್ರಕಾಶ ಶರಣು
ಶರಣು ಮನ್ಮನಾಂಬುಜಾರ್ಕ ಶರಣು ಸಂತತಾ
ಶರಣು ಶರಣು ಭಕ್ತಸ್ತೋತ್ರ
ಶರಣು ಶರಣು ಘನಚರಿತ್ರ
ಶರಣು ಶರಣು ಷಟ್ಸ್ಥಲದ ಷಡಾಕ್ಷರಾಂಕನೆ ॥೩೩॥

## ೮೫. ಎಂತ ಕನಸ ಕಂಡೆ!

**ಭೋಗಷಟ್ಪದಿ**

ಎಂತ ಕನಸ ಕಂಡೆ ಸಖಿಯೆ
ಎಂತು ಇಂತ ಚೋದ್ಯವರಿಯೆ
ಕಂತುಹರನ ಕರಕೆ ಕೊಟ್ಟ ಶಾಂತಗುರುವನಾ ॥ಪ॥

ಅರುಹು ಲಿಂಗಸಂಗದಿಂದ
ಮಾರಹರನ ನಿಜವು ಬೆರದು
ಊರ ಮುಂದೆ ಒಂದ ಕಂಡೆ ಉದಯವಾದುದಾ
ನೀರಬೊಂಬೆ ನೆರಳ ಸೇರಿ
ಮೂರು ರತ್ನ ನುಂಗಿ ಬಯಲ
ದಾರಿಯಲ್ಲಿ ಧ್ವನಿಯ ಲಾಲಿಸುವುದ ಕಂಡೆನು ॥೧॥

ಹರಿವ ಜಲದ ಮಧ್ಯದಲ್ಲಿ
ಉರಿವ ಜ್ಯೋತಿಪ್ರಭೆಯ ಕಂಡೆ
ಗಿರಿಯನೇರಿ ಸೊರವ ಕರವ ಪರಿಯ ಕಂಡೆನು
ಪರವ ಬೆರಸಿ ಇರುವ ಸಮಯ
ವರವ ಕೊಡುವ ದೇವರೆಮಗೆ
ಶರ್ವನರಿಯ ಸ್ವಪ್ನದಲ್ಲಿ ಏನು ಸೋಜಿಗ ॥೨॥

ಪಂಚವರ್ಣ ವೃಕ್ಷದಲ್ಲಿ
ಪಂಚವರ್ಣ ಪಕ್ಷಿಯಿರಲು
ಪಂಚಭುವನದಲ್ಲಿ ಕಂಡೆ ಮಿಂಚುತಿರ್ಪುದಾ



ಪಂಚಬಾಣನರಿತು ಎನ್ನ
ಹೊಂಚು ಹಾಕಿ ಎಸೆದು ತಂದು
ಪಂಚಮುಖಕೆ ಅರ್ಪಿಸುವಾ ಸಂಚ ಕಂಡೆನು ॥೩॥

ನಡೆಯಲಿಲ್ಲ ನುಡಿಯಲಿಲ್ಲ
ಹಡಗನೇರಿ ಹೋಗುತಿರಲು
ಒಡನೆ ಹುಟ್ಟಿದೈವರುಗಳ ಕೈಯ ಬಿಟ್ಟೆನು
ಕಡಲ ದಾಂಟೆ ಕಡೆಯಲೊಬ್ಬ
ಜಡೆಯ ತಲೆಯ ಮುನಿಯ ಕಂಡೆ
ಒಡಲ ಶಿಖಿಯ ಕರುಳ ಚಲ್ಲಿ ಉಣಿಸುತಿರ್ಪುದಾ ॥೪॥

ಶೇಷಧರನ ಬಟ್ಟೆಯಲ್ಲಿ
ಸೂಸುತಿರ್ಪ ವಾಯು ಪಿಡಿದು
ರಾಶಿಮಾಡಿ ತೂರುತಿರ್ಪ ಕೇಶರತ್ನವಾ
ಘೋಷದಂತೆ ಗಗನದಲ್ಲಿ
ಈಶ ಷಡಾಕ್ಷರಿಯ ಲಿಂಗ
ವಾಸವಾಗಿ ಪೋಗುತಿರಲು ಕಣ್ಣು ತೆರೆದೆನು ॥೫॥

## ೮೬. ಶಿವನ ಪೂಜೆ ಮಾಡು ಮನವೆ

**ಭೋಗಷಟ್ಪದಿ**

ಶಿವನ ಪೂಜೆ ಮಾಡು ಮನವೆ
ಶಿವನ ಮಂತ್ರ ನೆನೆಯೊ ಮನವೆ
ಶಿವನ ಭಕ್ತರುಗಳ ಕೂಡಿ ಆಡುತಿರು ಕಂಡ್ಯಾ ॥ಪಲ್ಲವಿ॥

ಹಲವು ಜನ್ಮಗಳಲಿ ಬಂದು
ತೊಳಲಿ ಬಳಲಿ ಬಹಳ ನೊಂದೆ
ಸ್ವಲ್ಪದಿಂದ ದೊರಕಿರುವೀ ಮನುಜಜನ್ಮವು
ಒಲಿದು ಗುರುವಿನಂಘ್ರಿವಿಡಿದು
ಬಲುಮೆಯಿಂದ ಸಾಧಿಸುವುದು
ಮಲತ್ರಯಗಳೊಳಗೆ ಸಿಲುಕಿ ಕೆಡಲು ಬೇಡ ಕಂಡ್ಯಾ ॥೧॥

ಸಾಧಿಸುವುದು ಅವರ ಭೇದ
ಭೇದಿಸುವುದು ಅಂಗಸ್ಥಲವು
ನಾದಬಿಂದು ಕಳೆಗಳೊಳಗೆ ತಿಳಿದು ನೋಡುತಾ
ಆದಿ ಮಧ್ಯ ಅಂತ್ಯವಿಡಿದು
ಸಾಧಿಸುತಲಿ ಕಾಣಬಹುದು
ವಾದಹಿಂಗಿ ಲಿಂಗಸಂಗವಾಗಿ ಇರು ಕಂಡ್ಯಾ ॥೨॥

ಇಂದು ರವಿಗಳೆರಡು ಪಥವು
ಒಂದೆಯಾಗಿ ಮೂಲಮಂತ್ರ
ಹೊಂದಿ ತನುವಿನೊಳಗೆ ತಾನು ಆಟವಾಡುತಾ



ಚಂದದಿಂದ ಮೂರು ಮಾಗಿ
ಸಂದುವಿಲ್ಲದಾಂಗೆಯಿರಲು
ಇಂದುಧರನು ಷಡಾಕ್ಷರಿಯ ಲಿಂಗನೊಲಿವನು ॥೩॥

## ೮೭. ಎಲ್ಲವು ತಾನು

ಎಲ್ಲವು ತಾನು ತಾನಲ್ಲದೆ ಬೇರಿಲ್ಲ
ಅಲ್ಲಿ ಇಲ್ಲಿ ಎಂಬ ಸೊಲ್ಲಿದೆ ಎಲ್ಲ ॥ಪಲ್ಲವಿ॥

ಆಧಾರ ಪೃಥ್ವಿ ಆಚಾರಲಿಂಗದಿ ಭಕ್ತಿ
ಆಧಾರದಿಂದ ನಾಸಿಕದಲ್ಲಿ ವೇಧಿಸಿ
ತಾಳಿ ಗಾಳಿ ಗಂಧವನಪ್ಪಿ ವಾಸಿಸುವ
ನಾದಿಲಿಂಗವು ತಾನೆ ಶಿವಶರಣನೆನ್ನಿ ॥೧॥

ಕುಲಛಲಗಳಿಲ್ಲದ ಮಹೇಶ್ವರ ಸ್ವಾಧಿಷ್ಠಾನ
ಜಲಮಯದ ಗುರುಲಿಂಗ ಜಿಹ್ವೆಯಲ್ಲಿ
ನಲಿದು ಷಡುರುಚಿಯ ಸೇವಿಸುತಿರ್ಪ
ನೊಲವಿಂದ ಸ್ಥಲನೆಲೆಯ ತಾನೆ ಶಿವಶರಣನೆನ್ನಿ ॥೨॥

ಅಗ್ನಿಯೆ ಅಂಗ ಮಣಿಪೂರಕದಿ ನೇತ್ರಮನ
ಪ್ರಸಾದಿಯೆ ಶಿವಶರಣನೆನ್ನಿ
ಲಿಂಗದಲ್ಲಿ ಪ್ರಾಜ್ಞತ್ವದಿಂದ ಚಿನ್ಮಯರೂಪ
ನಾವರಿಸಿ ಸುಜ್ಞಾನದಿಂದರ್ಪಿಸಿ ಶಿವಶರಣನೆನ್ನಿ ॥೩॥

ಅನಾಹತದಲ್ಲಿಯ ಸಂಗಸುಖದೊಳಗಿನ
ವ್ರತವು ಪ್ರಾಣಲಿಂಗಿಯೆ ತ್ವಕ್ಕು ಜಂಗಮಲಿಂಗ
ಅನಾಹತದಲ್ಲಿಯೂ ಸಂಗ ಸ್ಪರುಶನವೆ
ಸರ್ವಾಂಗದೊಳು ಇಂಗಿತದಿ ಭೋಗಿಸುವ ಶಿವಶರಣನೆನ್ನಿ ॥೪॥



ಆಕಾಶ ಕಾಯ ವಿಶುದ್ಧಿ ಶರಣನ ಶಬ್ದ
ಸಾಕಾರ ಸೂತ್ರ ಪ್ರಸಾದಲಿಂಗ
ಆಕಾರವಪ್ಪ ಸ್ವಯನಾದ ಸುನಾದಗಳು
ಸ್ವೀಕರಿಸಿಕೊಂಡಿಪ್ಪ ಶಿವಶರಣನೆನ್ನಿ ॥೫॥

ಅನುಭಾವಿಯಾತ್ಮನ ಆಜ್ಞೆಯೊಳಗೈಕ್ಯನೆಂದೆನಿಸಿ
ಮನವೆ ಮಹಾಲಿಂಗವೆನಿಸುತಿರ್ಪ
ಘನಕೆ ಘನವಾಗಿ ಆವರಿಸಿಕೊಂಡಿರ್ಪ
ಶಿವಶರಣರುಗಳಿಂದ ಶಿವಶರಣನೆನ್ನಿ ॥೬॥

ಆರು ಮುಖದಲಿರುತಿರ್ಪ
ಆರಾರು ತತ್ವಗಳ ಸಾರಿ ಷಡ್ವಿಧ
ದೊಳರ್ಪಣವ ಮಾಡಿ ಸೂರೆಗೊಂಡಿರ್ಪ
ಚಿದಾತ್ಮ ಷಡಾಕ್ಷರಿಯೆ ಆರಾರು ಲಿಂಗಕಧಿಕ ಶಿವಶರಣನೆನ್ನಿ ॥೭॥

# ಅನುಬಂಧ
## ಷಡಾಕ್ಷರ ಲಿಂಗಾಂಕಿತ ಶಿವಗಣಂಗಳ ರಗಳೆ

ಶಿವಗಣಂಗಳ ರಗಳೆಯ ಕರ್ತೃ ಅಜ್ಞಾತ. ಆದಿ ಹಾಗೂ ಅಂತ್ಯಗಳಲ್ಲಿ 'ಷಡಾಕ್ಷರಲಿಂಗ'ವೆಂಬ ಅಂಕಿತವಿದೆ. ಮುಪ್ಪಿನ ಷಡಕ್ಷರಿಗಳು ತಮ್ಮ ಸ್ವರವಚನಗಳನ್ನು 'ಷಡಕ್ಷರಲಿಂಗ' ಅಂಕಿತದಲ್ಲಿ ರಚಿಸಿರುವುದು ಸುಪ್ರಸಿದ್ಧ ಸಂಗತಿ. ಅವರೇ ಈ ರಗಳೆಯ ಕೃತಿಕಾರರೇನೋ ಎಂಬ ಅನುಮಾನ ಉಂಟಾಗುತ್ತಿದೆ. ಈ ಅನಿಸಿಕೆಗೆ ಬೆಂಬಲವಾಗಿ ಅವರು ಹಲವಾರು ಸ್ವರವಚನಗಳಲ್ಲಿ ಶಿವಶರಣರನೇಕರನ್ನು ಹೆಸರಿಸಿರುವ ಅಂಶ ಬೆಂಬಲ ಕೊಡುತ್ತದೆ. ಆದಾಗ್ಯೂ ಈ ಬಗೆಗೆ ಏನನ್ನೂ ನಿರ್ಧಾರವಾಗಿ ಹೇಳುವಂತಿಲ್ಲ.

ಪ್ರಸ್ತುತ ಶಿವಗಣಂಗಳ ರಗಳೆಯ ಆದಿಯಲ್ಲಿ ಒಂದು ಕಂದವಿದೆ. ಅನಂತರ ವಾಕ್ಯವೆಂಬ ಹೆಸರಿನಲ್ಲಿ ಸ್ವಲ್ಪ ಭಾಗ ಗದ್ಯವಿದೆ. ಮುಂದೆ (೧೧೦+೧) ಪಂಕ್ತಿಗಳ ಲಲಿತ ರಗಳೆಯಿದೆ. ಕೃತಿಯ ಕೊನೆಯಲ್ಲಿ ಕಂದವೊಂದಿದೆ. ಇಲ್ಲಿನ ರಗಳೆಯಲ್ಲಿನ ಪ್ರತಿ ೨ನೆಯ ಪಂಕ್ತಿಯೂ 'ಭವವದಾಂಟಿಸುಯೆನ್ನ' ಎಂಬ ನುಡಿಕಟ್ಟಿನೊಡನೆ ಮುಗಿದಿದೆ.

ಪ್ರಸ್ತುತ ಕೃತಿಯನ್ನು ಕನ್ನಡ ಅಧ್ಯಯನ ಸಂಸ್ಥೆ(ಮೈಸೂರು)ಯ ಸಂಗ್ರಹದ K.೧೨೬೩/೭ (ಗರಿ ೩೧–೬)ನೆಯ ಪ್ರತಿಯನ್ನು ಆಧರಿಸಿ ಪ್ರಕಟಣೆಗೆ ಸಿದ್ಧಪಡಿಸಲಾಗಿದೆ. ಕೃತಿಯ ಪ್ರತಿಕಾಲದಲ್ಲಿ ಸಹಕರಿಸಿದ ಮಿತ್ರರಾದ ಶ್ರೀ ಜಿ.ಎ. ಶಿವಲಿಂಗಯ್ಯ ಎಂ.ಎ., ಅವರಿಗೂ, ಕೃತಿ ಪ್ರಕಟಣೆಗೆ ಓಲೆಪ್ರತಿ ಒದಗಿಸಿಕೊಟ್ಟ ಕ.ಅ. ಸಂಸ್ಥೆಯ ಅಧಿಕಾರಿಗಳಿಗೂ ನನ್ನ ವಂದನೆಗಳು.

–ಸಂಪಾದಕ

**ಎಸ್. ಶಿವಣ್ಣ**



॥ಕಂದ॥

ಶ್ರೀ ಶಿವ ಷಡಾಕ್ಷರಾಂಕನ
ಭಾಸುರತರ ಶರಣರುಗಳ(ನು) ಪಾಡಿಯೆ ಭವ ವಿ
ನಾಶವ ಮಾಡುವೆ ಬಳಿಕಂ
ಈಶನ ನಿಜಪದದ ಸುಖದೊಳೊಪ್ಪುತಲಿರ್ಪೆಂ

॥ರಗಳೆ॥

ಶ್ರೀ ಸಕಲಲೋಕವಂದಿತ ಕಾಮ ತಮ ದಂಡ
ಈಶ ಭವನಾಶ ಕೀನಾಶಾದ್ರಿಪವಿ ದಂಡ ೧
ಶೇಷರಾಜ ವಿಭೂತ ನಾಕಾದ್ರಿಕರದಂಡ
ವಾಸವಾದ್ಯಖಿಳ ದೇವಾದಿದೇವರ ಗಂಡ ೨

॥ವಾಕ್ಯ।

ಇಂತಪ್ಪ ಶಿವಂ ತನ್ನ ಲೀಲಾವಿನೋದಕ್ಕೆ ಲೋಕಂಗಳಂ ಸೃಜಿಸಿ
ಅದರೊಳು ಶಿವಗಣಂಗಳಿಗೆ ಅಂಕದ ಕಣನಪ್ಪ
ಮರ್ತ್ಯಲೋಕದೊಳು ಶಿವಾತ್ಮನೋರ್ವನು ಮಾಯಾಮರವೆಯಿಂದ
ಶಿವಪಥವಂ ಮರೆದು ಭವಾಂಬುಧಿಯೊಳು ಬಿದ್ದು
ಜೈನ ಚಾರ್ವಾಕರಂ ಸಂಹರಿಸಿ ಶಿವಪಥವನುದ್ಧರಿಸ ಬಂದ
ಶಿವಗಣಂಗಳಿಗೆ ಪುಯ್ಯಲಿಕ್ಕುತಿರ್ದನಾದೊಡೆ

॥ರಗಳೆ॥

ಪರಸಮಯ ಜೈನರೆಲ್ಲರ(ನು) ಸೂಲಕಿಕ್ಕಿದ
ತಿರುಜ್ಞಾನಸಂಬಂಧಿ ಭವವ ದಾಂಟಿಸುಯೆನ್ನ ೩
ದುರುಳ ಜೈನರ ಕೊಂದು ಬಸತಿಗಳ ನೆರೆ ಒಡೆದ
ವರದೆ ಸುಗ್ಗಲದೇವಿ ಭವವ ದಾಂಟಿಸುಯೆನ್ನ ೪
ಕ್ರೂರ ಜೈನರ ಕಡಿದು ಲಿಂಗವನು ತಂದಿತ್ತ
ಮಾರುಡಿಗೆ ನಾಚಯ್ಯ ಭವವ.... ೫
ಸಾರಿರ್ದ ಜೈನಶಿಷ್ಯರುಗಳೆಲ್ಲರ್ಬಿಟ್ಟ
ಧೀರ ವಾಗೀಶಯ್ಯ ಭವವ.... ೬

ಪೊಡವಿಜೈನರ ಕೊಂದು ಸೋಮಯ್ಯನಂ ತಂದ
ಮೃಡಭಕ್ತದಾಸಯ್ಯ ಭವವ.... ೭
ಬಿಡದೆ ಶಿವಸಮಯವನು ಜರೆವ ಜೈನರ ಕೊಂದ
ನಿಡುಗುಡಿಯಮಾರಯ್ಯ ಭವವ.... ೮
ಗಾವಳಿಯಜೈನರಂ ಗೆಲಿದು ಶಿವಕೃಪೆವಡೆದ
ಕೋವೂರಬೊಮ್ಮಯ್ಯ ಭವವ.... ೯
ಶ್ರಾವಕರಗುರುವನೋರ್ವನ ಕೊಂದು ಮಿಗೆ ಗೆಲಿದ
ದೇವಯ್ಯ ರೇಮಯ್ಯ ಭವವ.... ೧೦
ಹರನಶೇಷವ ಜರೆದ ವಿಪ್ರಪುರಮಂ ಸುಟ್ಟ
ವರಬಿಬ್ಬಿಬಾಚಯ್ಯ ಭವವ.... ೧೧
ಹರಿಯಪ್ರಥುಮೆಯ ನೋಡಿ ಉರಿಗಣ್ಣಿನಿಂ ಸುಟ್ಟ
ಪರಮಶಂಕರದಾಸ ಭವವ.... ೧೨
ಗುರು ಶೂಲವೇರೆನಲು ಏರಿ ಗುರುಕೃಪೆವಡೆದ
ಗುರುಭಕ್ತ ಶರಣೆಂಬ ಭವವ.... ೧೩
ಗುರು ಗೂಗೆಯಂ ತೋರೆ ಅಲ್ಲಿ ಗುರುಕೃಪೆವಡೆದ
ವರಗೂಗೆಗುರುಭಕ್ತ ಭವವ.... ೧೪
ಗುರುವಿದ್ದ ಬೆಲೆವೆಣ್ಗೆ ಮರದೊರಹಿ ತನುವಳಿದ
ಗುರುಭಕ್ತಯಾಂಡಾರಿ ಭವವ.... ೧೫
ಗುರುಚರಣರಕ್ಷೆಗಳು ಸೋಂಕೆ ಚರಣವ ಕಡಿದ
ಗುರುಭಕ್ತ ಶರಣೆಂಬ ಭವವ.... ೧೬
ನಿತ್ಯ ಎರಡುಂ ಗುಡಿಯ ಕಟ್ಟಿದಲ್ಲದೆ ಸಲಿಸ
ಸತ್ಯನೈವಡಿಚೋಳ ಭವವ.... ೧೭
ವಕ್ತಮಿಸುನಿಯ ಗುಡಿಯ ಕಟ್ಟಿಸಿದ ಭೂಮೀಶ
ಕರ್ತುವಿಕ್ರಮಚೋಳ ಭವವ.... ೧೮
ಉಕ್ಕೆಯಂ ಹೊಡೆವಾಗ ಲಿಂಗ ಬರೆ ಕೃಪೆವಡೆದ
ಒಕ್ಕಲಿಗ ಮುದ್ದಯ್ಯ ಭವವ.... ೧೯
ಮುಕ್ಕಣ್ಣಲಿಂಗಮಂ ಬಳ್ಳದಲಿ ತೋರಿಸಿದ
ಅಕ್ಕರಿಂ ಮಲ್ಲಯ್ಯ ಭವವ.... ೨೦



ಕುಂಭದೊಳಗಣ ಫಣಿಯ ಲಿಂಗವನು ಮಾಡಿರ್ದ
ನಂಬುಗೆಯದಾಸಯ್ಯ ಭವವ.... ೨೧
ಕುಂಭಕುಚವನು ಲಿಂಗವನು ಮಾಡಿ ತೋರಿಸಿದ
ನಂಬೆಣ್ಣ ಶರಣೆಂಬೆ ಭವವ.... ೨೨
ತಪ್ಪದಲೆ ಅಗ್ಘಣಿಯ ಲಿಂಗಕ್ಕೆ ತಂದೀವ
ಅಪ್ಪಹೊನ್ನಯ್ಯಗಳೆ ಭವವ... ೨೩
ಸರ್ಪಧರನಿಗೆ ಒರತೆಯಗ್ಘಣಿಯ ತಂದೀವ
ಬೊಪ್ಪಿದೇವಯ್ಯಗಳೆ ಭವವ.... ೨೪
ನಾಗಭೂಷಣಗೊಲಿದು ಪನ್ನೀರ ತಂದೀವ
ನಾಗೂರಬೊಮ್ಮಯ್ಯ ಭವವ.... ೨೫
ರಾಗದಿಂ ಸಾಶ್ರುಕುಂಭಗ್ಘಣಿಯ ತಂದೆರೆವ
ಬೇಗಪೋಚಲದೇವಿ ಭವವ.... ೨೬
ಕುರಿಯಹಿಕ್ಕೆಯ ಲಿಂಗವನು ಮಾಡಿ ಹಾಲೆರೆದ
ಉರುತರದ ಗೊಲ್ಲಾಳ ಭವವ... ೨೭
ತುರುವನೆಲ್ಲವ ಕರೆದು ಶಿವಗೆ ಮಜ್ಜನಕೆರೆದ
ಪರಮಚಂಡೇಶಯ್ಯ ಭವವ.... ೨೮
ಪಶುಗರೆದಪಾಲಿಂದ ಶಿವಗೆ ಮಜ್ಜನಕೆರೆದ
ವಸೆದುತಿರುಮೂಲಯ್ಯ ಭವವ.... ೨೯
ಶಶಿಧರಗೆ ಮುಂಗಯ್ಯ ಗಂಧವನುಯರ್ಪಿಸಿದ
ಅಸಮ ವಲಘಾಂಡಯ್ಯ ಭವವ.... ೩೦
ಹರುಷದಿಂ ಲಿಂಗಕ್ಕೆ ಚಂದನವನರ್ಪಿಸಿದ
ಶರಣೆ ಮಾಚಲದೇವಿ ಭವವ..... ೩೧
ವರರತ್ನದಕ್ಷತೆಯ ಶಿವಲಿಂಗಕರ್ಪಿಸಿದ
ಗರುವೆ ಕೇತಲದೇವಿ ಭವವ.... ೩೨
ಆಕಾಶಕೇಶನಿಗೆ ದಂಡೆಗಳನರ್ಪಿಸುವ
ರೇಕವ್ವೆ ಶರಣೆಂಬೆ ಭವವ.... ೩೩
ರೇಕನಾಥಂಗೆ ತಾ ಚೆಲ್ವಪತ್ರೆಯನೀವ
ಜೋಕೆಯೊಳು ಶಂಕಯ್ಯ ಭವವ.... ೩೪

ಪುಷ್ಪದೊರೆಯದೆ ಶಿವಗೆ ತನುವ ತಾ ಕೊರೆದಿತ್ತ
ತಪ್ಪದತಿಕಲಿನಾಥ ಭವವ.... ೩೫
ಪುಷ್ಪವಿಲ್ಲದೆ ಸೂರಕ್ಕಡಿಗಳನರ್ಪಿಸಿದ
ಒರ್ಪದಲಿ ದಾಸವ್ವ ಭವವ.... ೩೬
ದಂಡೆಗಳು ಇಲ್ಲದಿರೆ ಕರ(ಳನಿಂ)ಡೆಯನಿತ್ತ
ಇಂಡೆಯಾಬೊಮ್ಮಯ್ಯ ಭವವ... ೩೭
ಖಂಡೇಂದುಧರಗೆ ತುಂಬೆಯಪುಷ್ಪಗಳನಿತ್ತ
ದಂಡಕಲ್ಲಯ್ಯಗಳೆ ಭವವ...... ೩೮
ಕೆಂಪಿನಾಸೇವಂತಿಗೆಯ ನೇಮದಿಂದೀವ
ಸೊಂಪಿಬಿಜ್ಜಲದೇವಿ ಭವವ.... ೩೯
ಕೆಂಪುಳ್ಳಚಂಗಣಿಗಳಂ ಶಿವಂಗರ್ಪಿಸಿದ
ಸೊಂಪಿನಲ್ಲಮದೇವ ಭವವ.... ೪೦
ವರಕುಸುಮಗಳ ತಂದು ಲಿಂಗಕ್ಕೆ ಅರ್ಪಿಸುವೆ
ಶರಣಹೂವಿನಬಾಚ ಭವವ.... ೪೧
ಹರನಿಗಿಂಡೆಯನಿತ್ತು ಬೇಡಿದಿಂಡೆಯ ಪಡೆದ
ಪರಮಿಂಡೆಯಶಾಂತ ಭವವ.... ೪೨
ತನ್ನ ತೂಕದ ಧೂಪವನು ಲಿಂಗಕರ್ಪಿಸುವ
ಚನ್ನವೈಹಿಲದೇವ ಭವವ.... ೪೩
ಪನ್ನಗಧರಂಗೆ ತಾ ನಿತ್ಯ ಧೂಪವನೀವ
ಸನ್ನುತದ ಗೊಗ್ಗವ್ವೆ ಭವವ.... ೪೪
ಎಪ್ಪತ್ತುಲಿಂಗಕ್ಕೆ ಗುಗ್ಗುಳವನರ್ಪಿಸುವ
ಧೂಪದಾ ಮಂಚಣ್ಣ ಭವವ.... ೪೫
ದೋಷವಿಲ್ಲದೆ ತನುವ ಕೊರೆದುಕೊರೆದರ್ಪಿಸುವ
ಧೂಪದಾ ಮಾಚಯ್ಯ ಭವವ..... ೪೬
ಸಡಗರದಿ ನೀರಿಂದ ದೀಪವನು ಬೆಳಗಿದ
ಬಿಡದೆ ಕಡವಲನಂಬಿ ಭವವ.... ೪೭
ಒಡನೆ ಲಿಂಗಕೆ ಮುತ್ತಿನಾರತಿಯನರ್ಪಿಸಿದ
ದೃಢವುಳ್ಳ ಸೋಮಣ್ಣ ಭವವ.... ೪೮



ನಿತ್ಯ ಸಾವಿರದೀಪವನು ಲಿಂಗಕೆತ್ತಿಸಿ
ಸತ್ಯನಮಿತಂದೆಗಳೆ ಭವವ.... ೪೯
ನೆತ್ತಿಯಲಿ ದೀಪವನು ಶಿವಲಿಂಗಕೆತ್ತಿದಾ
ಕರ್ತು ಕಲಿಯಾರುಗಳೆ ಭವವ.... ೫೦
ಕರಕೆ ಬತ್ತಿಯ ಸುತ್ತಿ ಸುಲಿಂಗಕೆ ಬೆಳಗಿಸುವ
ಹರಲೆಂಕಮಂಚಣ್ಣ ಭವವ.... ೫೧
ಹರುಷದಿ ನೀರಾಜನವ ಲಿಂಗಕ್ಕೆ ಬೆಳಗುವ
ಶರಣ ಮಾಳಪ್ಪ ನೀ ಭವವ.... ೫೨
ಸವಿಯಾದ ಅಂಬಲಿಯ ಶಿವನಿಗುಣಿಸಿದ ಸತ್ಯ
ಭವರಹಿತ ಚನ್ನಯ್ಯ ಭವವ.... ೫೩
ಶಿವಗೆ ಪಂಚಾಮೃತವ ಬಿಡದುಣಿಸಿದನಿತ್ಯ
ತವೆ ಚೋಳರಾಯ ನೀ ಭವವ... ೫೪
ನೀಲಕಂಠಗೆ ಹಾಲಬಿಡದೆ ಕುಡಿಸಿದ ಚೆಲುವ
ಕೋಳೂರಕೊಡಗೂಸೆ ಭವವ... ೫೫
ಭಾಳಾಕ್ಷನಿಗೆ ಹುಗ್ಗಿಯನು ಉಣಿಸಿ ತಾ ನಲಿವ
ಚೋಳಕ್ಕೆ ಶರಣೆಂಬೆ ಭವವ... ೫೬
ಕರದೊಳಗೆ ಮೆರೆವ ಲಿಂಗಕ್ಕೆ ತುತ್ತನುಣಿಸಿದ
ಸುರಗಿಚೌಡಯ್ಯಗಳೆ ಭವವ... ೫೭
ಚರಿಗೆಯನು ಮಾಡುತಿರೆ ಬೋನ ಮೊದಲಾದುದನು
ಚರಕಿತ್ತ ವೈಜವ್ವೆ ಭವವ... ೫೮
ಪಥದಲಿ ಬರುವ ಲಿಂಗವ ಕಂಡು ಉಣಿಸಿರ್ದ
ವ್ರತಿ ಬಿಜ್ಜಮಹದೇವಿ ಭವವ.... ೫೯
ಸಿತಕಂಠನಿಗೆ ಬೆಲ್ಲದನ್ನವನು ಉಣಿಸಿದಾ
ನತಿಭೋಗಿದೇವಯ್ಯ ಭವವ.... ೬೦
ಸೋಮಧರ ಮಸ್ತಕಕೆ ಒಕ್ಕ ಬೋನವ ಒಟ್ಟ*
ಸೋಮಣ್ಣ ಶರಣೆಂಬೆ ಭವವ.... ೬೧

---

* ನಮಸ್ತಕ ಒಕ್ಕಬೋನವನು ಒಟ್ಟವ

ಪ್ರೀಯದೊಳು ಲಿಂಗಕ್ಕೆ ದಧ್ಯನ್ನ ಉಣಿಸುವಾ
ನೇಮದಾ ಮಲಿನಾಥ ಭವವ.... ೬೨
ಹರುಷದಿಂ ಶಿವಗೆ ಕರ್ಪುರ ವೀಳೆಯವ ಕೊಡುವ
ಶರಣೆ ಗಂಗಾದೇವಿ ಭವವ.... ೬೩
ಹರನ ವೀಳೆಯಕೆ ಕರ್ಪುರದ ಗುಳಿಗೆಯ ಕೊಡುವ
ಪರಮ ಸೋಮರಸಿ ನೀ ಭವವ... ೬೪
ಅಮರಲೋಕದ ಜವಳಿಗಳನು ಜಂಗಮಕಿತ್ತ
ಅಮರನೀತಿಗಳೆ ನೀ ಭವವ.... ೬೫
ಕ್ರಮದಿಂದ ನೆಯ್ದುವಸ್ತ್ರವ ಜಂಗಮಕಿತ್ತ
ಅಮರನೀ ಜಡೆದಾಸ ಭವವ.... ೬೬
ಪೊಡವಿಯೊಳು ಜಂಗಮಕೆ ವಸ್ತ್ರವನು ತೊಳೆದಿತ್ತ
ಮಡಿವಾಳ ಮಾಚಯ್ಯ ಭವವ.... ೬೭
ಮೃಡನ ಗಜಚರ್ಮವನು ಬಿಳಿದಾಗೆ ತೊಳೆದಿತ್ತ
ಮಡಿವಾಳ ಪುಲಿಯುಡುಪ ಭವವ... ೬೮
ಆಕಾಶಕೇಶನಿಗೆ ಧೂಪವನು ತಂದಿತ್ತ
ಚಾಕಲಾದೇವಿ ನೀ ಭವವ.... ೬೯
ರೇಕನಾಥಂಗೆ ತನ್ನ ಗಜಚರ್ಮವನಿತ್ತ
ಏಕಾಳಿ ಮಡಿವಾಳ ಭವವ.... ೭೦
ಕಂತುಹರನಿಗೆ ದಂಡಿಗೆಯ ಕೇಳಿಸುವ ಚೆಲುವ
ಬೊಂತಾಯಿ ಶರಣೆಂಬೆ ಭವವ.... ೭೧
ಸಂತತಂ ವಾಲಗದಿ ಮದ್ದಳೆಯ ಬಾರಿಸುವ
ಮುಂತೆ ಬಾಚಲದೇವಿ ಭವವ.... ೭೨
ಮಾರಾರಿ ವಾಲಗದಿ ಉಪ್ಪಂಗ ಊದುವಾ
ವೀರ ಶಿವದೇವಿಯರ ಭವವ.... ೭೩
ಆರೈದು ತಾಳವನು ವಾಲಗದೆ ಬಾರಿಸುವ
ನಾರಿ ಸಿದ್ಧಾದೇವಿ ಭವವ.... ೭೪
ಭಾವಜಾಂತಕಗೆ ನಾ ನೃತ್ಯವಾಡುವ ಚೆಲುವ
ಭಾವೆ ಮಹದೇವಿ (ನೀ) ಭವವ.... ೭೫



ದೇವನೋಲಗಕೆ ತಾ ಸಮ್ಮುಖದ
ಸೇವಕಾಂಗದ ಗೌರೆ ಭವವ.... ೭೬
ಪನ್ನಗಧರಂಗೆ ತಾ ಕಿನ್ನರಿಯ ಕೇಳಿಸುವ
ಕಿನ್ನರಿಯ ಬ್ರಹ್ಮಯ್ಯ ಭವವ.... ೭೭
ನಾಗಭೂಷಣಗೆ ತಾ ರಾಗವನು ಕೇಳಿಸುವ
ರಾಗದಾ ಸಂಕಯ್ಯ ಭವವ.... ೭೮
ನಾಗಾಜಿನಾಂಬರಗೆ ಧವಳವನು ಕೇಳಿಸುವ
ರಾಗದಲಿ ಪಾರ್ವತಿಯೆ ಭವವ.... ೭೯
ಅಕ್ಕರಿಂ ಶಿವಗೆ ತಾ ಕನ್ನಡಿಯ ತೋರಿಸುವ
ಲಕ್ಕಯ್ಯ ಶರಣೆಂಬೆ ಭವವ.... ೮೦
ಮುಕ್ಕಣ್ಣನಿಗೆ ಚೆಲುವ ದರ್ಪಣವ ತೋರಿಸುವ
ಚೊಕ್ಕ ಕಾಮಲದೇವಿ ಭವವ.... ೮೧
ಚಾಮರದ ಕಾಯಕವನನವರತ ಮಾಡುವಾ
ಪ್ರೇಮದೊಳು ಚಿಕ್ಕಯ್ಯ ಭವವ.... ೮೨
ನೇಮದಿಂ ಸತ್ತಿಗೆಯ ಕಾಯಕವ ಮಾಡುವಾ
ಚಾಮಯ್ಯ ಶರಣೆಂಬೆ ಭವವ... ೮೩
ಹರನ ಕಿವಿಗಿಂಪಾಗಿ ಚಂಗ ಕೇಳಿಸುತಿರುವ
ಶರಣೆ ಲಿಂಗಾದೇವಿ ಭವವ.... ೮೪
ಪರಶಿವಗೆ ಮೊಗಪಾವಡವನೀವ ಅತಿಚೆಲುವೆ
ಗರುವೆ ಕೇತಲದೇವಿ ಭವವ.... ೮೫
ಮಲಹರನ ಮುಂದೆ ತಾನುಗ್ಘಡಿಸಿಕೊಂಡಿರುವ
ಚಲುವ ವೀರಾದೇವಿ ಭವವ.... ೮೬
ಒಲವಿಂದ ಶಿವಗೆ ಸ್ತೋತ್ರವ ಮಾಡಿ ಮೆಚ್ಚಿಸುವ
ಸಲೆ ಬಾಣ ಮಯ್ಯೂರ ಭವವ.... ೮೭
ಹರನಿಗಿಂಪಾಗಿ ತಾ ಗಿರುಗಟೆಯ ಕೇಳಿಸುವ
ಗಿರುಗಟೆಯ ಶಾಂತಯ್ಯ ಭವವ.... ೮೮
ಶರಣರಿಗೆ ಗಿರುಗಟೆಯನೊಲವಿಂದ ಕೇಳಿಸುವ
ವರ ಸಿಗುರ ಚಂದಯ್ಯ ಭವವ.... ೮೯

ಅಘಹರನು ನಗದಿರಲು ನಗಿಸಿ ಕಾಯಕಗೊಂಡ
ನಗೆಯ ಮಾರಯ್ಯಗಳೆ ಭವವ.... ೯೦
ನಗೆಯ ಸ್ತೋತ್ರವಮಾಡಿ ನಗಿಸಿ ಕಾಯಕಗೊಂಡ
ನಗೆಯಕಡವರಕಾರಿ ಭವವ.... ೯೧
ಮಾರಾರಿಶರಣರನು ನುತಿಸಿ ಕಾಯಕಗೊಂಡ
ಆರೈದು ಕಲಕೇತ ಭವವ.... ೯೨
ಬೈರೂಪಣಿಯರುಗಳ ಕುಣಿದು ತಾನೊಲಿಸಿದಾ
ಬೈರೂಪಚೌಡಯ್ಯ ಭವವ.... ೯೩
ನಿಚ್ಚಮರೆವರ ಮನಕೆ ಶಿವತತ್ತ್ವವೆಚ್ಚರಿತ
ಎಚ್ಚರಿಕೆಮಾರಯ್ಯ ಭವವ.... ೯೪
ಅಚ್ಚರಿಯ ಶಿವಗಣಕೆ ಎಚ್ಚರಿಸುತಿಹ ಕೋಲ
ನಿಶ್ಚಲದ ಶಾಂತಯ್ಯ ಭವನ.... ೯೫
ಗುರುಡೊಂಬಿತಿಯ ಕೂಡ ಡೊಂಬರೆಲ್ಲರನೊಯಿದ
ಗುರುಭಕ್ತಭಿಲ್ಲಮನೆ ಭವವ.... ೯೬
ಹರಪುರಕೆ ತಾನಿರುವ ಏಳುಕೇರಿಯನೊಯಿದ
ಸಿರಿಯಾಳ ಚೆಂಗಳಯೆ ಭವವ.... ೯೭
ಬಾಲೆ ಜರೆಯಲು ತನ್ನ ಪುರವ ಶಿವಪುರಕೊಯಿದ
ಲೀಲೆಯಾ ಉದ್ಭಟನೆ ಭವವ.... ೯೮
ಕೈಲಾಸಪುರಕೆ ನವಪುರಂಗಳನು ಕೊಂಡೊಯಿದ
ಲೋಲಂ ಹಲಾಯುಧನೆ ಭವವ.... ೯೯
ಒಲವಿಂದ ಛತ್ತೀಸಪುರದ ಶಿವಪುರಕೊಯಿದ
ಸಲೆ ಸಾಮವೇದಿಗಳೆ ಭವವ.... ೧೦೦
ಇಳೆ ಏರೆ ನವಲಕ್ಷದೇಶವನು ಕೊಂಡೊಯಿದ
ಮಳೆಯರಾಜಯ್ಯಗಳೆ ಭವವ.... ೧೦೧
ವಸುಧೆಯೊಳು ಶಿವಭಕ್ತಿ ಬೀಜವನು ಬಿತ್ತಿದಾ
ಬಸವರಾಜಯ್ಯ ನೀ ಭವವ.... ೧೦೨
ಒಸೆದು ಷಡುಷ್ಥಲವ ಶರಣರಿಗೆಲ್ಲ ಬೋಧಿಸಿದ
ಅಸಮನಲ್ಲಮಪ್ರಭುವೆ ಭವವ.... ೧೦೩



ಕಕ್ಕಯ್ಯನವರ ಪ್ರಸಾದವೇ ರೂಪಾದ
ಚಿಕ್ಕಚನ್ನಣ್ಣ ನೀ ಭವವ.... ೧೦೪
ಸಿಕ್ಕಿ ಜೈನನ ಬಿಟ್ಟು ಮುಕ್ಕಣ್ಣನಂ ಬೆರೆದ
ಅಕ್ಕಮಹದೇವಿ (ನೀಂ) ಭವವ..... ೧೦೫
ಸರ್ಪಧರನೊಳು ತನ್ನ ತನುವೆರಸಿ ಬಯಲಾದ
ಅಪ್ಪಣ್ಣ ಶರಣೆಂಬೆ ಭವವ.... ೧೦೬
ಕರ್ಪುರದ ಜ್ಯೋತಿಯೊಲು ಲಿಂಗದೊಳು ಬಯಲಾದ
ಒಪ್ಪದಲಿ ನೀಲಮ್ಮ ಭವವ... ೧೦೭
ಧರೆಯ ಹೊಯ್ದರೆ ಕರವು ತಪ್ಪುವದೆ ಎಲೆ ಮನವೆ
ಗಿರಿಯನೆಚ್ಚರೆ ಸರವು ಹುಸಿವುದೇ ಎಲೆ ಮನವೆ ೧೦೮
ಶರಣಸ್ತೋತ್ರವ ಮಾಡುತಿರು ನೀನು ಎಲೆ ಮನವೆ
ಹರಿಸು ಭವ ಲಿಂಗಪದವಪ್ಪುವುದು ಎಲೆ ಮನವೆ ೧೦೯
ಶರಣಾರ್ಥಿ ಶರಣಾರ್ಥಿ ಶರಣಾರ್ಥಿ ಭಕ್ತರಿಗೆ
ಶರಣಾರ್ಥಿ ಶರಣಾರ್ಥಿ ಶರಣಾರ್ಥಿ ಭಕ್ತರಿಗೆ
ಶರಣಾರ್ಥಿ ಶರಣಾರ್ಥಿ ಶರಣು ಶಿವಗಣಗಳಿಗೆ ೧೧೦

॥ಕಂದ॥

ನೂರೆಂಟು ಶರಣನಾಮವ
ನಾರೈದು ಬರೆದು(ಂ)ಓದಿ ಪಠಿಸಿದವರ್ಗಂ
ಸೇರಿಸಿ ತನ್ನಯ ಪದವಿಯ
ವೋರಂತಿರೆ ಕೊಡುವನೀ ಷಡಾಕ್ಷರಲಿಂಗಂ

***ಶಿವಗಣಂಗಳ ರಗಳೆ ಸಮಾಪ್ತಂ ಮಂಗಳ***

# ಶಿವಶರಣ/ಶರಣೆಯರ ಸೂಚಿ


| | |
|---|---|
| ಅಕ್ಕಮಹಾದೇವಿ | ೧೦೫ |
| (ಅಗ್ಘಣಿ) ಹೊನ್ನಯ್ಯ | ೨೩ |
| ಅಪ್ಪಣ್ಣ (ಹಡಪದಪ್ಪಣ್ಣ) | ೧೦೬ |
| ಅಮರನೀತಿ | ೬೫ |
| ಅಲ್ಲಮದೇವ | ೪೦ |
| ಅಲ್ಲಮಪ್ರಭು | ೧೦೩ |
| ಇಂಡೆ ಬೊಮ್ಮಯ್ಯ | ೩೭ |
| ಇಂಡೆಯ ಶಾಂತ | ೪೨ |
| ಉದ್ಭಟ | ೯೮ |
| ಎಚ್ಚರಿಕೆ ಮಾರಯ್ಯ | ೯೪ |
| ಏಕಾಳಿ ಮಡಿವಾಳ | ೭೦ |
| ಐವಡಿ ಚೋಳ | ೧೭ |
| ಒಕ್ಕಲಿಗ ಮುದ್ದಯ್ಯ | ೧೯ |
| ಕಡವರ ಕಾರಿ | ೯೧ |
| ಕಡವಲ ನಂಬಿ | ೪೭ |
| ಕಲಕೇತ | ೯೨ |
| ಕಲ್ಲಯ್ಯ | ೩೮ |
| ಕಲಿನಾಥ | ೩೫ |
| ಕಾಮಲದೇವಿ | ೮೧ |
| ಕಿನ್ನರಿಬ್ರಹ್ಮಯ್ಯ | ೭೭ |
| ಕೇತಲದೇವಿ (ಮೊಗಪಾವಡದ) | ೮೫ |
| ಕೇತಲದೇವಿ (ರತ್ನದಕ್ಷತೆಯ) | ೩೨ |
| ಕೊಮಾರ ಬೊಮ್ಮಯ್ಯ | ೯ |
| ಕೋಲಶಾಂತಯ್ಯ | ೯೫ |
| ಕೋಳೂರಕೊಡಗೂಸು | ೫೫ |
| ಗಂಗಾದೇವಿ | ೬೩ |
| ಗಿರುಗಟೆಯ ಶಾಂತಯ್ಯ | ೮೮ |
| ಗುರುಭಕ್ತ (ಶೂಲದ) | ೧೩ |
| ಗುರುಭಕ್ತ (ಚರಣಕಡಿದ) | ೧೬ |
| ಗುರುಭಕ್ತಯಾಂಡಾರಿ | ೧೫ |
| ಗೂಗೆ ಗುರುಭಕ್ತ | ೧೪ |
| ಗೂಗ್ಗವ್ವೆ | ೪೪ |
| ಗೊಲ್ಲಾಳ | ೨೭ |
| ಗೌರೆ | ೭೬ |
| ಚಂಗಳೆ | ೬೭ |
| ಚಂಡೇಶ್ವರ | ೨೮ |
| ಚಾಕಲಾದೇವಿ | ೬೯ |
| ಚಾಮಯ್ಯ | ೮೩ |
| ಚಿಕ್ಕಚನ್ನಣ್ಣ(=ಚೆನ್ನಬಸವ) | ೧೦೪ |
| ಚಿಕ್ಕಯ್ಯ | ೮೨ |
| ಚೋಳಕ್ಕ | ೫೭ |
| ಚೋಳರಾಯ(=ಕರಿಕಾಲಚೋಳ) | ೫೪ |
| ಜಡೆದಾಸ | ೬೬ |
| ತಿರುಜ್ಞಾನ ಸಂಬಂಧಿ | ೩ |
| ತಿರುಮೂಲಯ್ಯ | ೨೯ |
| ದಾಸಯ್ಯ | ೭ |
| ದಾಸಯ್ಯ (=ದೇವರ ದಾಸಿ) | ೨೧ |
| ದಾಸವ್ವ | ೩೯ |
| (ದೀಪದ) ಕಲಿಯಾರು | ೫೦ |
| ದೇವಯ್ಯ | ೧೦ |
| ಧೂಪದಾ ಮಂಚಣ್ಣ | ೪೫ |
| ಧೂಪದಾ ಮಾಚಯ್ಯ | ೪೬ |
| ನಗೆಯ ಮಾರಯ್ಯ | ೯೦ |
| ನಮಿತಂದೆ | ೪೯ |
| ನಂಬೆಣ್ಣ | ೨೨ |
| ನಾಗೂರ ಬೊಮ್ಮಯ್ಯ | ೨೫ |
| ನಿಡುಗುಡಿಯ ಮಾರಯ್ಯ | ೮ |
| ನೀಲಮ್ಮ | ೧೦೭ |
| ಪಾರ್ವತಿ | ೭೯ |
| ಪುಲಿಯುಡುಪ | ೬೮ |





| | |
|---|---|
| ಪೋಚಲದೇವಿ | ೨೬ |
| ಬಸವರಾಜಯ್ಯ | ೧೦೨ |
| (ಬಳ್ಳೇಶ) ಮಲ್ಲಯ್ಯ | ೨೦ |
| ಬಾಚಲದೇವಿ | ೭೨ |
| ಬಾಣ | ೮೭ |
| ಬಿಜ್ಜಮಹಾದೇವಿ | ೫೯ |
| ಬಿಜ್ಜಲದೇವಿ | ೩೯ |
| ಬಿಬ್ಬಿಬಾಚಯ್ಯ | ೧೧ |
| ಬೈರೂಪಚೌಡಯ್ಯ | ೯೩ |
| ಬೊಪ್ಪಿದೇವಯ್ಯ | ೨೪ |
| ಬೊಂತಾಯಿ | ೭೧ |
| ಭಿಲ್ಲಮ | ೯೬ |
| ಭೋಗಿದೇವಯ್ಯ | ೬೦ |
| ಮಡಿವಾಳಮಾಚಯ್ಯ | ೬೭ |
| ಮಯೂರ | ೮೭ |
| ಮಲಿನಾಥ | ೬೨ |
| ಮಹದೇವಿ | ೭೫ |
| ಮಳೆಯರಾಜ | ೧೦೧ |
| ಮಾಚಲದೇವಿ | ೩೧ |
| (ಮಾದಾರ) ಚನ್ನಯ್ಯ | ೫೩ |
| ಮಾರುಡಿಗೆ ನಾಚಯ್ಯ | ೫ |
| ಮಾಳಪ್ಪ | ೫೨ |
| ರಾಗದ ಸಂಕಣ್ಣ | ೭೮ |
| ರೇಕವ್ವೆ | ೩೩ |
| ರೇಮಯ್ಯ | ೧೦ |
| ಲಕ್ಕಯ್ಯ | ೮೦ |
| ಲಿಂಗಾದೇವಿ | ೮೪ |
| ಲೆಂಕಮಂಚಣ್ಣ | ೫೧ |
| ವಲಘಾಂಡಯ್ಯ | ೩೦ |
| ವಾಗೀಶಯ್ಯ | ೬ |
| ವಿಕ್ರಮಚೋಳ | ೧೮ |
| (ವೀರ) ಶಿವದೇವಿ | ೭೩ |
| ವೀರಾದೇವಿ | ೮೯ |
| ವೈಜವ್ವೆ | ೫೮ |
| ವೈಹಿಲದೇವ (=ಓಹಿಲ) | ೪೩ |
| ಶಂಕಯ್ಯ | ೩೪ |
| ಶಂಕರದಾಸ | ೧೨ |
| ಸಾಮವೇದಿ | ೧೦೦ |
| ಸಿಗುರ ಚಂದಯ್ಯ | ೮೯ |
| ಸಿದ್ಧಾದೇವಿ | ೭೪ |
| ಸಿರಿಯಾಳ | ೯೭ |
| ಸುಗ್ಗಲದೇವಿ | ೪ |
| ಸುರಗಿ ಚೌಡಯ್ಯ | ೫೭ |
| ಸೋಮಣ್ಣ (ಬೋನದ) | ೬೧ |
| ಸೋಮಣ್ಣ | ೪೮ |
| ಸೋಮರಸಿ | ೬೪ |
| ಹಲಾಯುಧ | ೯೯ |
| ಹೂವಿನ ಬಾಚ | ೪೧ |

## ಪದಗಳ ಅಕಾರಾದಿ


ಅಂಗಜಾರಿಗೆ ಮೆಚ್ಚಿ ಮರುಳಾಗಂಗಭಾವವ ತೊರೆದು ೧೧೭
ಅಂದಿನವರಿಗಿಂದಿನವರು ಹೊಂದಿ ಹೋಲಲರಿಯರೆಂಬ ೫೭
ಆವ ಪರಿಯಲಿ ತಿಳಿಯಬಾರದು ೧೨೨
ಇಂದ್ರಿಯಂಗಳಿಚ್ಛೆಗಳಿಗೆ ಮುಂದುವರಿದು ಮನವು ೪೮
ಎಂತ ಕನಸ ಕಂಡೆ ಸಖಿಯೆ ೧೯೪
ಎಂದಿಗಹುದೋ ನಿಮ್ಮ ನೆನಹು ೧೨೯
ಎಂದಿಗೆ ದೊರಕುವದನವರತಭವನನಂದದಿ ಪೂಜಿಪ ೧೩೩
ಎಡರು ಕಂಟಕಗಳು ಬಂದು ತೊಡರಿ ಕಾಡುವಲ್ಲಿ ೫೨
ಎನಗೆ ನಿಮ್ಮನೆ ನೆನೆವ ಮನವನೇ ಬಯಸುವೆನು ೭
ಎನಗೆ ಭೋಗ ಭಾಗ್ಯ ಬೇಡ ೮೩
ಎನಿಸನೋದಿ ಫಲವದೇನು ೬೫
ಎನ್ನ ಆಳ್ದ ಇಷ್ಟಲಿಂಗ ೧೭೦
ಎನ್ನ ಏಕೆ ಕಾಯಲೊಲ್ಲೆ ೧೭೪
ಎನ್ನ ಕರದೊಳಗಿದ್ದು ಎನ್ನೊಳು ನುಡಿಯನು ೧೫೨
ಎನ್ನ ಕಾಯವು ನಿನಗೆ ಉನ್ನತಾಲಯವಾಯಿತು ೨೦
ಎನ್ನಪರಾಧವ ನೋಡದೆ ರಕ್ಷಿಸು ೧೪೩
ಎನ್ನ ಸರ್ವಾಂಗವನು ನಿನ್ನ ಪರಿಣಾಮಕ್ಕೆ ೨೬
ಎಲ್ಲ ವರಗಳ ಕೊಡುವ ದೇವನು ೧೧೩
ಎಲ್ಲವು ತಾನು ತಾನಲ್ಲದೆ ಬೇರಿಲ್ಲ ೧೯೭
ಎಲ್ಲ ಶರಣರ ನೆನೆದು ಇಲ್ಲಿ ನಾ ೩೩
ಎಳೆ ಮುತ್ತಿನ ನವರತ್ನದ ೧೬೮
ಏಕೆ ಬಯಲು ಭ್ರಾಂತು ನಿನಗೆ ೯೩
ಏನು ಮಾಡಲಯ್ಯ ಎನ್ನ ಹೀನ ಮನದ ಬಯಕೆಗಳನು ೧೦೧
ಒಡಲುವಿಡಿದ ಜಡನು ನಾನು ೧೩೧
ಒಲಿದ ಲಲನೆಯನಗಲುವದು ೧೨೭
ಕಂಗೆಡಲೇತಕೆ ಕಳವಳಿಸಿಯೆ ೧೩೫





ಕರುಣವಾರಿಧಿ ಶಿವನು ಎನುತಲಿ ೧೨೫
ಕಾಡಲೇಕೆ ನರರುಗಳನು ೧೦೩
ಕಾಯ ಮಾಯ ಜಾಯವೆಂದು ೭೯
ಕಾಯ್ಯೆ ಕಾಯ್ಯೆ ಕರುಣದಿ ೧೫೮
ಕೊಟ್ಟು ಹುಟ್ಟಿ ಪಡೆಯಲಿಲ್ಲ ೧೮೩
ಗುರುವೆ ಎನಗೆ ಮೋಕ್ಷಮಾರ್ಗದಿರವು ೧೮೫
ಘನಮಹಿಮ ಲಿಂಗವೆ ೨೨
ಚಂದ್ರಧರನಿಗೊಲಿಯದಿರ್ಪ ಇಂದ್ರಿಯಗಳ ೮೧
ಡಿಂಭದೊಳಗೆ ಒಂದು ಪ್ರಾಣ ೮೫
ತಂದು ತೋರೆ ಎನ್ನ ಮನ ಘನಪ್ರಿಯನ ೧೬೨
ತನುವಿಡಿದ ದುಷ್ಕೃತವನೆನಿತೆನಲು ಪೇಳುವೆನು ೧೨
ತನುವಿನಾಗುಣವು ನಿಮ್ಮನು ನೆನೆಯಲೀಯದಲೆ ೩೫
ತಪವ ವಿದ್ಯೆ ಸಾಸಯೋಜ ಜಪವ ೫೫
ತಾನೆಂದರಿಯದೆ ಇದಿರೆಂದರಿಯದೆ ೧೪೦
ದೇವತ್ವವೆಂಬುದದಾವುದೆಂದರಿಯರು ೧೫೧
ದೇವ ನಿಮ್ಮ ರೂಪಿನವರು ಆವ ಪರಿಯ ನಟಿಸುತಿರಲು ೯೫
ದೇವ ನೀನು ರಕ್ಷಿಸಲ್ಪಜೀವಿ ನಾನು ೧೦೭
ಧರೆಯತ್ತ ಎನ್ನುವವನು ಬರಿಸದಿರು ಸದ್ಗುರುವೆ ೧೪
ಧರೆಯ ಭೋಗದಸ್ಥಿರವನು ಅರಿವ ಹಾಗೆ ಪೇಳ್ವೆ ೭೧
ಧರೆಯ ಭೋಗವನ್ನು ಮೆಚ್ಚಿ ಹರನ ಮರೆದು ೭೬
ಧರೆಯ ಸುಖದ ಭೋಗವೆನಗೆ ಹರಿದುಹೋಗಲಯ್ಯ ೬೧
ಧರೆಯೊಳುಳ್ಳ ತನುವ ಧರಿಸಿ ಗಿರಿಯು ಶರಧಿ ೬೭
ಧಾರುಣಿಯನು ತಿರುಗುವರ್‍ಯಸೆ ೧೫೭
ನಮ್ಮ ದೇಶಕೆ ಹೋಹದಿನ ಬಂತು ೧೫೯
ನಮ್ಮ ಮನೆ ಕೇಳಕ್ಕ ೧೬
ನಾನು ಒಲಿದು ಫಲವದೇನು ನೀನು ಒಲಿಯದನಕ ೮೯
ನಿನ್ನ ರೂಪಿನವರು ಬಂದು ಎನ್ನ ಬಿಡದೆ ನೋಯಿಸಲು ೭೪
ಪನ್ನಗೇಂದ್ರಾಭರಣ ಕೇಳು ನಿನ್ನ ವಿಕಳವಸ್ಥೆಯಲ್ಲಿ ೯೧
ಪುಣ್ಯ ತೀರ್ಥ ಪುಣ್ಯಕ್ಷೇತ್ರ ಪುಣ್ಯ ಶೈಲದಲ್ಲಿ ೬೩
ಬಂದನು ಮರ್ತ್ಯಕಿನ್ನುದ್ಧಾರವನು ಮಾಳ್ಪ ೧೫೬

ಭಜತಿಯರರೆ ವಿಷ್ಣು ವಾಯು ಅಬ್ಜಜಾತ ೫೦
ಭವಕಾಟಕಾರದಲೆ ಶಿವಶರಣರ ಮನೆಯ ೨೪
ಮಗಳೆ ಎನ್ನಯ ಮಾತು ಮಿಗೆ ಕೇಳು ೩೮
ಮಾಯೆ ನೀನತಿಚೆಲುವೆ ೧೮
ಮಿಥ್ಯವನ್ನು ಅಳಿದು ಸಹಜ ಸತ್ಯವುಳ್ಳ ಶರಣರಲ್ಲಿ ೧೭೮
ಮುದದಿ ಶರಣರುಗಳ ನುಡಿಗೆ ಇದಿರ ನುಡಿಯ ೪೬
ಮುನ್ನ ನಮ್ಮ ಶರಣರುಗಳು ನಿನ್ನ ಕಾಡಿದುದಕೆ ೯೭
ಮೋಹವಿಲ್ಲದ ಪೂಜೆಯೆನಿಸುಕಾಲ ೧೫೪
ಯುಗವನಂತವು ಹೋಗುತಿರುತಿಹವು ೧೪೮
ಲಿಂಗದಲ್ಲಿ ಮನವ ಬೆರೆಸಿದಂಗೆ ಕಿರಿದು ಹಿರಿದು ಇಲ್ಲ ೮೭
ಲಿಂಗವಂಗದಲ್ಲಿ ಇರಲು ಲಿಂಗವೆಂದು ಕಾಂಬ ೧೦೯
ಲೋಕದವರ ಭಕ್ತಿಯುಕ್ತಿ ಸಾಕು ಸೊಗಸದೆನಗೆ ೫೯
ವಿರತಿ–ವಿರತಿ ಎಂಬರಯ್ಯ ವಿರತಿ ಸುಲಭವಲ್ಲವಯ್ಯ ೧೦೫
ಶಿವನ ಪೂಜೆ ಮಾಡು ಮನವೆ ೧೯೬
ಶಿವನ ಪೂಜೆಯನ್ನು ಮಾಡು ೧೮೦
ಶಿವನೊಳಗೆ ವಿಶ್ವಾಸ ೨೯
ಶಿವಲಿಂಗವ ಹೃತ್ಪಿಂಡದ ಮಧ್ಯದಿ ೧೩೭
ಶಿವಶರಣರಾ ಮನೆಯ ತವೆ ಸೇವೆಯನು ೪೧
ಸಂಪಿಗೆ ಹೂವಿನ ಕಂಬವು ೧೬೬
ಸಕಲಕೆಲ್ಲಕೆ ನೀನೆ ಅಕಳಂಕ ಗುರು ೧
ಸಿರಿಯು ಸಂಪದಗಳನ್ನಿತ್ತು ೧೭೬
ಸೆರಗನೊಡ್ಡಿ ಬೇಡಿಕೊಂಬೆನು ೧೬೦
ಹರನೆ ನಾ ನಿಮ್ಮಲ್ಲಿ ವರವ ಬೇಡುವೆನೊಂದು ೩೧
ಹಲವು ವಿದ್ಯೆ ಹಲವು ಶಾಸ್ತ್ರ ೬೯
ಹಾಡಿದವರಿಗೆ ಬೈದಡವರಿಗೆ ೧೨೦
ಹಾರು ಕಂಡ್ಯಾ ಹಂಸ ಹಾರು ಕಂಡ್ಯಾ ೧೬೫
ಹುಲಿಯ ಕರಡಿ ಕರಿಯ ಫಣಿಯ ಬಲುಹಿನಿಂದಲಾಳ್ವರುಂಟು ೯೯
ಹೆಮ್ಮಗಳು ನಾ ನಿಮ್ಮ ನೆಮ್ಮಿಕೊಂಡಿರುವೆನ್ನೈ ೩
ಹೇವಗೈಯಾ ಎನ್ನ ಮನೋಭಾವದೊಳಗೆ ೧೭೨
ಹೇವವನಿಕ್ಕಲಾರೆ ಲಿಂಗವೆ ನಾನು ೧೬೩




# ಕಠಿಣ ಶಬ್ದಕೋಶ

ಅಂಗಜಾರಿ–ಮನ್ಮಥವೈರಿ, ಶಿವ
ಅಂಡಜ–ಮೊಟ್ಟೆಯಿಂದ ಹುಟ್ಟಿದವು
ಅಂದಣ–ಪಲ್ಲಕ್ಕಿ
ಅಂಬಕಳ–ಅಂಬಲಿ, ಗಂಜಿ
ಅಂಬರ–ಆಕಾಶ
ಅಂಬುರುಹ–ಕಮಲ
ಅಕಳಂಕ–ಕಳಂಕರಹಿತ, ನಿರ್ಮಲ
ಅಕ್ಷಮಾಲೆ–ಜಪಮಾಲೆ
ಅಕ್ಷಿ–ಕಣ್ಣು
ಅಗುಳು–ಅಗೆ, ತೋಡು
ಅಗ್ಗಣಿ–ಪೂಜೆಯ ನೀರು
ಅಘ–ಪಾಪ, ದುಃಖ
ಅಡಗು–ಮಾಂಸ
ಅಡರು–ಹತ್ತು, ಆಕ್ರಮಿಸು
ಅಣಿಮಾದಿ ಅಷ್ಟಸಿದ್ಧಿಗಳು–
ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ವಶಿತ್ವ, ಈಶತ್ವ–ಎಂಬ ಎಂಟು ಬಗೆಯ ಸಿದ್ಧಿಗಳು
ಅಧರ–ತುಟಿ
ಅಪ್ಪದಪ್ಪದದು–ಆಗುವುದು ಆಗದಿರುವುದು
ಅಭ್ರ–ಮೋಡ
ಅರಳು–ಹೂವು
ಅರಳಮಂಚ–ಹೂವಿನ ಮಂಚ
ಅರಿ–ಶತ್ರು
ಅರಿವೆ(ಅರುವೆ)–ಬಟ್ಟೆ
ಅರುಹು–ತಿಳಿಸು
ಅರ್ಕ–ಸೂರ್ಯ
ಅರ್ತಿ–ಆಶೆ, ಪ್ರೇಮ
ಅಲಗು–ಕತ್ತಿ
ಅಶನ–ಆಹಾರ
ಅಸಿ–ಖಡ್ಗ
ಅಸು–ಪ್ರಾಣ
ಅಸ್ಥಿ–ಮೂಳೆ
ಅಳಲು–ದುಃಖ
ಆಣ್ಮ–ಒಡೆಯ
ಆತಪತ್ರ–ಛತ್ರಿ, ಕೊಡೆ
ಆದ್ಯರು–ಪೂಜ್ಯರು, ಹಿರಿಯ ಶರಣರು
ಆರ್–ಸಮರ್ಥವಾಗು
ಆರಯ್–ಹುಡುಕು, ವಿಚಾರಿಸು
ಆರಡಿ–ಕುಹಕತನ, ದುಂಬಿ
ಆಲಿ–ಕಣ್ಣು, ಕಣ್ಣುಗುಡ್ಡೆ
ಆವಗಂ–ಯಾವಾಗಲೂ
ಆಸರು–ಬೇಸರಗೊಳ್ಳು, ಬಳಲು
ಇನ–ಸೂರ್ಯ
ಇರುಳು–ರಾತ್ರಿ
ಉಂಡಿಗೆ–ಮುದ್ರೆ, ಮೊಹರು
ಉಡುಪಧರ–ಚಂದ್ರಶೇಖರ, ಶಿವ
ಉದಕ–ನೀರು

ಉಮ್ಮಳ–ದುಃಖ
ಉರಗ–ಹಾವು
ಉರ್ವಿಪತಿ–ರಾಜ
ಊಣೆಯ–ಕುಂದು, ಕೊರತೆ
ಊನ–ಅಂಗಹೀನ, ಕುಂದು, ನ್ಯೂನತೆ
ಎಡರು–ಅಡ್ಡಿ, ತೊಂದರೆ
ಎರಳೆ–ಜಿಂಕೆ
ಏಡಿಸು (ಏಳಿಸು)– ನಿಂದಿಸು
ಏಣಾಂಕಧರ–ಚಂದ್ರಧರ, ಶಿವ
ಏಳುವಾರಿಧಿಗಳು–ಸಪ್ತಸಾಗರಗಳು
 ಲವಣ, ಇಕ್ಷು, ಸುರಾ, ಘೃತ,
 ದುಗ್ಧ, ದಧಿ, ಜಲ
ಒಬ್ಬುಳಿ–ರಾಶಿ, ಗುಂಪು
ಓಗರ–ಅನ್ನ
ಓಡು–ಹೆಂಚು, ಮಡಕೆಯ ಚೂರು
 ತಲೆಬುರುಡೆ
ಓಸರಿಸು–ಓರೆಯಾಗು, ಬಯಸು
ಔದುಂಬರ–ಅತ್ತಿಯ ಮರ
ಕಂತುಹರ–ಮನ್ಮಥವೈರಿ, ಶಿವ
ಕಂದಮೂಲ–ಗಡ್ಡೆಗೆಣಸು
ಕಕುಭ–ದಿಕ್ಕು
ಕಟಿ–ಸೊಂಟ
ಕಪಡ–ಬಟ್ಟೆ
ಕರಣ–ಇಂದ್ರಿಯ
ಕರಿ–ಆನೆ
ಕರುಬು–ಅಸೂಯೆಪಡು
ಕರುಮಾಡ–ಉಪ್ಪರಿಗೆಮನೆ
ಕಾಕ–ದುಷ್ಟ, ನೀಚ
ಕಾಮಿನಿ–ಸ್ತ್ರೀ, ಸುಂದರಿ

ಕಾಳುನುಡಿ–ಕೀಳುಮಾತು,
 ಗೊಡ್ಡುಹರಟೆ
ಕಿಂಕರ–ಸೇವಕ
ಕಿಸುಕುಳ–ಹೊಲಸು, ಪಾಪ
ಕೀರ–ಗಿಳಿ
ಕೀಲು–ಕೊಟ್ಟಿಗೆ
ಕುಂಭಿನಿ–ಭೂಮಿ
ಕುರುಪಿಡು–ಗುರುತುಮಾಡು
ಕೂಪ–ಬಾವಿ
ಕೆರ–ಮೆಟ್ಟು, ಎಕ್ಕಡ, ಪಾದರಕ್ಷೆ
ಕೇಣಸರ–ಹೊಟ್ಟೆಕಿಚ್ಚು, ಕೋಪ
ಕೊಂಗು–ವಕ್ರ, ಕೊಂಕು
ಕೊಡತಿ–ಮರದ ಸುತ್ತಿಗೆ
ಕೊರಚಾಟ–ಮೂದಲಿಕೆ, ಅಣಕ
ಕೊಸರು–ಚೌಕಾಶಿ, ಅತ್ಯಾಸೆ
ಕೋಟಲೆ–ಕಾಟ, ತೊಂದರೆ
ಕೋಳ–ಬೇಡಿ, ಸಂಕೋಲೆ
ಕೋಳಹೋಗು–ಕೊಳ್ಳೆ
 ಹೋಗು, ಬಲಿಯಾಗು
ಕ್ರಮುಕ–ಅಡಿಕೆ
ಕ್ಷಿತಿ–ಭೂಮಿ
ಕ್ಷುಧೆ–ಹಸಿವು
ಕ್ಷೋಣೀಶ–ರಾಜ, ಭೂಪತಿ
ಖದ್ಯೋತ–ಸೂರ್ಯ
ಖುಲ್ಲತನ–ನೀಚತನ, ಅಲ್ಪತನ
ಖೂಳ–ಮೂರ್ಖ
ಗಣರಾಯ–ಗಣಪತಿ
ಗದ್ಗದ–ಧ್ವನಿಯ ನಡುಕ,
 ಕಂಠ ಬಿಗಿಯುವಿಕೆ



ಗಮ್ಮನೆ–ಬೇಗನೆ
ಗರಳ–ವಿಷ
ಗರುವ–ಶ್ರೇಷ್ಠ
ಗಿರಿ–ಪರ್ವತ, ಬೆಟ್ಟ
ಗುಪಿತ–ಗುಪ್ತ, ಗುಟ್ಟಾದ
ಗುಹ–ಷಣ್ಮುಖ
ಗೊಂದಣ–ಗುಂಪು, ಗೊಂದಲ
ಗೊಡ್ಡಾವು–ಬಂಜೆ ಹಸು
ಘಾಸಿ–ತೊಂದರೆ, ಆಯಾಸ
ಚಟಿಕೆ–ಮಣ್ಣಿನ ಪಾತ್ರೆ, ಗಾಜಿನ ಚೂರು
ಚರ–ಚಲಿಸುವವನು, ಜಂಗಮ
ಚುನ್ನವಾಡು–ಚುಚ್ಚುಮಾತನ್ನಾಡು,
 ಅಣಕಿಸು
ಚುಳುಕು–ಅತಿಸೂಕ್ಷ್ಮ,
 ತೀರ ಸಣ್ಣ ರೂಪ
ಜಂಝಾವಾತ–ಬಿರುಗಾಳಿ
ಜಗಳು–ಜಗಿ, ಅಗಿ,
 ಬಾಯಲ್ಲಿ ನುರಿಸು
ಜಡಜಸಖ–ಕಮಲಮಿತ್ರ, ಸೂರ್ಯ
ಜವಳಿಗದ–ಜೋಡಿ ಕದ
ಜರಾಯುಜ–ಗರ್ಭಕೋಶದಿಂದ
 ಉದಿಸಿಬಂದವು, ಪ್ರಾಣಿಗಳು
ಜಾತಿ–ಜಾಜಿ
ಜಾಯೆ–ಹೆಂಡತಿ
ಜಾರ–ವ್ಯಭಿಚಾರಿ
ಜಾರು–ಕಣ್ಣಿನ ಪಿಸುರೆ
ಜಾವಳ–ಸಾಮಾನ್ಯ ವ್ಯಕ್ತಿ, ನಾಡಾಡಿ
ಜಾಳಿಗೆ–ಸಮೂಹ, ಜಾಳ
ಜಾಳೇಂದ್ರ–ಜಾಳಂಧ್ರ, ಗವಾಕ್ಷಿ

ಜಿನುಗು–ಕರಗು, ನೀರಾಗು
ಜಿಹ್ವೆ–ನಾಲಿಗೆ
ಡಂಬಕ–ಮೋಸ
ಡಿಂಭ–ದೇಹ, ಶರೀರ
ಡೋಣಿ (ಡೊಣೆ)–ನೀರಿನ ತಗ್ಗು
ಢಾಳಕ–ಹೊಳಪು, ಪ್ರಕಾಶ,
 ರಂಜಕ
ತಂಡುಲ–ಅಕ್ಕಿ
ತಂಬುಲ–ತಾಂಬೂಲ
ತನು–ಶರೀರ
ತರಣಿ–ಸೂರ್ಯ
ತರು–ವೃಕ್ಷ, ಮರ
ತರುಬು–ಅಡ್ಡಗಟ್ಟು, ನಿಲ್ಲಿಸು
ತವಕಿ–ಅತಿಯಾಸೆಪಡುವವ
ತವನಿಧಿ–ಎಂದೂ ಅಳಿಯದ ನಿಧಿ
ತಳಮಗಂಗಳು–ಚಂಚಲ ಕಣ್ಣುಗಳು
ತಳಿತ–ಚಿಗುರಿದ
ತಳ್ಳಿ–ನಿಂದೆ
ತಿಂಗಳು–ಚಂದ್ರ
ತಿಂಥಿಣಿ–ಸಮೂಹ, ಗುಂಪು
ತಿಟ್ಟು–ದಿನ್ನೆ, ತೆವರು
ತಿಣ್ಣನೆ–ಬಿಗಿಯಾಗಿ, ತೀವ್ರವಾಗಿ
ತಿಮಿರ–ಕತ್ತಲೆ
ತೀವು–ತುಂಬು
ತುರುಗಯಾಗ–ಅಶ್ವಮೇಧಯಾಗ
ತುರುಗಾಹಿ–ದನಕಾಯುವವ
ತೃಷೆ–ಬಾಯಾರಿಕೆ
ತೊಂಡ–ಸೇವಕ
ತೊಡರಿಸು–ಸೇರಿಸು

ತೊಡರು–ಅಡ್ಡಿ, ಬಂಧನ
ತೊತ್ತು–ಸೇವಕ
ತೋಯ–ನೀರು
ತೋರ–ದಪ್ಪ, ದೊಡ್ಡ
ತ್ವಕ್ಕು–ಚರ್ಮ
ದನುಜ–ರಾಕ್ಷಸ, ದೈತ್ಯ
ದಮ–ಇಂದ್ರಿಯ ನಿಗ್ರಹ
ದರ್ಪಕಮರ್ದನ–ಮನ್ಮಥಧ್ವಂಸಿ, ಶಿವ
ದಶದವಸ್ಥೆ–ವಿರಹದ ಒಂದು ಅವಸ್ಥೆ
ದಸಿ–ಚೂಪಾದ ಗೂಟ
ದಿವಿ–ಸ್ವರ್ಗ, ಆಕಾಶ
ದುಪಟಿ–ಹೊದೆಯುವ ವಸ್ತು
ದುರಿತ–ಪಾಪ
ದ್ಯುಮಣಿ–ಸೂರ್ಯ
ದೃಷ್ಟ–ನೋಡಿದ, ಅನುಭವಕ್ಕೆ ಬಂದ
ಧರೆ–ಭೂಮಿ, ನೆಲ
ಧರ್ಮಶಾಲೆ–ಛತ್ರ
ಧಾರುಣಿ–ಭೂಮಂಡಲ
ನತ–ಬಾಗು
ನವಚಕ್ರ–ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಸಹಸ್ರಾರ, ಶಿಖಾ, ಪಶ್ಚಿಮ
ನಾಸಾಪುಟ–ಮೂಗಿನ ಹೊಳ್ಳೆ
ನಿಟಿಲನೇತ್ರ–ಹಣೆಗಣ್ಣ, ಶಿವ
ನಿರಯ–ನರಕ
ನಿರ್ವಾಣ–ಮೋಕ್ಷ, ಶೂನ್ಯ
ನಿಶಿತ–ಹರಿತ, ತೀಕ್ಷ್ಣ
ನೆಗಹು–ಮೇಲಕ್ಕೆತ್ತು
ನೆಗಳು–ಪ್ರಸಿದ್ಧಿಪಡೆ
ನೆಮ್ಮು–ನಂಬು, ವಿಶ್ವಾಸವಿಡು
ನೆರೆ–ಗುಂಪು ಸೇರು, ಸಮೀಪ
ನೆಲ್ಲು–ಬತ್ತ
ನೇಣು–ಹಗ್ಗ
ನೇವುಳ–ಕಂಠಹಾರ
ಪಡಿಗ–ಉಗುಳುವ ಪಾತ್ರೆ, ಪೀಕದಾನಿ
ಪಥ–ದಾರಿ
ಪದುಳ–ಸೌಖ್ಯ, ಕ್ಷೇಮ
ಪದಪು–ಪ್ರೀತಿ
ಪನ್ನಗರಾಜ–ಆದಿಶೇಷ
ಪರಡಿ–ಪಾಯಸ
ಪರಿಣಾಮ–ಕಾರ್ಯದ ಫಲ, ಸಂತೋಷ
ಪರುಷ–ಸ್ಪರ್ಶಮಣಿ, ಹರುಷ
ಪರ್ಣಶಾಲೆ–ಎಲೆಮನೆ
ಪವಿ–ವಜ್ರಾಯುಧ, ಸಿಡಿಲು
ಪಾಟಲವೃಕ್ಷ–ಪಾದರಿಮರ
ಪಾತಕ–ಪಾಪ, ದೋಷ
ಪಾಶ–ಹಗ್ಗ
ಪಾಸುಗೆ–ಹಾಸುಗೆ, ಮೆತ್ತೆ
ಪಿಕ–ಕೋಗಿಲೆ
ಪುಗಳವೇಳು–ಗುಳ್ಳೆಏಳು
ಪುಳಕ–ರೋಮಾಂಚನ
ಪುಳಿನ–ಮರಳು
ಪೊಲಬು–ಹೊಲಬು, ದಾರಿ
ಪ್ರವಾಳ–ಹವಳ
ಫಣಿ–ಹಾವು
ಫುಲ್ಲವಿಶಿಖ(ಫುಲ್ಲಶರ)–ಮನ್ಮಥ



ಬಟ್ಟೆ–ದಾರಿ, ಮಾರ್ಗ
ಬನ್ನ–ಕಷ್ಟ, ತೊಂದರೆ, ಭಂಗ
ಬಿಂಬಫಲ–ತೊಂಡೆಹಣ್ಣು
ಬಿದಿರು–ಚೆಲ್ಲಾಡು, ಹರಡು
ಬಿನುಗು–ಹೀನ, ಕ್ಷುದ್ರ
ಬಿಸರುಹ–ಕಮಲ
ಬೀಜಜ–ಬೀಜಗಳಿಂದ ಹುಟ್ಟಿದವು, ಗಿಡಮರಗಳು
ಬೆಂಚಿ–ಕೊಳ, ಕುಂಟೆ
ಬೆಗಡು–ಆಶ್ಚರ್ಯ, ಭಯ
ಬೋನ–ಅನ್ನ, ಊಟ
ಭಗಣ–ನಕ್ಷತ್ರ
ಭವ–ಹುಟ್ಟು, ಜನ್ಮ
ಭಾಳನೇತ್ರ–ಹಣೆಗಣ್ಣ, ಶಿವ
ಭೂತನಾಥ–ಭೂತಗಣಗಳ ಒಡೆಯ, ಶಿವ
ಭೃತ್ಯ–ಸೇವಕ
ಭೈತ್ರ–ಹಡಗು
ಮಕರಧ್ವಜ–ಮನ್ಮಥ
ಮಖಶಾಲೆ–ಯಾಗಶಾಲೆ
ಮದನಕ್ಕೆ–ಕಂಬದಬೋದಿಗೆ
ಮನಸಿಜಾರಿ–ಶಿವ
ಮಲತ್ರಯ–ಆಣವ, ಮಾಯಾ, ಕಾರ್ಮಿಕ ಎಂಬ ಮೂರು ಕೊಳೆಗಳು
ಮಲಹರ–ಶಿವ
ಮಾಘ–ಒಬ್ಬ ಸಂಸ್ಕೃತ ಕವಿ, ಶಿಶುಪಾಲವಧ ಕರ್ತೃ
ಮಾತುಳಂಗ–ಮಾದಲ ಹಣ್ಣು
ಮಾರಾರಿ–ಮನ್ಮಥವೈರಿ, ಶಿವ
ಮಿಥ್ಯ–ಸುಳ್ಳು
ಮಿನ್ನುತಿಹ–ಮಿನುಗುತಿಹ
ಮುಕುಟ–ಕಿರೀಟ
ಮುಂಡು–ಮುಂಡ, ತಲೆಯಿಲ್ಲದ ದೇಹ
ಮುಡುಬ–ಅಂಗಹೀನ, ಅಂಗವಿಕಲ
ಮೊಟ್ಟೆ–ಗಂಟು, ಮೂಟೆ, ಹೊರೆ
ರಗಟೆ–ಹರಕು ಬಟ್ಟೆ, ಚಿಂದಿ
ರಚ್ಚೆ–ರಂಪ, ರಗಳೆ, ವಿಷಯ ಭೋಗ
ಲಲನೆ–ಸ್ತ್ರೀ
ಲಲ್ಲೆ–ಮುದ್ದು, ಪ್ರೀತಿ
ಲೆಂಕ
ಲೆಂಗಿ } ನಿಷ್ಠಾವಂತ ಸೇವಕ
ಲೋಚನ–ಕಣ್ಣು
ಲೋವೆ–ಇಳಿಜಾರಾದ ಸೂರು
ವನಜಾಕ್ಷ–ವಿಷ್ಣು
ವನಜೋದ್ಭವ–ಬ್ರಹ್ಮ
ವಾಯಸ–ಕಾಗೆ
ವಾರವಧು–ಬೆಲೆವೆಣ್ಣು, ವೇಶ್ಯೆ
ವಾರುಧಿ–ಸಮುದ್ರ
ವಾಸವ–ಇಂದ್ರ
ವಿಕಳ–ನ್ಯೂನತೆ, ಕೊರತೆ
ವಿಗಡ–ಕ್ರೌರ್ಯ, ಕ್ರೂರತನ
ವಿತ್ತ–ಹಣ, ಐಶ್ವರ್ಯ
ವಿದ್ಯಧರ–ವಿದ್ಯಾಧರ, ದೇವತೆ
ವಿಭಾಡಿಸು–ನಾಶಮಾಡು
ವಿರತಿ–ವಿರಕ್ತಿ

ವಿಶಿಖ–ಬಾಣ
ವೀರೇಶ–ವೀರಭದ್ರ
ವೇದಿಸು–ತಿಳಿಯಪಡಿಸು
ವ್ಯಾಘ್ರ–ಹುಲಿ
ಶಯನ–ಮಲಗು, ವಿಶ್ರಮಿಸು
ಶರಧಿ–ಸಮುದ್ರ
ಶುಂಡಾಲ–ಆನೆ
ಶುಕ–ಗಿಳಿ
ಶುನಿ–(ಶುನಕ) ನಾಯಿ
ಶೂಲಿ–ಶಿವ
ಶೈಲತಟ–ಬೆಟ್ಟದ ತಪ್ಪಲು
ಶ್ರೋತ್ರ–ಕಿವಿ
ಸಂಚಿ–ಎಲೆ ಅಡಿಕೆಯ ಚೀಲ, ಪೆಟ್ಟಿಗೆ
ಸಂತಾನ–ಸಾಲು, ಸಮೂಹ
ಸಂಸ್ಕೃತಿ–ಸಂಸಾರ, ಹುಟ್ಟು, ಸಾವು
ಸಟೆ–ಹುಸಿ, ಸುಳ್ಳು
ಸತ್ತಿಗೆ–ಕೊಡೆ
ಸರಸಿಜಭವ–ಬ್ರಹ್ಮ
ಸಲುಗೆವಾಳ–ತೀರ ಪರಿಚಯವುಳ್ಳ ಸೇವಕ
ಸಲ್ಲವಿಡು–ಅಲ್ಲಗಳೆ
ಸಸಿನೆ–ನೇರವಾಗಿ, ಸುಮ್ಮನೆ
ಸಾಂದ್ರ–ದಟ್ಟವಾದ
ಸಾಲೋಕ್ಯ ಮೊದಲಾದ ನಾಲ್ಕು ಪದಂಗಳು–ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬ ನಾಲ್ಕು ಬಗೆಯ ಮೋಕ್ಷಗಳು
ಸಾಯಸ–ತೊಂದರೆ, ಬಳಲಿಕೆ

ಸಿಂಧು–ಸಮುದ್ರ
ಸಿಗುಳ್–ಕತ್ತರಿಸು, ಸೀಳು
ಸುಖಾರ್ಣವ–ಸುಖಸಾಗರ
ಸುಯ್ಗರೆ–ನಿಟ್ಟುಸಿರುಬಿಡು
ಸುರಪಧನುಸು–ಕಾಮನಬಿಲ್ಲು
ಸುರಭೂಜ, ಸುರರುಹ } ಕಲ್ಪವೃಕ್ಷ
ಸುವ್ವಿ–ಸುವ್ವಾಲೆ–ಶುಭ ಸೋಬಾನೆ
ಸೂಡು–ಮುಡಿ, ಧರಿಸು
ಸೂಸಕ–ಹಣೆಯ ಆಭರಣ
ಸೂಸು–ಹೊರಚೆಲ್ಲು
ಸೊಗಡು–ಸೊವಡು, ಮಾಧುರ್ಯ, ಹಿಂದೆಗೆ
ಸೊಣಗ–ನಾಯಿ
ಸ್ವಯಂಭು–ತನ್ನಿಂದ ತಾನೆ ಮೂಡಿದ, ಶಿವ
ಸ್ವಸ್ತಿಧಾಮ–ಮಂಗಳದ ಮನೆ
ಸ್ವೇದಜ–ಬೆವರಿನಿಂದ ಹುಟ್ಟುವ ಜೀವಿಗಳು
ಹಗೆ–ಶತ್ರು
ಹಡಪ–ತಾಂಬೂಲದ ಪೆಟ್ಟಿಗೆ
ಹಮ್ಮಿಸು–ಮೂರ್ಛೆಹೋಗು
ಹರಸು–ಶುಭಕೋರು, ಹಾರೈಸು
ಹರ್ಮ್ಯ–ಭವನ, ಸೌಧ
ಹಳಗ–ತೊಗಲು
ಹಾವುಗೆ–ಮರದ ಪಾದರಕ್ಷೆ
ಹಿಸುಣ–ಚಾಡಿ
ಹುಟ್ಟು–ಸೌಟು
ಹುರುಡು–ಸ್ಪರ್ಧೆ, ಪೈಪೋಟಿ



ಹೆಟ್ಟುಗೆ–ಮಡದಿ
ಹೆಮ್ಮಗಳು–ಹಿರಿಯ ಮಗಳು
ಹೇಯ–ಕೆಟ್ಟ
ಹೇವ–ಲಜ್ಜೆ
ಹೇಸಿ–ಜುಗುಪ್ಸೆಯನ್ನು ಉಂಟುಮಾಡಿದ ವ್ಯಕ್ತಿ
ಹೋರಟೆ–ಕಾದಾಟ